ಸಂವಾದ

ಜುಲೈ 2012 ರೂ. 20/-

ತುದಿ
ಬೆರಳ
ಅರಿವು

ಪ್ರತಿಮೆ ಮತ್ತು ಪ್ರತಿರೋಧ

ಜಾತಿ ವ್ಯವಸ್ಥೆಯ ಕೊಳೆತ ಮನಸ್ಥಿತಿ

DR. AMBEDKAR INSTITUTE OF TECHNOLOGY

An Autonomous Institution affiliated to Visvesvaraya Technological University, Belgaum and Aided by Govt. of Karnataka

The 23 acre flourishing campus is situated on the outer ring road, adjacent to Jnana Bharathi Campus of Bangalore University and just 10 Kms from the heart of the city. Its other illustrious neighboring institutions are Indian Institute of Plantation Management (IIPM), National Law School of India University (NLSIU), Institute for Social and Economic Change (ISEC), Atomic Energy Department (AED) and National Assessment and Accreditation Council (NAAC). The conveyance to the college is very cosy with the help of better transport connectivity from all the locations.

As a Grant in-Aid Institution of Government of Karnataka, 95% of the seats are filled up purely on the basis of merit through Common Entrance Test (CET) Cell. Thus The academic environment is assiduous and intellectual on the campus. The Institution is accredited by National Board of Accreditation (NBA), New Delhi.

It has a total built-up area of 39691sq.mtrs with a large number of spacious, well ventilated class rooms with e-learning facilities, laboratories, Data Center, Virtual Instrumentation laboratory, English language laboratory, Workshops, Drawing halls, Seminar halls, Library & Information centre, Sports complex and Auditorium. Besides the campus also provide hostel facilities separately to the boys and girls students of the institute.

The entire campus is a Wi-Fi campus with 1:1 sysmetric dedicated leased line internet connectivity with optical fiber back bone.

ADMISSION OPEN FOR 2011-2012

Computer Lab

Mechanical Lab

Digital Library

Data Centre

Gym

Auditorium

Under - Graduate Courses Offered

Sl. No	B.E. Degree Course in	Sanctioned Student Intake
1	Civil Engineering	60
2	Mechanical Engineering	120
3	Electrical & Electronics Engineering	60
4	Electronics & Communication Engineering	120
5	Industrial Engineering & Management	30
6	Instrumentation & Technology	60
7	Computer Science & Engineering	120
8	Telecommunication Engineering	60
9	Information Science & Engineering	60
10	Medical Electronics	30

Post - Graduate Courses Offered

Sl. No	Master Degree Course in	Sanctioned Student Intake
1	M.Tech. in Computer Science & Engg.	25
2	M.Tech. in VLSI Design & Embedded Systems	18
3	M.Tech. in Digital Communication & Networking	18
4	M.Tech. in Power Electronics	18
5	M.Tech. in Structrural Engineering	18
6	Master of Computer Application (MCA)	60
7	Master of Business Administration (MBA)	60

Sl. No	Ph.D. Degree through research
1	Civil Engineering
2	Mechanical Engineering
3	Electrical & Electronics Engineering
4	Electronics & Communication Engineering
5	Instrumentation Technology
6	Telecommunication Engineering
7	Master of Computer Application
8	Physics
9	Chemistry
10	Mathematics

Girls Hostel

Boys Hostel

VISION

True to the characteristics of the Panchajanya, the trust envisions eradication of illiteracy, ignorance and poverty using quality education as the means. The aim is to transform our large population in to a national asset where each individual contributes to the overall development of India.

MISSION

To create an environment for the moral, social, cultural and educational progress of the underprivileged population in the realization of an egalitarian society.

556 STUDENTS

Students Selection through campus interview

PLACED IN 2010-11

TCS | HCL TECHNOLOGIES | MINDTREE
TITAN | SOMA CONSTRUCTION CO.
ACT TV | SYNTEL | MPHASIS (HP Company)
RAMKY INFRASTRUCTURE | ROBERT BOSCH
ORACLE | SASKEN | YOKOGAWA | L&T ECC
TECH MAHINDRA | INFOTECH | EUREKA FORBES LTD.

For Admission contact : Managing Trustee
Panchajanya Vidya Peetha Welfare Trust (R)
Tel : 080-23211351 / 23215070

Near Jnana Bharathi Campus, Bangalore - 560 056
Tel +91 80 23211505 / 06 / 07, 23218534
Fax +91 80 23217789, E-mail : principal@dr-ait.org
www.dr-ait.org

ಸಂವಾದ

ಮಾಸ ಪತ್ರಿಕೆ

ಸಂಪುಟ 10 ಸಂಚಿಕೆ 9
ಜುಲೈ 2012

ಸಂಪಾದಕ:
ಇಂದೂಧರ ಹೊನ್ನಾಪುರ

ಉಪ ಸಂಪಾದಕ:
ಭೈರಸಂದ್ರ ಗಂಗರಾಜು

ಸಂಪಾದಕೀಯ ಬಳಗ:
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 9945264687
080 - 23480278

e-mail :
Editorial: samvaada@hotmail.com
honnapura@yahoo.co.in

Circulation :
samvaadacirculation@gmail.com

EDITOR :
INDUDHARA HONNAPURA

ಒಳಪುಟಗಳಲ್ಲಿ

- ಪತ್ರಗಳು ೦೪
- ಸಂಪಾದಕರೊಂದಿಗೆ ಸಂವಾದ:
  - ಗೌರಿಶಂಕರ ದಸ್ತಾಪೂರ ೦೫
  - ವಿ.ಆರ್ ಮೌರ್ಯ ೦೬
  - ವಿಜಯಕುಮಾರ್ ಕೆ.ಟಿ ೦೭
  - ಆನಂದ್ ತೇಲ್ತುಂಬ್ಡೆ ೦೮
  - ಮಲ್ಲಿಕಾರ್ಜುನ ಗುಮ್ಮಗೋಳ ೧೦
  - ಕು.ಸ ಮಧುಸೂದನ ೧೧
- ಜಾತಿ ವ್ಯವಸ್ಥೆಯ ಕೊಳೆತ ಮನಸ್ಥಿತಿ ಮತ್ತು ಹೊರಬರುವ ಅನಿವಾರ್ಯ ಪರಿಸ್ಥಿತಿ
  - ಡಾ॥ ಮ.ಪು ಪೂರ್ಣಾನಂದ ೧೨

- ಭಾರತೀಯ ಮಾಧ್ಯಮಗಳಿಂದ ಆತ್ಮಾವಲೋಕನ ಸಾಧ್ಯವೇ?
  - ಸುರೇಶ್‌ಭಟ್ ಬಾಕ್ರಬೈಲ್ ೧೬
- ನಾಗಬಂಧದ ಬಂಧನ: ನಂಬಿಕೆ ಮತ್ತು ಕೇಳಿಕೊಳ್ಳಬೇಕಾದ ಪ್ರಶ್ನೆಗಳು
  - ಜಯಪ್ರಕಾಶ್ ಶೆಟ್ಟಿ ಹೆಚ್ ೧೮
- ಭಯೋತ್ಪಾದನೆ ವಿರುದ್ಧದ ಸಮರ ಮತ್ತು ದೆಹಲಿ ಪೊಲೀಸ್ ಇಲಾಖೆಯ ವಿಶೇಷ ದಳ
  - ಮೂಲ: ಮನಿಷಾ ಸೇಠಿ
  - ಅನು: ಸುರೇಶ್‌ಭಟ್ ಬಾಕ್ರಬೈಲ್ ೨೨
- ಕೈವಾರ ತಾತಯ್ಯನ ಈ ಊರೊಳಗಿಷ್ಟು...
  - ಡಾ॥ ಎಂ.ಡಿ ಒಕ್ಕುಂದ ೨೬
- ಬಾಡಿಗೆ ಮನೆ (ಕಥೆ)
  - ವಿಕಾಸ ಆರ್. ಮೌರ್ಯ ೩೦
- ಮಾನವ ಸಂಸ್ಕೃತಿ ಮತ್ತು ಶಂಬಾ ಗ್ರಹಿಕೆ
  - ಡಾ. ಎಸ್. ನಟರಾಜ ಬೂದಾಳು ೩೨



- ಬತ್ತದ ಬಯಲು–೭
  - ಡಾ॥ ಬಿ.ಎಂ ಪುಟ್ಟಯ್ಯ ೩೬
- ನೋಯುವ ಹಲ್ಲಿಗೆ ಹೊರಳುವ ನಾಲಿಗೆ–೮
  - ಡಾ. ಎಚ್.ಎಸ್ ಅನುಪಮಾ ೪೦
- ದಲಿತ್ ಡೈರಿ
  - ಚಂದ್ರಭಾನ್ ಪ್ರಸಾದ್/ ಎಸ್ ಮರಿಸ್ವಾಮಿ ೪೪
- ಮುಲ್ಲಾ ನಸ್ರುದ್ದೀನ್ ಕಥೆಗಳು ೪೮
- ಹೊಸ ಪುಸ್ತಕ ೨೧
- ಕವನ:
  ಕಲ್ಲು ಕರಗುವ ಸಮಯ ೧೫

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಪೇಜಾವರರು ಮದ್ಯ-ಮಾಂಸದ ಬಗ್ಗೆಯೇ ಮಾತಾಡುವುದೇಕೆ?

ಪ್ರಿಯ ಸಂಪಾದಕರೇ,

ಮಾಂಸ-ಮದ್ಯ ಸೇವಿಸೋರ ಜೊತೆ ಬೋಜನ ಮಾಡಿದರೆ ಅವರ ಜೊತೆ ಸ್ನೇಹ ಬೆಳೆದು ಸಾತ್ವಿಕ ಆಹಾರ ಸೇವಿಸುವವರೂ ನಂತರ ಮಾಂಸ-ಮದ್ಯ ಸೇವನೆಗೆ ಇಳಿದು ಬಿಡಬಹುದು. ಆದ್ದರಿಂದ ನಾನು ಅನ್ಯ ಜಾತಿಯವರೊಡನೆ ಸಹಪಂಕ್ತಿ ಭೋಜನವನ್ನು ವಿರೋಧಿಸುತ್ತೇನೆ. ಇದು ದಿನಾಂಕ 19-05-2012ರಂದು ಶಿವಮೊಗ್ಗದಲ್ಲಿ ನಡೆದ ವಿಪ್ರ ಜಾಗೃತಿ ಸಮಾವೇಶದಲ್ಲಿ ಉಡುಪಿಯ ಪೇಜಾವರ ಸ್ವಾಮಿಗಳು ಉದುರಿಸಿದ ಆಣಿಮುತ್ತುಗಳು! ಸಾರ್ವಜನಿಕವಾಗಿ ಹಿಂದೂ ಧರ್ಮದ ಸ್ವಾಮಿಯೊಬ್ಬರು ನೀಡಿದ ಇಂಥ ಹೇಳಿಕೆಯನ್ನು ವಿರೋಧಿಸಿ ಮಾತನಾಡಲಿಲ್ಲವೆಂದರೆ ಅದು ಮಾನವವಿರೋಧಿ ಮೌನವಾಗಿಬಿಡಬಹುದೆಂಬ ನಂಬಿಕೆಯಿಂದ ಇದನ್ನು ಬರೆಯುತ್ತಿದ್ದೇನೆ.

ಮೊದಲನೆಯದು: ಯಾಕೆ ಇವರು ಮಾಂಸಾಹಾರದ ಬಗ್ಗೆ ಮಾತನಾಡುವಾಗಲೆಲ್ಲ ಮದ್ಯಪಾನದ ಬಗ್ಗೆ ಮಾತನಾಡುತ್ತಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇವರ ದೃಷ್ಟಿಯಲ್ಲಿ ಮಾಂಸ ಸೇವಿಸುವವರೆಲ್ಲ ಮದ್ಯ ಸೇವಿಸುತ್ತಾರೆಂದು? ಅಥವಾ ಸಸ್ಯಹಾರ ಸೇವಿಸುವವರ್ಯಾರು ಮದ್ಯ ಸೇವಿಸುವುದಿಲ್ಲ ಎಂದರ್ಥವೇ?

ಎರಡನೆಯದು: ಮಾಂಸಹಾರ ಮಾಡುವವರ ಪ್ರಭಾವ ಸಸ್ಯಾಹಾರದವರ ಮೇಲೆ ಆದ ರೀತಿಯಲ್ಲಿ ಸಸ್ಯಾಹಾರದವರ ಪ್ರಭಾವ ಮಾಂಸಾಹಾರದವರ ಮೇಲೆ ಆಗಲಾರದೆ?

ಮೂರನೆಯದು: ಪ್ರತಿಸಾರಿಯೂ ಇವರು ಸಸ್ಯಾಹಾರವನ್ನು ಸಾತ್ವಿಕ ಎಂದು ಕರೆದರೆ ಇವರ ದೃಷ್ಟಿಯಲ್ಲಿ ಮಾಂಸಾಹಾರವೇನು ದೆವ್ವಗಳ ಆಹಾರವೇ?

ನಾಲ್ಕನೆಯದು: ಮದ್ಯಪಾನ ಒಂದು ವ್ಯಸನ, ಆದರೆ ಮಾಂಸ ತಿನ್ನುವುದು ನಮ್ಮ ಬದುಕಿನ ರೀತಿ, ನಮ್ಮ ಆಹಾರ ಸಂಸ್ಕೃತಿ!

ಐದನೆಯದು: ಇನ್ನು ನಾವ್ಯಾರು ವೈಯಕ್ತಿಕ ನೆಲೆಯಲ್ಲಿ ಸಹಪಂಕ್ತಿ ಭೋಜನವನ್ನು ಕೇಳುತ್ತಿಲ್ಲ. ಬ್ರಾಹ್ಮಣರ ಮದುವೆಯಲ್ಲೊ, ಮುಂಜಿಯಲ್ಲೋ ನಮಗೆ ಸರಿಸಮಾನವಾಗಿ ಊಟ ಹಾಕೆಂದೇನು ಕೇಳುತ್ತಿಲ್ಲ. ನಾವು ಕೇಳುತ್ತಿರುವುದು, ಸಾರ್ವಜನಿಕ ಆಸ್ತಿಯಾದ ಮತ್ತು ಎಲ್ಲಾ ಜಾತಿಯವರು ಒಂದೇ ರೀತಿಯ ನಿಷ್ಠೆಯಿಂದ ನಡೆದುಕೊಳ್ಳುವ ಕೃಷ್ಣಮಠದಲ್ಲಿ ಭಕ್ತರಿಗೆ ಸಹಭೋಜನ ವ್ಯವಸ್ಥೆ ಇರಲೆಂದು!

ಇನ್ನು ಬಸವಣ್ಣನವರು ಮಾಂಸಾಹಾರಿಗಳಿಗೆ ಲಿಂಗಧಾರಣೆ ನಿರಾಕರಿಸಿದ್ದರ ಕಾರಣ ಮಾಂಸಾಹಾರ ಪದ್ಧತಿಯ ಬಗ್ಗೆ ಅವರಿಗಿದ್ದ ಅಸಹನೆಯಂತೂ ಅಲ್ಲ. ಬದಲಿಗೆ, ಪ್ರಾಣಿ ಹಿಂಸೆಯ ಬಗ್ಗೆ ಅವರಿಗಿದ್ದ ಖಚಿತ ನಿಲುವಿನ ಸಲುವಾಗಿ.

ಅಂತರಜಾತಿ ವಿವಾಹದ ಬಗ್ಗೆ ಪೇಜಾವರರ ನಿಲುವು ನಮ್ಮ ಕಾದಂಬರಿಕಾರ ಎಸ್.ಎಲ್. ಭೈರಪ್ಪನವರ ನಿಲುವಿಗಿಂತ ಭಿನ್ನವಾಗೇನೂ ಇಲ್ಲ. ವಿಶ್ವ ಹಿಂದೂ ಪರಿಷತ್ತಿನ ಪ್ರಮುಖರಲ್ಲೊಬ್ಬರಾದ ಸಾರ್ವಜನಿಕ ಗಣ್ಯರೊಬ್ಬರು ಅಂದರೆ ಪೇಜಾವರ ಶ್ರೀಯಂತವರು ಈ ರೀತಿ ಪ್ರತಿಗಾಮಿ ಹೇಳಿಕೆ ನೀಡುವುದರ ಮೂಲಕ ಈಗಾಗಲೇ ಒಡೆದು ಹೋಗಿರುವ ಸಮಾಜವನ್ನು ಇನ್ನಷ್ಟು ಒಡೆಯುವ ಪ್ರಯತ್ನ ಮಾಡುತ್ತಿದ್ದಾರೆ. ಇನ್ನಾದರೂ ಪೇಜಾವರರು ಇಂಥ ಬಾಲಿಶ ಹೇಳಿಕೆಗಳನ್ನು ನೀಡುವುದನ್ನು ನಿಲ್ಲಿಸಲಿ.

ಕು.ಸ ಮಧುಸೂದನ್, ರಂಗೇನಹಳ್ಳಿ



ಪತ್ರಾಗಾರ

ವೈದಿಕತೆಯ ರೋಗ ಹರಡಲು ಮುಂದಾದ ಸರ್ಕಾರ

ಪ್ರಿಯ ಸಂಪಾದಕರೇ,

ಭಾರತೀಯ ಸಂಸ್ಕೃತಿ ಶ್ರೇಷ್ಠವೆಂದು ಹೇಳುವುದನ್ನು ತಿರುಚಿ ಹಿಂದೂ ಸಂಸ್ಕೃತಿಯೇ ಶ್ರೇಷ್ಠ, ವೈದಿಕ ಸಂಪ್ರದಾಯವೇ ಸರ್ವೋತ್ತಮ, ವೈದಿಕ ಸಂಪ್ರದಾಯಗಳ ಆಚರಣೆ ಮಾತ್ರ ಬಹಳ ಹಿಂದಿನಿಂದಲೂ ಇದೆ ಎಂದೆಲ್ಲಾ ಬಿಂಬಿಸಲು ರಾಜ್ಯ ಬಿಜೆಪಿ ಸರ್ಕಾರ ಮುಂದಾಗಿರುವುದು ಖಂಡನಾರ್ಹ. 2012-13ನೇ ಶೈಕ್ಷಣಿಕ ವರ್ಷದಿಂದ 5 ಮತ್ತು 8ನೇ ತರಗತಿಗಳ ನೂತನ ಪಠ್ಯಪುಸ್ತಕಗಳಲ್ಲಿ ಮೇಲಿನ ಅಂಶಗಳನ್ನು ಅಳವಡಿಸಿರುವುದು ಸಂವಿಧಾನ ವಿರೋಧಿ ಚಟುವಟಿಕೆಗಳಿಗೆ ಒಳಪಡುತ್ತದೆ. ಇದರಿಂದ ಅಹಿಂದ ಹಾಗೂ ಬುಡಕಟ್ಟು ಸಮುದಾಯಗಳ ಹಕ್ಕು ಹಾಗೂ ಸಂಸ್ಕೃತಿಗೆ ಧಕ್ಕೆ ಉಂಟಾಗುವುದನ್ನು ಮನಗಾಣಬೇಕು. ನೂತನ ಪಠ್ಯಪುಸ್ತಕಗಳ ಸಂಪಾದಕ ಮಂಡಳಿಯ ಬಹುತೇಕ ಸದಸ್ಯರೆಲ್ಲರೂ ಆರ್‌ಎಸ್‌ಎಸ್ ಸಂಸ್ಕೃತಿಗೆ ಸೇರಿರುವುದರಿಂದ ಇಂತಹ ಕೀಳು ಚಿಂತನೆಗಳು ಹುಟ್ಟಿಕೊಳ್ಳಲು ಕಾರಣವಾಗಿದೆ.

ಏಕಮುಖಿ ಸಂಸ್ಕೃತಿಯನ್ನು ಬಿಂಬಿಸುವ ಈ ಪಠ್ಯಪುಸ್ತಕಗಳನ್ನು ತಿರಸ್ಕರಿಸುವ ದಿಕ್ಕಿನಲ್ಲಿ ಎಲ್ಲರೂ ಒತ್ತಡಹಾಕಬೇಕು. ವೈದಿಕ ಸಂಸ್ಕೃತಿಯನ್ನು ತಿರಸ್ಕರಿಸಿ ಹೋರಾಟ ಮಾಡಿದ ವೀರಶೈವ ಮತಮಾನ್ಯರು ಹಾಗೂ ಧರ್ಮಿಯರು ಒಬ್ಬ ಯಡಿಯೂರಪ್ಪನಿಗೋಸ್ಕರ ಸಮಾಜ ಸುಧಾರಕ ಬಸವಣ್ಣನವರ ಆದರ್ಶಗಳನ್ನು ಗಾಳಿಗೆ ತೂರಿ ಜಾತಿ-ಮತ ಪಂಗಡಕ್ಕೆ ಹೆಚ್ಚು ಒತ್ತು ಕೊಡುತ್ತಿರುವುದು, ಬಸವಣ್ಣ ಹುಟ್ಟಿದ ನಾಡಿಗೆ ದ್ರೋಹ ಬಗೆಯುವಂತಹದಲ್ಲವೇ? ಮತ್ತು ಬಸವಣ್ಣನವರ ಅನುಯಾಯಿಗಳೆಂದು ಹೇಳಿಕೊಳ್ಳುವುದು ಆತ್ಮವಂಚನೆಗೆ ಒಳಪಡುವುದಿಲ್ಲವೇ? ವೀರಶೈವ ಪ್ರತ್ಯೇಕ ಧರ್ಮಕ್ಕೆ ಹೋರಾಟ ಮಾಡಿದವರು ಇಂದು ಆರ್‌ಎಸ್‌ಎಸ್ ಕೈಗೊಂಬೆಯಂತೆ ವರ್ತಿಸುತ್ತಿರುವುದು ತಲೆತಗ್ಗಿಸುವಂತಹದು.

ಇಂದು ಬಿಜೆಪಿ ಆಡಳಿತ ನಡೆಸುವ ಕೆಲವು ರಾಜ್ಯಗಳಲ್ಲಿ ಆರ್.ಆರ್.ಎಸ್. ವಿಎಚ್‌ಪಿ, ಭಜರಂಗದಳ ಹಾಗೂ ಸಂಘ ಪರಿವಾರದ ಏಕಮುಖಿ ಹಿಂದೂ ಸಂಸ್ಕೃತಿ ಆಚರಣೆ ಮೂಲಕ ಸಂವಿಧಾನವನ್ನೇ ಬುಡಮೇಲು ಮಾಡಲು ಹೊರಟಿರುವುದೇ ಅಲ್ಲದೆ ಮಹಾಮಾನವತಾವಾದಿಗಳ ಸಮಾನತೆ, ಐಕ್ಯತೆ ಮತ್ತು ಸೋದರತೆ ಆದರ್ಶಗಳಿಗೆ ಧಕ್ಕೆ ಉಂಟುಮಾಡುವ ಪ್ರವೃತ್ತಿ ಸರಿಯಲ್ಲ. ಆದ್ದರಿಂದ 5 ಮತ್ತು 8ನೇ ತರಗತಿಗಳ ಪಠ್ಯಪುಸ್ತಕಗಳ ಮರುಪರಿಶೀಲನೆಗೆ ಸಮಿತಿ ರಚಿಸಬೇಕು ಮತ್ತು ಪಠ್ಯಪುಸ್ತಕಗಳ ಮೂಲಕ ಹಿಂದೂ ಸಂಸ್ಕೃತಿಯೇ ಶ್ರೇಷ್ಠವೆಂದು ಬಿಂಬಿಸಿರುವುದನ್ನು ತಿರಸ್ಕರಿಸಬೇಕು. ಅಲ್ಲದೇ ಸಂವಿಧಾನಬದ್ಧ ಭಾರತೀಯ ಸಂಸ್ಕೃತಿಯೇ ಶ್ರೇಷ್ಠ ಎಂದು ಬಿಂಬಿಸಬೇಕು.

ಎ. ಮಾದಯ್ಯ, ಮೈಸೂರು

ಜಂಗಮರಿಂದ ದಲಿತರ ಹಕ್ಕಿಗೆ ಧಕ್ಕೆ..!

ಪ್ರಿಯ ಸಂಪಾದಕರೇ,

ಮೇ 2012 'ಸಂವಾದ' ಸಂಚಿಕೆ ಅನೇಕ ವೈಚಾರಿಕ ಲೇಖನಗಳಿಂದ ಕೂಡಿದೆ. ತಮಗೆ ಅಭಿನಂದನೆಗಳು. ಬಾಲಗುರುಮೂರ್ತಿ ತಮ್ಮ 'ಅಲೆಮಾರಿ ಬುಡ್ಗ ಜಂಗಮರು ಬಹಿರಂಗ ಚರ್ಚೆಗೆ ಆಹ್ವಾನ' ಲೇಖನದಲ್ಲಿ ಬ್ರಾಹ್ಮಣರು ಶುದ್ಧ ಸಸ್ಯಾಹಾರಿ ಎಂದು ತಿಳಿಸಿದ್ದಾರೆ. ಇದು ಶುದ್ಧ ತಪ್ಪು. ಬ್ರಾಹ್ಮಣರು ಮೂಲತಃ ಮಾಂಸಾಹಾರಿಗಳು, ವೇದಕಾಲದಲ್ಲಿ ದೇವಸ್ಥಾನದ ಎದುರುಗಡೆ ಕೋಣ, ಕುರಿ ಮತ್ತು ಕೋಳಿಗಳನ್ನು ಬಲಿ ಕೊಡುವ ಕೆಲಸ ಅವರೇ ಮಾಡುತ್ತಿದ್ದರು. ಭಾರತದ ಕೆಲವು ರಾಜ್ಯಗಳನ್ನು ಬಿಟ್ಟರೆ ಎಲ್ಲ ಕಡೆ ಬ್ರಾಹ್ಮಣರು ಮಾಂಸವನ್ನು ತಿನ್ನುತ್ತಾರೆ. ಕಾಶ್ಮೀರಿ ಬ್ರಾಹ್ಮಣರು ಆಕಳ ಮಾಂಸ ಸಹ ತಿನ್ನುತ್ತಾರೆ. ಉತ್ತರ ಪ್ರದೇಶ ಮತ್ತು ಬಂಗಾಳದ ಬ್ರಾಹ್ಮಣರು ಎಲ್ಲ ತರಹದ ಮಾಂಸವನ್ನು ಸೇವಿಸುತ್ತಾರೆ. ಇದರ ಬಗ್ಗೆ ಎಂ.ಎನ್. ಶ್ರೀನಿವಾಸ ಬರೆದ ಪುಸ್ತಕಗಳನ್ನು ಓದಬಹುದು.

ಲಿಂಗಾಯತ ಜಂಗಮರು 'ಬೇಡ ಜಂಗಮರೆಂದು' ಪ್ರಮಾಣ ಪತ್ರ ಪಡೆದು ದಲಿತರ ಹಕ್ಕುಗಳನ್ನು ನಾಶಪಡಿಸುತ್ತಿದ್ದಾರೆ. ಕೆಲವು ತಿಂಗಳ ಹಿಂದೆ ಕರ್ನಾಟಕದ ಎಲ್ಲಾ ಮಠಾಧೀಶರು, ಗುಲಬರ್ಗಾದಲ್ಲಿ ಸಮಾವೇಶ ನಡೆಸಿ, ಎಲ್ಲಾ ಅಯ್ಯಗಳು (ಜಂಗಮರು) ಬೇಡ ಜಂಗಮರೆಂದು ಪ್ರಮಾಣ ಪತ್ರ ಪಡೆಯುವ ಸಲುವಾಗಿ ಸರ್ಕಾರದ ಮೇಲೆ ಒತ್ತಡ ಹಾಕುತ್ತಿದ್ದಾರೆ. ಇದು ದುಃಖದ ಮಾತು.

ಅಂಬರಾವ ಉಪಲಾಂವಕರ, ಗುಲಬರ್ಗಾ

ಸಂಪಾದಕರೊಡನೆ ಸಂವಾದ

ಪ್ರತಿಮೆ ಮತ್ತು ಪ್ರತಿರೋಧ

ಶಂಕರ್ ಅವರೆ ರಚಿಸಿದ ಅನೇಕ ಚಿತ್ರಗಳನ್ನು ಮಾತ್ರ ಜಾಣತನದಿಂದ ಬದಿಗೆ ಸರಿಸಲಾಗಿದೆ. ಉದಾಹರಣೆಗೆ, 1933ರಲ್ಲಿ ರಚಿತವಾದ ಚಿತ್ರದಲ್ಲಿ ಎಂ.ಕೆ. ಆಚಾರ್ಯ ಅವರು ಹಿಂದೂ ಧರ್ಮದ ಅಸ್ಪೃಶ್ಯತೆಯ ಕಬಂದ ಬಾಹುಗಳನ್ನು ವಿಸ್ತಾರಗೊಳಿಸುತ್ತಿರುವ ಮತ್ತು ಗಾಂಧೀಜಿ ಅದನ್ನು "ಸ್ವಚ್ಛ"ಗೊಳಿಸುತ್ತಿರುವ ಮತ್ತು ಅಂಬೇಡ್ಕರರು ಅದರ ಮೂಲ ಬುನಾದಿಯನ್ನು ನಾಶಮಾಡಲು ಪ್ರಯತ್ನಿಸುತ್ತಿರುವುದನ್ನು ಕಾಣಬಹುದಾಗಿದೆ. ವರ್ಣವ್ಯವಸ್ಥೆಯ ಕುರಿತ ಪಠ್ಯಗಳಲ್ಲಿ ಇಂತಹ ಚಿತ್ರಗಳನ್ನು ಬಳಸಿಕೊಳ್ಳಬಹುದಾಗಿತ್ತಲ್ಲವೆ?

ಗೌರಿಶಂಕರ ದಸ್ತಾಪೂರ

ಮಾನ್ಯ ಸಂಪಾದಕರೇ,

ಡಾ. ಅಂಬೇಡ್ಕರ್ ಮತ್ತು ಪಂ. ನೆಹರು ಅವರನ್ನೊಳಗೊಂಡ ಅರವತ್ತು ವರ್ಷಗಳ ಹಿಂದಿನ ವ್ಯಂಗ್ಯಚಿತ್ರವೊಂದು ವಿವಾದದ ಕೇಂದ್ರಬಿಂದುವಾಗಿದೆ. ಪ್ರಬಲ ವಿರೋಧದಿಂದಾಗಿ ಕ್ಷಮೆಯಾಚಿಸಿರುವ ಸರ್ಕಾರದ ಕ್ರಮವನ್ನು ವಿರೋಧಿಸುತ್ತಿರುವರು ದಲಿತ ಸಂವೇದನೆಯನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ವ್ಯಂಗಚಿತ್ರಕ್ಕೆ ವಿರೋಧ ವ್ಯಕ್ತಪಡಿಸಿದ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಮೂಲ ಆಶಯ ಮತ್ತು ವಾದವನ್ನು ಕಡಿಗಣಿಸಿ, ಸರ್ಕಾರದ ನಿರ್ಧಾರವನ್ನು ವೋಟ್ ಬ್ಯಾಂಕ್ ಪಾಲಿಟಿಕ್ಸ್ ದೃಷ್ಟಿಕೋನಕ್ಕೆ ಕೆಲವರು ಸೀಮಿತಗೊಳಿಸಿದ್ದು ದುರದೃಷ್ಟಕರ.

ದಲಿತರನ್ನೊಳಗೊಂಡು ಒಬ್ಬ ಕಲಾವಿದನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಹಕ್ಕು ಯಾರಿಗೂ ಇಲ್ಲ. ಭಾವನೆ ಅಥವಾ ಅಭಿಪ್ರಾಯವನ್ನು ವ್ಯಕ್ತಪಡಿಸುವ ಬಗೆ ಪ್ರತಿ ಕಲೆ ಮತ್ತು ಕಲಾವಿದನ ವಿವೇಚನೆಗೆ ಬಿಟ್ಟಿದ್ದು. ಕಲೆಯನ್ನು ಬೇರೆಯವರು ಬಳಸಿಕೊಂಡಾಗ ಅದರ ಸಾಂದರ್ಭಿಕ ಉದ್ದೇಶಗಳೇನು ಎಂಬುದು ತಿಳಿಸಬೇಕು. ಇಂದು ದಲಿತರು ವಿರೋಧಿಸುತ್ತಿರುವುದು 1948ರಲ್ಲಿ ಶಂಕರ್ ಪಿಳ್ಳೈ ರಚಿತ ವ್ಯಂಗ್ಯಚಿತ್ರದ ವಿರುದ್ಧವಲ್ಲ. ಅವರ ವಿರೋಧವಿರುವುದು 60 ವರ್ಷಗಳ ಹಿಂದಿನದನ್ನು ಇಂದು ಮಕ್ಕಳ ಪಠ್ಯದಲ್ಲಿ ಅಳವಡಿಸುವ ಸಾಂದರ್ಭಿಕ ಅವಶ್ಯಕತೆಯ ಕುರಿತಾಗಿದೆ. ಸಂವಿಧಾನ ರಚನೆಯಲ್ಲಿಯ ವಿಳಂಬ ಕುರಿತು ಮಕ್ಕಳಿಗೆ "ಪರಿಣಾಮಕಾರಿಯಾಗಿ ಮನವರಿಕೆ" ಮಾಡಿಕೊಡಲು ಚಿತ್ರ ಬಳಿಸಿಕೊಳ್ಳಲಾಗಿದೆ ಎಂಬುದು ಕೆಲವರ ವಿವರಣೆ. ಆದರೆ ಇಂಥ ಯಾವುದೆ ಪ್ರಯತ್ನಗಳು ಪಠ್ಯ ಪುಸ್ತಕಲ್ಲಿ ಕಂಡುಬರುವುದಿಲ್ಲ. ಸಂಬಂಧಿತರು ಕೂಡ ಇದಕ್ಕೆ ವಿವರಣೆ ಕೊಡದೆ ಕ್ಷಮೇಯಾಚಿಸಿ ತಾವು ದಲಿತಪರ ಎಂದು ಬಿಂಬಿಸಿಕೊಳ್ಳುಲು ಪ್ರಯತ್ನಿಸಿದ್ದಾರೆ.

ಇನ್ನೂ ಸಂವಿಧಾನದ ರಚನೆಯ ವಿಳಂಬದ ಕೆಲವು ಕಾರಣಗಳನ್ನು ಉದ್ದೇಶ ಪೂರ್ವಕವಾಗಿ ಮರೆಮಾಚಲಾಗಿದೆ. ವರ್ಣಾಶ್ರಮ ಧರ್ಮದ ತತ್ವಗಳನ್ನು ಎತ್ತಿಹಿಡಿಯುವ ಸಂವಿಧಾನ ರಚನೆಯಾಗಬೇಕೆಂದು ಗಾಂಧೀಜಿಯವರ ಹಂಬಲವಾಗಿತ್ತು, ಸಂವಿಧಾನ ರಚನೆ ಸಂದರ್ಭದಲ್ಲಿ ಪ್ರತಿಯೊಬ್ಬರಿಗೂ ಸಮಾನ ಹಕ್ಕುಗಳನ್ನು ಕೊಡವುದಕ್ಕೆ ಗಾಂಧೀವಾದಿ ಮತ್ತು ಹಿಂದೂ ಕೋಮುವಾದಿಗಳ ವಿರೋಧ, ಮುಸ್ಲಿಂ ಲೀಗನ ಮೂಲಭೂತವಾದಿ ಧೋರಣೆಯಿಂದ ಸಂವಿಧಾನ ರಚನೆ ವಿಳಂಬವಾಗಲು ಕಾರಣವಾಯಿತು. ಇವುಗಳನ್ನು ಇಲ್ಲಿಯವರೆಗಿನ ಪಠ್ಯಗಳಲ್ಲಿ ಏಕೆ ಮರೆಮಾಚಲಾಗಿದೆ ಎಂಬುದು ತಿಳಿಯಬೇಕಿದೆ. ಈ ರೀತಿಯ ವಿರೋಧಗಳ ನಡುವೆ ವಿಚಲಿತರಾಗದೆ ನಿಂತು ಆರೋಗ್ಯ ಹದಗೆಟ್ಟರು ಲೆಕ್ಕಿಸದೆ ಅಂಬೇಡ್ಕರರು ಜನ ಸಾಮಾನ್ಯರಿಗೆ ಹಕ್ಕುಗಳನ್ನು ಸಂವಿಧಾನ ಮೂಲಕ ಕೊಡಿಸಲು ಪ್ರಯುತ್ನಿಸಿದ್ದು ಮರೆಯಲಾದೀತೆ.

ಗಾಂಧಿ ಅನುಯಾಯಿಗಳ ಪುರೋಹಿತಶಾಹಿ ಮನಸ್ಥಿತಿಯಿಂದ ರೋಸಿಹೋಗಿ ಅನೇಕ ಬಾರಿ ಸಂವಿಧಾನ ರಚನಾ ಸಮಿತಿಯಿಂದ ಹೊರಹೋಗಲು ಅಂಬೇಡ್ಕರ್ ನಿರ್ಧರಿಸಿದ್ದರು. ಮಹಿಳಾ ಸ್ವಾವಲಂಬನೆ ಮತ್ತು ವಿಮೋಚನೆಯ ಸಾಧನವಾದ ಹಿಂದೂ ವಿವಾಹ ಕಾಯ್ದೆಗೆ ಬಾಬಾಸಾಹೇಬ ಪಟ್ಟ ಕಷ್ಟ ಕಡಿಮೆಯದಲ್ಲ.

ಆದರೆ ಇದನ್ನು ರಾಜೇಂದ್ರ ಪ್ರಸಾದನ್ನೋಳಗೊಂಡ ಗಾಂಧೀವಾದಿ ಕಾಂಗ್ರೆಸ್ಸಿಗರು ಸಂಸತ್ತಿನ ಹೊರಗೆ ಮತ್ತು ಒಳಗೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಕಾಂಗ್ರೆಸ್ಸಿಗೆ ಸಂಸತ್ತಿನಲ್ಲಿ ಸಂಪೂರ್ಣ ಬೆಂಬಲವಿದ್ದರೂ ಉದಾರವಾದಿ ನೆಹರು ಈ ಕಾಯ್ದೆಯನ್ನು ಕೈಬಿಟ್ಟರು. ಇದರಿದ್ದ ನಿರಾಶೆಗೊಂಡ ಅಂಬೇಡ್ಕರ್ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಇಂಥ ಅನೇಕ ವಿಷಯಗಳು ನಮ್ಮ ಪಠ್ಯಗಳಲ್ಲಿ ಸ್ಥಾನಪಡೆಯುವುದೆ ಇಲ್ಲ.

ಈ ವಿಷಯಗಳ ಕುರಿತು ಶಂಕರ್ ಅವರೆ ರಚಿಸಿದ ಅನೇಕ ಚಿತ್ರಗಳನ್ನು ಮಾತ್ರ ಜಾಣತನದಿಂದ ಬದಿಗೆ ಸರಿಸಲಾಗಿದೆ. ಉದಾಹರಣೆಗೆ, 1933ರಲ್ಲಿ ರಚಿತವಾದ ಚಿತ್ರದಲ್ಲಿ ಎಂ.ಕೆ. ಆಚಾರ್ಯ ಅವರು ಹಿಂದೂ ಧರ್ಮದ ಅಸ್ಪೃಶ್ಯತೆಯ ಕಬಂದ ಬಾಹುಗಳನ್ನು ವಿಸ್ತಾರಗೊಳಿಸುತ್ತಿರುವ ಮತ್ತು ಗಾಂಧೀಜಿ ಅದನ್ನು "ಸ್ವಚ್ಛ"ಗೊಳಿಸುತ್ತಿರುವ ಮತ್ತು ಅಂಬೇಡ್ಕರರು ಅದರ ಮೂಲ ಬುನಾದಿಯನ್ನು ನಾಶಮಾಡಲು ಪ್ರಯತ್ನಿಸುತ್ತಿರುವುದನ್ನು ಕಾಣಬಹುದಾಗಿದೆ: ವರ್ಣವ್ಯವಸ್ಥೆಯ ಕುರಿತ ಪಠ್ಯಗಳಲ್ಲಿ ಇಂತಹ ಚಿತ್ರಗಳನ್ನು ಬಳಸಿಕೊಳ್ಳಬಹುದಾಗಿತ್ತಲ್ಲವೆ? ಇದು ಸಾಧ್ಯವಿಲ್ಲ. ಏಕೆಂದರೆ ಐತಿಹಾಸಿಕ ಪಾಪಗಳನ್ನು ಹಾಗೆ ಮರೆಮಾಚಲು ಇಚ್ಚಿಸುವ ದಲಿತ ವಿರೋಧಿ ಪುರೋಹಿತಶಾಹಿ ಮನಸ್ಥಿತಿ ಇದಕ್ಕೆ ಎಂದೂ ಆಸ್ಪದ ಕೊಡುವುದಿಲ್ಲ.

ಸಂವಿಧಾನ ಕರಡು ರಚನೆಯು ವಿಳಂಬವಾಗುತ್ತಿರುವುದನ್ನು ಶಂಕರ್ ತಮ್ಮ ವ್ಯಂಗಚಿತ್ರದ ಮೂಲಕ ಕುಟುಕಿದ್ದಾರೆ. ಅಂದು ಸ್ವತಃ ಅಂಬೇಡ್ಕರರೇ ಚಿತ್ರದ ಬಗ್ಗೆ ವಿರೋಧ ವ್ಯಕ್ತಪಡಿಸಿಲ್ಲ ಇನ್ನು ಈ ಚಿತ್ರದಲ್ಲಿಯ ತಪ್ಪು ಕಾಣುವುದಕ್ಕೆ ಈ ಸಮುದಾಯಕ್ಕೆ 60 ವರ್ಷ ಬೇಕಾಯಿತೆ ಎಂಬುದು ಕೆಲವರ ಕುಹಕ. ಮುಂದುವರೆದು ದಲಿತರು ತಮ್ಮ ಹಕ್ಕುಗಳಿಗಾಗಿ ದನಿ ಎತ್ತಿದಾಗ ಜಾತಿವಾದಿ ಸಮಾಜ "ಇವರದು ಇದೇ ಆಯಿತು", "ಇವರದೇ ರಾಜ್ಯ", "ಅಂಬೇಡ್ಕರೇನು ದೇವರೆ" ಎಂಬೆಲ್ಲ ಕುಹಕಗಳನ್ನಾಡುತ್ತಾರೆ. ಹಿಂದೂ ಸಮಾವೇಶಗಳಿಗೆ ಗೋಲ್ವಳಕರ್ ಜೊತೆಗೆ ಅಂಬೇಡ್ಕರರ ಭಾವಚಿತ್ರ ಬಳಸಿಕೊಂಡಿದ್ದನ್ನು ದಲಿತ ಸಮುದಾಯ ತೀವ್ರವಾಗಿ ವೀರೋಧಿಸಿದ್ದರಿಂದ ಮುಂದೆ ಇಂಥ 'ಕರಸೇವೆಗೆ' ಕೈಹಾಕಲ್ಲಿಲ್ಲ. ಒಂದುವೇಳೆ ಇದಕ್ಕೆ ವಿರೋಧ ವ್ಯಕ್ತವಾಗದಿದ್ದಲ್ಲಿ ಸಂಘ ಪರಿವಾರ ಅಂಬೇಡ್ಕರ್ ಮತ್ತು ಗೋಲ್ವಳ್‌ಕರ್ 'ಚಡ್ಡಿ ದೋಸ್ತ'ರೆಂದು ಬಿಂಬಿಸುವುದಕ್ಕು ಹಿಂದೇಟು ಹಾಕುತ್ತಿರಲಿಲ್ಲ. ಅಂಬೇಡ್ಕರರು ಯಾರ ಪಿತ್ರಾರ್ಜಿತ ಆಸ್ತಿಯು ಅಲ್ಲ ಸರಿ. ಆದರೆ ಯಾರು ತಮ್ಮ ಇಡೀ ಬದುಕನ್ನು ಒಂದು ಗೆದ್ದಲು ಹಿಡಿದ ತಾರತಮ್ಯದಿಂದ ಕೂಡಿದ ವ್ಯವಸ್ಥೆ ವಿರುದ್ಧ ಹೋರಾಟ ನಡೆಸಿದ್ದರೊ ಅಂಥವರನ್ನೂ ಆ ವ್ಯವಸ್ಥೆ ತನ್ನ ಭಾಗ ಎಂದಾಗ ಇತಿಹಾಸ ಬಲ್ಲಂತ ಯಾರೂ ಸುಮ್ಮನಿರಲು ಸಾಧ್ಯವಿಲ್ಲ.

ದಲಿತ ಪ್ರತಿಭಟನಾಕಾರರು ವಿವಾದಕ್ಕೆ ಸಂಬಂಧಿತರ ಮೇಲೆ ಹಲ್ಲೆ ನಡೆಸಿದ್ದು ಮಾತ್ರ ಸಮರ್ಥನಿಯವಲ್ಲ. ಸಾಂಕೇತಿಕ ವಿಷಯಗಳಿಗಿಂತ ದಲಿತ ಸಮೂದಾಯಕ್ಕೆ ಕಿತ್ತು ತಿನ್ನುವ ಅನೇಕ ಸಮಸ್ಯೆ ಇರುವದರಿಂದ ದಲಿತ ಮತ್ತು ಪ್ರಗತಿಪರರು ಅವುಗಳ ಕಡೆ ಗಮನ ಹರಿಸುವುದು ಉತ್ತಮ. ■

ಸಂಪಾದಕರೊಡನೆ ಸಂವಾದ

ವ್ಯಂಗ್ಯದ ಹಿಂದೆ ಸತ್ಯವಿರಬೇಕಲ್ಲವೇ?

ವಿ.ಆರ್ ಮೌರ್ಯ

ಪ್ರಿಯ ಸಂಪಾದಕರೇ,

ವ್ಯಂಗ್ಯ ಚಿತ್ರಕಾರ ಶಂಕರ್‌ರವರು 1949ರಲ್ಲಿ ರಚಿಸಿದ ಸಂವಿಧಾನ ರಚನೆ ವಿಳಂಬದ ವ್ಯಂಗ್ಯಚಿತ್ರವನ್ನು ಪಠ್ಯಪುಸ್ತಕವೊಂದರಲ್ಲಿ ಸೇರಿಸಿರುವುದಕ್ಕೆ ವಿವಾದ ಪ್ರಾರಂಭವಾಗಿದೆ. ಹಲವು ಪ್ರಗತಿಪರರು, ಚಿಂತಕರು ಈ ವಿವಾದವು ಅಂತಹ ದೊಡ್ಡ ವಿಚಾರವಾಗಿರಲಿಲ್ಲ. ಸ್ವತಃ ಅಂಬೇಡ್ಕರವರೇ ವ್ಯಂಗ್ಯಚಿತ್ರದ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ ಎಂದಿದ್ದಾರೆ. ಅದೂ ನಿಜವೇ ಇದಕ್ಕೆಲ್ಲ ಅವರ ಬಳಿ ಸಮಯವೂ ಇರಲಿಲ್ಲ. ಜೊತೆಗೆ ಟೀಕೆಗಳನ್ನು ಅವಲೋಕಿಸುತ್ತಿದ್ದವರು ಅವರು.

ನೆಹರು ಮತ್ತು ಪಟೇಲರು ಭಾರತದ ಸಂವಿಧಾನವನ್ನು ರಚಿಸಲು ಅಂತರಾಷ್ಟ್ರೀಯ ಪ್ರಖ್ಯಾತ ಸಂವಿಧಾನ ತಜ್ಞ ಸರ್ ಐವರ್ ಜನ್ನಿಂಗ್‌ರನ್ನು ಆಹ್ವಾನಿಸಲು ಬಯಸಿದ್ದಾಗ ಮಧ್ಯಪ್ರವೇಶಿಸಿದ ಗಾಂಧೀಜಿಯವರು ಬಾಬಾಸಾಹೇಬ್ ಅಂಬೇಡ್ಕರ್‌ರವರನ್ನು ಸೂಚಿಸಿದ್ದರು. ಅದು ಅಂಬೇಡ್ಕರ್‌ರವರ ಜ್ಞಾನಕ್ಕೆ, ಬದ್ಧತೆಗೆ, ಪರಿಶ್ರಮಕ್ಕೆ ಸಂದ ಗೌರವವೇ ಆಗಿತ್ತು. ಆದರೆ ಅಂಬೇಡ್ಕರರು 'ಹಿಂದೂಗಳಿಗೆ ಮಹಾಭಾರತ ಬೇಕಾಯಿತು ಅದಕ್ಕೆ ಶೂದ್ರ ವ್ಯಾಸನ ಮೊರೆ ಹೋದರು. ರಾಮಾಯಣ ಬೇಕಾಯಿತು ಅಸ್ಪೃಶ್ಯ ವಾಲ್ಮೀಕಿ ಮೊರೆ ಹೋದರು. ಈಗ ಸಂವಿಧಾನ ಬೇಕಾಯಿತು ಅದಕ್ಕೆ ನನ್ನನ್ನು ಆರಿಸಿಕೊಂಡಿದ್ದಾರೆ' ಎಂದು ಅಚ್ಚರಿ ಹುಟ್ಟಿಸಿದ್ದರು. ಅದೇನೆ ಇರಲಿ ಈ ಸದ್ಯದ ವಿವಾದದ ಮೂಲವಿರುವುದು ವ್ಯಂಗ್ಯ ಚಿತ್ರದಲ್ಲಿ. ಈ ಚಿತ್ರದಲ್ಲಿ ಅಂಬೇಡ್ಕರ್‌ರವರು ಸಂವಿಧಾನವೆಂಬ ಬಸವನಹುಳುವಿನ ಮೇಲೆ ಕುಳಿತು ಚಾಟಿ ಹಿಡಿದಿದ್ದಾರೆ. ಹಿಂದೆ ನೆಹರು ಕೂಡ ಚಾಟಿ ಹಿಡಿದಿದ್ದಾರೆ. ಸುತ್ತ ಜನಸ್ತೋಮ ಇದೆ, ನೋಡುತ್ತಿದೆ. ಇದನ್ನು ಇಡಿಯಾಗಿ ನೋಡಿದರೆ ನೆಹರುರವರು ಅಂಬೇಡ್ಕರ್‌ರವರಿಗೆ ಸಂವಿಧಾನವನ್ನು ಬೇಗ ರಚಿಸುವಂತೆ ಆದೇಶಿಸುವಂತಿದೆ. ಆದರೆ ಮೇಲ್ನೋಟಕ್ಕೆ ನೆಹರು ಅಂಬೇಡ್ಕರ್‌ರವರ ಹಿಂದೆ ಚಾಟಿ ಹಿಡಿದಿರುವುದು ದಲಿತಪರರಿಗೆ ನೋವನ್ನುಂಟು ಮಾಡಿದೆ. ಅದಕ್ಕೆ ಕಾರಣವೂ ಇದೆ. ಇಲ್ಲಿ ಅಂಬೇಡ್ಕರ್‌ರನ್ನು ಪ್ರಶ್ನಾತೀತರೆಂದು ಭಾವಿಸಿ ನೋವನ್ನುಂಟು ಮಾಡಿಕೊಳ್ಳುವುದರ ಬಗ್ಗೆ ನನಗೂ ಆಕ್ಷೇಪವಿದೆ. ಅಂಬೇಡ್ಕರರೇ ಹೇಳುವಂತೆ ಪ್ರತಿಯೊಂದು ಮೌಲ್ಯವು ಕಾಲದಿಂದ ಕಾಲಕ್ಕೆ ಪುನರ್‌ವಿಮರ್ಶೆಗೆ ಒಳಗೊಳ್ಳಬೇಕು. ಆದರೆ ನನ್ನ ಆಕ್ಷೇಪವಿರುವುದು ಇಡೀ ವ್ಯಂಗ್ಯಚಿತ್ರದ ಸತ್ಯಾಸತ್ಯತೆ ಮೇಲೆ. ಸಂವಿಧಾನ ರಚನೆ ವಿಳಂಬಗೊಳ್ಳಲು ಇದ್ದ ಕಾರಣಗಳ ಮೇಲೆಯು ಸಹ ಶಂಕರ್‌ರವರು ಬೆಳಕು ಚೆಲ್ಲಿದ್ದರೆ ಆ ವ್ಯಂಗ್ಯ ಚಿತ್ರ ಇಂದಿಗೂ ಪ್ರಸ್ತುತವಾಗುತ್ತಿತ್ತು. ಇತಿಹಾಸದ ಸತ್ಯವನ್ನು ತಿಳಿಸುತ್ತಿತ್ತು. ಸಂವಿಧಾನ ರಚಿಸಿ ವಿಳಂಬವಾಗಲು ಕಾರಣಗಳಾವುವು ಎಂದು ತಿಳಿಯಲು ಶ್ರೀ ಟಿ.ಟಿ. ಕೃಷ್ಣಮಾಚಾರಿಯವರು ಸಂಸತ್ತಿನಲ್ಲಿ ಸಂವಿಧಾನದ ರಚನೆ ಬಗ್ಗೆ ಆಡಿದ ಮಾತುಗಳನ್ನು ಗಮನಿಸುವುದು ಅತಿ ಸೂಕ್ತ. ಅವರು ಹೇಳುತ್ತಾರೆ "The house inperhaps, aware that of the seven members nominated by you. (Govt.) one had resigned from the house and was replaced. one died and was not replaced one was away in America and his place was not replaced. and another person was engaged in state affairs and there was void to that extent. one or two people were for away from Delhi and perhaps reasons of health did not permit them to attend. So it happened ultimately that the burded of drafting the constitution fell o Dr. Ambedkar and . I have no doubt that we are greatful to him for having achieved this task in a manner which is undoubtedly commendable"

ಈ ಮೇಲಿನ ಮಾತುಗಳಿಂದ ಸ್ಪಷ್ಟವಾಗುತ್ತದೆ. ಸಂವಿಧಾನ ರಚನೆಯ ವಿಳಂಬಕ್ಕೆ ಅಂಬೇಡ್ಕರರು ಕಾರಣರಲ್ಲವೆಂದು. 7 ಜನರ ಕರಡು ರಚನಾ ಸಮಿತಿಯಲ್ಲಿನ ಸದಸ್ಯರು ಸಕ್ರೀಯವಾಗಿ ತೊಡಗಿಸಿಕೊಂಡಿದ್ದರೆ ಸರ್ಕಾರದ ಮುಖ್ಯಸ್ಥ ಅಂದರೆ ನೆಹರುರವರು ಸಕ್ರೀಯ ಸದಸ್ಯರನ್ನು ನೀಡಿದ್ದರೆ ಸಂವಿಧಾನ ಬೇಗನೇ ರಚನೆಯಾಗುತ್ತಿತ್ತು. ಸದಸ್ಯರುಗಳೇ ದಿಕ್ಪಾಪಾಲಾಗಿರುವಾಗ ಬಹುತೇಕ ಶ್ರಮ ಅಂಬೇಡ್ಕರ್‌ರವರ ಮೇಲೆ ಬೀಳುತ್ತದೆ. ಅಲ್ಲವೆ? ಇದರ ಅರ್ಥ ಇತರ ಸದಸ್ಯರು ಕೆಲಸ ನಿರ್ವಹಿಸಿಲ್ಲ ಎಂದರ್ಥವಲ್ಲ. ಅವರಿಂದ ಬರಬೇಕಾದ ಸಹಕಾರ ಆಗಿಲ್ಲವೆಂದು. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರದ ಮುಖ್ಯಸ್ಥರಾದ ನೆಹರೂರವರು ಚಾಟಿ ಹಿಡಿಯಬೇಕಿತ್ತೊ? ಖಾಲಿಯಿರುವ ನಿರರ್ಥಕ ಸದಸ್ಯರ ಜಾಗಕ್ಕೆ ಅರ್ಹರನ್ನು ಆಯ್ಕೆ ಮಾಡಬೇಕಿತ್ತೋ?

ಇನ್ನು ಕಾಂಗ್ರೆಸ್‌ನ ವಿರೋಧಿಯೂ ಆಗಿದ್ದ ಮನುವಾದಿಗಳ ಜನ್ಮ ಜಾಲಾಡಿದ್ದ ಅಂಬೇಡ್ಕರ್‌ರವರಿಗೆ ಸಂವಿಧಾನ ರಚಿಸಲು ಸಂಪೂರ್ಣ ಸಹಕಾರ, ಸ್ವಾತಂತ್ರ್ಯ ಸಿಕ್ಕಿರಲು ಸಾಧ್ಯವೇ? ಇದಕ್ಕೆ ಉತ್ತರ ಅಂಬೇಡ್ಕರ್‌ರವರ ಮಾತಲ್ಲೇ ನೋಡಿ.

"ಸ್ವಾತಂತ್ರ್ಯ ಭಾರತದ ಸಂವಿಧಾನ ಶಿಲ್ಪಿಯೆಂದು ನನ್ನನ್ನು ಕರೆಯುತ್ತಾರೆ. ಅದಕ್ಕೆ ನನ್ನ ಉತ್ತರವಿದು– ನಾನೊಂದು ಬಾಡಿಗೆ ಕುದುರೆಯಂತಿದ್ದೆ ನನಗೆ ಇಷ್ಟವಿಲ್ಲದಿದ್ದರು ನಾನು ಬೇರೆಯವರ ಮರ್ಜಿಯಂತೆ ಅದೆಲ್ಲ ಮಾಡಿದೆ." ಈ ಕಾರಣದಿಂದಾಗಿಯೂ ಸಂವಿಧಾನ ರಚನೆ ವಿಳಂಬವಾಗಿರಬಹುದೆನ್ನುವುದನ್ನು ತಳ್ಳಿ ಹಾಕುವಂತಿಲ್ಲ.

ಇನ್ನು ಸಂವಿಧಾನ ರಚಿಸುವಲ್ಲಿ ಅಂಬೇಡ್ಕರ್‌ರವರಿಗಿದ್ದ ಬದ್ಧತೆಯನ್ನು ತಿಳಿಯಲು ಸಮಿತಿಯ ಸದಸ್ಯರಲ್ಲೊಬ್ಬರಾಗಿದ್ದ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್‌ರವರ ಮಾತುಗಳನ್ನು ಗಮನಿಸಿರಿ.

"I would be friling in my duty if I do not express my high appreciation of the skill and ability with which my friend the Hon. Dr. Ambedkar has piloted this constitution and his untiring work the chairman of the Drafting committee" ಸಂವಿಧಾನ ರಚಿಸುವಲ್ಲಿ ಅಂಬೇಡ್ಕರ್‌ರವರು ಎಷ್ಟು ಶ್ರಮ ವಹಿಸಿದ್ದರು ಎಂಬುದು ಅವರನ್ನು ಹತ್ತಿರದಿಂದ ಬಲ್ಲವರಿಗೆ ಚೆನ್ನಾಗಿ ತಿಳಿದಿತ್ತು. ಅನಾರೋಗ್ಯದಿಂದ ತೀವ್ರವಾಗಿ ಬಳಲುತ್ತಿದ್ದ ಕಾಲ, ನರವ್ಯಾಧಿಯಂತು ಅವರನ್ನು ಕಿತ್ತು ತಿನ್ನುತ್ತಿತ್ತು. ಇನ್‌ಸೂಲಿನ್ ಹೋಮಿಯೋಪತಿ ಅವರಿಗೆ ಸಹಾಯವಾಗಲಿಲ್ಲ. ಆದರೂ ದಿನಕ್ಕೆ 18 ಗಂಟೆ ಕೆಲಸ ನಿರ್ವಹಿಸುತ್ತಿದ್ದರು. ಇದು ಸಂವಿಧಾನ ರಚನೆಯಲ್ಲಿ ಅವರಿಗಿದ್ದ ಬದ್ಧತೆಯನ್ನು ಸೂಚಿಸುತ್ತದೆ. ಸಂವಿಧಾನ ರಚಿಸುವ ಸಮಯದಲ್ಲಿ ಪುರುಸೊತ್ತಿಲ್ಲದ ಅವರ ಜೀವನ ಶೈಲಿಯನ್ನು ಕಂಡು ಬೇಸತ್ತ ಹೆಂಡತಿ ಸವಿತಾ ಅಂಬೇಡ್ಕರ್‌ರವರು ಪತ್ರದಲ್ಲಿ ವಿವಾಹ ವಿಚ್ಛೇದನದ ಪ್ರಸ್ತಾಪವನ್ನು ಮಾಡಿರುತ್ತಾರೆ. ಈ ರೀತಿಯ ಬದ್ಧತೆಯಿಂದ ಸಂವಿಧಾನವನ್ನು ರಚಿಸಿದ್ದಕ್ಕಾಗಿಯೇ ಇಂದು ನಾವೆಲ್ಲರೂ ಧರ್ಮಾಂಧರು, ಜ್ಯಾತ್ಯಾಂಧರ ನಡುವೆ ಉಸಿರಾಡುತ್ತಿದ್ದೇವೆ. ಆದ್ದರಿಂದ ಅದಾಗಲೇ ನಿವೆಲ್ಲರು ಮಹಾನ್ ಮೂರ್ತಿ ಭಂಜಕನಾದ ಅಂಬೇಡ್ಕರ್‌ರವರನ್ನು ಕಂಡ ಕಂಡಲ್ಲಿ ಮೂರ್ತಿಯಾಗಿಸಿ ಕಿಡಿಗೇಡಿಗಳು ಅದಕ್ಕೆ ಅಪಮಾನ ಮಾಡಲು ಪರೋಕ್ಷವಾಗಿ ಸಹಕರಿಸಿದ್ದೇವೆ. ಇದೀಗ ಸತ್ಯವಿಲ್ಲದ ವ್ಯಂಗ್ಯ ಚಿತ್ರದಿಂದ ಪಠ್ಯಪುಸ್ತಕದಲ್ಲಿ ಅಂಬೇಡ್ಕರ್‌ರಿಗೆ ಅಪಮಾನ ಮಾಡುವುದು ಬೇಡ. ಸಂವಿಧಾನವನ್ನು ರಚಿಸಿದವರು ಅಂಬೇಡ್ಕರ್ ಅಲ್ಲವೇ ಅಲ್ಲ ಎನ್ನುತ್ತಿರುವ ನೀಚ ಮನುವಾದಿಗಳಿಗೆ ಈ ರೀತಿಯಲ್ಲಿ ಮತ್ತೆ ಅಂಬೇಡ್ಕರ್ ಆಹಾರವಾಗುವುದು ಬೇಡ. ಆದ್ದರಿಂದ ಶಂಕರ್‌ರವರ ವ್ಯಂಗ್ಯಚಿತ್ರ ಅಂದಿಗೂ ಪ್ರಸ್ತುತವಲ್ಲ. ಇಂದಿಗೂ ಸಹ ಪ್ರಸ್ತುತವಲ್ಲ. ಬಹುಶಃ ಈ ಮೇಲಿನ ವಿಷಯಗಳೆಲ್ಲವು ಶಂಕರ್‌ರವರಿಗೆ ತಿಳಿದಿದ್ದರೆ ಅವರು ಅಂತಹ ವ್ಯಂಗ್ಯ ಚಿತ್ರಕ್ಕೆ ಕೈ ಹಾಕುತ್ತಿರಲಿಲ್ಲವೇನೋ. ಸಂವಿಧಾನ ರಚನೆ ವಿಳಂಬವಾಗಲು ನೆಹರೂರವರ ಸರ್ಕಾರವೇ ನೇರ ಹೊಣೆಯಾಗುತ್ತದೆ. ಆದರೆ ಈ ವಿವಾದದಲ್ಲಿ ನೋವಾಗುವ ವಿಚಾರವೆಂದರೆ ಇಡೀ ಪಠ್ಯಪುಸ್ತಕವನ್ನು ಸರ್ಕಾರ ವಾಪಾಸು ಪಡೆದಿರುವುದು ಮತ್ತು ದಲಿತಪರರು ಹಲ್ಲೆ ನಡೆಸಿರುವುದು. ಇವೆರಡೂ ಸಹ ಅಂಬೇಡ್ಕರ್ ರೈಟ್ ಮಾಡಬಹುದಾದ ಕೆಲಸಗಳಲ್ಲ. ಇವೆರಡೂ ಸಂಗತಿಗಳು ಖಂಡನೀಯ ಕೊನೆಯದಾಗಿ ಸರ್ ಐವರ್ ಜೆನ್ನಿಂಗ್‌ರವರೇನಾದರೂ ಸಂವಿಧಾನ ರಚಿಸಿದ್ದರೆ ನಮ್ಮ ಕಥೆಗಳು ಏನಾಗುತ್ತಿತ್ತು ಎಂದು ನೆನೆಸಿಕೊಳ್ಳಿ ಸಾಕು. ಆಗ ಅಂಬೇಡ್ಕರ್‌ರವರು ಆಕಾಶದೆತ್ತರಕ್ಕೆ ನಿಲ್ಲುತ್ತಾರೆ.

ಸಂಪಾದಕರೊಡನೆ ಸಂವಾದ

ವಿಜಯಕುಮಾರ್ ಕೆ.ಟಿ

ಅಂಬೇಡ್ಕರ್ ವ್ಯಂಗ್ಯಚಿತ್ರ ವಿವಾದವೂ; ದೌರ್ಜನ್ಯದ ಮುಂದುವರೆದ ಭಾಗವೂ...

ಪ್ರೀತಿಯ ಸಂಪಾದಕರೇ,

ಈ ಭೂಮಿಯ ಒಡೆಯರಾಗಿದ್ದ ನಾಗ ಜನಾಂಗದವರನ್ನು ರಾಕ್ಷಸರಂತೆ ಚಿತ್ರಿಸಿ ಆರ್ಯರನ್ನು ದೇವರಂತೆ ರೂಪಿಸಿದ ದೇಶ ನಮ್ಮದು. ತನ್ನ ಇತಿಹಾಸದುದ್ದಕ್ಕೂ ತಳಸಮುದಾಯದವರನ್ನು ತುಳಿತಕ್ಕೆ ಒಡ್ಡಿ, ಸವರ್ಣೀಯರು ಶ್ರೇಷ್ಠರೆಂದು ಬಿಂಬಿಸುತ್ತಿರುವುದು ತೆರೆಯ ಹಿಂದಿನ ಸತ್ಯವಾಗಿದೆ. ಇಂತಹ ದೌರ್ಜನ್ಯಗಳ ಮುಂದುವರೆದ ಭಾಗವೇ ಡಾ॥ ಬಿ.ಆರ್. ಅಂಬೇಡ್ಕರ್ ವ್ಯಂಗ್ಯಚಿತ್ರ ಪ್ರಕರಣ.

ಪ್ರಸ್ತುತ ಅಂಬೇಡ್ಕರ್ ವ್ಯಂಗ್ಯಚಿತ್ರವನ್ನು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ(NCERT) ಹನ್ನೊಂದನೆ ತರಗತಿಯ ಪಠ್ಯ ಪುಸ್ತಕದಲ್ಲಿ ಅಳವಡಿಸಿರುವುದು ವಿವಾದಕ್ಕೆ ಕಾರಣವಾಗಿದೆ. ಶಿಕ್ಷಣ ತಜ್ಞರಾದ ಪ್ರೊ.ಯೋಗೇಂದ್ರ ಯಾದವ್ ಮತ್ತು ಸುಹಾಸ್ ಪಾಲ್ಶೀಕರ್ ಅನಾವಶ್ಯಕವಾಗಿ ವ್ಯಂಗ್ಯಚಿತ್ರವನ್ನು ಪಠ್ಯಗಳಲ್ಲಿ ತುರುಕಿದ್ದು, ದೇಶದೆಲ್ಲೆಡೆ ಬಿಸಿ ಬಿಸಿ ಚರ್ಚೆಯಾಗಿದೆ. ಸಂಸತ್‌ನಲ್ಲಿ ಕೋಲಾಹಲ ಸೃಷ್ಟಿಯಾಗಿ ಕೇವಲ ಸಂಸತ್ತಿನ ಕಲಾಪವನ್ನು ನುಂಗುಹಾಕದೆ, ದಲಿತರನ್ನು ಘಾಸಿಗೊಳಿಸಿ ಅವರನ್ನು ಕೆರಳಿಸಿದೆ.

ಸದ್ಯ ದೇಶದೆಲ್ಲೆಡೆ ಪ್ರಚಲಿತವಾಗಿರುವ ಅಂಬೇಡ್ಕರ್ ವ್ಯಂಗ್ಯ ಚಿತ್ರ ಪ್ರಕರಣವು ಹತ್ತು ಹಲವು ಕೋನಗಳಲ್ಲಿ ವ್ಯಾಖ್ಯಾನಿಸಲಾಗುತ್ತಿದೆ. ಈ ವ್ಯಂಗ್ಯಚಿತ್ರವನ್ನು 1949 ರಲ್ಲಿ ಶಂಕರ್ ಪಿಳ್ಳೈರವರು ತಮ್ಮ ಶಂಕರ್ ವೀಕ್ಲಿಯಲ್ಲಿ ಪ್ರಕಟಿಸಿರುತ್ತಾರೆ. ಸಂವಿಧಾನ ಎಂದು ಬರೆಯಲ್ಪಟ್ಟ ಬಸವನ ಹುಳುವಿಗೆ ಮೂಗುದಾರವನ್ನು ತೊಡಿಸಿ ಅದರ ಮೇಲೆ ದಾರವನ್ನಿಡಿದು ಅಂಬೇಡ್ಕರ್ ಕುಳಿತಿದ್ದರೆ ಹಿಂದೆ ಕೈಯಲ್ಲಿ ಚಾಟಿ ಹಿಡಿದು ಬಸವನ ಹುಳುವಿಗೆ ಹೊಡೆಯುವಂತೆ ನೆಹರೂ ನಿಂತಿದ್ದಾರೆ, ಇದನ್ನು ಮೂಕವಿಸ್ಮಿತರಾಗಿ ಜನರು ವೀಕ್ಷಿಸುತ್ತಿರುವುದು. ಅಂದಿನ ಕಾಲದಲ್ಲಿ ಈ ವ್ಯಂಗ್ಯಚಿತ್ರ ಯಾವುದೇ ವಿವಾದವನ್ನು ಸೃಷ್ಟಿಸಲಿಲ್ಲ ಹಾಗೂ ಆ ಸಂದರ್ಭದಲ್ಲಿ ಅಂಬೇಡ್ಕರ್ ಜೀವಂತವಾಗಿದ್ದು ಅವರು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ.

ಇಷ್ಟಕ್ಕೂ ವ್ಯಂಗ್ಯ ಚಿತ್ರಕಲೆಯೆಂದರೆ ಏನು? ಪ್ರಜಾವಾಣಿ ಪತ್ರಿಕೆಯ ಖ್ಯಾತ ವ್ಯಂಗ್ಯ ಚಿತ್ರಗಾರ ಪಿ.ಮಹಮದ್ ಬರೆದುಕೊಂಡಿರುವಂತೆ ಅದೊಂದು ನಿರ್ದಿಷ್ಟ ಕಾಲದಲ್ಲಿ ನಡೆದ ಒಂದು ನಿರ್ದಿಷ್ಟ ಘಟನೆಗೆ ಸಂಬಂದಿಸಿದ ದಾಖಲೆ. ಶ್ರೀ ಶಂಕರ್ ಪಿಳ್ಳೈ ಸಂವಿಧಾನದ ರಚನಾಕಾರ್ಯವೂ ಮಂದಗತಿಯಲ್ಲಿ ಸಾಗುತ್ತಿರುವುದನ್ನು ವಿಶ್ಲೇಷಿಸಲು ಈ ಚಿತ್ರವನ್ನು ಬಿಡಿಸಿರಬಹುದು. ಬಹುಶಃ ಸಂವಿಧಾನ ಸಮಿತಿಯ ಸದಸ್ಯರು ಚುರುಕಾಗಿ ತಮ್ಮ ಕಾರ್ಯದಲ್ಲಿ ತೊಡಗಿಸಿಕೊಂಡಿರದನ್ನು ನೋಡಿದ್ದ ಶಂಕರ್‌ರವರು ಸಂವಿಧಾನ ರಚನೆ ವಿಳಂಬವಾಗಬಹುದೆಂದು ಭಾವಿಸಿ ಈ ಚಿತ್ರವನ್ನು ರೂಪಿಸಿರಬಹುದು ಅಥವಾ ನೆಹರೂರವರ ದ್ವಂದ್ವ ನೀತಿಗಳ ವಿರುದ್ಧ ಆಕ್ರೋಶವೂ ಇರಬಹುದು. ಇಂತಹ ಸದಸ್ಯರನ್ನು ಅಂಬೇಡ್ಕರವರ ಸಹಾಯಕ್ಕಾಗಿ ನೀಡಿ ವಿಳಂಭವಾದರೆ ಅದಕ್ಕೆ ಅಂಬೇಡ್ಕರವರನ್ನು ನೇರ ಹೊಣೆಗಾರರನ್ನಾಗಿ ಮಾಡುವ ದ್ವಂದ್ವ ನೀತಿಯನ್ನು ಬಿಂಬಿಸಲು ಈ ಚಿತ್ರವು ಸೃಷ್ಠಿಯಾಗಿರಬಹುದು. ಅಸಲಿಗೆ ಸಂವಿಧಾನ ರಚನಾ ಕೆಲಸವು ಅವಧಿಗೂ ಮುನ್ನ ಸಿದ್ಧಗೊಳಿಸಿದ್ದರು. ಸಮಿತಿಯಲ್ಲಿ 6 ಜನ ಸದಸ್ಯರಿದ್ದರೂ ಅಧ್ಯಕ್ಷರಾಗಿದ್ದ ಅಂಬೇಡ್ಕರ್ ಏಕಾಂಗಿಯಾಗಿ ಸಂವಿಧಾನ ರಚಿಸಿದ್ದಾರೆಂದು ಸಮಿತಿಯ ಸದಸ್ಯರಲೊಬ್ಬರಾದ ಟಿ.ಟಿ.ಕೃಷ್ಣಮಾಚಾರಿ ಸಂಸತ್ತಿನಲ್ಲಿ ದಾಖಲಿಸಿದ್ದಾರೆ. ಭಾರತದ ಪ್ರತಿಯೊಬ್ಬರು ಅಂಬೇಡ್ಕರ್‌ರವರ ಸೇವೆಯನ್ನು ಸ್ಮರಿಸಲೆಬೇಕು.

ಈ ವ್ಯಂಗ್ಯಚಿತ್ರ ವಿವಾದದ ಪ್ರಕರಣದಿಂದ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರಕ್ಕೆ ದಲಿತರಿಂದ ಪ್ರತಿಭಟನೆ ಎದರಿಸುವಂತಾಯಿತು ಹಾಗೂ ದಲಿತರ ಶಕ್ತಿ ಏನೆಂದು ತಿಳಿಸಲಾಯಿತು. ಈ ವಿಷಯವನ್ನು ತಿಳಿಗೊಳಿಸುವ ಸಲುವಾಗಿಯೇ ಪ್ರಕರಣದ ನೈತಿಕ ಹೊಣೆ ಹೊತ್ತು ಮಾನವ ಸಂಪನ್ಮೂಲ ಸಚಿವರಾದ ಕಪಿಲ್ ಸಿಬಲ್ ದೇಶದ ಜನರಲ್ಲಿ ಕ್ಷಮೆ ಕೋರಿದ್ದಾರೆ. ಪ್ರೊ.ಯೋಗೇಂದ್ರ ಯಾದವ್ ಮತ್ತು ಸುಹಾಸ್ ಪಾಲ್ಶೀಕರ್ ಅವರಿಂದ ರಾಜಿನಾಮೆಯನ್ನೂ ಪಡೆಯಲಾಗಿದೆ.

ಪ್ರೊ.ಯೋಗೇಂದ್ರ ಯಾದವ್‌ರವರು ಅಂಬೇಡ್ಕರ್ ರವರಿಗೆ ಅಪಮಾನ ಮಾಡುವ ಯಾವ ಕೆಲಸವು ನಡೆದಿಲ್ಲ ಹಾಗೂ ತಮಗೆ ಯಾವುದೆ ಅಂತಹ ಕೆಟ್ಟ ಉದ್ದೇಶವಿರಲಿಲ್ಲ ಎಂದು ರಾಜಿನಾಮೆ ನೀಡಿದ ನಂತರ ತಮ್ಮ ಸಂದರ್ಶನದಲ್ಲಿ ಹೇಳಿದ್ದಾರೆ. ಅವರ ಹೇಳಿಕೆ ಏನೆ ಇರಬಹುದು ಆದರೆ ತಾವೂ ಒಬ್ಬ ಹಿಂದುಳಿದ ಜನಾಂಗದಿಂದ ಬಂದಿದ್ದು ಇಂತಹ ಸೂಕ್ಷ್ಮ ವಿಷಯಗಳನ್ನು ಪಠ್ಯಗಳಲ್ಲಿ ಅಳವಡಿಸುವಾಗ ಹತ್ತು ಸಲ ಯೋಚಿಸಬೇಕಾಗಿತ್ತು. ಕೇವಲ ಪ್ರಚಾರಕ್ಕಾಗಿ ಒಬ್ಬ ಮಹಾನ್ ವ್ಯಕ್ತಿಯ ಹೆಸರನ್ನು ಬಳಸಿಕೊಂಡು ಅಗೌರವದಿಂದ ನಡೆದುಕೊಂಡಿದ್ದಾರೆ.

ಒಬ್ಬ ದಲಿತ ಈ ದೇಶದ ಸಂವಿಧಾನ ರಚಿಸಿದವರೆಂದು ಅರಗಿಸಿಕೊಳ್ಳಲು ಸಾಧ್ಯವಾಗದ ಕೋಮುವಾದಿಗಳು ಸದಾ ಸಂವಿಧಾನವನ್ನು ತಿರುಚುವುದರಲ್ಲಿ ತೇಜೋವಧೆ ಮಾಡುವುದರಲ್ಲಿ ಅಪಮಾನ ಎಸಗುವುದರಲ್ಲಿ ನಿರತರಾಗಿರುತ್ತಾರೆ. ಈಗ ತಾನೆ ಸಮಾಜವನ್ನು ತಿಳಿದುಕೊಳ್ಳುತ್ತಿರುವ ಎಳೆ ಮನಸ್ಸುಗಳಲ್ಲಿ ಜಾತ್ಯಾತೀತ ನಿಲುವಿನ ಸಂವಿಧಾನದ ಬಗ್ಗೆ ಅಪನಂಬಿಕೆ ಮೂಡಿಸಿದರೆ ಭವಿಷ್ಯದಲ್ಲಿ ಸಂವಿಧಾನದ ತಿದ್ದುಪಡಿ ತರಬಹುದೆಂಬ ಉನ್ನಾರವೂ ಅಡಕವಾಗಿದೆ. ಈಗಾಗಲೇ ಹಿಂದೂ ತತ್ವಗಳನ್ನು ಪಠ್ಯಗಳಲ್ಲಿ ಅಳವಡಿಸಿ ಧರ್ಮಗಳ ನಡುವೆ ಕಂದರವನ್ನು ಸೃಷ್ಟಿಸಿ ಎಳೆ ಮನಸ್ಸುಗಳಲ್ಲಿ ಹಿಂದು-ಮುಸಲ್ಮಾನರೆಂಬ ವ್ಯತ್ಯಾಸಗಳು ಬರುವಂತೆ ಮಾಡಲಾಗಿದೆ. ಈಗ ಸಂವಿಧಾನವನ್ನು ಅಗೌರವದಿಂದ ನೋಡುವ ವ್ಯಂಗ್ಯ ಚಿತ್ರವನ್ನು ಪಠ್ಯಗಳಲ್ಲಿ ತಂದು ಸಂವಿಧಾನಕ್ಕೆ ಅಪಮಾನ ಎಸಗಿದ್ದಾರೆ.

ಇಂತಹ ಪ್ರಕರಣಗಳು ಮುಂದಿನ ದಿನಗಳಲ್ಲಿ ಆಗದಂತೆ ಎಚ್ಚರವಹಿಸಬೇಕಿದೆ. ರಾಷ್ಟ್ರನಾಯಕರಿಗೆ ಅವಮಾನ ಮಾಡುವ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಉಗ್ರವಾದ ಶಿಕ್ಷೆಗೆ ಒಳಪಡಿಸಬೇಕಾದ ಕಾರ್ಯವು ತುರ್ತಾಗಿ ನಡೆಯಬೇಕಾಗಿದೆ. ತಳಸಮುದಾಯಗಳ ಮೇಲೆ ನಿರಂತರವಾಗಿ ಮುಂದುವರೆದಿರುವ ದೌರ್ಜನ್ಯಗಳು ನಿಲ್ಲಬೇಕು. ಶಾಲ ಕಾಲೇಜು ಪಠ್ಯಗಳಲ್ಲಿ ಶ್ರೇಷ್ಠವಾದ ವಿಷಯಗಳನ್ನು ನೀಡಿ ಎಳೆಯ ಮನಸುಗಳು ಸುಂದರವಾಗಿ ಅರಳುವಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ■

ಚಂದಾ ವಿವರ ಬಿಡಿ ಪ್ರತಿ ರೂ. 20

ಚಂದಾ ಅವಧಿ:	1 ವರ್ಷಕ್ಕೆ	3 ವರ್ಷಕ್ಕೆ	5 ವರ್ಷಕ್ಕೆ
ವ್ಯಕ್ತಿಗಳು :	ರೂ. 200	ರೂ. 550	ರೂ. 900
ಸಂಸ್ಥೆಗಳು :	ರೂ. 240	ರೂ. 720	ರೂ. 1200
ಹಿತೈಷಿಗಳು :	ರೂ. 500	ರೂ. 1500	ರೂ. 2500

ಆಜೀವ ಚಂದಾ ರೂ.5,000/-
ಪೋಷಕ ಚಂದಾ ರೂ.10,000/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಈ ಕೆಳಗಿನ ಖಾತೆಗೆ ಕಳುಹಿಸಬಹುದು:
A/C NAME: SAMVAADA MAGAZINE
BANK NAME: STATE BANK OF INDIA,
BRANCH: BHARATHNAGAR, BANGALURU
A/C No: 30140484351, IFS Code: SBIN0005198

ಸಂಪಾದಕರೊಡನೆ ಸಂವಾದ

ಬಥಾನಿ ತೋಲಾ ಮತ್ತು ಕಾರ್ಟೂನ್ ವಿವಾದ

ಮೂಲ: ಡಾ. ಆನಂದ್ ತೇಲ್ತುಂಬ್ಡೆ
ಅನು: ಡಾ. ಎಚ್.ಎಸ್ ಅನುಪಮಾ

ಪ್ರಿಯ ಸಂಪಾದಕರೇ,

ಬಥಾನಿ ತೋಲಾ 1996. ಮೇ 2010ರಲ್ಲಿ ಆರಾ ಸೆಷನ್ಸ್ ಕೋರ್ಟಿನಿಂದ ಘಟನೆ ನಡೆದ 14 ವರ್ಷಗಳ ನಂತರ ತೀರ್ಪು ಹೊರಬಿತ್ತು. 23 ಜನ ಆರೋಪಿಗಳಲ್ಲಿ 3 ಜನರಿಗೆ ಮರಣದಂಡನೆಯನ್ನೂ, 20 ಜನರಿಗೆ ಜೀವಾವಧಿ ಶಿಕ್ಷೆಯನ್ನೂ ವಿಧಿಸಲಾಯಿತು.

ಈ ತೀರ್ಪಿನ ವಿರುದ್ಧ ಪಾಟ್ನಾ ಹೈಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಿದಾಗ ಇತ್ತೀಚೆಗೆ ಏಪ್ರಿಲ್ 16ಕ್ಕೆ ಅದರ ತೀರ್ಪು ಹೊರಬಂತು. ಎಲ್ಲ ಆರೋಪಿಗಳೂ ಆರೋಪಗಳಿಂದ ಖುಲಾಸೆಯಾಗಿದ್ದರು. 1996 ಏಪ್ರಿಲ್ 11ರಂದು ಬಿಹಾರದ ಭೋಜ್‌ಪುರ್ ಜಿಲ್ಲೆಯ ಸಹಾರ್ ಬ್ಲಾಕಿನ ಪುಟ್ಟ ಹಳ್ಳಿಯಲ್ಲಿ ಸಂಭವಿಸಿದ 21 ದಲಿತರ ಮಾರಣಹೋಮದ ಬಗೆಗೆ ತಿಳಿದವರಿಗೆಲ್ಲ ಈ ತೀರ್ಪು ಆಘಾತ ನೀಡಿತು. ಸಿಟ್ಟಿನಿಂದ ಪ್ರತಿಕ್ರಿಯಿಸಿದವರೂ ಇದ್ದರು. ಆದರೆ ಅವೆಲ್ಲ ಭೋಜ್‌ಪುರ, ಗಯಾ, ಔರಂಗಾಬಾದ್, ಅರವಾಲ್ ಇತ್ಯಾದಿ ಪಾಟ್ನಾದಿಂದ 60 ಕಿಮೀ ಒಳಗಿನ ಪ್ರದೇಶಗಳ, ಹತರಾದವರ ಬಂಧುಗಳ ಪ್ರತಿಕ್ರಿಯೆಗಳಾಗಿದ್ದವು. ಮಾಮೂಲಿನಂತೆ ನಿತೀಶ್ ಕುಮಾರ್ ಸರ್ಕಾರ ಸುಪ್ರೀಂಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸುವುದಾಗಿ ಹೇಳಿ ಕೈ ತೊಳೆದುಕೊಂಡಿತು. ರಾಬ್ಡಿದೇವಿ ಸರ್ಕಾರ 1996ರಲ್ಲಿ ಕುಖ್ಯಾತ ರಣವೀರ ಸೇನೆಯ ರಾಜಕೀಯ ನಂಟಿನ ಬಗ್ಗೆ ತನಿಖೆ ನಡೆಸಲು ನೇಮಿಸಿದ್ದ ಜಸ್ಟಿಸ್ ಅಮೀರ್‌ದಾಸ್ ಕಮಿಷನ್ ಅನ್ನು ವಜಾಗೊಳಿಸಿ ನಿತೀಶ್ ಸರ್ಕಾರ ಗೊಂದಲಕ್ಕೊಳಗಾಗಿತ್ತು. ಹಾಗಾಗಿ ದಲಿತರ ಗಾಯಕ್ಕೆ ಉಪ್ಪು ಸವರುವಂತಹ ತೀರ್ಪು ಯಾರಿಗೂ ತಿಳಿಯದೇ ಚಾಪೆಯಡಿ ನುಸುಳಿ ಹೋಯ್ತು. ಟಿವಿಯಲ್ಲಿ ಈ ಬಗ್ಗೆ ಚರ್ಚೆಯಾಗಲಿಲ್ಲ. ಮಾಧ್ಯಮಗಳು ಈ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಹುಬ್ಬೇರಿಸುವ ವಿಶ್ಲೇಷಣೆಗಳು ನಡೆಯಲಿಲ್ಲ.

ಇದೇ ವೇಳೆಗೆ 63 ವರ್ಷ ಕೆಳಗೆ ಬರೆದು ಶಂಕರ್ಸ್ ವೀಕ್ಲಿಯಲ್ಲಿ ಪ್ರಕಟಿಸಿದ್ದ, ಹೆಸರಾಂತ ಕಾರ್ಟೂನಿಸ್ಟ್ ಶಂಕರ್ ಪಿಳ್ಳೈ ರಚಿಸಿದ ಕಾರ್ಟೂನೊಂದು ವಿವಾದಕ್ಕೊಳಗಾಗಿತ್ತು. ಸಂವಿಧಾನ ರಚನೆ ವಿಳಂಬವಾಗುತ್ತಿರುವುದರ ಕುರಿತು ಒಂದು ಕಾರ್ಟೂನ್ ಎನ್‌ಸಿಇಆರ್‌ಟಿ ಪಠ್ಯದಲ್ಲಿತ್ತು. 11ನೇ ತರಗತಿಯ ರಾಜ್ಯಶಾಸ್ತ್ರದ ಪಠ್ಯಪುಸ್ತಕದಲ್ಲಿದ್ದ ಅದರಲ್ಲಿ ಸಂವಿಧಾನವೆಂಬ ಬಸವನಹುಳದ ಮೇಲೆ ಕುಳಿತು ಚಾಟಿ ಬೀಸುತ್ತಿರುವ ಅಂಬೇಡ್ಕರ್, ಅವರ ಹಿಂದೇ ಚಾಟಿ ಬೀಸುತ್ತ ನಿಂತಿರುವ ನೆಹರೂ ಹಾಗೂ ಸುತ್ತ ನಿಂತು ನೋಡುವ ಜನ ಇದ್ದರು. ಇದು 2006ರಿಂದಲೇ ಈ ಪಠ್ಯದಲ್ಲಿದ್ದರೂ 6 ವರ್ಷಗಳ ತರುವಾಯ ಈಗ ರಾಜಕಾರಣಿಗಳ ಕಣ್ಣಿಗೆ ಬಿತ್ತು. ಚುನಾವಣಾ ರಾಜಕಾರಣದ ವ್ಯಾಕರಣದಂತೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು ತಕ್ಷಣವೇ ಪ್ರತಿಕ್ರಿಯಿಸಿ ಈ ಪಠ್ಯ ತಯಾರಿಸಿದ ಎನ್‌ಸಿಇಆರ್‌ಟಿಗೆ ಪಠ್ಯ ಹಿಂತೆಗೆದುಕೊಳ್ಳುವಂತೆ ಸೂಚಿಸಿದರು. ಆದರೆ ವಿವಾದ ಪುಣೆ ವಿಶ್ವವಿದ್ಯಾಲಯದ ಸುಭಾಷ್ ಪಾಲ್ಶೀಕರ್ ಅವರ ಕಛೇರಿಗೆ ರಿಪಬ್ಲಿಕನ್ ಪ್ಯಾಂಥರ್ಸ್ ಕಾರ್ಯಕರ್ತರು ನುಗ್ಗಿ ಧಾಂಧಲೆ ನಡೆಸಿ ಅದು ಟಿವಿಯಲ್ಲಿ ಬಹುಚರ್ಚೆಯಾಗುವಷ್ಟರ ಮಟ್ಟಿಗೆ ಮುಂದುವರೆಯಿತು.

ಈ ಎರಡೂ ವಿಷಯಗಳು ದಲಿತರ ಮನೋಭಾವದ ಕುರಿತು ಎರಡು ಪ್ರಶ್ನೆಗಳನ್ನೆತ್ತುತ್ತವೆ: ಭಾವುಕಗೊಳಿಸುವ ವಿಷಯಗಳ ಬಗೆಗಷ್ಟೇ ಅವರು ಗಮನ ಹರಿಸುವುದೇಕೆ? ಮತ್ತು ದಲಿತರ ಅಸ್ತಿತ್ವದ ಪ್ರಶ್ನೆಯ ಬಗ್ಗೆ ನಿರ್ಲಕ್ಷ್ಯವೇಕೆ?

ಅಂಬೇಡ್ಕರ್ ಎಂಬ ಪ್ರತಿಮೆ:

ಇಡೀ ದಲಿತ ಶಕ್ತಿಯೇ ಅಂಬೇಡ್ಕರ್ ಮೂರ್ತೀಕರಣದಲ್ಲಿ ಕೇಂದ್ರೀಕೃತವಾಗಿದೆ. ದಲಿತರ ಏಳ್ಗೆಗೆ ಅಂಬೇಡ್ಕರ್ ಕೊಡುಗೆಯನ್ನು ಗಮನದಲ್ಲಿಟ್ಟುಕೊಂಡರೆ ಅವರು ತಮ್ಮ ಉದ್ಧಾರಕ, ದೇವದೂತ ಎಂದು ದಲಿತರು ಭಾವಿಸುವುದು ಸಹಜವೇ. ಅಷ್ಟೇ ಅಲ್ಲ, ದಲಿತ ಸಮುದಾಯದ ಸ್ಥಿತಿಗತಿಯನ್ನು ಅವಲೋಕಿಸಿದರೆ ಅವರ ಮೂರ್ತೀಕರಣವೂ ಸಹಜವೇ. ಅಂಬೇಡ್ಕರ್ ಮೂರ್ತಿ ದೇವರ ಫೋಟೋಗಳ ಸ್ಥಾನ ಆಕ್ರಮಿಸಿಕೊಂಡಿದೆ. ದಲಿತರ ಆತ್ಮಗೌರವ, ಪ್ರತಿಷ್ಠೆ, ಸ್ವಾಭಿಮಾನದ ಸಂಕೇತವಾಗಿದೆ. ಅವರಿಗೆ ಅದೊಂದು ಬೆಳಕು, ತಮ್ಮ ಹೋರಾಟಕ್ಕೆ ಒಗ್ಗೂಡಿಸುವ ಶಕ್ತಿ. ಇಷ್ಟೆಲ್ಲ ಆದದ್ದು ದುಷ್ಟ ಹಿತಾಸಕಿಗಳ ಕೈವಾಡಕ್ಕೆ ಬಲಿಯಾಯಿತು. ಅಂಥ ಮೊದಲ ಕೃತ್ಯ ಬಂದದ್ದು ಒಳಗಿನಿಂದಲೇ, ಕಾಲೇಜು ಕಲಿತ ನಗರೀಕರಣಗೊಂಡ ದಲಿತರಿಂದಲೇ. ಸ್ವಹಿತಾಸಕ್ತಿಗನುಗುಣವಾಗಿ ಅವರು ಆ ಮೂರ್ತಿಗೆ ಮನಸೋ ಇಚ್ಛೆ ಬಣ್ಣ ಬಳಿದುಕೊಂಡರು. ಆ ಮೂರ್ತಿಯಲ್ಲಿ ಕ್ರಾಂತಿಕಾರಿ ಬದಲಾವಣೆ ಬಯಸಿದ ಅಂಬೇಡ್ಕರ್ ನಾಪತ್ತೆಯಾಗಿ ಜಾತಿ ಆಧರಿತ ಮೀಸಲಾತಿ ಪ್ರತಿಪಾದಕ, ಸಂವಿಧಾನ ಶಿಲ್ಪಿ, ಸರಕುಸಂಸ್ಕೃತಿ ವಿರೋಧಿ, ಮತ್ತು ಮನೋಕೇಂದ್ರಿತ ಬೌದ್ಧ ಪ್ರತಿಪಾದಕ ಎಂದೆಲ್ಲ ಬಿಂಬಿಸಲ್ಪಟ್ಟ ಅಂಬೇಡ್ಕರ್ ಮೈದಾಳಿದರು. ಚುನಾವಣಾ ರಾಜಕೀಯ ಬರಬರುತ್ತ ಸ್ಪರ್ಧಾತ್ಮಕವಾಗುತ್ತ ಹೋದ ಹಾಗೆ, ಮಧ್ಯಮ ಜಾತಿಗಳ ಪ್ರಾದೇಶಿಕ ಪಕ್ಷಗಳು ತಲೆಯೆತ್ತಿದ ಹಾಗೆ, ರಾಜಕಾರಣಿಗಳು ವೋಟ್‌ಬ್ಯಾಂಕ್ ಆಗಿ ದಲಿತರ ಪ್ರಾಮುಖ್ಯತೆಯನ್ನರಿತರು. ಅಂಬೇಡ್ಕರ್ ಮೂರ್ತಿಯನ್ನು ದಲಿತರನ್ನು ಸೆಳೆಯುವ ಉಪಕರಣವಾಗಿ ಬಳಸಿದರು.

ಇದ್ದಕ್ಕಿದ್ದಂತೆ, ಇದುವರೆಗೆ ಮುಖ್ಯವಾಹಿನಿಯಿಂದ ನಿರ್ಲಕ್ಷ್ಯಕ್ಕೊಳಗಾದ ಅಂಬೇಡ್ಕರ್ ಎಲ್ಲರ ಪ್ರೀತಿಪಾತ್ರರಾದರು. ಅದೇ ರಾಜಕಾರಣ ಅವರ ಪ್ರತಿಮೆಗಳನ್ನು ನಿಲ್ಲಿಸತೊಡಗಿತು. ರಸ್ತೆಗೆ ಅವರ ಹೆಸರಿಡತೊಡಗಿತು. ಸ್ತುತಿಗೀತೆ ಹಾಡಿತು. ಈ ಮೂರ್ತಿಯನ್ನು ಇನ್ನಷ್ಟು ಬಲಗೊಳಿಸುತ್ತಾ, ವಿರೂಪಗೊಳಿಸುತ್ತಾ ದಲಿತರನ್ನು ವಾಸ್ತವದಿಂದ ದೂರ ಕರೆದೊಯ್ಯಲು ಪ್ರಯತ್ನಿಸಿತು.

ಹೀಗೆ ದಲಿತರ ಮನಸ್ಸಿನಲ್ಲಿ ಒಮ್ಮೆ ಅಂಬೇಡ್ಕರ್ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಬಳಿಕ ಅವರನ್ನು ಸೆಳೆಯಲು ಸ್ಪರ್ಧೆಗಿಳಿದವರಂತೆ ಒಬ್ಬರಿಗಿಂತ ಒಬ್ಬರು ಭಕ್ತಿ ಪ್ರದರ್ಶಿಸತೊಡಗಿದರು. ಮುಖ್ಯವಾಹಿನಿಯ ರಾಜಕಾರಣಿಗಳಿಂದ ವಸೂಲಿ ಕೇಳುವ ಮಟ್ಟಕ್ಕೆ ದಲಿತ ರಾಜಕಾರಣ ಇಳಿದ ಬಳಿಕ ಸ್ವಘೋಷಿತ ನಾಯಕರುಗಳು, ತಮ್ಮನ್ನೇ ತಾವು ಕಟ್ಟಾ ಅಂಬೇಡ್ಕರ್ ಅನುಯಾಯಿ ಎಂದು ಘೋಷಿಸಿಕೊಂಡು ಪ್ರತ್ಯಕ್ಷರಾಗಿ ದಲಿತರ ಬೆಂಬಲ ಬಯಸತೊಡಗಿದರು. ಅತಿ ಗಟ್ಟಿಯಾಗಿ ಅಂಬೇಡ್ಕರ್ ಕುರಿತು ಮಾತನಾಡಿದವ ದೊಡ್ಡ ನಾಯಕನೆನಿಸಿಕೊಂಡ.

ಅಸಂಬದ್ಧವಾಗಿ ಅಂಬೇಡ್ಕರ್ ಭಕ್ತಿ ಪ್ರದರ್ಶಿಸಿದಷ್ಟೂ, ಕಟ್ಟಾ ಅಂಬೇಡ್ಕರ್ ವಾದಿ ಎನಿಸಿಕೊಂಡ. ಈ ಪ್ರಕ್ರಿಯೆಯಲ್ಲಿ ನಿಜವಾದ ಅಂಬೇಡ್ಕರ್ ಮರೆತುಹೋದರು. ಪ್ರತಿಮೆಗಳ ಕೆಡವಿದ ಸತ್ಯಶೋಧಕ, ಶೋಷಿತರ ಪರವಾಗಿ ನಿರ್ಭಯವಾಗಿ ಹೋರಾಡಿದ, ಶೋಷಣೆ, ವಂಚನೆಗಳಿಲ್ಲದ ವಿಶ್ವವನ್ನು ಕನಸಿದ ಅಂಬೇಡ್ಕರ್ ಕಳೆದುಹೋದರು. ದಲಿತರ ದೈನಂದಿನ ಬದುಕಿನ ಕಷ್ಟ ಪರಿಹಾರಕ್ಕಾಗಿ ಅವರು ಹೋರಾಡಿದರೆಂಬುದನ್ನು ಮರೆಯಲಾಯಿತು. 'ಮುಕ್ತಿ ಕೋನ್ ಪಾಥೆ?' ಎಂಬ ಅವರ ಲೇಖನವನ್ನು ಓದಿದರೆ ತಿಳಿಯುತ್ತದೆ; ಅವರು ಬೌದ್ಧಧರ್ಮದೆಡೆಗೆ ನಡೆದಿದ್ದೂ ದೌರ್ಜನ್ಯಕ್ಕೆ ಪಕ್ಕಾಗುವ ಹಿಂದೂ ಧರ್ಮದ ಅಸ್ತಿತ್ವವನ್ನು ನಿರಾಕರಿಸಿಯೇ. ತಮ್ಮ ಜೀವನದ ಕೊನೆಯಲ್ಲಿ ತಾನು ಮಾಡಿದ ಪ್ರಯತ್ನಗಳಿಂದ ಬೆರಳೆಣಿಕೆಯಷ್ಟು ನಗರದ ಕಲಿತ ದಲಿತರಿಗಷ್ಟೇ ಉಪಯೋಗವಾಯಿತು, ಹಳ್ಳಿಯ ದಲಿತನಿಗೆ ಹೆಚ್ಚೇನೂ ಮಾಡಲಾಗಲಿಲ್ಲ ಎಂದು ಅವರು ಪರಿತಪಿಸಿದ್ದೂ ಇದೆ.

ಕಾರ್ಟೂನ್ ವಿವಾದ

ಈ ಮೂರ್ತೀಕರಣವೇ ಕಾರ್ಟೂನ್ ವಿವಾದದ ಹಿಂದಿರುವುದು. ಸಮಾಜ ಅದನ್ನು ನೇತ್ಯಾತ್ಮಕವಾಗಿ ನೋಡುವ ಸಾಧ್ಯತೆಗಳಿದ್ದಾಗ್ಯೂ ಆ ಕಾರ್ಟೂನ್ ಅನ್ನು ಪಠ್ಯಪುಸ್ತಕದಲ್ಲಿ ಇಡುವುದು ಅಗತ್ಯವಿತ್ತೇ ಎಂಬ ಬಗ್ಗೆ ನಾನು ಚರ್ಚಿಸಬಯಸುವುದಿಲ್ಲ. ಆದರೆ ಅದು ಆರು ವರ್ಷಗಳಿಂದ ಅಲ್ಲಿ ಇತ್ತು. ಇಲ್ಲಿಯವರೆಗೆ ಅದು ಏನೂ ಸಮಸ್ಯೆ ಆಗಿಲ್ಲವೆಂದರೆ ಭವಿಷ್ಯದಲ್ಲೂ ಅದರಿಂದ ಏನೂ ಆಗುತ್ತಿರಲಿಲ್ಲ. ಇತಿಹಾಸವನ್ನು ಯಥಾವತ್ತಾಗಿ ಅದರ ಎಲ್ಲ ಮಗ್ಗುಲಿನೊಂದಿಗೆ ಪರಿಚಯಿಸುವ ದೃಷ್ಟಿಯಿಂದ ಆ ಕಾರ್ಟೂನ್ ಹಾಕಲಾಗಿತ್ತು ಎಂದು ಪಠ್ಯಪುಸ್ತಕ ಸಮಿತಿಯಲ್ಲಿದ್ದ ಸುಭಾಷ್ ಪಾಲ್ಶೀಕರ್ ವಿವರಣೆ

ದಲಿತರ ಏಳ್ಗೆಗೆ ಅಂಬೇಡ್ಕರ್ ಕೊಡುಗೆಯನ್ನು ಗಮನದಲ್ಲಿಟ್ಟುಕೊಂಡರೆ ಅವರು ತಮ್ಮ ಉದ್ಧಾರಕ, ದೇವದೂತ ಎಂದು ದಲಿತರು ಭಾವಿಸುವುದು ಸಹಜವೇ. ಅಷ್ಟೇ ಅಲ್ಲ, ದಲಿತ ಸಮುದಾಯದ ಸ್ಥಿತಿಗತಿಯನ್ನು ಅವಲೋಕಿಸಿದರೆ ಅವರ ಮೂರ್ತೀಕರಣವೂ ಸಹಜವೇ. ಅಂಬೇಡ್ಕರ್ ಮೂರ್ತಿ ದೇವರ ಫೋಟೋಗಳ ಸ್ಥಾನ ಆಕ್ರಮಿಸಿಕೊಂಡಿದೆ. ದಲಿತರ ಆತ್ಮಗೌರವ, ಪ್ರತಿಷ್ಠೆ, ಸ್ವಾಭಿಮಾನದ ಸಂಕೇತವಾಗಿದೆ. ಅವರಿಗೆ ಅದೊಂದು ಬೆಳಕು, ತಮ್ಮ ಹೋರಾಟಕ್ಕೆ ಒಗ್ಗೂಡಿಸುವ ಶಕ್ತಿ.

ನೀಡಿದರೂ ಅದನ್ನು ಹಲವು ರೀತಿಯಲ್ಲಿ ಅರ್ಥೈಸುವ ಸಾಧ್ಯತೆಯಿದೆ ಎನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ. ಆದರೆ ಇದಕ್ಕಾಗಿ ಅವರ ಕಚೇರಿಯನ್ನು ಧ್ವಂಸ ಮಾಡಬೇಕಿಲ್ಲ. ರಿಪಬ್ಲಿಕನ್ ಪ್ಯಾಂಥರ್ಸ್ ಎಂಬ ಕ್ರಾಂತಿಕಾರಿ, ಅಸಾಂವಿಧಾನಿಕ ತತ್ವಗಳನ್ನು ನಂಬುವ ತೀವ್ರಗಾಮಿ ಗುಂಪು ಪಾಲ್ಶೀಕರ್ ಅವರ ಮೇಲೆ ದಾಳಿ ನಡೆಸಿದ್ದು ದುಃಖಕರ. ಅಂಬೇಡ್ಕರ್ ಮೂರ್ತಿ ದಲಿತರಲ್ಲಿ ಎಷ್ಟು ಆಳವಾಗಿ ಅಂತರ್ಗತವಾಗಿದೆಯೆಂದರೆ ಅವರ ಕ್ರಾಂತಿಯ ರಾಜಕಾರಣವನ್ನೂ ಮರೆಸಿಬಿಡುವಷ್ಟು ಎನ್ನುವುದನ್ನು ಇದು ತೋರಿಸುತ್ತದೆ ಅಷ್ಟೇ.

ಈ ವಿವಾದ ಸಂಸತ್ತಿನಲ್ಲಿ ಶುರುವಾಗಿದ್ದು ಮಾಯಾವತಿಯಿಂದ. ಇತ್ತೀಚಿನ ಉತ್ತರ ಪ್ರದೇಶ ಚುನಾವಣೆ ಸೋಲಿನ ನಂತರ ತಾನು ದಲಿತ ನಾಯಕಿ ಎಂದು ಮಾಯಾವತಿ ಸಾಬೀತುಪಡಿಸಲು ಬಯಸುತ್ತಿರುವಂತಿದೆ. ಅಷ್ಟೇ ಅಲ್ಲ, 2014ರ ಲೋಕಸಭಾ ಚುನಾವಣೆಗೂ ಸಿದ್ಧವಾಗುತ್ತಿರುವಂತಿದೆ. ಮಾಯಾವತಿಯ ಬಹುಜನ್ ಸಮಾಜ ಪಾರ್ಟಿಯ ಮೂಲ ತತ್ವವೇ ಪ್ರತಿಮಾ ರಾಜಕಾರಣ. ತಾವೇನು ಕಡಿಮೆ ಎಂಬಂತೆ ಉಳಿದ ದಲಿತ ನಾಯಕರೂ; ವಿವೇಚನೆ ಕಡಿಮೆಯಿರುವ, ಶಿವಸೇನಾ–ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿರುವ ರಾಮದಾಸ ಅತವಳೆ, ಒಮ್ಮೆ ಡಿಎಂಕೆ ಮಗದೊಮ್ಮೆ ಎಐಎಡಿಎಂಕೆ ಎಂದು ಗಾಳಿ ಬಂದತ್ತ ತೂರುವ ತೊಲ್ ತಿರುಮವಲವನ್ (ವಿಡುತಲೈ ಚಿರುತೈಗಳ್ – ತಮಿಳುನಾಡಿನ ದಲಿತ್ ಪ್ಯಾಂಥರ್ಸ್) ಸಹಾ ಕಾರ್ಟೂನ್ ವಿರುದ್ಧ ದನಿಯೆತ್ತಿದರು. ಅಂಬೇಡ್ಕರ್ ಮೂರ್ತಿ ಮತ್ತು ಮೀಸಲಾತಿ ಈ ಎರಡನ್ನು ಬಿಟ್ಟು ಹೋರಾಡಲು ಬೇರೆ ವಿಷಯಗಳೇ ಇಲ್ಲ ಎನ್ನುವ ಹಾಗೆ!

ಗುಣಮಟ್ಟದ ಶಿಕ್ಷಣದ ಕೊರತೆ, ಕಡಿಮೆಯಾಗುತ್ತಿರುವ ಉದ್ಯೋಗಾವಕಾಶ, ಕೆಲವೇ ಜನರನ್ನು ಅದರಲ್ಲೂ ನಗರೀಕೃತ ಸುಸ್ಥಿತಿಯಲ್ಲಿರುವವರನ್ನೇ ತಲುಪುವ ಮೀಸಲಾತಿ, ಕುಂದುತ್ತಿರುವ ಸಾರ್ವಜನಿಕ ಆರೋಗ್ಯ ಸೇವಾ ಲಭ್ಯತೆ, ಕಡಿಮೆಯಾಗುತ್ತಿರುವ ಪ್ರಜಾಪ್ರಭುತ್ವವಾದಿ ಅವಕಾಶ – ಈ ಎಲ್ಲವೂ ನಾಯಕರಿಗೆ ಹೋರಾಟ ಕಟ್ಟುವ ವಿಷಯಗಳಾಗಲೇ ಇಲ್ಲ.

ದಲಿತ ರಕ್ತ

ಆದ್ದರಿಂದ ಬಥಾನಿ ತೋಲಾ ಹತ್ಯಾಕಾಂಡದಲ್ಲಿ ಭಾಗಿಯಾಗಿದ್ದ ರಣವೀರ ಸೇನೆಯ 23 ಜನ ಆರೋಪಿಗಳು ಖುಲಾಸೆಯಾದರೆ ಅದು ದಲಿತ ನಾಯಕರಿಗೆ ಪ್ರಶ್ನಾರ್ಹವೆನಿಸುವುದಿಲ್ಲ. ಬಥಾನಿ ತೋಲಾ ಒಂದೇ ಅಲ್ಲ, ಎಷ್ಟೋ ದೌರ್ಜನ್ಯ ಪ್ರಕರಣಗಳಲ್ಲಿ ತೀರ್ಪು ಹೊರಬಿದ್ದಿರುವುದು ನೋಡಿದರೆ ಗೊತ್ತಾಗುತ್ತದೆ. ಉದಾ: ಆಂಧ್ರಪ್ರದೇಶದ ಕರಂಚೇಡು ಪ್ರಕರಣ. ಹೈಕೋರ್ಟ್ 50 ಜನ ಆರೋಪಿಗಳನ್ನೂ ಆರೋಪಮುಕ್ತಗೊಳಿಸಿತು. 23 ವರ್ಷ ಕಳೆದ ತರುವಾಯ ಸುಪ್ರೀಂಕೋರ್ಟಿನಲ್ಲಿ ಒಬ್ಬ ಆರೋಪಿಗೆ ಜೀವಾವಧಿ ಶಿಕ್ಷೆಯಾಯಿತು, ಉಳಿದ 30 ಜನರಿಗೆ ಮೂರು ವರ್ಷ ಜೈಲುವಾಸದಿಂದ ಹಿಡಿದು ವಿವಿಧ ಪ್ರಮಾಣದ ಶಿಕ್ಷೆ ವಿಧಿಸಲಾಯಿತು. ಮಹಾರಾಷ್ಟ್ರದ ಖೈರ್ಲಾಂಜಿ ಪ್ರಕರಣದಲ್ಲೂ ಅಷ್ಟೇ, ಸಾರ್ವಜನಿಕ ಅಭಿಪ್ರಾಯಕ್ಕೆ ಹೆದರಿ ವಿಶೇಷವಾಗಿ ನೇಮಕಗೊಂಡಿದ್ದ ಸೆಷನ್ಸ್ ಕೋರ್ಟ್ ಆರು ಜನರಿಗೆ ಮರಣದಂಡನೆ ಮತ್ತು ಇಬ್ಬರಿಗೆ ಜೀವಾವಧಿ ಶಿಕ್ಷೆ ನೀಡಿತು. ಮೂರ್ಖರಂತೆ ಆ ತೀರ್ಪನ್ನು ಸ್ವಾಗತಿಸಿ ಸಂಭ್ರಮಾಚರಣೆಗೈದ ದಲಿತ ನಾಯಕರು 35 ಆರೋಪಿಗಳನ್ನು ಖುಲಾಸೆ ಮಾಡಲಾಗಿದೆ ಎಂದೂ; ಕಠಿಣ ಶಿಕ್ಷೆಗೆ ಅಗತ್ಯವಿರುವ ಆರೋಪಗಳಾದ ಸಂಚು, ಲೈಂಗಿಕ ಹಿಂಸೆ ಮತ್ತು ಜಾತಿಜಗಳ ಇಲ್ಲವೆಂದೂ ಹೇಳಿದ್ದನ್ನು ಮರೆತೇಬಿಟ್ಟರು. ಬಿಹಾರದ ಲಕ್ಷ್ಮಣಪುರ–ಬಾತೆಯ ರಣವೀರ ಸೇನೆಯ ಹತ್ಯಾಕಾಂಡದಲ್ಲಿ ಕೆಳ ನ್ಯಾಯಾಲಯದ ತೀರ್ಪು ಹೆಚ್ಚುಕಮ್ಮಿ 13 ವರ್ಷಗಳ ನಂತರ ಬಂತು. 16 ಜನರಿಗೆ ಮರಣದಂಡನೆ, 10 ಜನರಿಗೆ ಜೀವಾವಧಿ ಮತ್ತು 50000 ದಂಡದ ಶಿಕ್ಷೆ ವಿಧಿಸಿ ಉಳಿದ 19 ಜನರನ್ನು ಸೂಕ್ತ ಸಾಕ್ಷಿಗಳಿರಲಿಲ್ಲವೆಂದು ಬಿಡುಗಡೆ ಮಾಡಿತು. ಇದೆಲ್ಲ ಏನು ಹೇಳುತ್ತದೆಂದರೆ ಸಾರ್ವಜನಿಕರ ಒತ್ತಡಕ್ಕೆ ಸಿಲುಕುವ ಕೆಳ ನ್ಯಾಯಾಲಯಗಳು ಕಠಿಣ ಶಿಕ್ಷೆ ವಿಧಿಸಿದ್ದರೂ ಹೈಕೋರ್ಟ್ ಅದನ್ನು ವಜಾಗೊಳಿಸುತ್ತದೆ. ಮತ್ತೆ ಕೇಸನ್ನು ಮುಂದುವರೆಸಿದರೆ ಸುಪ್ರೀಂಕೋರ್ಟ್ ಅದರಲ್ಲಿ ಕೆಲ ಭಾಗವನ್ನಷ್ಟೇ ಎತ್ತಿ ಹಿಡಿಯುತ್ತದೆ. ಈ ದೀರ್ಘ ಕಾನೂನು ಸಮರ ಎಷ್ಟು ಜನ ಸಾಮಾನ್ಯ ದಲಿತನಿಗೆ ಎಟುಕುತ್ತದೆ? ಇದು ಸಹಜವಾಗೇ ನ್ಯಾಯವನ್ನು ಕೊನೆಯ ತೀರ್ಪಿನಿಂದ ದೂರ ಒಯ್ಯುತ್ತದೆ.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಿ ಮುಕುಲ್ ವಾಸ್ನಿಕ್ 2012 ಏಪ್ರಿಲ್ 17ರಂದು ಮಾತನಾಡುತ್ತ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಅತಿ ಕಡಿಮೆಯಾದ ಬಗ್ಗೆ (3%–8%) ಆತಂಕ ವ್ಯಕ್ತಪಡಿಸಿದ್ದರು. ಒಲ್ಲದ ಮನಸ್ಸಿನಿಂದ ದೌರ್ಜನ್ಯ ಪ್ರಕರಣ ದಾಖಲಿಸಿಕೊಳ್ಳುವ ಪೊಲೀಸರು, ಕೇಸು ದುರ್ಬಲಗೊಳಿಸುವ ತನಿಖಾ ನೀತಿನಿಯಮಾವಳಿ ಮತ್ತು ಇನ್ನಿತರ ನೆಪಗಳು, ಸರಿಯಾಗಿ ವಾದಮಂಡಿಸದ ವಕೀಲರು ಇವೆಲ್ಲವೂ ಕೋರ್ಟುಗಳು ದೌರ್ಜನ್ಯ ಪ್ರಕರಣಗಳಲ್ಲಿ ರಾಜಕೀಯ ಒತ್ತಡಕ್ಕೆ ಮಣಿಯುತ್ತಾರೆ ಹಾಗೂ ತಮಗಿಷ್ಟ ಬಂದಂತೆ ತಿರುಚಿದ ತೀರ್ಪು ನೀಡುತ್ತಾರೆ ಎನ್ನುವುದನ್ನು ಸಾಬೀತುಮಾಡುತ್ತವೆ.

ಬಥಾನಿ ತೋಲಾ ಪ್ರಕರಣದಲ್ಲಿ ಕೋರ್ಟ್ ಕಣ್ಣಾರೆ ಕಂಡ ಸಾಕ್ಷಿಗಳನ್ನೂ ಅವರು ಸಾಕ್ಷಿಯಾಗಿರಲಿಕ್ಕಿಲ್ಲವೆಂದು ಹೇಳಿ ಸಾಕ್ಷ್ಯ ನಿರಾಕರಿಸಿತು. ಅವರು ಸಾಕ್ಷಿಯಾಗಿದ್ದರೆ ಅವರೂ ಬದುಕುಳಿಯುತ್ತಿರಲಿಲ್ಲವೆನ್ನುವುದು ಕೋರ್ಟಿನ ವಾದ. ಅವರು ಆ ಸ್ಥಳದಲ್ಲಿದ್ದಿದ್ದರೆ ಅವರ ಕೊಲೆಯೂ ಆಗುತ್ತಿತ್ತು ಎನ್ನುವುದು ಅದರ ಅಭಿಮತ.

ಈ ಎಲ್ಲ ಸಮಸ್ಯೆಗಳ ಮೂಲ ಏನೆಂದರೆ ಕಾನೂನು ವ್ಯವಸ್ಥೆಗೆ ಉತ್ತರದಾಯಿತ್ವ ಇಲ್ಲದೇ ಇರುವುದು. ತಮ್ಮ ಹೋರಾಟ ಶುರುಮಾಡಲು ದಲಿತರಿಗೆ ಇದೊಂದು ವಿವಾದವೆಂದು ತೋರುವುದಿಲ್ಲವೆ?

(ಸಂವಿಧಾನ ರಚನೆ ನಿಧಾನಗತಿ ಕುರಿತ ಕಾರ್ಟೂನ್‌ಗೆ ಸಂಬಂಧಿತ ಪ್ರತಿಕ್ರಿಯೆಯ ಲೇಖನಗಳೆಲ್ಲವೂ ಒಂದೇ ಕಡೆ ಇರಲಿ ಎಂಬ ಉದ್ದೇಶದಿಂದ ಈ ಅನುವಾದಿತ ಲೇಖನವನ್ನೂ 'ಸಂವಾದ' ಅಂಕಣದಲ್ಲಿ ಪ್ರಕಟಿಸಲಾಗಿದೆ–ಸಂ.)

ಬಥಾನಿ ತೋಲಾ ಸ್ಮಾರಕ

ಸಂಪಾದಕರೊಡನೆ ಸಂವಾದ

ಆತಂಕದ ಛಾಯೆಯಲ್ಲಿ ಅಭಿವ್ಯಕ್ತಿ ಮಾಧ್ಯಮ

ಮಲ್ಲಿಕಾರ್ಜುನ ಗುಮ್ಮಗೋಳ

ಪ್ರಿಯ ಸಂಪಾದಕರೇ,

ಸುದ್ದಿವಾಹಿನಿಗಳನ್ನು ನೋಡುವುದೇ ಒಂದು ಹಿಂಸೆಯನ್ನಿಸುತ್ತಿದೆ. ಯಾವ ಉದ್ದೇಶ ಮತ್ತು ಹಿತಾಸಕ್ತಿಗಾಗಿ ಇಂದು ಮಾಧ್ಯಮಗಳು ಕೆಲಸ ಮಾಡುತ್ತಿವೆ ಎಂಬುದೇ ಗೊಂದಲವನ್ನು ಹುಟ್ಟಿಸುತ್ತಿದೆ. ಆರೋಪದ ಅಥವಾ ಪ್ರಕರಣದ ಸತ್ಯಾಸತ್ಯತೆಯನ್ನು ಕೂಲಂಕಷವಾಗಿ ಪರಾಮರ್ಶಿಸದೆ ಸಂಶಯಾಸ್ಪದ, ಕಪೋಲಕಲ್ಪಿತ, ದುರುದ್ದೇಶದ, ಸುಳ್ಳಿನ ಅಥವಾ ಸಂಶಯಾಸ್ಪದ ವರದಿಗಳನ್ನು ಯತಾವತ್ತಾಗಿ ಬಿತ್ತರಿಸುವುದರ ಪರಿಣಾಮ ಸಮಾಜದ ಮೇಲೆ ಎಂತಹ ಕೆಟ್ಟ ಪರಿಣಾಮ ಬೀರುತ್ತದೆ ಎಂಬುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಹಾಗೆಂದ ಮಾತ್ರಕ್ಕೆ ಎಲ್ಲ ಸುದ್ದಿವಾಹಿನಿಗಳು ದಾರಿ ತಪ್ಪುತ್ತಿವೆ ಎಂತಲ್ಲ. ಹಲವಾರು ವಾಹಿನಿಗಳು ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಇತರೆ ಅತ್ಯುತ್ತಮ ಕಾರ್ಯಕ್ರಮಗಳನ್ನು ನೀಡುತ್ತಿವೆ. ಆದರೆ ಕೆಲವು ವಾಹಿನಿಗಳು 'ಕ್ರೈಮ್, ಸೆಕ್ಸ್ ಆಂಡ್ ಪೊಲಿಟಿಕ್ಸ್' ವರದಿಗಳಿಗೆ ಹೆಚ್ಚು ಮಹತ್ವ ಕೊಡುತ್ತಿವೆ. ಇದು ಸೆನ್ಸಾರ್‌ಗೆ ಒಳಗಾಗಬೇಕಾಗಿದೆ.

ಒಂದು ಪ್ರಕರಣದ ಕುರಿತು ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವ ಸಂದರ್ಭದಲ್ಲಿ ಆ ಪ್ರಕರಣದ ಕುರಿತು ಸುದ್ದಿಯನ್ನು ಮಾಡುವದು ತಪ್ಪಲ್ಲ. ಆದರೆ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾಗುವದಕ್ಕಿಂತ ಮೊದಲೇ ಆರೋಪಿಗಳನ್ನು ಅಪರಾಧಿಗಳು ಎಂಬಂತೆ ಬಿಂಬಿಸಿ ವರದಿ ಮಾಡುವದು 'ಸಬ್ ಜ್ಯುಡಿಸ್' ಆಗುತ್ತದೆ. ಈ ರೀತಿ ಮಾಡುವದರಿಂದ ನ್ಯಾಯಾಲಯದಲ್ಲಿ ನಡೆಯುತ್ತಿರುವ ಪ್ರಕರಣದ ವಿಚಾರಣೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎನ್ನುವುದಕ್ಕಿಂತ ಹೆಚ್ಚಾಗಿ, ಆರೋಪಿ ಸ್ಥಾನದಲ್ಲಿರುವ ವ್ಯಕ್ತಿಯು ಸಮಾಜದ ಕಣ್ಣಲ್ಲಿ ಅಪರಾಧಿಯಾಗಿ ಪರಿಗಣಿತನಾಗಿಬಿಟ್ಟಿರುತ್ತಾನೆ. ನ್ಯಾಯಾಲದಲ್ಲಿ ಆತ ನಿರಪರಾಧಿ ಎಂದು ಸಾಬಿತಾದ ಮೇಲೆ ಕಳೆದುಹೋದ ಆತನ ಮಾನ, ಅಧಿಕಾರ, ಹಣ, ಅಂತಸ್ತು ಮತ್ತು ಸಂಬಂಧಗಳು ಮರಳಿ ಸಿಗುತ್ತವೆಯೇ?

ಈ ವಿಷಯ ಕುರಿತು ಮಾಧ್ಯಮಗಳಿಗೆ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ರಚಿಸುವ ಸಲುವಾಗಿ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠ ಅತ್ಯಂತ ಘಹನವಾದ ವಿಚಾರಣೆಯನ್ನು ಆರಂಭಿಸಿದೆ. ದೇಶದ ಖ್ಯಾತನಾಮ ಕಾನೂನು ತಜ್ಞರಾದ ಸೋಲಿ ಸೋರಾಬ್ಜಿ, ಅನಿಲ್ ದಿವಾನ್, ಶಾಂತಿ ಭೂಷಣ್, ಪಿ. ಪಿ. ರಾವ್, ಸಿದ್ದಾರ್ಥ ಲುಥ್ರಾ ಮುಂತಾದವರು ವಿವಿಧ ಪತ್ರಿಕೆ ಮತ್ತು ಸುದ್ದಿ ವಾಹಿನಿಗಳ ಪರವಾಗಿ ವಾದಿಸುತ್ತಿದ್ದಾರೆ. ಪಾಲಿ ಎಸ್. ನಾರಿಮನ್, ಕೆ. ಕೆ. ವೇಣುಗೋಪಾಲ್ ಹಾಗೂ ಅಟಾರ್ನಿ ಜನರಲ್ ಜಿ.ಈ. ವಹಾನ್ವತಿಯವರು ನ್ಯಾಯಾಲಯ ಸಹಾಯಕರಾಗಿ ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಿದ್ದಾರೆ. ಪ್ರಕರಣ ಅತ್ಯಂತ ಕುತೂಹಲಕಾರಿಯಾಗಿ ನಡೆಯುತ್ತಿದೆ. ಮಾಜಿ ಮುಖ್ಯ ನ್ಯಾಯಮೂರ್ತಿ ಕೆ. ಜಿ. ಬಾಲಕೃಷ್ಣನ್ ಅವರ ಕುರಿತು ಆಂಗ್ಲ ಪತ್ರಿಕೆಯೊಂದು ಸುಳ್ಳು ವರದಿಯನ್ನು ಮಾಡಿರುವುದು ನ್ಯಾಯಾಲಯ ಮಾಧ್ಯಮಕ್ಕೆ ಮೂಗುದಾರ ಹಾಕುವ ಕುರಿತು ವಿಚಾರಣೆ ಮಾಡಲು ಕಾರಣವಾಗಿದೆ. ಅಲ್ಲದೆ ಮಾಜಿ ಚೀಫ್ ವಿಜಿಲನ್ಸ್ ಕಮಿಷನರ್ ಕೆ. ಟಿ. ಥಾಮಸ್ ಅವರ ಪ್ರಕರಣದಲ್ಲೂ ಸಹ ನ್ಯಾಯಾಲಯದಲ್ಲಿನ ಅವರ ವಾದವನ್ನು ಟಿವಿ ವಾಹಿನಿಯೊಂದು ತಿರುಚಿ ವರದಿ ಮಾಡಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಸುಪ್ರೀಮ್ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಎಸ್. ಎಚ್. ಕಪಾಡಿಯಾ ಅವರ ಪುತ್ರನ ಕುರಿತು ತಪ್ಪು ವರದಿಯನ್ನು ದಿನಪತ್ರಿಕೆಯೊಂದು ಮಾಡಿದ್ದು ಸಹ ಪ್ರಕರಣ ಇನ್ನಷ್ಟು ಗಂಭೀರತೆಯನ್ನು ಪಡೆಯಲು ಕಾರಣವಾಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಸಂವಿಧಾನ ಕಲಂ 21ರ ಪ್ರಕಾರ ವ್ಯಕ್ತಿಯ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಯಾವುದೇ ಸಂದರ್ಭದಲ್ಲೂ ರಕ್ಷಣೆ ಮಾಡಬೇಕಾಗುತ್ತದೆ. ಕಲಂ 19(1)(ಬಿ) ಪ್ರಕಾರ ಅಭಿವ್ಯಕ್ತಿ ಸ್ವಾತಂತ್ರ್ಯವು ಪತ್ರಿಕೆಯ ಹಕ್ಕು. ಮಾಹಿತಿ ಪಡೆಯುವ ಮತ್ತು ತಿಳಿದುಕೊಳ್ಳುವ ಹಕ್ಕು ಮಾಧ್ಯಮಕ್ಕಿದೆ. ನಿಜ. ಆದರೆ, ಈ ಸ್ವಾತಂತ್ರ್ಯ ಕಲಂ 19(2) ಪ್ರಕಾರ ಅನಿರ್ಬಂಧಿತವೇನಲ್ಲ. ಆದರೆ ತಪ್ಪು ಮಾಡುವ ಮಾಧ್ಯಮಗಳನ್ನು ದಂಡಿಸಲು ಇದುವರೆಗೂ ಇದ್ದ ಕಾಯ್ದೆಗಳು ಅಷ್ಟು ಸಮರ್ಪಕವಾಗಿಲ್ಲ ಎಂಬ ಅಭಿಪ್ರಾಯವಿದೆ. 'ಪ್ರೆಸ್ ಕೌನ್ಸಿಲ್ ಆಕ್ಟ್' ನಿಯಮ 14(1)ರ ಪ್ರಕಾರ ತಪ್ಪು ವರದಿಗಳಿಗೆ ಕೇವಲ ವಾಗ್ದಂಡನೆ ಮತ್ತು ಛಿಮಾರಿಯನ್ನು ಹಾಕಬಹುದಾಗಿದೆ. ಹಾಗಾಗಿ ಒಂದು ಸೂಕ್ತವಾದ ಹಾಗೂ ಸಶಕ್ತವಾದ ಕಾಯ್ದೆಯನ್ನು ರಚಿಸುವುದು ಅಗತ್ಯವಾಗಿದೆ ಎಂದು ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯ ವ್ಯಕ್ತಪಡಿಸಿದೆ. ಇದಕ್ಕೆ ಪ್ರೆಸ್ ಕೌನ್ಸಿಲ್, ನ್ಯೂಸ್ ಬ್ರಾಡ್‌ಕಾಸ್ಟರ್ಸ್ ಅಸೋಸಿಯೆಶನ್ ಹಾಗೂ ಪಿ. ಪಿ. ರಾವ್ ತಮ್ಮ ಸಹಮತವನ್ನು ವ್ಯಕ್ತಪಡಿಸಿದ್ದಾರೆ. ಶಾಂತಿ ಭೂಷಣ್ ಅವರು ನ್ಯಾಯಾಲಯ ಮಾಧ್ಯಮಕ್ಕೆ ಮಾರ್ಗದರ್ಶಿ ಸೂತ್ರಗಳನ್ನು ರಚಿಸುವದಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಆದರೆ ನ್ಯಾಯಾಲಯ ಈ ಕುರಿತು ಸೂಕ್ತ ಕಾಯ್ದೆ ರಚಿಸುವಂತೆ ಸರಕಾರಕ್ಕೆ ನಿರ್ದೇಶನ ನೀಡಬಹುದಾಗಿದೆ. 'ಸುಳ್ಳು ವರದಿಗಾರಿಕೆಯ ವಿರುದ್ಧ ಸುಮಾರು ಹನ್ನೊಂದು ಗಂಭೀರವಾದ ಪ್ರಕರಣಗಳು ನಮ್ಮ ಮುಂದೆ ದಾಖಲಾಗಿವೆ. ಆ ಮಾಧ್ಯಮ ಸಂಸ್ಥೆಗಳ ವಿರುದ್ಧ ಕಂಟೆಂಪ್ಟ್ ವಿಚಾರಣೆ ಆರಂಭಿಸುವದಕ್ಕಿಂತ, ತಪ್ಪು ವರದಿ ಆಗುವದನ್ನು ತಡೆಗಟ್ಟುವುದು ಹೇಗೆ ಎಂಬುದರ ಬಗ್ಗೆ ವಿಚಾರಿಸಬೇಕಾಗಿದೆ' ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ.

ಅಭಿವ್ಯಕ್ತಿ ಮತ್ತು ಆರೋಗ್ಯಕರ ಚರ್ಚೆಯ ಹೆಸರಿನಲ್ಲಿ ಒಂದು ಕುಟುಂಬದ ಖಾಸಗಿ ತಂಟೆ ತಕರಾರನ್ನು ತಂದು ದಿನಂಪೂರ್ತಿ ಪ್ರಸಾರ ಮಾಡುವುದು. ಅದರಲ್ಲೂ ಗಂಡ ಹೆಂಡತಿ(ಹೆಂಡಿರ) ಜಗಳವನ್ನು ಬೀದಿಗೆ ತಂದು ಅವರು ಚಪ್ಪಲಿ ಹರಿಯುವಂತೆ ಹೊಡೆದಾಡುವುದನ್ನು ಪ್ರಸಾರ ಮಾಡಲಿಕ್ಕಾಗಿಯೇ ಕಾದು ಕುಳಿತವರಂತೆ ಟಿ.ವಿ. ಕ್ಯಾಮರಾಗಳು ವರ್ತಿಸುತ್ತಿವೆ. ಜಗಳದ ಸತ್ಯಾಸತ್ಯತೆಯನ್ನು ಅರಿತುಕೊಳ್ಳದೆ ಬ್ರೆಕಿಂಗ್ ನ್ಯೂಸ್ ಎಂದು ಅಬ್ಬರದ ಧ್ವನಿಯಲ್ಲಿ ಪ್ರಸಾರ ಮಾಡಲು ಆರಂಭಿಸುತ್ತವೆ. ಇತ್ತೀಚೆಗೆ ಕನ್ನಡದ ಎರಡು ಪ್ರಮುಖ ಸುದ್ದಿವಾಹಿನಿಗಳು ಪೈಪೋಟಿಗೆ ಬಿದ್ದವರಂತೆ 'ಭೀಮಾತೀರದಲ್ಲಿ' ಎಂಬ ಚಲನಚಿತ್ರದ ವಿವಾದವನ್ನು ಪರ ವಿರೋಧ ಧ್ವನಿಯಲ್ಲಿ ದಿನಗಟ್ಟಲೆ ಪ್ರಸಾರ ಮಾಡಿದವು. 'ಸದನದಲ್ಲಿ ನೀಲಿ ಚಿತ್ರ ವೀಕ್ಷಣೆ' ಪ್ರಕರಣದಲ್ಲಿ ಅಶ್ಲೀಲ ಚಿತ್ರವನ್ನು ಯಾವುದೇ ಮುಚ್ಚು ಮರೆಯಿಲ್ಲದೆ ಹಸಿಹಸಿಯಾಗಿ ಪ್ರಸಾರ ಮಾಡಲಾಯಿತು. ಈ ರೀತಿ ಮಾಡುವುದು 'ದಿ ಪ್ರೆಸ್ (ಅಬ್ಜೆಕ್ಷನೆಬಲ್ ಮ್ಯಾಟರ್) ಆಕ್ಟ್ 1951' ನಿಯಮಗಳಿಗೆ ವಿರುದ್ಧವಾದದ್ದು.

ಶೇ.90ರಷ್ಟು ಕಾರ್ಯಕ್ರಮಗಳು ಮನರಂಜನೆ, ಮೂಢನಂಬಿಕೆ, ಕ್ರೌರ್ಯ, ಗಾಸಿಪ್, ಕ್ರಿಕೇಟ್, ಸಿನೆಮಾ ಇಂತಹದೆ ವಿಷಯಗಳ ಸುತ್ತ ಗಿರಕಿ ಹೊಡೆಯುತ್ತವೆ ಎಂದು ಖ್ಯಾತ ಪತ್ರಕರ್ತ ಪಿ. ಸಾಯಿನಾಥ್ ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಇಂತಹ ವರದಿ ಮತ್ತು ಪ್ರಸಾರಗಳು ಎಳೆಯ ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ವ್ಯಾಪಕ ಓದಿನ ಹಿನ್ನೆಲೆ ಇಲ್ಲದಿರುವುದು, ನಮ್ಮ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ತಿಳುವಳಿಕೆ, ಸಮಾಜದ ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳ ಬಗ್ಗೆ ಅರಿವು ಇಲ್ಲದಿರುವುದು ಇಂದಿನ ಯುವ ಸಮುದಾಯದಲ್ಲಿ ಎದ್ದು ಕಾಣುತ್ತಿದೆ.

ಹೌದು, ಕೆಲವು ಸಾರಿ ಬ್ರೆಕಿಂಗ್ ನ್ಯೂಸ್ ಕೊಡುವ ಬರಾಟೆಯಲ್ಲಿ ಎಡವಟ್ಟುಗಳು ಆಗುವುದು ಸಹಜ. ಹಾಗೆಂದ ಮಾತ್ರಕ್ಕೆ ಪ್ರಜಾಪ್ರಭುತ್ವದ ಕಣ್ಣು-ಕಿವಿಯಾದ ಇಡಿ ಮಾಧ್ಯಮವನ್ನು ಕಠೋರ ನಿರ್ಬಂಧಕ್ಕೆ ಒಳಪಡಿಸುವುದು ಸೂಕ್ತವೆನಿಸಲಾರದು. ನ್ಯಾಯಾಲಯದ ಕಲಾಪಗಳ ವರದಿ ಮಾಡುವುದರಿಂದ ಮಾಧ್ಯಮವನ್ನು ದೂರ ಇಡುವುದು ಅದಕ್ಕೆ ಪರಿಹಾರವಲ್ಲ. ರಾಜ್ಯಶಾಸ್ತ್ರಜ್ಞ ಜರ್ಮಿ ಬೆಂಥಾಮ್ ಹೇಳುವಹಾಗೆ 'Publicity is the very soul of justice' ಎಂಬುದನ್ನು ಅನುಲಕ್ಷಿಸಬೇಕಾಗುತ್ತದೆ. ಮಾಹಿತಿ ಕ್ರಾಂತಿಯ ಈ ಯುಗದಲ್ಲಿ ಎಲ್ಲ ಮಾಹಿತಿ ಮತ್ತು ಬೆಳವಣಿಗೆಗಳು 'ಜನತಾ ನ್ಯಾಯಾಲಯ' ಅಂದರೆ ಮಾಧ್ಯಮಕ್ಕೆ ಅನಿರ್ಬಂಧಿತವಾಗಿ ಲಭಿಸುವಂತಿರಬೇಕು ಎಂಬದು ಸಂವಿಧಾನದ ಐದನೆಯ ಅಂಗ 'ಸಿವಿಲ್ ಸೊಸೈಟೀಯ' ವಾದ. ■

ಸಂಪಾದಕರೊಡನೆ ಸಂವಾದ

ಮೇಲ್ಜಾತಿಗಳ ಸಂಘಟಿತ ಹಿಂಸೆ: ದಲಿತರ ಅಸಂಘಟಿತ ನೋವು

ಸ್ವತಃ ಒಂದು ರಾಜಕೀಯ ಶಕ್ತಿಯಾಗಿ ಒಗ್ಗೂಡಿ ನಿಲ್ಲದ ದಲಿತ ಸಮುದಾಯ ವಿವಿಧ ಪಕ್ಷಗಳಲ್ಲಿ ಹಂಚಿಹೋಗಿ ದುರ್ಬಲವಾಗುತ್ತ, ತನ್ನ ಹೋರಾಟದ ಶಕ್ತಿಯನ್ನು ಕಳೆದುಕೊಳ್ಳುತ್ತಾ ಹೋಯಿತು. ಮೊದಲೇ ದಮನಿತರಾದ ದಲಿತರು ಮೇಲ್ಜಾತಿಗಳ ಅಧಿಕಾರದ ಅಮಲಿಗೆ ಪರೋಕ್ಷವಾಗಿ ಬಲಿಯಾಗತೊಡಗಿವೆ.

ಕು.ಸ ಮಧುಸೂದನ

ಪ್ರಿಯ ಸಂಪಾದಕರೇ,

ಇವತ್ತು ಕರ್ನಾಟಕ ದಲಿತರ ಮೇಲಿನ ಹಲ್ಲೆಗಳಿಗೆ ಪ್ರಸಿದ್ಧಿಯಾಗುತ್ತಿದೆ. ನಮ್ಮದು ಸೌಹಾರ್ದಯುತ ಸಹಬಾಳ್ವೆಗೆ ಹೆಸರಾದ ರಾಜ್ಯ ಎಂಬ ಹುಸಿಕಲ್ಪನೆಯನ್ನು ಬಿತ್ತುತ್ತಿದ್ದ ಮೇಲ್ವರ್ಗದ ಮಾಧ್ಯಮಗಳು ಸಹ ದಲಿತರ ಮೇಲಾಗುತ್ತಿರುವ ಹಿಂಸೆಯ ಬಗ್ಗೆ ಘಂಟಾಘೋಷವಾಗಿ ಮಾತಾಡಲೇಬೇಕಾದ ಅನಿವಾರ್ಯತೆಯಿಂದು ಸೃಷ್ಟಿಯಾಗಿದೆ. ಮೇಲ್ಜಾತಿಗಳ ಸಾಮರಸ್ಯದ ಢೋಂಗಿ ಮಾತುಗಳನ್ನು ಹಿಂಸೆಗೊಳಪಟ್ಟ ದಲಿತವರ್ಗ ತಿರಸ್ಕರಿಸುತ್ತ, ಸಂಘರ್ಷದ ದಾರಿಹಿಡಿಯುವ ಸಮಯ ಸನಿಹವಾಗುತ್ತಿದೆ. ಸಮಾನ ಅವಕಾಶ ಹಕ್ಕುಗಳಿರದ ಹಳ್ಳಿಗಳು ದಲಿತರ ಪಾಲಿಗೆ ನರಕಗಳಾಗುತ್ತಿವೆ.

ಹಿಂದೆಲ್ಲಾ ವೈಯಕ್ತಿಕ ಮಟ್ಟದಲ್ಲಿ ನಡೆಯುತ್ತಿದ್ದ ದಲಿತರ ಮೇಲಿನ ಹಲ್ಲೆಗಳು ಇತ್ತೀಚೆಗೆ ಸಂಘಟಿತರೂಪ ಪಡೆಯುತ್ತಿವೆ. ಮುಂಚೆಲ್ಲಾ ಮಾಡಿದ ಕೆಲಸಕ್ಕೆ ಕೂಲಿ ಕೇಳಿದ ಕಾರಣಕ್ಕೆ, ಸವರ್ಣೀಯ ಹುಡುಗಿಯೊಬ್ಬಳನ್ನು ದಲಿತ ಯುವಕ ಚುಡಾಯಿಸಿದನೆಂಬ ಕಾರಣಕ್ಕೆ, ನಡೆಯುತ್ತಿದ್ದ ವೈಯಕ್ತಿಕ ಮಟ್ಟದ ಹಲ್ಲೆಗಳಿವತ್ತು ತಮ್ಮ ಮಾದರಿ, ಸ್ವರೂಪ ಮತ್ತು ಗಾತ್ರವನ್ನು ಬದಲಾಯಿಸಿಕೊಂಡಿವೆ.

ಸಾಂಸ್ಥಿಕ ಸ್ವರೂಪ ಪಡೆದುಕೊಳ್ಳುತ್ತಿರುವ ದಲಿತರ ಮೇಲಿನ ಹಿಂಸೆಗಳು ಸಂಬಂಧಿಸಿದ ಇಡೀ ದಲಿತ ಸಮುದಾಯವನ್ನು ಗುರಿಯಾಗಿಸಿಕೊಂಡಿವೆ. ಇಂತಹ ಸಂಘಟಿತ ಹಿಂಸೆಗಳಿಗೆ, ಕಳೆದ ತಿಂಗಳುಗಳಲ್ಲಿ ನಡೆದ ಎರಡು ಘಟನೆಗಳನ್ನು ತಾಜಾ ಉದಾಹರಣೆಗಳನ್ನಾಗಿ ನೋಡಬಹುದಾಗಿದೆ.

ಅವು: ಮೊದಲನೆಯದು, ಹಾಸನ ಜಿಲ್ಲೆಯ ಹಳ್ಳಿಯೊಂದರಲ್ಲಿ ಗಣೇಶನ ಹಬ್ಬಕ್ಕೆ ಚಪ್ಪರ ಹಾಕಲು ಒಪ್ಪದ ಅಲ್ಲಿನ ದಲಿತರಿಗೆ ಸಾಮೂಹಿಕ ಬಹಿಷ್ಕಾರ ಹಾಕಿದ್ದು.

ಎರಡನೆಯದು, ಮಂಡ್ಯದ ಊರೊಂದರಲ್ಲಿ ಗಣಪತಿ ಬಿಡುವಾಗ ಕಡಿಮೆ ಕೂಲಿಗೆ ತಮಟೆ ಬಾರಿಸಲು ನಿರಾಕರಿಸಿದ ದಲಿತರ ಮೇಲೆ ನಡೆಸಿದ ಹಲ್ಲೆಗಳು.

ನನ್ನ ಪ್ರಶ್ನೆಯಿರುವುದು ಈ ಘಟನೆಗಳ ಹಿಂದಿರುವ ಮೇಲ್ಜಾತಿಗಳ ಸಂಘಟಿತ ಹಿಂಸೆಯ ಕಾರಣವೇನು ಎಂಬುದು. ಇದಕ್ಕೆ ದಲಿತರಲ್ಲಿ ಹೆಚ್ಚುತ್ತಿರುವ ಸಾಕ್ಷರತೆ, ಉದ್ಯೋಗಾಕಾಂಕ್ಷೆಗಳು, ತಮ್ಮ ಹಕ್ಕುಗಳನ್ನು ಎತ್ತರದ ದನಿಯಲ್ಲಿ ಕೇಳಿ ಪಡೆಯುತ್ತಿರುವ ಹೊಸ ಅರಿವಿನ ಪ್ರಜ್ಞೆ ಹಾಗು ಮೇಲ್ವರ್ಗಗಳಲ್ಲಿ ಹೆಚ್ಚಾಗುತ್ತಿರುವ ದಲಿತರ ಬಗೆಗಿನ ಅಸೂಯೆ-ಅಸಹನೆಗಳು ಕಾರಣವಿರಬಹುದಾದರೂ ಎಲ್ಲಕ್ಕಿಂತ ಮುಖ್ಯ ಕಾರಣ ಕಳೆದ ಕೆಲವು ವರ್ಷಗಳಿಂದ ಬದಲಾಗುತ್ತಿರುವ ನಮ್ಮ ರಾಜಕಾರಣ ಶೈಲಿ ಎಂದು ನನಗನ್ನಿಸುತ್ತದೆ.

ಯಾಕೆಂದರೆ ಕಳೆದೊಂದು ದಶಕದ ನಮ್ಮ ನಾಡಿನ ರಾಜಕೀಯ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಹರಿಸಿದರೆ ಚುನಾವಣಾ ರಾಜಕೀಯದ ಉದ್ದೇಶದಿಂದ ಮೇಲ್ಜಾತಿಗಳು ಹಿಂದೆಂದಿಗಿಂತಲೂ ಹೆಚ್ಚಾಗಿ ಧೃವೀಕರಣಗೊಳ್ಳುತ್ತಿವೆ. ಇವತ್ತಿನ ಒಟ್ಟಾರೆ ರಾಜಕೀಯ ಜಾತಿಯ ಕಪಿಮುಷ್ಠಿಯಲ್ಲಿ ಸಿಲುಕಿದೆ. ಹಿಂದೆ ಜಾತಿಕಾರಣ ಅಸ್ತಿತ್ವದಲ್ಲಿರಲಿಲ್ಲವೆಂದೇನೂ ಅಲ್ಲ. ಆದರೆ ರಾಜಕಾರಣದಲ್ಲಿ ಜಾತಿಯ ಪಾತ್ರ ಇಷ್ಟೊಂದು ಅಗಾಧವಾಗಿರಲಿಲ್ಲ.

ಹೆಚ್ಚೆಂದರೆ ಜಾತಿಯೊಂದು ಕ್ಷೇತ್ರವೊಂದರಲ್ಲಿ ಒಬ್ಬ ಅಭ್ಯರ್ಥಿಯ ಗೆಲುವನ್ನು ಅಥವಾ ಸೋಲನ್ನು ನಿರ್ಧರಿಸುವ ಮಟ್ಟಕ್ಕೆ ಮಾತ್ರ ಸೀಮಿತವಾಗಿತ್ತು. ಆದರಿವತ್ತು ಜಾತಿಯ ಬೇರುಗಳು ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿವೆ. ಸ್ವಲ್ಪಕಾಲ ತಟಸ್ಥವಾಗಿದ್ದಂತೆ ಕಾಣುತ್ತಿದ್ದ ಮೇಲ್ಜಾತಿಗಳು ತಮ್ಮ ಭೂತಕಾಲದ ಪಾಳೇಗಾರಿಕೆಯ ಪರಂಪರಾನುಗತ ಮೌಲ್ಯಗಳನ್ನು ಪುನರ್‌ಸ್ಥಾಪಿಸಲು ಹವಣಿಸುತ್ತಿವೆ. ಹೀಗಾಗಿಯೇ ಜಾತಿರಾಜಕಾರಣ ಸಮಾಜದ ಅಂಗೀಕಾರ ಮುದ್ರೆಯನ್ನೊತ್ತಿಸಿಕೊಂಡಂತೆ ಕೆಲಸ ಮಾಡುತ್ತಿದೆ. ಆದ್ದರಿಂದಲೇ ಜಾತಿಯನ್ನುವುದಿವತ್ತು ಒಂದು ಪಕ್ಷವನ್ನು ಗೆಲ್ಲಿಸಿ ಅಧಿಕಾರಕ್ಕೇರಿಸುವ ಅಥವಾ ಸೋಲಿಸಿ ಪಾತಕಲಿಸುವ ಮಟ್ಟಕ್ಕೇರಿದೆ. ಈ ಮೂಲಕ ಮೇಲ್ಜಾತಿಗಳು ಸಡಿಲಗೊಂಡಿದ್ದ ತಮ್ಮ ರಾಜಕೀಯ ಹಿಡಿತವನ್ನು ಪುನಃ ಸಂಪಾದಿಸಲು ತಮ್ಮ ಹಿತಾಸಕ್ತಿಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸುವಂತಹ ಪಕ್ಷಗಳ ಜೊತೆ ಗುರುತಿಸಿಕೊಳ್ಳುತ್ತಿವೆ. ಅದೇ ರೀತಿ ಅಧಿಕಾರದ ಗದ್ದುಗೆಯನ್ನೇರಲು ಪಕ್ಷಗಳು ಸಹ ಮೇಲ್ಜಾತಿಗಳ ಮುಖವಾಣಿಗಳಾಗಿ ಬದಲಾಗಿವೆ. ಇದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು! ಉತ್ತರ ಕರ್ನಾಟಕ ಮತ್ತು ಲಿಂಗಾಯಿತ ಪ್ರಾಬಲ್ಯವಿರುವ ಕಡೆ ಬಿಜೆಪಿ, ದಕ್ಷಿಣ ಕರ್ನಾಟಕ ಮತ್ತು ಒಕ್ಕಲಿಗರು ಬಹುಸಂಖ್ಯಾತರಿರುವ ಕಡೆ ಜೆಡಿಎಸ್ ತಮ್ಮ ನೆಲೆ ಕಂಡುಕೊಂಡಿವೆ.

ಆದ್ದರಿಂದಲೇ ಕಳೆದ ದಶಕದಲ್ಲಿ ನಡೆದ ಎರಡು ಮೂರು ಸಾರ್ವತ್ರಿಕ ಚುನಾವಣೆಗಳು ಮೇಲ್ಜಾತಿಗಳ ಧೃವೀಕರಣಕ್ಕೆ ಕಾರಣವಾದವು. ವರ್ತಮಾನದಲ್ಲಿ ರಾಜಕೀಯ ಪರಮಾಧಿಕಾರವನ್ನು ಪಡೆದು ಗತಕಾಲದ ತನ್ನ ಪಾಳೇಗಾರಿಕೆಯ ತೆವಲುಗಳನ್ನು ತೀರಿಸಿಕೊಳ್ಳಲು ಮೇಲ್ಜಾತಿಗಳು ಕಾತರದಿಂದ ಕಾಯುತ್ತಿದ್ದಂತಹ ಸಮಯದಲ್ಲಿ ನಡೆದ ಚುನಾವಣೆಗಳು ಆ ಜಾತಿಗಳ ಆಶಯಕ್ಕೆ ನೀರೆರೆದವು. ಇದಕ್ಕೆ ತಕ್ಕಹಾಗೆ ಭಾಜಪ ಮತ್ತು ಜೆಡಿಎಸ್‌ಗಳು ರಾಜ್ಯದ ಎರಡು ಬಲಿಷ್ಠ ಜಾತಿಗಳಾದ ಲಿಂಗಾಯಿತ ಮತ್ತು ಒಕ್ಕಲಿಗ ವರ್ಗಗಳನ್ನು ತಮ್ಮ ಹಿತಾಸಕ್ತಿಗನುಗುಣವಾಗಿ ಬಳಸಿಕೊಂಡವು. ಇದರ ನೇರ ಪರಿಣಾಮವಾದದ್ದು: ಉತ್ತರ ಕರ್ನಾಟಕ ಮತ್ತು ಹಳೆ ಮೈಸೂರು ಪ್ರಾಂತ್ಯಗಳ ಹಳ್ಳಿಗಳ ದಲಿತ ಸಮುದಾಯದ ಮೇಲೆ. ಆ ಹಳ್ಳಿಗಳ ಪ್ರಬಲ ಜಾತಿಗಳು ಒಂದೊಂದು ಪಕ್ಷಗಳ ಬೆಂಬಲಕ್ಕೆ ನಿಂತು ರಾಜಕೀಯ ಅಧಿಕಾರ ಪಡೆಯ ತೊಡಗಿದೊಡನೇ ಆ ಜಾತಿಗಳ ಪಾಳೇಗಾರಿಕ ಶಕ್ತಿಗಳಿಗೆ ಬಲ ಬಂದಂತಾಯಿತು.

ಸ್ವತಃ ಒಂದು ರಾಜಕೀಯ ಶಕ್ತಿಯಾಗಿ ಒಗ್ಗೂಡಿ ನಿಲ್ಲದ ದಲಿತ ಸಮುದಾಯ ವಿವಿಧ ಪಕ್ಷಗಳಲ್ಲಿ ಹಂಚಿಹೋಗಿ ದುರ್ಬಲವಾಗುತ್ತ, ತನ್ನ ಹೋರಾಟದ ಶಕ್ತಿಯನ್ನು ಕಳೆದುಕೊಳ್ಳುತ್ತಾ ಹೋಯಿತು. ಮೊದಲೇ ದಮನಿತರಾದ ದಲಿತರು ಮೇಲ್ಜಾತಿಗಳ ಅಧಿಕಾರದ ಅಮಲಿಗೆ ಪರೋಕ್ಷವಾಗಿ ಬಲಿಯಾಗತೊಡಗಿವೆ.

ತನ್ನ ಮಾತನ್ನು ಕೇಳದ ದಲಿತರನ್ನು ತನ್ನ ಹಿತಾಸಕ್ತಿಗಳಿಗೆ ಪೂರಕವಾಗಿ ನಡೆದುಕೊಳ್ಳದ ದಲಿತ ಸಮುದಾಯದ ಮೇಲಿದ್ದ ಪ್ರಬಲ ಜಾತಿಗಳ ದೌರ್ಜನ್ಯ ಮತ್ತಷ್ಟು ಹೆಚ್ಚಾಯಿತು. ತನಗೆ ದೊರಕಿದ ರಾಜಕೀಯ ಅಧಿಕಾರದ ಬಲದಿಂದ ತನ್ನ ಮೇಲೆ ಯಾವುದೇ ಕಾನೂನು ಕ್ರಮಗಳೂ ಸಾಧ್ಯವಿಲ್ಲವೆಂಬ ನಿರಾಂತಕ ಮನೋಭಾವನೆಯಿಂದ ಮೇಲ್ಜಾತಿಗಳಿವತ್ತು ದಲಿತರ ಮೇಲೆ ಸಂಘಟಿತ ವ್ಯವಸ್ಥಿತ ಹಲ್ಲೆಗಳನ್ನು ನಡೆಸತೊಡಗಿವೆ.

ಈಗಾದರೂ ದಲಿತವರ್ಗ ತನ್ನೆಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗೆ ತಳ್ಳಿ ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಸೆಟೆದು ನಿಲ್ಲದಿದ್ದರೆ ಶತಮಾನಗಳ ಶೋಷಣೆ ನಿರಂತರವಾಗುವುದು ಖಚಿತ!

ಜಾತಿ ವ್ಯವಸ್ಥೆಯ ಕೊಳೆತ ಮನಸ್ಥಿತಿ ಮತ್ತು ಹೊರಬರುವ ಅನಿವಾರ್ಯ ಪರಿಸ್ಥಿತಿ

ಡಾ॥ ಮ.ಪು ಪೂರ್ಣಾನಂದ

ಇತ್ತೀಚೆಗೆ ಕುಂಚಟಿಗ ಮತ್ತು ಒಕ್ಕಲಿಗ ಜಾತಿಗಳ ಬಹಿರಂಗ ಕಿತ್ತಾಟದಿಂದ ಈ ದೇಶದ ಜಾತಿ ವ್ಯವಸ್ಥೆಯ ಕೊಳೆತ ಮನಸ್ಥಿತಿಗಳ ಅನಾವರಣವಾಗಿದೆ. ಇದು ಕೇವಲ ಕುಂಚಟಿಗ ಮತ್ತು ಒಕ್ಕಲಿಗ ಜಾತಿಗಳ ಕತೆಯಷ್ಟೇ ಅಲ್ಲ ದೇಶದ ಪ್ರತಿಯೊಂದು ಜಾತಿಗಳ ಉಪಜಾತಿ, ಪರ್ಯಾಯ ಜಾತಿ, ಸಮಾನಾಂತರ ಜಾತಿಗಳ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗೇನು ಇಲ್ಲ.

ಇತ್ತೀಚೆಗೆ ಶಿವಮೊಗ್ಗದಲ್ಲಿ ತ್ರಿಮತಸ್ಥ ಬ್ರಾಹ್ಮಣರ ಸಮಾವೇಶ ಜರುಗಿತು. ಅಲ್ಲಿ ಬ್ರಾಹ್ಮಣ ಯತಿಗಳು ಬ್ರಾಹ್ಮಣರ ಒಳ ಜಾತಿಗಳು ಒಂದಾಗಿ ತಮ್ಮ ಅಸ್ತಿತ್ವಕ್ಕಾಗಿ ಹೋರಾಡಲು ಕರೆಯಿತ್ತರು. ಇದು ಜಾತಿಗಳ ಧೃವೀಕರಣವೆಂದು ಗೋಚರಿಸಿತ್ತು. ಆದರೆ ಬೆಂಗಳೂರಲ್ಲಿ ಜರುಗಿದ ಕುಂಚಿಟಿಗರ ಸಮಾವೇಶದಲ್ಲಿ ಜಾತಿಗಳ ಛಿದ್ರೀಕರಣ ಅನಾವರಣವಾಯಿತು. ಒಂದು ಕಡೆ ಒಳಜಾತಿಗಳ ಧೃವೀಕರಣ ಮತ್ತೊಂದೆಡೆ ಛಿದ್ರೀಕರಣ. ಸಾವಿರಾರು ವರ್ಷಗಳ ಇತಿಹಾಸವಿರುವ ಜಾತಿ ವ್ಯವಸ್ಥೆಯಲ್ಲಿ ಈ ವಿರೋಧಾಭಾಸಗಳು ಏಕಕಾಲಕ್ಕೆ ಘಟಿಸಿವೆ. ಇವುಗಳ ಹಿನ್ನೆಲೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಜಾತಿಗಳ ಸ್ವಾರ್ಥದ ಪರಾಕಾಷ್ಠೆ ಎದ್ದುಕಾಣುತ್ತದೆ.

ವಿವಾದಕ್ಕೆ ಕಾರಣವಾದ ಕುಂಚಿಟಿಗರ ಸಮಾವೇಶ

ಹಲವಾರು ಸಾವಿರ ವರ್ಷಗಳಿಂದ ಶಿಕ್ಷಣ, ಅಧಿಕಾರ, ಸಂಪತ್ತುಗಳನ್ನು ತಮ್ಮ ಕೈವಶ ಮಾಡಿಕೊಂಡಿದ್ದ ಬ್ರಾಹ್ಮಣ ಒಳಜಾತಿಗಳು ಒಂದಾಗುತ್ತವೆ. ಆದರೆ ಕೇವಲ ನೂರು ವರ್ಷಗಳಿಂದೀಚೆಗೆ ಶಿಕ್ಷಣ, ಅಧಿಕಾರ, ಸಂಪತ್ತುಗಳ ಕಡೆ ಮುಖ ಮಾಡಿ ನಡೆಯುತ್ತಿರುವ ಶೂದ್ರ ಜಾತಿಗಳಾದ ಕುಂಚಿಟಗ ಮತ್ತು ಒಕ್ಕಲಿಗ ಜಾತಿಗಳು ಬೇರೆಯಾಗುತ್ತವೆ. ಈ ಎರಡೂ ಘಟನೆಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸಿದಾಗ ಸ್ವಾರ್ಥಕ್ಕಾಗಿ ನಡೆದ ಜಾತಿ ವ್ಯವಸ್ಥೆಯ ಕ್ರೂರ ಆದರೆ ಸಹಜಕ್ರಿಯೆಗಳಾಗಿ ಕಾಣುತ್ತವೆ.

ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಮೀಸಲಾತಿ ಮತ್ತು ಸಾಮಾಜಿಕ ನ್ಯಾಯದ ಕಾನೂನಿಂದ ಶಿಕ್ಷಣ, ಅಧಿಕಾರ, ಸಂಪತ್ತುಗಳ ಮೇಲಿನ ಹಿಡಿತ ಸಡಿಲಗೊಂಡು ಅಸ್ತಿತ್ವ ಮತ್ತು ಅಪಾಯದ ಭೀತಿಯಿಂದ ಬ್ರಾಹ್ಮಣ ಜಾತಿಗಳು ಒಂದಾದರೆ, ಮೀಸಲಾತಿಯಿಂದ ಸಿಗುವ ಶಿಕ್ಷಣ, ಅಧಿಕಾರ, ಸಂಪತ್ತುಗಳ ಮೇಲಿನ ಹಿಡಿತ ನಮ್ಮೊಳಗೇ ಉಳಿಯಲಿ ಎಂದು ಒಕ್ಕಲಿಗ ಮತ್ತು ಕುಂಚಿಟಗ ಜಾತಿಗಳು ಬೇರೆಯಾಗುತ್ತವೆ. ಈ ಎರಡೂ ಪ್ರಕ್ರಿಯೆಗಳು ತಮ್ಮ ಗುಂಪುಗಳ ಮೂಲಕ ಶಿಕ್ಷಣ, ಅಧಿಕಾರ, ಸಂಪತ್ತಿನ ಮೇಲೆ ಹಿಡಿತ ಸಾಧಿಸಿ ಅತ್ಯಂತ ಸ್ವಾರ್ಥದಿಂದ ಬದುಕುವ ಕ್ರಿಯೆಯಾಗಿ ಕಂಡುಬರುತ್ತದೆ. ಎಲ್ಲಾ ಜಾತಿಗಳ ಪರಿಸ್ಥಿತಿಯೂ ಇದೇ ಆಗಿದೆ. ಶೋಷಿತ ಮತ್ತು ಅಸ್ಪೃಶ್ಯ ಜಾತಿಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಿರಬಹುದು ಅಷ್ಟೆ.

ಜಾತಿ ವ್ಯವಸ್ಥೆಯೇ ಸಮಷ್ಠಿ ಪ್ರಜ್ಞೆಗೆ ದೂರವಾದ ವ್ಯವಸ್ಥೆ. ಆದರೆ ಇಂದು "ಜಾತಿ", ವಾಸ್ತವ ಮತ್ತು ಸತ್ಯವಾಗಿದೆ. ಇವುಗಳ ಮಧ್ಯೆ ಸಮ ಸಮಾಜ ನಿರ್ಮಾಣಕ್ಕಾಗಿ ಕಂಡುಕೊಂಡ ಹಲವಾರು ಮಾರ್ಗಗಳಲ್ಲಿ ಮೀಸಲಾತಿಯೂ ಕೂಡ ಒಂದು. ಇದು ಬಾಬಾಸಾಹೇಬ್ ಅಂಬೇಡ್ಕರ್‌ರವರು ಚಿಂತಿಸಿದ ಸಾಮಾಜಿಕ ನ್ಯಾಯದ ಒಂದು ತುಣುಕು. ಮೀಸಲಾತಿಯಿಂದ ದೊರಕುತ್ತಿರುವ ಸವಲತ್ತುಗಳಿಗಾಗಿ ಜಾತಿ ವಿಜಾತಿಗಳ ಪ್ರತಿಪಾದನೆ ಹೆಚ್ಚಾಗುತ್ತಿರುವುದು ಕಂಡು ಬರುತ್ತದೆ. ಈ ಕಾರಣಕ್ಕಾಗಿ ದೂರದರ್ಶಿತ್ವ ಹೊಂದಿದ್ದ ಬಾಬಾಸಾಹೇಬರು ಸಮಗ್ರ ಮತ್ತು ಸಮರ್ಪಕವಾದ ಮೀಸಲಾತಿ ಜಾರಿಯಾದ 10 ವರ್ಷಗಳ ನಂತರ ಮೀಸಲಾತಿ ತೆಗೆಯಲು ಕಾನೂನು ಮಾಡಿದ್ದರು. ಆದರೆ ಮತ್ತೆ ಜಾತಿಗಳ ಸ್ವಾರ್ಥದಿಂದ ಇಂದಿಗೂ ಮೀಸಲಾತಿ ಮುಂದುವರೆದಿದೆ. ಇಷ್ಟು ದೂರ ಕ್ರಮಿಸಿದ್ದರೂ ಸಾಮಾಜಿಕ ನ್ಯಾಯ ಮತ್ತು ಸಮ ಸಮಾಜದ ಕನಸು ಮರೀಚಿಕೆಯಾಗೇ ಉಳಿದಿದೆ. ಇದು ವಿಪರ್ಯಾಸ.

ದೇಶದ ಮೂರು ಸಾವಿರಕ್ಕೂ ಮಿಗಿಲಾದ ಜಾತಿಗಳಿಗೆ ಸಮಾನವಾಗಿ ಜಾತಿ ಸಂಖ್ಯೆಗನುಗುಣವಾಗಿ ಶಿಕ್ಷಣ, ಅಧಿಕಾರ, ಸಂಪತ್ತುಗಳನ್ನು ಹಂಚಲು ಈಗಿರುವ ಮೀಸಲಾತಿ ವ್ಯವಸ್ಥೆಯಿಂದ ಸಾಧ್ಯವಾಗಿಲ್ಲ. ಹೀಗಾಗಿ ಸದ್ಯ ದೇಶದಲ್ಲಿರುವ ಮೀಸಲಾತಿ ವ್ಯವಸ್ಥೆಯ ವರ್ಗೀಕರಣವಾದ ಪರಿಶಿಷ್ಟ ಜಾತಿ (ಎಸ್.ಸಿ), ಪರಿಶಿಷ್ಟ ಬುಡಕಟ್ಟು (ಎಸ್.ಟಿ) ಮತ್ತು ಇತರೆ ಹಿಂದುಳಿದ ಜಾತಿಗಳೆಂಬ (ಓ.ಬಿ.ಸಿ) ಮೂರು ವರ್ಗಗಳಿವೆ. ಆದರೆ ಬೆರಳೆಣಿಕೆ ರಾಜ್ಯಗಳಲ್ಲಿ ಓಬಿಸಿಗಳಲ್ಲೂ ವರ್ಗೀಕರಣ ಮಾಡಿದ್ದಾರೆ. ಇಂದಿನವರೆಗೂ ಮೀಸಲಾತಿಗಾಗಿ ವೈಜ್ಞಾನಿಕವಾದ ಜಾತಿ ವರ್ಗೀಕರಣ ಸಾಧ್ಯವಾಗಿಲ್ಲ. ಇದಕ್ಕೆ ಮೂಲ ಕಾರಣ ಜಾತಿ ಆಧಾರಿತ ಜನಗಣತಿ ಆಗದೇ ಇರುವುದು ಹಾಗು ಪ್ರತಿಯೊಂದು ಜಾತಿಯ ಬಗ್ಗೆ ಕುಲ ಶಾಸ್ತ್ರೀಯ ಅಧ್ಯಯನ (Ethnographic Study) ಸಮಗ್ರವಾಗಿ ನಡೆಯದಿರುವುದು. ಈ ಕಾರಣಕ್ಕಾಗಿಯೇ ಹಲವಾರು ಮೀಸಲಾತಿ ವಿವಾದಗಳು ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯದಲ್ಲಿ ಮೀಸಲಾತಿ ವಿರುದ್ಧವಾಗಿ ತೀರ್ಪುಗಳು ಬಂದಿವೆ.

ಆಶ್ಚರ್ಯವೆಂದರೆ "ಜಾತಿ" ವಾಸ್ತವ ಮತ್ತು ಸತ್ಯವೆಂದು ಸಂವಿಧಾನಬದ್ಧವಾಗಿ ಒಪ್ಪಿಕೊಂಡಿದ್ದರೂ ಕೂಡ ಜಾತಿ ಜನಗಣತಿ 1931 ರ ನಂತರ ನಡೆಯದೇ ಇರುವುದು ಮತ್ತು ಇದಕ್ಕಾಗಿ ಶೋಷಿತ ಜಾತಿಗಳು ಹಪಹಪಿಸುತ್ತಿರುವುದು. ಈ ಜಾತಿ ಜನಗಣತಿ ನಡೆಯದೆ ಇರಲು ಬ್ರಾಹ್ಮಣರ ಮೇಲೆ ಸರಾಸಗಟಾಗಿ ಆರೋಪ ಹೊರಿಸುವುದು ಶೋಷಿತ ಜಾತಿಗಳ ಪರಿಪಾಠವಾಗಿದೆ. ಆದರೆ ಇದೇ ಅಂತಿಮ ಸತ್ಯವಲ್ಲ. ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ಮತ್ತು ಇತರೆ ಹಿಂದುಳಿದ ಜಾತಿಗಳಲ್ಲಿರುವ ಪ್ರಬಲ ಮತ್ತು ದೊಡ್ಡ ಜಾತಿಗಳೂ ಪ್ರಮುಖ ಕಾರಣವಾಗಿವೆ. ಏಕೆಂದರೆ ಈಗಿರುವ ಮೀಸಲಾತಿ ವ್ಯವಸ್ಥೆಯಲ್ಲಿ ದುರ್ಬಲ ಮತ್ತು ಸಣ್ಣ ಜಾತಿಗಳ ಅವಕಾಶಗಳನ್ನು ದೊಡ್ಡಜಾತಿಗಳು ಕಬಳಿಸುತ್ತಿವೆ. ಈ ವ್ಯವಸ್ಥೆ ಹೀಗೆ ಇರಲು ಹವಣಿಸುತ್ತಿವೆ. ಇದು ಸ್ವಾರ್ಥದ ಫಲ ಮತ್ತು ಸಮಷ್ಠಿ ಪ್ರಜ್ಞೆಯ

ಜಾಣ ಮರೆವು.

ಜಾತಿ ವರ್ಗೀಕರಣ ಸಮರ್ಪಕವಾಗಿಲ್ಲದಿರುವುದರಿಂದ ಮೀಸಲಾತಿಯ ಒಂದು ವರ್ಗದಲ್ಲಿ ಸೇರ್ಪಡೆಯಾಗುವ್ ನೂರಾರು ಜಾತಿಗಳಲ್ಲಿ ಸಣ್ಣ ಜಾತಿಗಳ ಅವಕಾಶಗಳನ್ನು ದೊಡ್ಡಜಾತಿಗಳು ನುಂಗಿ ನೊಣೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಒಳ ಮೀಸಲಾತಿ ಪ್ರಶ್ನೆ ಹೆಚ್ಚಾಗಿದೆ, ಆದರೆ ದುರ್ಬಲ ಜಾತಿಗಳ ಕೂಗು ಅರಣ್ಯರೋಧನವಾಗಿದೆ. ಇದು ಕರ್ನಾಟಕ ರಾಜ್ಯದ ಹೊಲೆಯ-ಮಾದಿಗ, ಭೋವಿ-ಬೋಯಿ, ಬೇಡಜಂಗಮ-ಬುಡ್ಗಜಂಗಮ, ಮೊಗವೀರ-ಮೊಗೇರ, ಬೇಡ-ಪರಿವಾರ, ಗೊಲ್ಲ-ಕಾಡುಗೊಲ್ಲ, ಕುರುಬ-ಜೇನುಕುರುಬ, ಒಕ್ಕಲಿಗ-ಕುಂಚಿಟಿಗ ವಿವಾದಗಳು ಹಾಗೆ ರಾಜಸ್ಥಾನದ ಮೀನಾ-ಗುಜ್ಜಾರ ವಿವಾದ ಆಂಧ್ರಪ್ರದೇಶದ ಮಾಲ-ಮಾದಿಗ ವಿವಾದ ಇನ್ನೂ ಮುಂತಾದ ಜಾತಿ ಜಗಳಗಳು ಮೀಸಲಾತಿಯ ಸವಲತ್ತಿಗಾಗೇ ನಡೆಯುತ್ತಿರುವುದನ್ನು ಗಮನಿಸಬೇಕಾದ ಮುಖ್ಯಾಂಶ.

ಕುಂಚಿಟಿಗ ಮತ್ತು ಒಕ್ಕಲಿಗೆ ಜಾತಿ ವಿವಾದಕ್ಕೆ ಸೀಮಿತವಾಗಿ ವಿಶ್ಲೇಷಿಸಿದರೆ ಕುಂಚಿಟಿಗ ಜಾತಿಯು ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬರುವ ಜಾತಿ. ಒಕ್ಕಲಿಗರ ದೊಡ್ಡ ಬ್ಯಾನರಡಿಯಲ್ಲಿ ಕುಂಚಿಟಿಗರ ಹಕ್ಕುಗಳನ್ನು ಕಸಿಯುವ ಹುನ್ನಾರವೆಂದು ಕುಂಚಿಟಿಗರ ವಾದ. ಉದಾಹರಣೆಗೆ ಮಧುಗಿರಿಯಲ್ಲಿ ಅನಿತಾಕುಮಾರಸ್ವಾಮಿರವರು ಶಾಸಕರಾಗಿ ಹೊರಜಿಲ್ಲೆಯಿಂದ ಬಂದು, ಒಕ್ಕಲಿಗರ ಹೆಸರಿನಲ್ಲಿ ಗೆದ್ದುಬರುತ್ತಾರೆ. ಆದರೆ ಆ ಭಾಗದಲ್ಲಿ ಕುಂಚಿಟಿಗರೇ ಬಹುಸಂಖ್ಯಾತರಾಗಿರುವಾಗ "ನಮ್ಮವ"ರೇ ಒಬ್ಬರು ಏಕೆ ಶಾಸಕರಾಗಬಾರದಿತ್ತು? ಎಂಬುದು ಕುಂಚಿಟಿಗರ ಪ್ರಶ್ನೆ. ಕೇಂದ್ರ ಸರ್ಕಾರದ ಮೀಸಲಾತಿ ವರ್ಗವಾದ ಇತರೆ ಹಿಂದುಳಿದ ಜಾತಿಗಳ ಓ.ಬಿ.ಸಿ ಪಟ್ಟಿಯಲ್ಲಿ ಸೇರ್ಪಡೆಯಾಗಿಲ್ಲ. ಆದರೆ ಕುಂಚಿಟಿಗರಿಗೆ ಹೋಲಿಸಿದರೆ ಮುಂದುವರಿದ ಗ್ರಾಮೀಣ ಒಕ್ಕಲಿಗರು ಓ.ಬಿ.ಸಿ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಇದು ಒಕ್ಕಲಿಗರ ಹೆಸರಲ್ಲಿ ಕುಂಚಿಟಿಗರಿಗಾದ ಅನ್ಯಾಯವೆಂದು ಭಾವಿಸಿದ್ದಾರೆ. ಇಂತಹ ಪರಿಸ್ಥಿತಿ ಎಲ್ಲಾ ಉಪಜಾತಿ ಅಥವಾ ಪರ್ಯಾಯ ಜಾತಿ ಅಥವ ಸಮಾನಾಂತರ ಜಾತಿಗಳಲ್ಲಿ ಕಂಡು ಬರುತ್ತದೆ. ಈ ರೀತಿಯ ಜಾತಿಗಳು ಕಸುಬು, ವೈವಾಹಿಕ ಸಂಬಂಧ, ಸಂಸ್ಕೃತಿಗಳ ಹಿನ್ನೆಲೆಯಲ್ಲಿ ಸಾಮ್ಯತೆಯಿರುವ ಕಾರಣಕ್ಕೆ ಒಂದಾಗುವ ಪ್ರಕ್ರಿಯೆ ಕಳೆದ ಹಲವಾರು ವರ್ಷಗಳಿಂದ ಹೆಚ್ಚಾಗಿ ನಡೆದುಕೊಂಡು ಬಂದಿದೆ ಇದು ಆರಂಭದ ಉತ್ಸಾಹದಲ್ಲಿ ಸಮೀಕರಣದ ಸಂದಿಗ್ಧವಾಗಿ ಕಂಡು ಬಂದರೆ, ವಿವಾದವೆನಿಸಿದರೂ ಒಳಗಿನ ಸತ್ಯವಾಗಿ ನಾಮಗಳ ಗುಂಪಿನ ಪ್ರಾಬಲ್ಯ ಮೆರೆಯುವ ಮೂಲಕ ಸ್ವಾರ್ಥ ಕಾಪಿಟ್ಟುಕೊಳ್ಳುವುದಾಗಿದೆ. ಬ್ರಾಹ್ಮಣರಲ್ಲೆ ಸಂಕೇತಿ ಬ್ರಾಹ್ಮಣರನ್ನು ಕೀಳಾಗಿ ಕಾಣುವ ಮನಸ್ಥಿತಿ ಇಂದಿಗೂ ಬ್ರಾಹ್ಮಣ ಜಾತಿಯೊಳಗಿದೆ. ಸಂಕೇತಿ ಬ್ರಾಹ್ಮಣರು ಕೃಷಿ ಆಶ್ರಯಿಸಿದ ಜಾತಿಯಾಗಿದೆ. ಹಾಗೇ ಲಿಂಗಾಯಿತರಲ್ಲಿ ಎಸ್.ಬ್ರ್ಯಾಂಡ್, ಬಿ.ಬ್ರ್ಯಾಂಡ್, ಪಿ.ಬ್ರ್ಯಾಂಡ್ ಎಂದು ಸಾದರ, ಬಣಜಿಗ, ಪಂಚಮಸಾಲಿ ಲಿಂಗಾಯಿತರಲ್ಲಿ ಶಿಕ್ಷಣ, ಅಧಿಕಾರ, ಸಂಪತ್ತಿನ ಹಂಚಿಕೆ ವಿಚಾರ ಬಂದಾಗ ವಿಜಾತಿ ವಿವಾದಗಳಾಗಿ ಮುಂದುವರಿದಿವೆ. ಇದು ಮಠಗಳ ಸ್ಥಾಪನೆ, ಪ್ರಾಬಲ್ಯದ ಮೂಲಕ ವ್ಯಕ್ತವಾಗುತ್ತಿದೆ. ಇವರಲ್ಲೇ ಜಂಗಮರು ಶ್ರೇಷ್ಠರೆನಿಸಿಕೊಳ್ಳುತ್ತಾರೆ. ಇವರಿಗೆ ಮಠಾಧಿಪತಿಗಳಾಗುವ ಆದ್ಯತೆ ಹೆಚ್ಚಿರುತ್ತದೆ. ಆದರೆ ಲಿಂಗಾಯಿತರಲ್ಲೆ ಕೆಳ ಜಾತಿಗಳಾದ ಮಡಿವಾಳ ಲಿಂಗಾಯಿತರು, ಗಾಣಿಗ ಲಿಂಗಾಯಿತರು, ಅಂಬಿಗ ಲಿಂಗಾಯಿತರು, ಮುಂತಾದವರಿಗೆ ಮೇಲು ಜಾತಿಯ ಲಿಂಗಾಯಿತರೊಳಗೆ ವೈವಾಹಿಕ ಸಂಬಂಧ ನಿಷಿದ್ಧವಾಗಿದೆ. ಹಾಗೆ ಜಾತಿಯೊಳಗೇ ಬೇರೆ ಬೇರೆ ಮಠಗಳಿವೆ. ಇದು ಜಾತಿವ್ಯವಸ್ಥೆಯ ಕರಾಳ ಮುಖ.

ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ದಿನಗಳಲ್ಲಿ ಜಾತಿಗಳು ಶ್ರೇಷ್ಠತೆಯ ವ್ಯಸನದಲ್ಲಿ ಸಿಲುಕಿ ತಮ್ಮ ಜಾತಿ ಹೆಸರನ್ನು ಉನ್ನತೀಕರಿಸುವ ಅಥವ ಸಂಸ್ಕೃತೀಕರಿಸುವ ಘಟನೆಗಳು ಕಂಡು ಬರುತ್ತವೆ. ಮೈಸೂರು ಅರಸರ ಸಂಸ್ಥಾನದ ವ್ಯಾಪ್ತಿಯಲ್ಲಿ ಜಾತಿಯಲ್ಲಿ ಬೆಸ್ತರಾಗಿದ್ದವರು ಮೈಸೂರು ಅರಸರಿಗೆ ಮನವಿ ಸಲ್ಲಿಸಿ ನಮ್ಮ ಜಾತಿ ಹೆಸರು ಕೀಳಾಗಿ ಕಾಣುತ್ತಿರುವುದರಿಂದ ಗಂಗಾಕುಲ ಅಥವಾ ಗಂಗಾಮತಸ್ಥರೆಂದು ಕರೆಯಬೇಕೆಂದು ಕೋರಿಕೊಳ್ಳುತ್ತಾರೆ. ಮೈಸೂರು ಅರಸರು ಅದನ್ನು ಮಾನ್ಯ ಮಾಡಿ ಆದೇಶ ಹೊರಡಿಸುತ್ತಾರೆ. ಹಾಗೆ ಕ್ಷೌರಿಕ, ಹಜಾಮ, ಹಡಪದ ಎನ್ನುವ ಜಾತಿ ಹೆಸರು ಸಂಸ್ಕೃತೀಕರಣಗೊಂಡು ಸವಿತಾ ಸಮಾಜವಾಗುತ್ತದೆ. ಆಚಾರಿಗಳು, ಬಡಗಿಗಳು ಎಲ್ಲಾ ಸೇರಿಕೊಂಡು ವಿಶ್ವಕರ್ಮ ಬ್ರಾಹ್ಮಣರಾಗುತ್ತಾರೆ. ಈಡಿಗರು ಆರ್ಯ ಈಡಿಗರೆಂದು, ಕುಂಬಾರರು ಕುಲಾಲಗುಂಡ ಬ್ರಹ್ಮಾರ್ಯ ಕುಂಬಾರರೆಂದು, ತಿಗಳರು ವಹ್ನಿಕುಲ ಕ್ಷತ್ರಿಯರೆಂದು, ಹೊಲೆಯರು ಛಲವಾದಿ ಜನಾಂಗವೆಂದು, ಮಾದಿಗರು ಅರುಂಧತಿ ಜನಾಂಗವೆಂದು ಕರೆದುಕೊಳ್ಳುತ್ತಾರೆ. ಹೀಗೆ ಹಲವಾರು ಜಾತಿಗಳು ತಮ್ಮ ಹೆಸರನ್ನು ಸಂಸ್ಕೃತೀಕರಣಗೊಳಿಸಿಕೊಂಡಿರುವುದನ್ನು ಕಾಣಬಹುದು.

ಗಾಣಿಗರು, ಉಪ್ಪಾರರು, ಬಣಜಿಗರು, ಕಮ್ಮಾರರು, ಗೆಜ್ಜಗಾರರು, ತಮ್ಮ ಜಾತಿಯ ಮುಂದೆ ಗಾಣಿಗಶೆಟ್ಟರು, ಉಪ್ಪಾರಶೆಟ್ಟರು, ಬಣಜಿಗಶೆಟ್ಟರು, ಗೆಜ್ಜಗಾರಶೆಟ್ಟರು ಎಂದು ಕರೆದುಕೊಳ್ಳುವುದು ಮತ್ತು ವ್ಯಕ್ತಿಯ ಹೆಸರಿನೊಂದಿಗೆ ಶೆಟ್ಟಿಯೆಂದು ಕರೆದುಕೊಳ್ಳುವುದು. ಅಂದರೆ ಮಹಾದೇವ-ಮಹಾದೇವ ಶೆಟ್ಟಿಯಾಗುತ್ತಾರೆ. ಇಲ್ಲಿ ದೊಡ್ಡ ವ್ಯಾಪಾರಿಗಳಾದ ವೈಶ್ಯ ಕೊಮಟಿ ಜನಾಂಗದ ಶ್ರೇಷ್ಠಿ ಪದ ಸಣ್ಣ ಸಣ್ಣ ವ್ಯಾಪಾರಿಗಳಾಗಿ ಎಣ್ಣೆ, ಉಪ್ಪು, ಬಳೆ, ಕಬ್ಬಿಣ ಮಾರುವವರಿಗೆ ಶ್ರೇಷ್ಠಿ ಪದ ಅಪಭ್ರಂಶವಾಗಿ ಶೆಟ್ಟಿ ಪದಗಳಾಗಿ ಬಳಕೆಯಾಗಿದೆ. ಹಾಗೆ ಕುರುಬರು, ಗೊಲ್ಲರು, ಕುರುಬಗೌಡ, ಗೊಲ್ಲಗೌಡರೆಂದುಕೊಳ್ಳುವುದು ಜೊತೆಗೆ ವ್ಯಕ್ತಿಗಳ ಹೆಸರಿನೊಂದಿಗೆ ಗೌಡ ಪದವನ್ನು ಸೇರಿಸಿಕೊಳ್ಳುವ ಮೂಲಕ ಜಾತಿಗಳನ್ನ ಉನ್ನತೀಕರಿಸಿಗೊಳ್ಳುವ ಅಥವ ಸಂಸ್ಕೃತಿಕರಣಗೊಳ್ಳುವ ಕ್ರಿಯೆಯಾಗಿರುತ್ತದೆ. ಈ ಎಲ್ಲಾ ಕ್ರಿಯೆಗಳು ಸಮಸ್ತ ಜಾತಿಗಳ ಶ್ರೇಷ್ಠತೆಯ ವ್ಯಸನವಾಗಿ ಕಂಡುಬರುತ್ತದೆ. ಇದರಿಂದ ಈ ಶೋಷಿತ ಜಾತಿಗಳ ಸಾಮಾಜಿಕ ಸ್ಥಾನಮಾನ ಯಾವುದೇ ಬದಲಾವಣೆಗೆ ಒಳಗಾಗದಿದ್ದರೂ, ಜಾತಿಯ ಹೆಸರನ್ನು ಸಂಸ್ಕೃತಿಕರಣಗೊಳಿಸಿಕೊಂಡು ಸಮಾಧಾನ ಪಟ್ಟಿಕೊಳ್ಳುವುದಾಗಿರುತ್ತದೆ. ಇತ್ತೀಚೆಗೆ ಸುಶಿಕ್ಷಿತ ವರ್ಗಗಳು ಜಾತಿಯಾಗಿ ಗುರುತಿಸಲ್ಪಡುತ್ತಿದ್ದ ವ್ಯಕ್ತಿ ಹೆಸರುಗಳಾದ ಗೌಡ, ನಾಯಕ, ಶೆಟ್ಟಿ, ಭಟ್ಟ, ಮುಂತಾದ ಹೆಸರುಗಳನ್ನು ಸಾಮಾಜಿಕ ಸ್ಥಾನಮಾನಕ್ಕಾಗಿ ನಿರಾಕರಿಸಿ ಸಂಸ್ಕೃತೀಕರಣಗೊಂಡ ಹೆಸರುಗಳನ್ನು ಇತ್ತೀಚಿನ ಶಾಲಾ ದಾಖಲಾತಿಗಳಲ್ಲಿ ಕಾಣಬಹುದು. ಇದು ಜಾತಿ ವ್ಯವಸ್ಥೆಯ ಮಾನಸಿಕ ಸ್ಥಿತಿ.

ಹಲವಾರು ಸಾವಿರ ವರ್ಷಗಳಿಂದ ಶಿಕ್ಷಣ, ಅಧಿಕಾರ, ಸಂಪತ್ತುಗಳನ್ನು ತಮ್ಮ ಕೈವಶ ಮಾಡಿಕೊಂಡಿದ್ದ ಬ್ರಾಹ್ಮಣ ಒಳಜಾತಿಗಳು ಒಂದಾಗುತ್ತವೆ. ಆದರೆ ಕೇವಲ ನೂರು ವರ್ಷಗಳಿಂದೀಚೆಗೆ ಶಿಕ್ಷಣ, ಅಧಿಕಾರ, ಸಂಪತ್ತುಗಳ ಕಡೆ ಮುಖ ಮಾಡಿ ನಡೆಯುತ್ತಿರುವ ಶೂದ್ರ ಜಾತಿಗಳಾದ ಕುಂಚಿಟಿಗ ಮತ್ತು ಒಕ್ಕಲಿಗ ಜಾತಿಗಳು ಬೇರೆಯಾಗುತ್ತವೆ. ಈ ಎರಡೂ ಘಟನೆಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸಿದಾಗ ಸ್ವಾರ್ಥಕ್ಕಾಗಿ ನಡೆದ ಜಾತಿ ವ್ಯವಸ್ಥೆಯ ಕ್ರೂರ ಆದರೆ ಸಹಜಕ್ರಿಯೆಗಳಾಗಿ ಕಾಣುತ್ತವೆ.

ಜಾಗೃತಿಗೊಂಡ ನಂತರ ಸಮಪಾಲಿನ ವಿಚಾರವಾಗಿ ಜಾತಿಗಳು ಬೇರೆಯಾಗುವುದು ಸಹಜವಾಗಿ ಕಂಡುಬರುತ್ತದೆ.

ಇದು ಜಾತಿ ಜನಸಂಖ್ಯೆ ಹೆಚ್ಚಿಸಿಕೊಳ್ಳಲು ಉಪಜಾತಿ ಅಥವಾ ಪರ್ಯಾಯ ಜಾತಿ ಅಥವಾ ಸಮಾನಂತರ ಜಾತಿಗಳನ್ನು ಒಟ್ಟಾಗಿಸಿಕೊಳ್ಳುವ ಮೂಲಕ ಪ್ರಬಲ ಮತ್ತು ದೊಡ್ಡ ಜಾತಿಯಾಗಿ ಹೊರ ಹೊಮ್ಮಿ ಶಿಕ್ಷಣ, ಅಧಿಕಾರ, ಸಂಪತ್ತನ್ನು ವೃದ್ಧಿಸಿಕೊಳ್ಳುವ ಹಾಗೂ ಸಂಖ್ಯಾಬಲದ ಮೇಲೆ ರಕ್ಷಣೆ ಮಾಡಿಕೊಳ್ಳುವ ತಂತ್ರವಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಸಣ್ಣ, ದುರ್ಬಲ ಮತ್ತು ಅಲ್ಪಸಂಖ್ಯಾತ ಜಾತಿಗಳು ಕೂಡ ಜಾಗೃತಿಗೊಂಡು ತಮಗೆ ಸಮಪಾಲು ಸಿಗದೇ ಇರುವುದನ್ನು ಮನಗಂಡು ತಮ್ಮದೇ ಜಾತಿಯ ಪ್ರತ್ಯೇಕ ಅಸ್ತಿತ್ವಕ್ಕಾಗಿ ಹೋರಾಡುವ ಮೂಲಕ ಪಾಲು ಪಡೆಯುವ ಸಹಜ ವರ್ತನೆಯಾಗಿದೆ.

ಇನ್ನು ಬ್ರಾಹ್ಮಣರ ಒಳಜಾತಿಗಳ ಧೃವೀಕರಣವನ್ನು ನೋಡಿದರೆ, ಮೀಸಲಾತಿ ಸವಲತ್ತು ಇಲ್ಲದೆ ಇರುವುದರಿಂದ ಇವರಿಗೆ ಒಂದಾಗುವುದು ಅನಿವಾರ್ಯವಾಗಿದೆ. ಇದು ಬ್ರಾಹ್ಮಣರ ಅಸ್ತಿತ್ವದ ಪ್ರಶ್ನೆಯಾಗಿದೆ. ಬಹುಶಃ ಬ್ರಾಹ್ಮಣರಿಗೂ ಮೀಸಲಾತಿ ವಿಸ್ತರಿಸಿದರೆ ಅವರಲ್ಲೂ ವಿಜಾತಿ ವಿವಾದ ಉಂಟಾಗಬಹುದು. ಆದರೆ ಸ್ವಾರ್ಥದ ಅಳತೆಗೋಲಿಟ್ಟು ನೋಡಿದರೆ ಬ್ರಾಹ್ಮಣರಲ್ಲೂ ವಿಜಾತಿ ವಿವಾದಗಳು ಉಂಟಾಗಿವೆ. ಮೈಸೂರು ಅರಸರ ಸಂಸ್ಥಾನದಲ್ಲಿ ಪ್ರಮುಖ ಹುದ್ದೆ ಹಿಡಿಯಲು ಐಯ್ಯಾಂಗಾರ್-ಹೆಬ್ಬಾರ ವಿವಾದವಾಗಿತ್ತು. ಹೆಬ್ಬಾರ ಬ್ರಾಹ್ಮಣರು ಮೀಸಲಾತಿಗಾಗಿ ಆಗ್ರಹಿಸಿದ್ದರು. ಮೇಲುಕೋಟೆಯಲ್ಲಿ 'ಗಿ' ನಾಮ ಮತ್ತು 'ಗ' ನಾಮ ವಿವಾದ ಕೂಡ ಐಯ್ಯಾಂಗಾರರೊಳಗೇ ಇರುವ ತೆಂಕಣ ಮತ್ತು ಬಡಗಣ ಗುಂಪುಗಳ ವಿವಾದ. ಮೇಲ್ನೋಟಕ್ಕೆ ನಾಮಗಳ ಆಕಾರಕ್ಕಾಗಿ ನಡೆಯುತ್ತಿರುವ

ಜಾತಿಯನ್ನು ಉನ್ನತೀಕರಿಗೊಳ್ಳುವುದು ಅಥವ ಸಂಸ್ಕೃತೀಕರಿಸಿಗೊಳ್ಳುವುದು ಉನ್ನತ ಸಾಮಾಜಿಕ ಸ್ಥಾನಮಾನಕ್ಕಾಗಿ ಹಂಬಲಿಸುವ ಮೇಲ್ಮುಖ ಚಲನೆಯಾಗಿತ್ತು. ಆದರೆ ಮೀಸಲಾತಿಯ ಸವಲತ್ತುಗಳಿಗಾಗಿ ಇತ್ತೀಚೆಗೆ ಹಲವಾರು ಜಾತಿಗಳ ಕುಲ ಶಾಸ್ತ್ರೀಯ

ಅಧ್ಯಯನದಲ್ಲಿ ಕೀಳು, ಕೆಳಜಾತಿಯ ಹೆಸರುಗಳನ್ನು, ಸಂಸ್ಕೃತಿಗಳನ್ನು ವ್ಯಕ್ತಪಡಿಸುವ ಮೂಲಕ ಕೆಳಮುಖ ಚಲನೆ ಕಂಡು ಬಂದಿದೆ.

ಇನ್ನೂ ನೋವಿನ ವಿಚಾರವೆಂದರೆ, ಇಂದಿಗೂ ಗುರುತಿಸದೇ ಇರುವ ಎಷ್ಟೋ ಜಾತಿಗಳು ಈ ದೇಶದಲ್ಲಿವೆ. ದಕ್ಷಿಣಕನ್ನಡ ಜಿಲ್ಲೆಯ "ಮನ್ಸ" ಎಂಬ ಜಾತಿಯಿದೆ. ಇದು ಅಸ್ಪೃಶ್ಯ ಜನಾಂಗವಾಗಿದೆ. ಆದರೆ ಕರ್ನಾಟಕ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಈ ಜಾತಿಯ ಹೆಸರು ಇಲ್ಲವಾಗಿದೆ. ಹಾಗಾಗಿ "ಮನ್ಸ" ಜಾತಿಯ ಜನರು ಆದಿದ್ರಾವಿಡ ಅಥವ ಆದಿಕರ್ನಾಟಕ ಎನ್ನುವ ತಮ್ಮದಲ್ಲದ ಜಾತಿ ಹೆಸರಿನಲ್ಲಿ ಪರಿಶಿಷ್ಟಜಾತಿಯ ಮೀಸಲಾತಿ ಸವಲತ್ತು ಪಡೆಯುವ ದುರ್ಗತಿ "ಮನ್ಸ" ಜಾತಿಯಾದಾಗಿದೆ. ಹಾಗೆ ಅಲೆಮಾರಿ ಜನಾಂಗಗಳಲ್ಲಂತೂ ಜಾತಿ ಹೆಸರೆ ಹೇಳಿಕೊಳ್ಳಲಾಗದೆ ಬದುಕುತ್ತಿರುವ ದುಸ್ಥಿತಿಯಿದೆ. ಮೈಸೂರು ಜಿಲ್ಲೆಯ ಏಕಲವ್ಯ ನಗರವೆಂಬ ಕುಗ್ರಾಮದಲ್ಲಿ ಮರಾಠಿಶಿವಾಜಿ ಎನ್ನುವ ಜಾತಿ ಜನರಿದ್ದಾರೆ, ಅವರ ಕಸುಬು ತೊಗಲುಬೊಂಬೆ ಆಡಿಸುವುದು. ಇದು ಕರ್ನಾಟಕದ ಪರಿಶಿಷ್ಟಜಾತಿ ಪಟ್ಟಿಯಲ್ಲಿ ಇಲ್ಲ. ಆದರೆ ತೊಗಲುಬೊಂಬೆ ಆಡಿಸುವ ಸಮಾನಾಂತರ ಅಥವಾ ಪರ್ಯಾಯ ಜಾತಿಯಾಗಿರುವ ಶಿಳ್ಳೆಕ್ಯಾತರ ಹೆಸರಲ್ಲಿ ಮೀಸಲಾತಿಯ ಸವಲತ್ತು ಪಡೆಯಬೇಕಾಗಿದೆ. ಹೀಗೇ ಗುರುತಿಸದೇ ಇರುವ ಜಾತಿಗಳು ಅನಾಥ ಪ್ರಜ್ಞೆಯಿಂದ ನರಳುತ್ತಾ ತಮ್ಮ ಜಾತಿಗಳ ಅಸ್ತಿತ್ವ ಮರೆತು ಸವಲತ್ತುಗಳಿಗಾಗಿ "ಜಾತಿಯಾಂತರ" ವಾಗಿದ್ದಾರೆ. ಸಮಗ್ರ ಮತ್ತು ಸಮರ್ಪಕ ಜಾತಿ ಜನಗಣತಿ ನಡೆದರೆ ಇಂತಹ ನೂರಾರು ಜಾತಿಗಳು ಸಿಗಬಹುದು. ಇತ್ತೀಚೆಗೆ ಕೇಂದ್ರ ಸರ್ಕಾರ ಆರ್ಥಿಕ, ಸಾಮಾಜಿಕ ಜಾತಿ ಜನಗಣತಿ ಸರ್ವೆ ಮಾಡುತ್ತಿದೆ. ಇದು ಸಂಪೂರ್ಣವಾಗಿ ಮುಗಿದು, ವರದಿ ತಯಾರಾಗಿ, ಸರ್ಕಾರ ಪರಿಶೀಲಿಸಿ, ಅಂಗೀಕರಿಸಿ, ಜಾರಿಗೆ ಬರಲು ಇನ್ನೆಷ್ಟು ದಶಕಗಳು ಬೇಕಾಗಬಹುದೊ, ಗೊತ್ತಿಲ್ಲ.

ಹಿಂದುಳಿದ ವರ್ಗಗಳ ಹರಿಕಾರ ಡಿ.ದೇವರಾಜಅರಸರ ಮೌನಕ್ರಾಂತಿಯ ಫಲವಾಗಿ ದೇಶದಲ್ಲೆ ಪ್ರಪ್ರಥಮ ಹಿಂದುಳಿದ ಜಾತಿಗಳ ವರದಿ ಮತ್ತು ಶೋಷಿತ ಜಾತಿಗಳ ಬೈಬಲ್ ಎಂದೇ ಪರಿಗಣಿಸಿರುವ ಎಲ್.ಜಿ.ಹಾವನೂರ ವರದಿ ಜಾರಿಯಾದರೂ ಕೂಡ ಪರಿಪೂರ್ಣವಾಗಿರಲಿಲ್ಲ. ಅಂದಿನ ವರದಿಯಲ್ಲಿ ಹಿಂದುಳಿದ ಬುಡಕಟ್ಟು (Back ward tribe) ಹಿಂದುಳಿದ ಜಾತಿ (Backward caste) ಹಿಂದುಳಿದ ಸಮಾಜ (Backward Community). ವಿಶೇಷ ವರ್ಗ (Special Group) ಎಂದು ನಾಲ್ಕು ವರ್ಗೀಕರಣ ಮಾಡಿರುತ್ತಾರೆ.

ಒಕ್ಕಲಿಗರ ಸಮಾವೇಶ

ಒಂದೇ ಜಾತಿಯ ಉಪಜಾತಿ ಅಥವಾ ಪರ್ಯಾಯ ಜಾತಿ ಅಥವಾ ಸಮಾನಾಂತರ ಜಾತಿಗಳು ಕೆಲವು ಬಿ.ಟಿ ಪಟ್ಟಿಯಲ್ಲಿದ್ದರೆ, ಕೆಲವು ಬಿ.ಸಿ.ಟಿ ಪಟ್ಟಿಯಲ್ಲಿದ್ದಾರೆ, ಉದಾಹರಣೆ:ಬೆಸ್ತ, ಗಂಗಾಕುಲ, ಗಂಗಾಮತಸ್ಥ, ಪರಿವಾರ ಮುಂತಾದ ಜಾತಿಗಳು ಬಿ.ಸಿ.ಟಿ. ಪಟ್ಟಿಯಲ್ಲಿದ್ದರೆ, ಬೆಸ್ತರ್, ಬುಂಡೆಬೆಸ್ತ, ಪರಿವಾರನಾಯಕ ಜಾತಿಗಳು ಬಿ.ಟಿ.ಪಟ್ಟಿಯಲ್ಲಿ ಗುರುತಿಸಲಾಗಿತ್ತು. ಜಾತಿ ಸರ್ವೆ ಮಾಡುವಾಗ ಯಾವುದೇ ಜಾತಿಗಳನ್ನು ತಮ್ಮ ಜಾತಿಯ ಹೆಸರೇನೆಂದು ಪ್ರಶ್ನಿಸಿದರೆ ಪ್ರತಿಯೊಬ್ಬರೂ ತಮ್ಮ ಜಾತಿಯನ್ನು ಬಹುವಚನದಲ್ಲಿ ಕರೆದುಕೊಳ್ಳುವುದು ವಾಡಿಕೆ. ಬ್ರಾಹ್ಮಣ-ಬ್ರಾಹ್ಮಣರು, ಲಿಂಗಾಯಿತ-ಲಿಂಗಾಯಿತರು, ಒಕ್ಕಲಿಗ-ಒಕ್ಕಲಿಗರು, ಗಾಣಿಗ-ಗಾಣಿಗರು, ಕುರುಬ-ಕುರುಬರು ಹೀಗೆ ಕರೆದುಕೊಳ್ಳುತ್ತಾರೆ. ಆದರೆ ಜಾತಿಯಾಗಿ, ವ್ಯಕ್ತಿಯಾಗಿ ಗುರುತಿಸುವಾಗ ಏಕವಚನ ಬಳಸಬೇಕಾಗುತ್ತದೆ. ಇದು ಸಾಮಾನ್ಯ ಜ್ಞಾನ. ಬ್ರಾಹ್ಮಣರು-ಬ್ರಾಹ್ಮಣ, ಲಿಂಗಾಯಿತರು-ಲಿಂಗಾಯಿತ, ಒಕ್ಕಲಿಗರು-ಒಕ್ಕಲಿಗ, ಗಾಣಿಗರು-ಗಾಣಿಗ, ಕುರುಬರು-ಕುರುಬ, ಆಗುತ್ತಾರೆ. ಆದರೆ ಬೆಸ್ತರು-ಬೆಸ್ತ ಆಗುವ ಬದಲು ಬೆಸ್ತರ್ ಎಂದು ಗುರುತಿಸಿ ಬಹುದೊಡ್ಡ ಲೋಪವಾಗಿ ಹಾವನೂರು ವರದಿಯಲ್ಲಿ ಕಾಣುತ್ತದೆ.

ಹೀಗೆ ಹಲವಾರು ಪ್ರಮಾದಗಳನ್ನು ಪಟ್ಟಿ ಮಾಡಬಹುದು. ನಂತರದ ದಿನಗಳಲ್ಲಿ ವೆಂಕಟಸ್ವಾಮಿ, ಚಿನ್ನಪ್ಪರೆಡ್ಡಿ, ವರದಿಗಳಲ್ಲಿ ವೈಜ್ಞಾನಿಕ ಅಂಶಗಳಿಗೆ ಒತ್ತುಕೊಟ್ಟು, ವರದಿ ನೀಡಿದ್ದರು. ದುರಂತವೆಂದರೆ ಅವುಗಳು ಜಾರಿಯಾಗಲೇ ಇಲ್ಲ. ಕಾರಣ ಹಾವನೂರು ವರದಿಯಲ್ಲಿದ್ದ ಕೆಲವು ಮುಂದುವರಿದ ಜಾತಿಗಳನ್ನು ಕೈಬಿಡಲಾಗಿತ್ತು. ಆದರೆ ದೊಡ್ಡ, ಪ್ರಬಲ ಜಾತಿಗಳ ವಿರೋಧ ವ್ಯಕ್ತವಾಗಿತ್ತು. ಅಶಕ್ತ, ಸಣ್ಣ ಜಾತಿಗಳು ದನಿಯೆತ್ತಿದರೂ ಅವರ ಕೂಗು ಅರಣ್ಯರೋದನವಾಯಿತು. ಈಗ ಕಲಸು ಮೇಲೋಗರವಾಗಿರುವ ಹಿಂದುಳಿದ ಜಾತಿಗಳ ವರ್ಗೀಕರಣವಾಗಿದೆ. ಇದು ವೀರಪ್ಪ ಮೊಯ್ಲಿ ಸರ್ಕಾರದ ಸಂದರ್ಭದಲ್ಲಿ ಜಾರಿಯಾಗಿ ಈಗಲೂ ಚಾಲ್ತಿಯಲ್ಲಿದೆ. ತದನಂತರ ರವಿವರ್ಮ ಕುಮಾರ ವರದಿಯಾಗಲಿ, ದ್ವಾರಕನಾಥ ವರದಿಯಾಗಲಿ ಜಾರಿಗೆ ಬರುವ ಯಾವ ಲಕ್ಷಣಗಳೂ ಕಂಡು ಬಂದಿಲ್ಲ.

ಈ ಜಾತಿ ವ್ಯವಸ್ಥೆಯ ಕುತೂಹಲಕರ ಅಂಶಗಳೆಂದರೆ ಶೋಷಣೆ ವಿರುದ್ಧ ಹೋರಾಡುತ್ತಿರುವ ಶೋಷಿತರೆ ಕೊನೆ ಕೊನೆಗೆ ಶೋಷಕರಾಗಿ ಪರಿವರ್ತಿರಾಗಿ ಬದಲಾಗುತ್ತಾರೆ. ಇದು ಜಾತಿ ವ್ಯವಸ್ಥೆಯಿಂದಾದ ಮನೋಸ್ಥಿತಿ. ಈ ಮಾನಸಿಕ ರೋಗಕ್ಕೆ ಮದ್ದನ್ನು ಕಂಡು ಹಿಡಿಯುವ ಕೆಲಸ ಸಾಮಾರ್ಜಿಕ ವಿಜ್ಞಾನಿಗಳಿಂದ ತುರ್ತಾಗಿ ಆಗಬೇಕಿದೆ. ಈ ತಳಸಮುದಾಯಗಳ ವಿಶೇಷ ಗುಣವೆಂದರೆ ಹಂಚಿ ತಿನ್ನುವ ಗುಣ ಲಕ್ಷಣ. ಆದರೆ ಇದು ಶಿಕ್ಷಣ, ಅಧಿಕಾರ, ಸಂಪತ್ತುಗಳಿಸುವವರೆಗೂ ಇರುತ್ತದೆ. ಗಳಿಸಿದ ನಂತರ ಕಿತ್ತು ತಿನ್ನುವ ಸ್ವಾರ್ಥ ಗುಣ ಹೆಚ್ಚಾಗಿ ಕಂಡುಬರುತ್ತದೆ. ಈ ಮಾನಸಿಕ ಸ್ಥಿತಿಯ ಪಲ್ಲಟದ ಬಗ್ಗೆಯೂ ಮನೋವೈಜ್ಞಾನಿಕ ವಿಶ್ಲೇಷಣೆಯಾಗಬೇಕಿದೆ. ಉದಾಹರಣೆಗೆ ಪರಿಶಿಷ್ಟ ಜಾತಿ ಪಟ್ಟಿಗೆ ದಲಿತಬೌದ್ಧರನ್ನು ಸೇರ್ಪಡೆ ಮಾಡಲು ಹೋದಾಗ ತೀವ್ರವಾದ ವಿರೋಧ ದಲಿತ ಹಿಂದೂಗಳಿಂದ ವ್ಯಕ್ತವಾಯಿತು. ಕೊನೆಗೆ ಹಲವಾರು ವರ್ಷಗಳ ಹೋರಾಟದ ನಂತರ ಸೇರ್ಪಡೆಯಾಯಿತು. ಇತ್ತೀಚೆಗೆ ದಲಿತ ಕ್ರಿಶ್ಚಿಯನ್‌ರು, ದಲಿತ ಮುಸ್ಲಿಂರನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರ್ಪಡೆ ಮಾಡಲು ಪ್ರಯತ್ನ ನಡೆದಾಗ ದಲಿತ ಹಿಂದೂಗಳಿಂದ ತೀವ್ರ ತರವಾದ ವಿರೋಧ ವ್ಯಕ್ತವಾಗಿ, ಅದು ನೆನೆಗುದಿಗೆ ಬಿದ್ದಿದೆ. ಹಾಗೆ ಪರಿಶಿಷ್ಟ ಬುಡಕಟ್ಟಿಗೆ ಗುಜ್ಜಾರ ಜಾತಿಯನ್ನು ಸೇರ್ಪಡೆ ಮಾಡಲು ಮೀನಾ ಜನಾಂಗ ವಿರೋಧ ಮಾಡುವುದು, ಪರಿವಾರ ಜಾತಿ ಸೇರ್ಪಡೆಗೆ ಬೇಡ ಜನಾಂಗ ವಿರೋಧ ಮಾಡುವುದು, ಹೀಗೆ ಮೀಸಲಾತಿಯ ಎಲ್ಲಾ ವರ್ಗೀಕರಣ ಪಟ್ಟಿಯಲ್ಲಿ ಈಗಾಗಲೇ ಸ್ಥಾನ ಪಡೆದ ಜಾತಿಗಳು, ಅದೇ ಪಟ್ಟಿಯಲ್ಲಿ ಬಿಟ್ಟು ಹೋಗಿದ್ದ ಅರ್ಹ ಜಾತಿಗಳ ಸೇರ್ಪಡೆ ಬಂದಾಗ ವಿರೋಧಿಸುವುದು. ಇಲ್ಲಿ ಹಂಚಿ ತಿನ್ನುವ ಗುಣ ಮಾಯವಾಗಿ ಕಿತ್ತುತಿನ್ನುವ ಲಕ್ಷಣ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಒಂದು ಕಾಲಘಟ್ಟದ ಕಳ್ಳು-ಬಳ್ಳಿಗಳಾಗಿದ್ದ ಜಾತಿಗಳೇ ಪರಸ್ಪರ ವಿರುದ್ಧ ಕಿತ್ತಾಡುವುದು ಮನೋವಿಶ್ಲೇಷಣೆಗೆ ಒಳಗಾಗಬೇಕಾದ ಅಂಶವಾಗಿದೆ. ಸ್ವಾರ್ಥ ಬಂದಾಗ ಜಾತಿ, ರಕ್ತ ಸಂಬಂಧ ಎಲ್ಲವೂ ಗೌಣವಾಗಿ, ತೃಣ ಸಮಾನವಾಗಿ ಸ್ವಾರ್ಥ ಲಾಲಸೆಯ ಪರಾಕಾಷ್ಠೆ ಮೆರೆಯುತ್ತದೆ. ಹಾಗಾದರೆ ಬದಲಾಗಬೇಕಿರುವುದು ವ್ಯಕ್ತಿಯಾಗಿ ಜಾತಿ, ಸಮಾಜದ ಮನಸ್ಥಿತಿ. ಇದು ಅತ್ಯಗತ್ಯವಾಗಿದ್ದು ಸಮಷ್ಟಿ ಪ್ರಜ್ಞೆ ಬಿತ್ತುವ ಆಧ್ಯಾತ್ಮಿಕ ಆಂದೋಲನ ಬೇಕಾಗಿದೆ. ಕೇವಲ ಸಾಮಾಜಿಕ ನ್ಯಾಯದ ಪರಿಕರಗಳು, ಕಾನೂನು, ಕಾಯಿದೆಗಳಿಂದ ಸಮ ಸಮಾಜ, ಸಮಪಾಲು, ಸಮಬಾಳು ಸಾಧ್ಯವಿಲ್ಲವೆಂದು ಅರ್ಥೈಸಬಹುದು.

ಇಡೀ ಈ ಲೇಖನದ ಸಾರಾಂಶವಾಗಿ ಮೀಸಲಾತಿಯಿಂದ ಜಾತಿ ವ್ಯವಸ್ಥೆ ಮತ್ತಷ್ಟು ಗಟ್ಟಿ ಮತ್ತು ಬಲಗೊಳ್ಳುತ್ತಿದೆ ಎಂದು ಭಾವಿಸುವ ಎಲ್ಲಾ ಲಕ್ಷಣಗಳು ಇವೆ. ಆದರೆ ಮುಳ್ಳನಿಂದ ಮುಳ್ಳನ್ನು ತೆಗೆಯುವ ತಂತ್ರವಾಗಿಟ್ಟುಕೊಂಡು ಶೋಷಿತ ಜಾತಿಗಳ ಸಂಘಟನೆಯ ಮೂಲಕವೇ ಜಾತಿವಿನಾಶಕ್ಕೆ ದಾರಿಯಾಗುತ್ತದೆ. ಇದು ವಿತಂಡವಾದವೆನಿಸಬಹುದು. ಜಾತಿ ಹೆಸರಿನಲ್ಲಿ ಅದರ ಫಲ ಪಡೆಯುವವರು ಕೇವಲ ಆ ಜಾತಿಯೊಳಗಿನ ಕೆನೆಪದರದ ಜನ ಮಾತ್ರ, ಇದೇ ಜಾತಿಯ ಬಡಜನಗಳಿಗೆ ಅದರ ಫಲ ಸಿಗುವುದು ಬಹಳ ಕಡಿಮೆ. ಇವರು ಬಹುಸಂಖ್ಯಾತರಾಗಿರುತ್ತಾರೆ. ಇದು ನಮ್ಮ ಮುಂದಿರುವ ಕಹಿ ಸತ್ಯ. ಆಗ ಉಳಿದ ಫಲ ಸಿಗದ ಜಾತಿ ಬಡಜನಗಳು ಜಾತಿ ಹೆಸರಿನಿಂದ ಪ್ರಯೋಜನವಿಲ್ಲವೆಂದು ಅರಿವಾದಾಗ ಜಾತಿ ಹೆಸರಿನಿಂದ ದೂರಸರಿಯಲು ಅಥವ ತಿರಸ್ಕರಿಸಲು ಪ್ರಾರಂಭಿಸುತ್ತಾರೆ. ಇದು ಜಾತಿಗಳು ವರ್ಗಗಳಾಗಿ ಪರಿವರ್ತನೆಯಾಗುವ ಸಂಕ್ರಮಣ ಘಟ್ಟವಾಗಿರುತ್ತದೆ. ಹಾಗೆ ಜಾತಿ-ವಿಜಾತಿ ವಿವಾದ ಹೆಚ್ಚಾದಷ್ಟೂ ಮಾನವ ಸಹಜಗುಣವಾಗಿ ಜಾತಿಗಳ ಬಗ್ಗೆಯೇ ಹೇಸಿಗೆ, ರೇಜಿಗೆ ಹುಟ್ಟಿಸಿ ಜಾತಿ ವಿನಾಶದ ಮನಸ್ಸು ಜೊತೆಜೊತೆಗೇ ಒಡಮೂಡಬಹುದು. ಅಂತಿಮವಾಗಿ ಜಾತಿ ವಿನಾಶಕ್ಕೆ ದಾರಿಯಾಗಬಹುದು. ■

ಕಲ್ಲು ಕರಗುವ ಸಮಯ

ಎಂ. ಚಂದ್ರಶೇಖರಯ್ಯ

1

ಟಾರು ಕಿತ್ತು ಹೆದ್ದಾರಿಯೇ ಹೊಂಡ
ಇಕ್ಕೆಲದಿ ಚೆಲ್ಲಿದವು ಕಲ್ಲ ಹೂ ರಾಶಿ
ಹೆಬ್ಬಂಡೆಯೆದೆಗೆ ಜಿಲೆಟಿನ್ ಹಚ್ಚಿ
ಸುರಿಸಿದರು ಕಲ್ಲ ರಾಶಿ ರಾಶಿ
ಟಿಪ್ಪರುಗಳು ಸಾಲುಗಟ್ಟಿ ಸುರಿದು ಮಾಯ
ಮೈಲು ಮೈಲುದ್ದ ಕಲ್ಲು
ಮೈ ಝಲ್ಲೆನ್ನುವ ಕಲ್ಲು
ಕಂಟ್ರಾಕ್ಟರು ಇಂಜನಿಯರು ಲೀಡರು
ಜಮಾಯಿಸಿ ಕೂಗಾಡಿದರು
ಕಲ್ಲು ಯಾಕೆ ಇನ್ನೂ ಕರಗಿಲ್ಲ:
ಕಲ್ಲು ಯಾಕೆ ಇನ್ನೂ ಕರಗಿಲ್ಲ

2

ಬಂದರು: ಗುಹೆಯೊಳಗಿಂದ ಇದ್ದಲು ಬಣ್ಣದ
ಬಿಳಿ ಪಿಳಿಪಿಳಿ ಕಣ್ಣು ಕೊಕ್ಕರೆ ಕಾಲು
ಇರುವೆ ಹರಿದಂತೆ ರೊಟ್ಟಿಗೆ ಕೈಚಾಚಿ
ತಾವೇ ಜಲ್ಲಿಯ ಕ್ರಷರುಗಳಾದರು
ಕಲ್ಲುರಾಶಿ ಬೆಟ್ಟಗಳಿಗೆ ಸುತ್ತಿಗೆ ಎತ್ತಿ
ಕಲ್ಲ ರಾಶಿ ಜಲ್ಲ ಜಲ್ಲನೆ ಜಲ್ಲಿಯಾಗಿ
ಕಲ್ಲು ಮಲ್ಲಿಗೆಯ ಬೆಟ್ಟವಾಗಿ
ಏನು ಪವಾಡ ಏನು ಮಾಯೆ
ನಿಟ್ಟುಸಿರಿಗೆ ವಜ್ರ ಕೋಮಲ ಸ್ಪರ್ಶ
ಹೆದ್ದಾರಿಯುದ್ದ ಕಟಕಟ ಸುತ್ತಿಗೆ ಸದ್ದು
ಶಿಲೆ ಕರಗಿ ಹೂರಾಶಿ ಚೆಲ್ಲಿದವು
ಮಲ್ಲಿಗೆಯಾ
ಆಹಾ! ಏನು ಮೋಡಿ! ಜಠರಾಗ್ನಿ ಚಳಕ
ಆಹಾ ಮೋಡಿ ನೋಡಿ: ಮುಲುಕುವ
ಕಿರುಗುಟ್ಟುವ ಬರ್ರೋ ಎಂದು ಸುಯ್ಯಲಿಡುವ
ಟ್ರಕ್ಕು ಬಸ್ಸು ಕಾರು ಟ್ಯಾಂಕರು ನಕ್ಕವು
ಜೊತೆಗೇ ನಕ್ಕರು: ಕಂಟ್ರಾಕ್ಟರು
ಇಂಜನಿಯರು ಜನಪ್ರತಿನಿಧಿಗಳು
ಹೆದ್ದಾರಿಯಲೀಗ ಹುಣ್ಣಿಮೆ ಬೆಳಕು
ಅಮವಾಸ್ಯೆ ತೆರಳಿತು ಗುಡಿಸಲುಗಳೆಡೆಗೆ



3

ಅಗೋ ಮಲಗಿವೆ ಕಲ್ಪ ಕಲ್ಪ ವರ್ಷಾಯು
ಹೆಬ್ಬಂಡೆ ಪೇರಾನೆ ಹಿಂಡಿನಂತೆ
ಕೋಟಿ ರಾಮರ ಪದ ಸ್ಪರ್ಶಕೂ ಜಗ್ಗಿರದ
ಅವುಗಳ ಪಕ್ಕ ಹೊಸ ನಿಯೋ ಭಗೀರಥ
ಮಾವಟಿಗ ಬಂದಿದ್ದಾನೆ
ಕಾರಲ್ಲಿ ಕೂತೇ ಬಿಚ್ಚಿದ್ದಾನೆ ಛತ್ರಿ
ಕಲ್ಲೆದೆ ಸೀಳುವರ ಹೊಸ ಒಡೆಯ
ಸೀಳಿವೆ ಈಗ ಶವಪೆಟ್ಟಿಗೆಯಾಕಾರಕೆ
ಚಚ್ಚೌಕಕ್ಕಿಳಿದ ಶಿಲೆಗಳ ಶವಯಾತ್ರೆ
ಸೀದಾ ಬಂದರು ಹಡಗು ವಿದೇಶೀ ಯಾತ್ರೆ
ಕಲ್ಲ ಕನ್ನಡಿ ಮಾಡಿ ಮಿಂಚಹೊಳಪು ಮಾಡಿ
ಚಾಣ ಸುತ್ತಿಗೆ ಕಿಚ್ಚು ಅಡಗಿಸಿ
ಇದಾವ ಹೊಸ ವಿದ್ಯೆ
ಆಡು ಆನೆಯ
ಗೋಡೆ ಸುಣ್ಣವ–ನುಂಗಿದ ಕಥೆ

4

ಮಣ್ಣು ಮಾಯೆಯಲ್ಲ
ಕಲ್ಲು ಮಾಯೆ
ಕಲ್ಲೊಳಗಿನ ಕಿಚ್ಚು ಮಾಯೆ
ಕಲ್ಲು ಕರಗುವ ಸಮಯದಲಿ
ಸಕ್ಕರೆಯ ನಿದ್ದೆಯಲಿ ಅಕ್ಕರೆಯ ಕನಸಿಲ್ಲ
ಕರಿ ಟಾರಿನೊಳಗೆ ರೋಲರೊತ್ತಿ
ಶಿಲೆಯ ಶವಯಾತ್ರೆ ನೋಡುತ್ತ
ಅಪ್ಪಚ್ಚಿಯಾಗಿ ಮಲಗಿರುವ ಅಮವಾಸ್ಯೆ ಜನರಿಗೆ
ಕಲ್ಲು ಕಲ್ಲು ಕೂಗಿ ಹಾಡುತಿವೆ ಜೋಗುಳ:
ಏನಿದೀ ಮಾಯೆ! ಏನಿದೀ ವಿದ್ಯೆ!

■

ಭಾರತೀಯ ಮಾಧ್ಯಮಗಳಿಂದ ಆತ್ಮಾವಲೋಕನ ಸಾಧ್ಯವೇ?

ಸುರೇಶ್‌ಭಟ್ ಭಾಕ್ರಬೈಲ್

ಮಾಧ್ಯಮಗಳು ಯಾವತ್ತೂ ಸಾರ್ವಜನಿಕ ಹಿತಾಸಕ್ತಿಯಿಂದ ಕಾರ್ಯಾಚರಿಸಬೇಕು, ಜನಪರವಾದ ಭಾವನೆ–ಚಿಂತನೆಗಳನ್ನು ಪ್ರಚುರಪಡಿಸಬೇಕು ಎಂದು ಹೇಳಲಾಗುತ್ತದೆ. ಇದು ನಿಜ ಎನ್ನುವುದರಲ್ಲಿ ಎರಡು ಮಾತಿಲ್ಲ; ಮಾಧ್ಯಮಗಳ ಮೂಲಭೂತ ಕರ್ತವ್ಯವೇ ಇದು. ಮಾಧ್ಯಮಗಳು ಬಹುತೇಕವಾಗಿ ಸಮಾಜದ ಅವಶ್ಯಕತೆಗಳನ್ನು ಪೂರೈಸುತ್ತವೆ. ಆದರೂ ಕೆಲವೊಮ್ಮೆ ಗುಂಪುಗಳ ಅವಶ್ಯಕತೆಗಳು ಸಮಾಜದವುಗಳಿಗೆ ವಿರುದ್ಧವಿಲ್ಲದಿದ್ದರೆ ಅವುಗಳನ್ನೂ ಪರಿಗಣಿಸಬೇಕಾಗುತ್ತದೆ. ಅನುಚಿತ ಸಾಮಾಜಿಕ ಬಯಕೆಗಳನ್ನು ಪೂರೈಸಲು ಸಾಧ್ಯವಿಲ್ಲ. ಯಾಕೆಂದರೆ ಆ ಬಯಕೆಗಳು ವಿಕೃತಗೊಂಡು ಸಾಮಾಜಿಕ ಸಮತೋಲನ, ಸೌಹಾರ್ದ ಮತ್ತು ಮೌಲ್ಯಗಳಿಗೆ ಧಕ್ಕೆಯಾಗುವ ಸಾಧ್ಯತೆಗಳಿರುತ್ತವೆ. ಅದೇ ರೀತಿ ಕೆಲವು ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ ವೈಯುಕ್ತಿಕ ಬಯಕೆಗಳಿಗೂ ಅವಕಾಶವಿಲ್ಲ.

ಮಾಧ್ಯಮ ಸ್ವಾತಂತ್ರ್ಯ

ಇತ್ತೀಚೆಗೆ ಭಾರತದ ಸರ್ವೋಚ್ಚ ನ್ಯಾಯಾಲಯ ತಾನು ಕೆಲವು ಸ್ಥೂಲ ಮಾರ್ಗದರ್ಶಿ ಸೂತ್ರಗಳನ್ನು ನಿರೂಪಿಸುವೆನೆಂದು ಹೇಳಿದಾಕ್ಷಣ ಮಾಧ್ಯಮ ವಲಯಗಳಿಂದ, ಪ್ರಧಾನವಾಗಿ ಮಾಲಿಕವರ್ಗ ಮತ್ತು ಸಂಪಾದಕರ ಸಂಘದಿಂದ, ಭಾರಿ ದೊಡ್ಡ ಕೂಗೆದ್ದಿತು. ನಾನಾ ಮಾಧ್ಯಮಗಳಲ್ಲಿ ನಾನಾ ತೆರನಾದ ಚರ್ಚೆಗಳು ಏರ್ಪಟ್ಟವು. ಮಾಧ್ಯಮರಂಗ ಸ್ವತಂತ್ರವಾಗಿ ಕಾರ್ಯಾಚರಿಸಬೇಕು, ಅದರ ಮೇಲೆ ನಿಯಂತ್ರಣ ಸಲ್ಲದು ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಅದೇ ವೇಳೆ ಅದು ಕೆಲವು ಕನಿಷ್ಠ ನಿಬಂಧನೆಗಳಿಗೆ ಒಳಪಟ್ಟು ನಡೆದುಕೊಳ್ಳುವ ಅಗತ್ಯವಿದೆ ಎಂಬ ವಾದದಲ್ಲಿ ಹುರುಳಿಲ್ಲವೇ? ಪ್ರಜಾಸತ್ತಾತ್ಮಕ ಭಾರತದ ಸಂವಿಧಾನ ಪ್ರತಿಯೊಬ್ಬ ಪ್ರಜೆಗೆ ಮೂಲಭೂತ ಹಕ್ಕುಗಳೊಂದಿಗೆ ಮೂಲಭೂತ ಕರ್ತವ್ಯಗಳನ್ನೂ ಕೊಟ್ಟಿರುವಾಗ ಇದೇ ನಿಯಮ ಮಾಧ್ಯಮದಂತಹ ಸಂಸ್ಥೆಗಳಿಗೆ ಸಹ ಅನ್ವಯಿಸಬೇಡವೇ, ಮಾಧ್ಯಮಕ್ಕೆ ಕೂಡ ಅದರ ಮೂಲಭೂತ ಸ್ವಾತಂತ್ರ್ಯದ ಹಕ್ಕಿನೊಂದಿಗೆ ಸಾಮಾಜಿಕ ಜವಾಬ್ದಾರಿಯೂ ಇರಲೇಬೇಕಲ್ಲವೇ ಎಂಬ ಪ್ರಶ್ನೆಗಳೇಳುವುದು ಸಹಜವೇ ಆಗಿದೆ. ತಮ್ಮ ಸ್ವಾತಂತ್ರ್ಯ ಹರಣವನ್ನು ವಿರೋಧಿಸುವ ಮಾಧ್ಯಮಗಳು ಸ್ವಾತಂತ್ರ್ಯಕ್ಕೂ ಮಿತಿಗಳಿವೆ ಎನ್ನುವುದನ್ನು ತಿಳಿದಿರಬೇಕಲ್ಲವೇ? ವಾಸ್ತವದಲ್ಲಿ ಒಂದು ಸಮಾಜದೊಳಗೆ ಪ್ರತಿಯೊಬ್ಬನಿಗೂ ಅನಿರ್ಬಂಧಿತ ಅಥವಾ ಅನಿಯಮಿತ ಸ್ವಾತಂತ್ರ್ಯ ಅಸಾಧ್ಯ. ಒಬ್ಬನ ಸ್ವಾತಂತ್ರ್ಯದಿಂದ ಮತ್ತೊಬ್ಬನ ಸ್ವಾತಂತ್ರ್ಯ ಮತ್ತು ಹಕ್ಕುಗಳಿಗೆ ಚ್ಯುತಿಯಾಗದಂತಿದ್ದರೆ ಮಾತ್ರ ಆರೋಗ್ಯಯುತ ಸಮಾಜದ ನಿರ್ಮಾಣ ಸಾಧ್ಯ. ಮಾಧ್ಯಮದಲ್ಲಿ ಪ್ರಕಟವಾಗುವ ಸುದ್ದಿಗಳು ವ್ಯಕ್ತಿ, ಸಮುದಾಯ, ಸಮಾಜದ ಮೇಲೆ ಬೀರಬಹುದಾದ ಪರಿಣಾಮಗಳ ಕುರಿತು ಯೋಚಿಸುವ ಮಹತ್ತರ ಹೊಣೆಗಾರಿಕೆ ಪ್ರಜಾಸತ್ತೆಯ ನಾಲ್ಕನೆ ಆಧಾರಸ್ಥಂಭಕ್ಕೆ ಇದೆ. ಆದರೆ ವಾಣಿಜ್ಯ, ಜಾತಿ, ಧರ್ಮ ಮೊದಲಾದ ಸ್ಥಾಪಿತ ಹಿತಾಸಕ್ತಿಗಳ ಕೈವಾಡದ ಪರಿಣಾಮವಾಗಿ ವೈಜ್ಞಾನಿಕ ಚಿಂತನೆಗಳಿಗಿಂತ ಜ್ಯೋತಿಷ, ವಾಸ್ತುವಿನಂತಹ ಮೂಢನಂಬಿಕೆಗಳಿಗೇ ಹೆಚ್ಚು ಮಹತ್ವ ನೀಡುವುದು, ನಿರ್ದಿಷ್ಟ ವ್ಯಕ್ತಿ, ಸಮುದಾಯಗಳ ಬಗ್ಗೆ ಪೂರ್ವಗ್ರಹಪೀಡಿತ, ಪಕ್ಷಪಾತೀಯವಾಗಿ ವರದಿ ಮಾಡುವುದು, ವರದಿ ಮಾಡದಿರುವುದು, ಕೆಲವು ವರದಿಗಳಿಗೆ ಹೆಚ್ಚು, ಇನ್ನು ಕೆಲವಕ್ಕೆ ತೀರಾ ಕಡಿಮೆ ಪ್ರಾಮುಖ್ಯತೆ ನೀಡುವುದು ಇವೆಲ್ಲ ನಡೆಯುತ್ತಿವೆ.

ಪ್ರಸಕ್ತವಾಗಿ ಭಾರತದ ಬಹುತೇಕ ಮಾಧ್ಯಮಗಳಲ್ಲಿ ಮೇಲ್ಮಧ್ಯಮ, ಶ್ರೀಮಂತ ವರ್ಗಗಳಿಗೆ, ರಾಜಕಾರಣಿಗಳಿಗೆ ಮತ್ತು ರೋಚಕ ಸುದ್ದಿಗಳಿಗೇ ಅತಿಯಾದ ಪ್ರಾಶಸ್ತ್ಯ. ವಿಮಾನ ಸಂಸ್ಥೆಯೊಂದರ ಮಾಲಿಕನೂ ಹೆಂಡದ ದೊರೆಯೂ ಆಗಿರುವ ವ್ಯಕ್ತಿ ತನ್ನ ಪೈಲಟ್‌ಗಳಿಗೆ ಸಂಬಳ ಪಾವತಿಸದಿದ್ದರೂ, ಸರಕಾರಕ್ಕೆ ಕೋಟಿಗಟ್ಟಲೆ ಬಾಕಿ ಇರಿಸಿದರೂ ಆತನಿಗೆ ವಿಶೇಷ ಪ್ರಚಾರ ನೀಡುವ ಮಾಧ್ಯಮಗಳೂ ನಮ್ಮಲ್ಲಿವೆ. ಸಿನಿಮಾ ತಾರೆಯರು ಹಾಗೂ ಅವರ ಒಳ, ಹೊರ ಉಡುಪುಗಳು, ಕ್ರಿಕೆಟ್ ಆಟಗಾರರು, ವಾಣಿಜ್ಯೋದ್ಯಮಿಗಳು, ರೂಪದರ್ಶಿಗಳು, ತಲ್ವಾರ್ ಕುಟುಂಬದಂತಹವರು ಅಗತ್ಯಕ್ಕಿಂತಲೂ ಹೆಚ್ಚು ಪ್ರಚಾರ ಪಡೆಯುತ್ತಾರೆ. ಅದೇ ವೇಳೆ ಕೃಷಿವಲಯದ ಬಿಕ್ಕಟ್ಟು, ರೈತರ ಆತ್ಮಹತ್ಯೆ, ಹೆಚ್ಚುತ್ತಿರುವ ಬಡತನ, ಅಪೌಷ್ಟಿಕತೆ, ಬಾಲಕಾರ್ಮಿಕ ಪದ್ಧತಿ, ಮಹಿಳೆಯರ ಶೋಷಣೆ, ಪ್ರತಿಭಟನೆ, ಮುಷ್ಕರ, ಧರಣಿಗಳು, ದಲಿತರ, ಅಲ್ಪಸಂಖ್ಯಾತರ, ಹಿಂದುಳಿದ ಜಾತಿಗಳ, ಬುಡಕಟ್ಟುಗಳ ಬೃಹತ್ ಸಮಸ್ಯೆಗಳು, ಸೆಜ಼್ ಹೆಸರಿನಲ್ಲಿ ಲಕ್ಷಾಂತರ ಜನರಿಗೆ ಆಗುತ್ತಿರುವ ಅನ್ಯಾಯಗಳು ಮೊದಲಾದ ವಿಷಯಗಳಿಗೆ ಸಿಗುವ ಸ್ಥಳಾವಕಾಶ ಅತ್ಯಲ್ಪ. ದೇಶಕ್ಕೆ ಸ್ವಾತಂತ್ರ್ಯ ಬಂದು 65 ವರ್ಷಗಳೇ ಕಳೆದವಾದರೂ ಮಾಧ್ಯಮ ರಂಗದ ಮೇಲ್ಪದರಗಳಲ್ಲಿ ದಲಿತ ಪತ್ರಕರ್ತರು, ಸಂಪಾದಕರು ಹೆಚ್ಚುಕಮ್ಮಿ ಇಲ್ಲವೇ ಇಲ್ಲವೆನ್ನುವ ಪರಿಸ್ಥಿತಿ ಇದೆ. ಹಾಗೆಯೇ ಅನೇಕ ಮಾಧ್ಯಮಗಳ ಆಯಕಟ್ಟಿನ ಸ್ಥಾನಗಳಲ್ಲಿ ಕೋಮುವಾದಿಗಳು ತಳವೂರಿರುವುದನ್ನು ಕಾಣಬಹುದು. ಈ ಬೆಳವಣಿಗೆಗಳಿಗೂ ದಲಿತರ

ಅವಗಣನೆ ಮತ್ತು ಕೋಮು ಅಸೌಹಾರ್ದತೆಯ ವಾತಾವರಣ ಮುಂದುವರಿಯುವುದಕ್ಕೂ ನೇರ ಸಂಬಂಧವಿಲ್ಲವೇ?

ಕೆಲವು ಪತ್ರಕರ್ತರು ಕೆಲವು ರಾಜಕಾರಣಿಗಳಿಂದ ನಿಯಮಿತವಾಗಿ ಹಫ್ತಾ ಪಡೆಯುತ್ತಿದ್ದ ವಿಷಯ ಈಗಾಗಲೇ ಬಯಲಾಗಿದೆ. ಕರ್ನಾಟಕದ ಪ್ರಮುಖ ಕನ್ನಡ ದಿನಪತ್ರಿಕೆಯೊಂದರ ಪ್ರಧಾನ ಸಂಪಾದಕರೇ ರಾಜಕಾರಣಿಗಳೊಂದಿಗೆ ತಾವೂ ಗ್ರಾಮವಾಸ್ತವ್ಯ ಹೂಡಿ ಸೈಟು ಪಡೆದುಕೊಂಡ ಅತ್ಯಸಹ್ಯಕರ ಘಟನೆಯೂ ಇಲ್ಲಿ ಆಗಿಹೋಗಿದೆ. ಮಂತ್ರಿವರ್ಯರೊಬ್ಬರ ಕಟ್ಟಡ ನಿರ್ಮಾಣ ಸಂಸ್ಥೆಯ ಕಚೇರಿಗೆ ಆದಾಯ ತೆರಿಗೆ ಇಲಾಖೆ ನಡೆಸುವ ದಾಳಿಯನ್ನು 'ಭೇಟಿ' ಎಂದು ಬರೆಯುವ ಪತ್ರಿಕೆಗಳೂ ಇವೆ. ಕುಪ್ರಸಿದ್ಧ 'ಕಾಸಿಗಾಗಿ ಸುದ್ದಿ' ಹಗರಣದ ಕುರಿತು ತಿಳಿಯದವರಾರು? ಹಾಗೆ ನೋಡಿದರೆ ರಾಜಕಾರಣಿಗಳ ಪರವಾಗಿ, ಕಾರ್ಪೊರೇಟು ಉದ್ಯಮಿಗಳ ಪರವಾಗಿ ವರದಿ ಮಾಡಲು ಗುಂಡು–ತುಂಡು ಪಾರ್ಟಿ, 'ಕವರ್', ಗಿಫ್ಟು, ಸೈಟು ಇತ್ಯಾದಿಗಳ ಬಳಕೆ ಸಾಪೇಕ್ಷವಾಗಿ ತುಂಬಾ ಹಳೆಯದು. ಅಧಿಕಾರಸ್ಥ ರಾಜಕಾರಣಿಗಳ ಹಿಂದೆ ಅಲೆದಾಡುತ್ತಾ ವಿವಿಧ ಸೌಲಭ್ಯಗಳನ್ನು ಗಿಟ್ಟಿಸಿಕೊಳ್ಳುವ ಇಂತಹ ಮಾಧ್ಯಮಗಳಿಗೆ ಅಂತಹ ರಾಜಕಾರಣಿಗಳ

ತಪ್ಪುಗಳನ್ನು ಟೀಕಿಸುವ ನೈತಿಕತೆಯಾದರೂ ಎಲ್ಲಿಂದ? ವಾಸ್ತವ ಹೀಗಿರುವಾಗ ಸಾಮಾಜಿಕ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸದ ಅಥವಾ ಕೇವಲ ತುಟಿಸೇವೆಯಷ್ಟನ್ನೆ ಸಲ್ಲಿಸುವ ಮಾಧ್ಯಮಗಳು "ಮಾಧ್ಯಮ ಸ್ವಾತಂತ್ರ್ಯ"ದ ಕಹಳೆ ಊದುವುದು ಎಷ್ಟರಮಟ್ಟಿಗೆ ಸಮರ್ಥನೀಯವೆಂಬ ಪ್ರಶ್ನೆಯಿದೆ.

ಭಾರತೀಯ ಮಾಧ್ಯಮಗಳ ವರದಿಗಾರಿಕೆ ಮೇಲೆ ಜಾಗತೀಕರಣದ ಪ್ರಭಾವ

ಭಾರತದಲ್ಲಿ ಇಂದು ಪತ್ರಿಕಾಧರ್ಮವನ್ನು ಪ್ರಾಮಾಣಿಕವಾಗಿ ಪಾಲಿಸುವ ಮಾಧ್ಯಮಗಳ ಸಂಖ್ಯೆ ಬೆರಳೆಣಿಕೆಗಿಳಿದಿದೆಯೆಂದರೆ ಅದು ಖಂಡಿತಾ ಅತಿಶಯೋಕ್ತಿ ಆಗಲಾರದು. ಕೆಲವೇ ದಶಕಗಳ ಹಿಂದೆ ವಿಯೆಟ್ನಾಂ, ಕ್ಯೂಬಾ ಮುಂತಾದ ವಿಮೋಚನಾ ಚಳವಳಿಗಳ ಕಾಲದಲ್ಲಿ ನಮ್ಮ ಹೆಚ್ಚಿನ ಮಾಧ್ಯಮಗಳು ಆ ಹೋರಾಟಗಳ ಪರವಾಗಿದ್ದವು. ಆದರೆ ಇಂದು? 1990ರಲ್ಲಿ ಆರಂಭವಾದ ಜಾಗತೀಕರಣ ಪ್ರಕ್ರಿಯೆ ಎಲ್ಲ ಮೌಲ್ಯಗಳನ್ನೂ ತಲೆಕೆಳಗಾಗಿಸಿದೆ. ಪಾಶ್ಚಿಮಾತ್ಯ ಮಾಧ್ಯಮಗಳ ಅಂಧಾನುಕರಣೆ ಆಗುತ್ತಿದೆ. ಭಾರತೀಯ ಮಾಧ್ಯಮಗಳು ಇಂದು ಪ್ರಪಂಚವನ್ನು ಮತ್ತು ಇನ್ನಿತರ ವಿದ್ಯಮಾನಗಳನ್ನು ನೋಡುವುದೇ ಅಮೆರಿಕಾದ ಕಣ್ಣುಗಳ ಹಾಗೂ ಪ್ರಜ್ಞೆಯ ಮೂಲಕ ಎಂದಾಗಿಬಿಟ್ಟಿದೆ. ಇರಾಕ್, ಇರಾನ್ ಮತ್ತು ಇತ್ತೀಚಿನ 'ಅರಬ್ ಬಂಡಾಯ'ದಂತಹ ಪ್ರಕರಣಗಳ ವರದಿಗಳಲ್ಲಿ ಅಮೆರಿಕದ ಆಕ್ರಮಣಕಾರಿ ಪರಿಭಾಷೆಯ ಅನುಕರಣೆಯನ್ನು ಸ್ಪಷ್ಟವಾಗಿ ಗಮನಿಸಬಹುದು. ಹೇಗೆ ಅಮೆರಿಕದ ಏಕಪಕ್ಷೀಯ ನಿಲುವುಗಳನ್ನು ಪ್ರತಿಬಿಂಬಿಸಲಾಗುತ್ತಿದೆ ಎನ್ನುವುದಕ್ಕೆ ಮತ್ತೊಂದು ಅತ್ಯುತ್ತಮ ನಿದರ್ಶನವೆಂದರೆ "ಭಯೋತ್ಪಾದನೆ ವಿರುದ್ಧದ ಸಮರ".

ಮುಕ್ತ ಮಾರುಕಟ್ಟೆ ಸಿದ್ಧಾಂತದ ಮಾದರಿಯಾಗಿರುವ ಅಮೆರಿಕಾದ ಹೆಚ್ಚಿನ ಮಾಧ್ಯಮಗಳು ಕಾರ್ಪೊರೇಟುಗಳ ಹಿಡಿತದಲ್ಲಿವೆ ಮತ್ತು ಆಳುವ ರಾಜಕೀಯ ವ್ಯವಸ್ಥೆಗೆ ಪೂರಕವಾಗಿವೆ. ಅಲ್ಲಿನ ಕಾರ್ಪೊರೇಟುಗಳು ಇಂದು ಎಷ್ಟರಮಟ್ಟಿಗೆ ಬೆಳೆದುಬಿಟ್ಟಿವೆಯೆಂದರೆ ತಮಗೆ ಅನುಕೂಲಕರವಾದ ಕಾನೂನುಗಳನ್ನು ತಾವೇ ತಯಾರಿಸಿ ತಮ್ಮ ಮುಷ್ಟಿಯೊಳಗಿರುವ ಶಾಸಕರ ಮೂಲಕ ಅವುಗಳನ್ನು ಕಾಯಿದೆಗಳಾಗಿ ಮಾಡಿಸಿಕೊಳ್ಳುತ್ತವೆ. ವಾಣಿಜ್ಯೀಕರಣ ಎನ್ನುವುದು ಒಂದು ರೀತಿಯಲ್ಲಿ ಮಾಧ್ಯಮ ವಲಯಕ್ಕೆ ವ್ಯಾಪಿಸಿರುವ ಸಾಂಕ್ರಾಮಿಕ ರೋಗದಂತಿದೆ. ಅಮೆರಿಕಾದಲ್ಲಿ ಕಾರ್ಪೊರೇಟು ಮಾಧ್ಯಮ ಮತ್ತು ಆಳುವ ಪ್ರಭುತ್ವಗಳ ಮಧ್ಯೆ ಅದೇನು ಅನೈತಿಕ ಕೂಟ ಏರ್ಪಟ್ಟಿದೆಯೋ ಅದೇ ಪ್ರಕ್ರಿಯೆ ಭಾರತಕ್ಕೂ ಕಾಲಿರಿಸಿರುವ ಲಕ್ಷಣಗಳು ಗೋಚರಿಸುತ್ತಿವೆ. ಭಾರತದಲ್ಲಿಯೂ ಮಾಧ್ಯಮಗಳ ಮಾಲಕತ್ವ ಇಂದು ಹೆಚ್ಚೆಚ್ಚಾಗಿ ಕಾರ್ಪೊರೇಟುಗಳ ಮತ್ತು ರಾಜಕಾರಣಿಗಳ ಕೈಸೇರುತ್ತಿದೆ.

ಭಾರತದಲ್ಲಿ ಇಂದು ರಾಜಕಾರಣಿಗಳು, ದೊಡ್ಡ ದೊಡ್ಡ ಉದ್ಯಮಿಗಳು ಕೂಡ ಟಿವಿ ಚಾನಲ್ ಮಾಲಿಕರಾಗುತ್ತಿರುವುದನ್ನು ಗಮನಿಸಬಹುದು. ಇವುಗಳಲ್ಲಿ ಪ್ರಸಾರವಾಗುವ ಸುದ್ದಿ, ವಿಶ್ಲೇಷಣೆಗಳು ಪ್ರಾಮಾಣಿಕವಾಗಿರುತ್ತವೆ ಎಂದೂ ಸ್ವಪ್ರಚಾರ ಮತ್ತು ಸ್ವವೈಭವೀಕರಣ ಆಗುವುದಿಲ್ಲವೆಂದೂ ಹೇಳಿದರೆ ನಂಬಬಹುದೇ? ಒಂದೆಡೆ ಟಿವಿ ಚಾನಲ್‌ಗಳ ಸಂಖ್ಯೆಯೇನೋ ಅಗಾಧವಾಗಿ ಬೆಳೆಯುತ್ತಿದೆ. ಆದರೆ ಗುಣಮಟ್ಟ ಮಾತ್ರ ಪಾತಾಳಕ್ಕಿಳಿಯುತ್ತಿದೆ. ಬಹುತೇಕ ಚಾನಲ್‌ಗಳ ನಿಕೃಷ್ಟ ಸ್ಥಿತಿಯನ್ನು ಕಂಡಾಗ ನಾಚಿ ತಲೆತಗ್ಗಿಸುವಂತಾಗುತ್ತದೆ. ಹೆಚ್ಚಿನ ಚಾನಲ್‌ಗಳಲ್ಲಿ ಜೋತಿಷಿಗಳು, ವಾಸ್ತುತಜ್ಞರು, ಅದೃಷ್ಟವನ್ನು ಹೇಳುವ ಕಾರ್ಯಕ್ರಮಗಳು, ಕೆಟ್ಟ ಜಾಹೀರಾತುಗಳು ಇಂತಹವುಗಳೇ ವಿಜೃಂಭಿಸುತ್ತಿವೆ. ಪೈಪೋಟಿಯ ಭಯವೇ ಇದಕ್ಕೊಂದು ಕಾರಣ ಎನ್ನಲಾಗುತ್ತಿದೆ. ವಾಣಿಜ್ಯೋದ್ಯಮದಂತಾಗಿರುವ ಮಾಧ್ಯಮರಂಗದಲ್ಲಿ ಪೈಪೋಟಿಯೂ ಸ್ವಾಭಾವಿಕವಲ್ಲವೆ? ಇಂದು "ಸುದ್ದಿಯೊಂದಿಗೆ ಮನರಂಜನೆ" ಎಂಬ ಹೆಸರಿನಲ್ಲಿ, ಅದು ಜನತೆಯ ಆಯ್ಕೆ ಎನ್ನುತ್ತಲೇ, ಅಶ್ಲೀಲತೆಯನ್ನು ಬಿತ್ತರಿಸಲಾಗುತ್ತಿದೆ. ಚಾನೆಲ್ ಮಾಲಿಕನೊಬ್ಬನ ಪ್ರಕಾರ ಇಂದಿನ ವೀಕ್ಷಕರು ಉತ್ತೇಜಕ ಸುದ್ದಿಗಳನ್ನು ಇಷ್ಟಪಡುವುದರಿಂದಲೇ ಬಹಳಷ್ಟು ಸಿನಿಮಾ, ಕ್ರಿಕೆಟ್ ಮತ್ತು ಕ್ರೈಮ್ ದೃಶ್ಯಗಳನ್ನು ತೋರಿಸಲಾಗುತ್ತದೆಯಂತೆ. ಇದೊಂದು ಅಸಮರ್ಥನೀಯ ಹೇಳಿಕೆ. ಅಶ್ಲೀಲತೆ ಮತ್ತು ಮನರಂಜನೆ ನಡುವೆ ವ್ಯತ್ಯಾಸ ಇರುವ ಹಾಗೆ ಮನರಂಜನೆ ಮತ್ತು ಸುದ್ದಿಗಳ ನಡುವೆಯೂ ವ್ಯತ್ಯಾಸವಿದೆ. ಆದರೆ ಹೆಚ್ಚಿನ ಖಾಸಗಿ ಚಾನಲ್‌ಗಳು ಅಶ್ಲೀಲತೆ, ಮನರಂಜನೆ ಮತ್ತು ಸುದ್ದಿಗಳ ನಡುವಿನ ಗಡಿಯನ್ನು ಮೀರಿ ವರ್ತಿಸುತ್ತಿರುವುದು ಸಾಮಾನ್ಯ. ಪ್ರಜಾತಂತ್ರದ ಚೌಕಟ್ಟಿನಲ್ಲಿ ಕಾರ್ಯಾಚರಿಸುವ ಚಾನಲ್‌ಗಳು ಇಂತಹ ನಕಾರಾತ್ಮಕ ಚಟುವಟಿಕೆಗಳನ್ನು ಹೆಚ್ಚು ಸಮಯ ಮುಂದುವರಿಸುವುದು ಆತ್ಮಹತ್ಯಾಕಾರಕ.





ತಮ್ಮ ಸ್ವಾತಂತ್ರ್ಯ ಹರಣವನ್ನು ವಿರೋಧಿಸುವ ಮಾಧ್ಯಮಗಳು ಸ್ವಾತಂತ್ರ್ಯಕ್ಕೂ ಮಿತಿಗಳಿವೆ ಎನ್ನುವುದನ್ನು ತಿಳಿದಿರಬೇಕಲ್ಲವೇ?ವೈಜ್ಞಾನಿಕ ಚಿಂತನೆಗಳಿಗಿಂತ ಜ್ಯೋತಿಷ, ವಾಸ್ತುವಿನಂತಹ ಮೂಢನಂಬಿಕೆಗಳಿಗೇ ಹೆಚ್ಚು ಮಹತ್ವ ನೀಡುವುದು, ನಿರ್ದಿಷ್ಟ ವ್ಯಕ್ತಿ, ಸಮುದಾಯಗಳ ಬಗ್ಗೆ ಪೂರ್ವಗ್ರಹಪೀಡಿತ, ಪಕ್ಷಪಾತೀಯವಾಗಿ ವರದಿ ಮಾಡುವುದು, ವರದಿ ಮಾಡದಿರುವುದು, ಕೆಲವು ವರದಿಗಳಿಗೆ ಹೆಚ್ಚು, ಇನ್ನು ಕೆಲವಕ್ಕೆ ತೀರಾ ಕಡಿಮೆ ಪ್ರಾಮುಖ್ಯತೆ ನೀಡುವುದು ಇವೆಲ್ಲ ನಡೆಯುತ್ತಿವೆ.

ಹಿರಿಯರ ಕಿವಿಮಾತು

ಪತ್ರಿಕಾಧರ್ಮ ಮತ್ತು ಪತ್ರಿಕಾ ಸ್ವಾತಂತ್ರ್ಯಗಳ ಬಗ್ಗೆ ಸರ್ ಹೆರಾಲ್ಡ್ ಈವನ್ಸ್ ಹೇಳಿರುವ ಕೆಲವು ಮಾತುಗಳು ಮನನೀಯವಾಗಿವೆ. ಇವರು 'ಟೈಮ್ಸ್', 'ಸಂಡೇ ಟೈಮ್ಸ್ ಲಂಡನ್' ಪತ್ರಿಕೆಗಳ ಮಾಜಿ ಸಂಪಾದಕರು: 'ಇಂದು ಕಾರ್ಪೊರೇಟ್ ಮಾಲಿಕರಿಂದಲೂ ನಿರ್ಬಂಧಗಳಿವೆ... ಈಗ ಜಾಹೀರಾತುಗಳದ್ದೇ ಕಾರುಬಾರು... ಹಿಂಸೆಯ ಯುಗದಲ್ಲಿ ಸ್ವತಂತ್ರ ಹಾಗೂ ಜವಾಬ್ದಾರಿಯುತ ಪತ್ರಿಕೆಗಳ ಪಾತ್ರವೇನೆಂದು ಅರಿಯಬೇಕಾದರೆ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಮತ್ತು ಹಿಂಸೆಯ ಸ್ವಭಾವ ಹಾಗೂ ಮೂಲಗಳ ಬಗ್ಗೆ ಅರಿತುಕೊಳ್ಳಬೇಕಾಗುತ್ತದೆ... ಸತ್ಯವನ್ನು ಒಂದೇ ಬಾರಿ ಮುದ್ರಿಸಿದರೆ ಸಾಲದು... ಸತ್ಯಕ್ಕಾಗಿ ಇಂದು ಹೆಚ್ಚಿನ ಬೆಲೆಯನ್ನು ತೆರಬೇಕಾಗುತ್ತದೆ... ದೇಶಭಕ್ತಿಯ ಕುರುಹು ಎಂಬ ಖೆಡ್ಡಾದ ಕುರಿತು ಎಚ್ಚರಿಕೆಯಿಂದಿರಬೇಕು... ಪತ್ರಿಕಾವೃತ್ತಿಯ ಉದ್ದೇಶಗಳನ್ನು ಪದೇಪದೇ ನೆನಪಿಸಿಕೊಳ್ಳಬೇಕು... ಸತ್ಯವನ್ನು ತಿರುಚುವುದು, ಪೂರ್ವಗ್ರಹಕ್ಕೆ ಒಳಗಾಗಿ ವರದಿ ಬರೆಯುವುದು, ಪಂಗಡ ಪಂಗಡಗಳ ನಡುವೆ ದ್ವೇಷವನ್ನು ಕೆರಳಿಸುವುದು, ಖಾಸಗಿ ದುಃಖದ ದುರ್ಬಳಕೆ ಮುಂತಾದುವನ್ನು ಮಾಡುತ್ತಿದ್ದರೆ ಪತ್ರಿಕೆಗಳು ಸ್ವಾತಂತ್ರ್ಯಕ್ಕೆ ಅರ್ಹವಲ್ಲ.......'

ಆಧಾರ:
ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಕಟಿಸಿದ 'ಸಂವಹನ-2006'.
ಜಿ.ರಾಮಕೃಷ್ಣ ಮತ್ತು ಎಸ್.ಕೆ.ಸಿಂಗ್ ಇವರ ಲೇಖನಗಳು.
'ದ ಟ್ರಿಬ್ಯೂನ್'.
'ದ ವೀಕ್' 30.12.2007.

ನಾಗಬಂಧದ ಬಂಧನ: ನಂಬಿಕೆ ಮತ್ತು ಕೇಳಿಕೊಳ್ಳಬೇಕಾದ ಪ್ರಶ್ನೆಗಳು

ಜಯಪ್ರಕಾಶ್ ಶೆಟ್ಟಿ ಹೆಚ್

ಕರಾವಳಿಯ ಯಾವುದೇ ಹಳ್ಳಿ ಮೂಲೆಗೆ ಹೋದರೂ ನಿಮಗೆ ಒಂದಾದರು ನಾಗಬನ ಸಿಗದ ಹಳ್ಳಿಗಳು ಇರಲಾರವೇನೋ. ಮನೆ (ಒಂದೊಂದು ಅವಿಭಕ್ತ ಕುಟುಂಬ) ಗೊಂದರಂತೆ ಸಿಕ್ಕೇ ಸಿಗುವ ನಾಗಬನಗಳು ಮೂಲತಃ ದೇವರಕಾಡುಗಳು. ಇವುಗಳನ್ನು ಕರೆಯುತ್ತಿದ್ದುದೇ ನಾಗಬನ ಇಲ್ಲವೇ ನಾಗಬಲ್ಲೆಗಳೆಂದೇ. ದೇವರ ಹೆಸರನ್ನು ಸ್ಥಳವಾಚಕಗಳ ಮೂಲಕ ಇಲ್ಲವೇ ದಿಗ್ವಾಚಕಗಳ ಮೂಲಕ ಸೂಚಿಸುವ ಪರಿಪಾಠವೊಂದು ನಮ್ಮೂರ ಕಡೆ ಇದೆ. ಅದರಂತೆ ಧರ್ಮಸ್ಥಳವನ್ನು ನಮ್ಮೂರುಗಳಲ್ಲಿ ಮುಗ್ಧವಾಗಿ ತೆಂಕಲಾಯ್ ಎಂದೇ ಕರೆದಂತೆ, ನಾಗನನ್ನು ಕರೆಯುತ್ತಿದ್ದುದೇ ಬನದ ದೇವ್ರು ಎಂದು. ಕಾರಣಿಕ ಮತ್ತು ಸತ್ಯವನ್ನಾಧರಸಿ ಅದನ್ನು ಸತ್ಯದೇವತೆ ಎಂದೂ ಕರೆಯುವ ರೂಢಿ ನಮ್ಮೂರ ಕಡೆಯಿದೆ. ಗಂಡನ ಹೆಸರೋ, ಗಂಡನ ಅಣ್ಣನ ಹೆಸರೋ ನಾಗನಿಂದ ಆರಂಭವಾಗುವಂತಿದ್ದರೆ ನಮ್ಮೂರ ಹೆಂಗಸರು ಅವರ ಹೆಸರಿರುವ ಜಾಗದಲ್ಲಿ ಬನದದೇವ್ರು ಎಂದೆ ಸೇರಿಸಿ ಗೌರವ ತೋರುವುದನ್ನು ಇನ್ನೂ ನೋಡಬಹುದು. ಹೀಗೆ ಬಲ್ಲೆಗಳೆಂದು ಕರೆಯಲ್ಪಡುತ್ತಿದ್ದ ಜಾಗಗಳಲ್ಲಿ ಹುತ್ತ, ಬಾಗಾಳು ಇಲ್ಲವೆ ಬನ್ನೇರಳೆ ಇತ್ಯಾದಿ ಮರಗಳು ಸರ್ವೇಸಾಮಾನ್ಯ. ಅಮೂಲ್ಯವಾದ ಅನೇಕ ಗಿಡಮೂಲಿಕೆಗಳೂ ಈ ಬನಗಳಲ್ಲಿ ಲಭ್ಯವಿರುತ್ತಿದ್ದುವು. ಈ ಮರಗಳಿಗಾಗಲೀ ಆಚ್ಛಾದಿಸಿಕೊಂಡ ಬನದ ಯಾವುದೇ ಭಾಗಕ್ಕಾಗಲೀ ಕತ್ತಿಯನ್ನೆ ಹಾಕದೇ ಆ ಬನಗಳನ್ನು ಸ್ವಚ್ಛಂದವಾಗಿ ಬೆಳೆಯಲು ಬಿಡುತ್ತಿದ್ದರು. ಸ್ಥಳೀಯವಾಗಿ ಸಿಗುವ ಕಪ್ಪು ಬಣ್ಣದ ಶಿಲೆಯಲ್ಲಿಯೋ ಆಥವಾ ಮೆದುಜಾತಿಯ ಜಾಜಿಕಲ್ಲಿನಲ್ಲಿಯೋ ಕೆತ್ತಿದ ನಾಲ್ಕಾರು ನಾಗಮಿಥುನದ ಶಿಲ್ಪಗಳು ಹುತ್ತಕ್ಕೋ, ಪೀಠದಂತಿರುವ ನಿಸರ್ಗ ಸಹಜ ಕಲ್ಲಿನ ದಿಬ್ಬಕ್ಕೋ ಆತುಕೊಂಡಂತೆ ಬನದ ನೆರಳಿನಲ್ಲಿ ಮಳೆ, ಬಿಸಿಲು, ಗಾಳಿಗಳಿಗೆ ತೆರೆದೇ ಇರುತ್ತಿದ್ದುವು. ಈ ಕಾರಣಕ್ಕಾಗಿಯೇ ಸಹಜತೆಯನ್ನು ಕುರಿತು ಹೇಳುವಾಗ "ನಾಗನಕಲ್ಲಿಗೆ ನಾಯಿ ಉಚ್ಚೆ ಹೊಯ್ಯುವುದು ಇಪ್ಪೆ(ಇರುವುದೇ)" ಎಂಬ ವಾಗ್ರೂಢಿಯನ್ನು ಮಾತಿಗೊಮ್ಮೆ ಬಳಸುವುದುಂಟು. ಮನೆಯ ಸಮೀಪವೇ ಇರುವ ಈ ಜಾಗಗಳಿಗೆ ನಾವು ಸಾಕಿದ ಕೋಳಿ ಗಂಟಿ(ಹಸು)ಗಳು ಯಾವುದೇ ಭಿಡೆಯಿಲ್ಲದೆ ಹೋಗಿ ಮೆಂದು ಬರುತ್ತಿದ್ದುವು. ಕೋಳಿಗಳಂತೂ ಅಷ್ಟೇ ನಿರ್ಭಿಡೆಯಿಂದ ನಾಗನಕಲ್ಲಿನ ತಳಬುಡವನ್ನೆಲ್ಲ ಕೆದರಾಡಿ ಹುಳ–ಹುಪ್ಪಡಿ ತಿಂದು ಬರುತ್ತಿದ್ದವು. ಇದು ನಿನ್ನೆ ಮೊನ್ನೆಯವರೆಗೆ ಅನೇಕ ಕಡೆ ನಡೆದುಕೊಂಡು ಬಂದ ರೂಢಿ. ಇವುಗಳನ್ನು ಪೂಜಿಸುವ ಸರಳ ಮಾದರಿಗಳಾದ ತನುಹಾಕುವ(ಬಾಳೆಗೊನೆ ಒಪ್ಪಿಸುವ), ತಂಪು ಹಾಕುವ(ಒಂದಿಷ್ಟು ಹಾಲು, ಬಿಳಿಅಕ್ಕಿ ಅರ್ಪಿಸುವ) ಕೆಲಸಗಳಿಗೆ ವರ್ಷದ ಯಾವುದೋ ಒಂದೆರಡು ದಿನಗಳಲ್ಲಿ ಪುರೋಹಿತರು ಬರುತ್ತಿದ್ದರು. ತನುಹಾಕಿದ ಬಾಳೆಗೊನೆಯ ಬುಡದ ಚಿಪ್ಪು, ತಂಪು ಕಾಕಿದ ಅಚ್ಚೇರು ಅಕ್ಕಿಯನ್ನು ಪೂಜೆಯ ಕೂಲಿ ಎಂಬಂತೆ ಒಯ್ಯುತ್ತಿದ್ದರು. ಆದರೆ ದಲಿತರು ಆರಾಧಿಸಿಕೊಂಡು ಬರುತ್ತಿರುವ ನಾಗಾರಾಧನೆಯ ಮಾದರಿಯಾದ ಕಾಡ್ಯನಾಗನಿಗೆ ತಂಬಿಲ ಇಡುವ ಮತ್ತು ಆರಾಧಿಸುವ ಎಲ್ಲ ಕೆಲಸಗಳನ್ನು ಇಂದಿಗೂ ಅನೇಕ ಕಡೆ ದಲಿತರೇ ನಡೆಸಿಕೊಂಡು ಹೋಗುತ್ತಿದ್ದಾರೆ.

ಮನೆಗೊಂದರಂತೆ ಸಿಗುವ ಈ ನಾಗಬನಗಳಿಗೆಲ್ಲಾ ಅದು ಹೇಗೆಯೋ ಸುಬ್ರಹ್ಮಣ್ಯವನ್ನು ಮೂಲಬನವಾಗಿ ಎಂದಿನಿಂದಲೋ ಏನೋ ನಂಬಿಕೊಂಡು ಬರಲಾಗಿದೆ. ಹಾಗಾಗಿ ಅದನ್ನು ಮೂಲಿ ಸ್ಥಳವೆಂತಲೇ ನಂಬಿಕೊಂಡು ಕರೆಯಲಾಗುತ್ತದೆ. ಅದಲ್ಲದೆ ನಾಗನ ಕಲ್ಲಿನ ಬುಡವನ್ನೂ ಮೂಲ ಎಂತಲೇ ಕರೆಯುವುದರಿಂದ ಇದು ಭೂಸೂಚಕವಾದ ಪದವೂ ಹೌದು. ನಾಗ ದರ್ಶನಗಳು ನಡೆದಾಗ ಮೂಲಿ ಪ್ರಸಾದ ಎಂದು ಮಣ್ಣನ್ನೇ ಕೊಡಲಾಗುತ್ತದೆ. ಈ ದರ್ಶನಗಳು ಹಲವು ಕಾಲದಿಂದ ಪುರೋಹಿತ ವರ್ಗಕ್ಕೆ ಸೇರಿದವರ ಮೂಲಕವೇ ನಡೆದುಬರುತ್ತಿವೆ. ಅಂದು ನಾನು ಕಂಡಂತೆ ಹಣ್ಣು–ಹಾಲಿನ ಸರಳ ಮತ್ತು ಮಾಮೂಲಿ ಸೇವೆ ಸಹಜವಾಗಿ ನಡೆದುಕೊಂಡು ಹೋಗುತ್ತಿತ್ತು. ಅದಲ್ಲದೆ ನನ್ನ ಬಾಲ್ಯದ ದಿನಗಳಲ್ಲಿ ಕಂಡಂತೆ ವಿರಳವಾಗಿ ನಾಗದರ್ಶನವೋ, ಅತಿವಿರಳವಾಗಿ ನಾಗಮಂಡಲವೋ ನಡೆಯುತ್ತಿತ್ತು. ಅದೇ ಸಂದರ್ಭದಲ್ಲಿ ಗದ್ದೆ ಬಯಲುಗಳಲ್ಲಿ ಏನಾದರೂ ಸತ್ತುಬಿದ್ದ ಸರ್ಪ ಸಿಕ್ಕರೆ ಅವರ ಪಾಲಿಗೊಂದು ಗಂಟು(ನಿಧಿ)? ಸಿಕ್ಕಂತಯೇ ಎಂದು ಭಯ ಬೀಳುತ್ತಿದ್ದುದನ್ನು ಕಂಡಿದ್ದೇನೆ. ಯಾಕೆಂದರೆ ಈ ಹಾವುಗಳು ಹೇಗೇ ಸತ್ತಿರಲಿ ಅವುಗಳ ಬೊಜ್ಜ(ಸಂಸ್ಕಾರ)

ಆಶ್ಲೇಷಬಲಿ ಹರಕೆ ತೀರಿಸಲು ಕುಕ್ಕೆ ಸುಬ್ರಹ್ಮಣ್ಯಕ್ಕೆ ಆಗಮಿಸಿದ್ದ ಖ್ಯಾತ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್

ಮಾಡಬೇಕಾದ ಹೊಣೆ ಹಾಗೆ ಕಂಡವರ ಮೇಲೆ ಬರುವಂತಹ ಭಯ ಅಂದೂ ಇದ್ದುದನ್ನು ನಾನು ಕಂಡವನಿದ್ದೇನೆ. ಸತ್ತು ಕೊಳೆತುಹೋದ ಹಾವಿದ್ದರೂ ಅದು ಸರ್ಪವಾಗಿದ್ದರೆ ಅದನ್ನು ಪುರೋಹಿತರ ಮೂಲಕ ಹಲಸಿನ ಕಟ್ಟಿಗೆಯಲ್ಲಿಟ್ಟು ಸುಡುವುದಲ್ಲದೆ ಅದರ ಶ್ರಾದ್ಧ ವಿಧಿಯನ್ನು ಪುರೋಹಿತರ ಸಂತರ್ಪಣೆಯ ಮೂಲಕ ನಡೆಸಬೇಕಿತ್ತು. ಹೋಮ, ಹವನದ ಜೊತೆಗೆ ನಿಗದಿತ ಸಂಖ್ಯೆಯ ಬ್ರಾಹ್ಮಣರಿಗೆ ಊಟ ಹಾಕಲೇಬೇಕೆಂಬ ನಿಯಮವೂ ಚಾಲತಿಯಲ್ಲಿತ್ತು. ಮನುಷ್ಯರು ಸತ್ತುಬಿದ್ದರೆ ಸಿಕ್ಕದ ಪ್ರಾಮುಖ್ಯತೆ ಈ ಸತ್ತ ಹಾವುಗಳಿಗೆ ದಕ್ಕುತ್ತಿದ್ದುದಲ್ಲದೆ, ಆ ಪ್ರಾಮುಖ್ಯತೆಯ ಲಾಭಗಳು ನಿಶ್ಚಿತವಾಗಿ ಒಂದು ಸಮುದಾಯಕ್ಕೇ ದಕ್ಕುತ್ತಿತ್ತು. ದುಬಾರಿಯೆನಿಸಿದರೂ ಇದು ಒಂದು ಮಿತಿಯಲ್ಲಿಯೇ ನಡೆದುಕೊಂಡು ಬರುತ್ತಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ನಾಗಬನಗಳು ಬನಗಳಾಗಿಯೇ ಇದ್ದುವು. ಈ ಬನಗಳ ಸ್ವರೂಪಕ್ಕೆ ಇಂದಿನಂತೆ ಅಂದು ಈ ಅಕ್ರಮಕೂಟ ಕೈಯಿಕ್ಕಿರಲಿಲ್ಲ.

ಆದರೆ ಇತ್ತೀಚೆಗಿನ ದಿನಗಳಲ್ಲಿಯ ಸ್ಥಿತಿ ಆತಂಕಕಾರಿಯಾಗಿ ಬೆಳೆಯುತ್ತಿದೆ. ಈ ನಂಬುಗೆ ಅನ್ನುವುದಕ್ಕಿಂತ ಮುಖ್ಯವಾಗಿ ಭಯವನ್ನೇ ಬಂಡವಾಳ ಮಾಡಿಕೊಂಡು ನಾಗನ ಹೆಸರಿನಲ್ಲಿ ಅನಾರೋಗ್ಯಕರವಾದ ದಂಧೆಯೊಂದು ಅವ್ಯಾಹತವಾಗಿ ಊರ್ಜಿತವಾಗುತ್ತಿದೆ. ನಾಗದರ್ಶನಗಳು ನಡೆದಲ್ಲೆಲ್ಲಾ ಮೂಲಿ ಸ್ಥಳದಿಂದ ಮಣ್ಣಿನ ಪ್ರಸಾದ ತೆಗೆದಷ್ಟೇ ಸುಲಭವಾಗಿ ಹೊಸ ಹರಕೆಗಳನ್ನು ಕಾಲಗರ್ಭದಿಂದ ಅಗೆದು ತೆಗೆದು ಹುಟ್ಟಗ್ತಿ(ಮರೆಯಾದುದನ್ನು ನೆನಕೆ ಮಾಡುವುದು) ಕೊಡಲಾಗುತ್ತಿದೆ. ನಾಗಬನಗಳ ಜಾಗದಲ್ಲಿ ಕಾಂಕ್ರೀಟು ಗೋಪುರಗಳನ್ನು ನಿರ್ಮಿಸುವಂತೆ ಆಜ್ಞಾಪಿಸಲಾಗುತ್ತಿದೆ. ಈ ಗೋಪುರಗಳಲ್ಲಿ ಹೊಸದಾಗಿ ಪ್ರತಿಷ್ಠಾಪನ ಕಾರ್ಯದ ನಂತರ ಸರಣಿಯಲ್ಲಿ ವರ್ಷಕ್ಕೊಂದರಂತೆ ಶುದ್ಧಕಳಶ ಎನ್ನುವ ರಿನೀವಲ್ ಕಾರ್ಯಕ್ರಮಗಳನ್ನು ಮಾಡಲೇಬೇಕಾದ ಹುಕುಂಗಳು ಈ ದರ್ಶನದ ಪಾತ್ರಿ ಮತ್ತು ಪುರೋಹಿತರ ಜಂಟಿಪಡೆ ಜಾರಿಗೊಳಿಸುತ್ತಿದೆ. ಆಶ್ಲೇಷಬಲಿ, ನಾಗಮಂಡಲಗಳು ನಿತ್ಯದ ಮಾತಾಗು ವಷ್ಟು ಅತಿಸಂಖ್ಯೆ ಮತ್ತು ದುಬಾರಿಯಲ್ಲಿ ನಡೆಯುತ್ತಲೇ ಇವೆ. ಮುಖ್ಯವಾಗಿ ಇವು ಕುಟುಂಬಕ್ಕೆ ಸೇರಿದ ಬನಗಳಾಗಿಯೇ ಇರುವುದರಿಂದ ಮೂಲ ಅವಿಭಕ್ತ ಕುಟುಂಬದೊಳಗಣ ಉಳ್ಳವರು ಇಲ್ಲದವರು ಎಂಬ ಭೇದವಿರದೆ ಎಲ್ಲರೂ ವರಾಡ(ವಂತಿಗೆ)ಕೊಟ್ಟು ಪಾಲ್ಗೊಳ್ಳಬೇಕಾಗುವುದು ಇದರ ಜೊತೆಗೇ ನಡೆಯುತ್ತಿದೆ. ಇದರಿಂದಾಗಿ ಹೀಗೆ ವರಾಡ ಕೊಟ್ಟು ಪಾಲ್ಗೊಳ್ಳುವ ಒತ್ತಡಕ್ಕೆ ಬಿದ್ದ ಅನೇಕ ಬಡ ಕುಟುಂಬಗಳು ಬಲಿಷ್ಠರ ನಡುವೆ ನಲುಗಿಹೋಗುವ ಪರಿಸ್ಥಿತಿ ನಿರ್ಮಾಣಗೊಳ್ಳುತ್ತಿದೆ. ಯಾವ ಯಾವುದೋ ದಾರಿಯಲ್ಲಿ ಹಣಮಾಡಿದ ಧನಿಕರು ತಮ್ಮ ಸಂಪಾದನೆಯ ಗಣಿತವನ್ನು ಈ ಮೂಲಕ ಲೋಕಕ್ಕೆ ಪ್ರದರ್ಶಿಸಲು ಅವಕಾಶವಾಗುತ್ತಿದೆ. ಈ ನೈತಿಕ ದಿವಾಳಿಶೂರರು ಧರ್ಮದುರಂಧರರಾಗಿ 'ನಾಗಮನ್ನಣೆ' ಪಡೆಯುತ್ತಿರುವ ಮೂಲಕ ಅನೈತಿಕವೆನ್ನುವುದು ಶುಚೀಕರಿಸಲ್ಪಟ್ಟ ನೈತಿಕ ನಾಣ್ಯವಾಗಿ ಚಲಾವಣೆಗೆ ಬರುತ್ತಿದೆ. ಈ ಮೂಲಕ ನಾಗನನ್ನು ನಂಬಿದ ನಿರ್ಗತಿಕರು ನಿಜವಾಗಿಯೂ ಸಂಕಟೋತ್ಪಾದಕರ ನುಡಿಯೆಂಜಲಿನಲ್ಲಿ ಹೊರಳಾಡುತ್ತಾ ಬದುಕಬೇಕಾದ ಸ್ಥಿತಿ ನಿರ್ಮಾಣವಾಗಿದೆ. ವ್ಯಕ್ತಿ ಗೌರವವನ್ನು ಮರೆತು ಎಂಜಲಲ್ಲಿ ಹೊರಳಿದಷ್ಟೇ ಕನಿಷ್ಠವಾಗಿ ತಮ್ಮ ಮಕ್ಕಳನ್ನು ಒತ್ತೆಯಿಟ್ಟು ಪಡೆದ ಹಣವನ್ನು ದೈನೇಸಿಯಾಗಿ ಈ ಲೂಟಿಕೋರರ ಕೈಗಿತ್ತು, ಮತ್ತವರದೇ ಕಾಲಿಗೆ ಬೀಳಬೇಕಾದ ಸ್ಥಿತಿ ನಿಜಕ್ಕೂ ಮಡೆಸ್ನಾನಕ್ಕಿಂತಲೂ ದಯನೀಯವಾದುದು.

ನಾಗಾರಾಧನೆಯ ಸಂಪ್ರದಾಯ ಮೂಲತಃ ವೈದಿಕ ಸೇರಿಯದಾಗಿದ್ದು, ಪ್ರಾಚೀನವಾಗಿ ಅಲ್ಲಿ ಆರಾಧನೆಯ ಮುಖ್ಯಸಂಗತಿಯಾಗಿ ಬಳಕೆಯಾಗುತ್ತಿದ್ದುದು ಮಣ್ಣಿನ ಕಳಶಗಳು. ಶುದ್ಧ ನಿಸರ್ಗಾರಾಧನೆಯ ಈ ತಾಣವನ್ನು ಗುದ್ದಲಿ ಮತ್ತು ಕುಡುಗೋಲು ಮುಕ್ತವಲಯವಾಗಿ ಘೋಷಿಸಿಕೊಂಡಿದ್ದುದರಿಂದ ಈ ಬನದ ಇರುವಿಕೆಗೆ ಯಾವುದೇ ಧಕ್ಕೆ ಒದಗದಂತೆ ನಮ್ಮ ಪೂರ್ವಿಕರು ಕಾಪಿಟ್ಟುಕೊಂಡಿದ್ದರು. ಸಹಜವಾಗಿ ಅಪೂರ್ವವಾದ ಜೇನು, ಗಿಡಮೂಲಿಕೆಗಳು ಇಲ್ಲಿ ಲಭ್ಯವಿರುತ್ತಿದ್ದವು. ಕತ್ತಿ ಹಾಕುವುದಕ್ಕೇ ನಮ್ಮ ಪೂರ್ವಿಕರು ಹಾಕಿಕೊಂಡಿದ್ದ ಸ್ವಯಂ ನಿಷೇಧದಿಂದಾಗಿ ಸಂದಣಿಸಿಕೊಂಡಿದ್ದ ನೀರಪೂರಣದ, ಸಸ್ಯಾವಳಿಯ ಈ ಪಾರಂಪರಿಕ ರಕ್ಷಿತ ನಿಸರ್ಗತಾಣಗಳು ಜೆಸಿಬಿ ಯಂತ್ರಗಳ ದೈತ್ಯಾಕ್ರಮಣಕ್ಕೆ ಸಿಕ್ಕಿ ಬೋಳಾದ ಜಾಗಗಳಾಗಿ ಕಾಂಕ್ರೀಟಿನ ನವನಿರ್ಮಾಣಕ್ಕೆ ಹಾದಿ ಮಾಡಿಕೊಡುತ್ತಿವೆ. ಹುತ್ತವನ್ನೇ ದೇವರೆಂದು ನಂಬಿ ಅದನ್ನೆ ನಾಗರಾಧನೆಯ ಬಹಳಮುಖ್ಯ ಸಂಕೇತವೆಂದು ಅರಾಧಿಸುತ್ತಿದ್ದ ಅದೇ ಜಾಗದಲ್ಲಿ ಹುತ್ತಗಳ ಮೂಲೋತ್ಪಾಟನೆ ಮಾಡಿ, ಇದರಿಂದಾದ ಹಾನಿ(ನಾಗನ ಮರಿ-ಮಟ್ಟೆಗಳ ನಾಶ)ಯ ಪರಿಹಾರಕ್ಕಾಗಿ ಮತ್ತದೇ ಸರ್ಪಸಂಸ್ಕಾರವೆಂಬ ಪುರೋಹಿತಲೂಟಿಯ ಅವಕಾಶಗಳನ್ನು ನಿರ್ಮಿಸಲಾಗುತ್ತಿದೆ. ಗುದ್ದಲಿ, ಕುಡುಗೋಲುಗಳಲ್ಲದೆ ಬೆಂಕಿಯ ಪ್ರವೇಶಕ್ಕೇ ಸೀಮಿತ ಅವಕಾಶವಿದ್ದ ಬನದೊಳಗೆ ಈಗ ನಿರಾಯಾಸವಾಗಿ ಹೋಮ-ಹವನಾದಿ ಅಗ್ನಿಕುಂಡದ ಜ್ವಾಲೆ ಬೆಳಗುತ್ತಿದೆ. ಜಲಪರಂಪರೆಗೆ ಸೇರಿಧ ಈ ನಾಗಪರಂಪರೆ ಸಂಪೂರ್ಣವಾಗಿ ಅಗ್ನಿಪರಂಪರೆಯವರ ಹಿಡಿತಕ್ಕೆ ಸಂದುಹೋಗಿದೆ. ಜೊತೆಗೆ ನಾಗನ ಹೆಸರಿನ ಏನೇ ಕೆಲಸ ಇದ್ದರೂ ಅಲ್ಲೊಂದು ಅನ್ನಸಂತರ್ಪಣೆ ಆಗಲೇಬೇಕಾದ ಸ್ಥಿತಿ ನಿರ್ಮಾಣಗೊಳ್ಳುತ್ತಿದೆ. ಅನ್ನ ಹಂಚುವ ಈ ಕಾರ್ಯಕ್ರಮದಲ್ಲಿಯೂ ಅಡುಗೆಯನ್ನು ನಿರ್ದಿಷ್ಟ ಸಮುದಾಯದವರೇ ಮಾಡಬೇಕೆಂಬ ನಿಯಮವನ್ನು ಅನುಸರಿಸಿಕೊಂಡು ಬರಲಾಗುತ್ತಿದೆ. ನಾಗನಿಂದಾಗಿ ಹೀಗೆ ಉಣ್ಣಲೇಬೇಕಾದವರು ಮತ್ತು ಅಡುಗೆ ಮಾಡಬೇಕಾದವರೆಲ್ಲರೂ ಒಂದೇ ಸಮುದಾಯಕ್ಕೆ ಸೇರಿದವರಾಗಿರುವುದಷ್ಟೇ ಅಲ್ಲದೆ, ಅನ್ನಸಂತರ್ಪಣೆ ಮಾಡಿ 'ಹಸಿವಿರದವರ ಹಸಿವನ್ನು ತಣಿಸಿ' ಅವರ ಕಾಲಿಗೇ ಬೀಳಬೇಕಾದ ದುಸ್ತರ ಸ್ಥಿತಿಯಿದೆ. ಯಾಕೆಂದರೆ ನಾಗಪಾತ್ರಿಯ ಬಾಯಿಂದ ತಪ್ಪದೇ ಬರುವ ನುಡಿಗಳಲ್ಲಿ ಬ್ರಹ್ಮಕುಟುಂಬವನ್ನು ತೃಪ್ತಿಪಡಿಸುವ ಆಜ್ಞೆಯೂ ಒಂದು. ಪುರೋಹಿತ, ಪಾತ್ರಿಯೊಂದಿಗೆ ಉಣ್ಣುವ ಮತ್ತು ಅಡಿಗೆಮಾಡುವ ಫಲಾನುಭವಿಗಳೆಲ್ಲಾ ಹೀಗೆ ಒಂದೇ ಸಮುದಾಯಕ್ಕೆ ಸೇರಿದವರಾಗಿ ಇದೊಂದು ಧಾರ್ಮಿಕ ದಂದೆಯಾಗಿ ಮಾರ್ಪಟ್ಟಿರುವುದರ ಕುರಿತು ಕೊಡುವವರು ಗೊಣಗಿಕೊಂಡೇ ಕೊಡುತ್ತಿದ್ದಾರೆ. ಪಡೆಯುವವರು ಅಧಿಕಾಧಿಕ ಕಸಿಯುತ್ತಿದ್ದಾರೆ.

ನಂಬಿಕೆಯನ್ನು ಪ್ರಶ್ನಿಸಿದರೆ ಉರಿದೆದ್ದು ಬೀಳುವ ನೀತಿ ಮತ್ತು ನಂಬಿಗೆಯ ಕಾವಲುಗಾರರು ಗಟ್ಟಿಗೊಂಡು ಸಂಘಟಿತವಾಗುತ್ತಿರುವ ಈ ಕಾಲದಲ್ಲಿ, ಮಡೆಸ್ನಾನವನ್ನು ನಂಬಿಗೆಯ ಪ್ರಶ್ನೆಯೆತ್ತಿ ಬಾಯಿ ಮುಚ್ಚಿಸಲು ಯತ್ನಿಸಲಾಗುತ್ತಿದೆ. ಹೊರಳಬೇಡಿ ಅಂದರೆ ತಲೆಯಮೇಲೆಯೇ ಹೊತ್ತು ತಿರುಗುತ್ತೇವೆ ಎಂದು ಹೇಳಿಸುವುದಷ್ಟೇ ಅಲ್ಲ ಮಾಡಿಸಲಾಗುತ್ತಿದೆ. ಈ ಯತ್ನ ಮಾಡುವವರು ಕೇಳಿಕೊಳ್ಳಬೇಕಾದ ಒಂದಿಷ್ಟು ಪ್ರಶ್ನೆಗಳನ್ನು ಎದುರು ತಂದುಕೊಳ್ಳುವುದು ಮುಖ್ಯವಾಗುತ್ತದೆ. ಯಾಕೆಂದರೆ ಎಂಜಲ ಮೇಲೆ ಉರುಳುವವರ ಆಳದಲ್ಲಿ ನೆಟ್ಟು ಬೆಳೆಯಿಸಲಾಗಿರುವ. ಅವರನ್ನು ಅಲ್ಲಿಂದ ಪಾರಾಗದಂತೆ ಬಂಧಿಸಿಟ್ಟಿರುವ ದಯನೀಯ ಸ್ಥಿತಿಯ ಚರಿತ್ರೆಯೇ ಈ ಉರುಳಾಟದ ಹಿಂದಿದೆ ಎಂಬುದನ್ನು ಗಮನಿಸಬೇಕು. ಅದಲ್ಲದೆ ನಂಬಿಕೆಗಳೆಂದರೆ ಗೊಂಚಲಿದ ಹಾಗೆ. [illegible]

ನಾಗರಾಧನೆಯನ್ನು ಸಮರ್ಥಿಸುವ ವೇಳೆ ಅದನ್ನೊಂದು ವೈಜ್ಞಾನಿಕ ತಳಹದಿಯುಳ್ಳ , ನೈಸರ್ಗಿಕ ಸಮತೋಲವನ್ನು ಕಾಪಾಡಿಕೊಳ್ಳುವ ಆಲೋಚನೆಯನ್ನೂ ಒಳಗೊಂಡ ನಿಸರ್ಗಾರಾಧನೆಯ ಮಾದರಿಯೆಂದೇ ಪರಿಭಾವಿಸಲಾಗುತ್ತದೆ. ಕುಡುಗೋಲ ಪ್ರವೇಶಕ್ಕೇ ಸ್ವಯಂನಿಷೇಧ ಹೇರಿಕೊಂಡು ದೇವರ ಕಾಡುಗಳ ಮೂಲಕ ನಮ್ಮ ಪ್ರಾಚೀನರು ಕಾಯ್ದಿಟ್ಟುಕೊಂಡು ಬಂದ ಅಂತರ್ಜಲದ ಮರು ಪೂರಣದ ಕ್ರಮ ಮತ್ತು ಔಷಧೀಯ ಗಿಡಮೂಲಕೆಗಳ ಉಳಿವು-ಅಳಿವು ನಮ್ಮ ಸಂಸ್ಕೃತಿಯ ಪಾರಂಪರಿಕ ಹೆಮ್ಮೆಯೆಂದೂ ಗುರುತಿಸಿಕೊಳ್ಳಲಾಗಿದೆ.



ನಾಗಾರಾಧನೆಯಲ್ಲಿ ಅಮಿತಾಬ್ ಕುಟುಂಬ

ಇರುವಿಕೆ ಮತ್ತು ವಿಕಾಸವನ್ನು ತೋರಿವೆ? ಹತ್ತಿಪ್ಪತ್ತು ವರ್ಷಗಳ ಹಿಂದಿದ್ದ ನಂಬಿಕೆ ಮತ್ತು ಆಚರಣೆಯ ಆವರಣಗಳು ಇಂದು ಯಾವ ಮಾರ್ಪಾಡಿಗೆ ಒಳಗಾಗಿವೆ? ಆರ್ಥಿಕವಾಗಿ ಮತ್ತು ಪರಿಸರಾತ್ಮಕವಾಗಿ ಈ ನಂಬುಗೆ ಮತ್ತು ಆಚರಣೆಗಳು ಬೀರುತ್ತಿರುವ ವಿಕೃತ ಪರಿಣಾಮಗಳೇನು? ಈ ಪ್ರಶ್ನೆಗಳನ್ನು ಕರಾವಳಿಯ ಸಾಕಷ್ಟು ಜನ ಸಹಜವಾಗಿಯೇ ಕೇಳಿಕೊಳ್ಳುತ್ತಿದ್ದಾರೆ.

ನಾಗರಾಧನೆಯನ್ನು ಸಮರ್ಥಿಸುವ ವೇಳೆ ಅದನ್ನೊಂದು ವೈಜ್ಞಾನಿಕ ತಳಹದಿಯುಳ್ಳ, ನೈಸರ್ಗಿಕ ಸಮತೋಲವನ್ನು ಕಾಪಾಡಿಕೊಳ್ಳುವ ಆಲೋಚನೆಯನ್ನೂ ಒಳಗೊಂಡ ನಿಸರ್ಗಾರಾಧನೆಯ ಮಾದರಿಯೆಂದೇ ಪರಿಭಾವಿಸಲಾಗುತ್ತದೆ. ಕುಡುಗೋಲ ಪ್ರವೇಶಕ್ಕೇ ಸ್ವಯಂನಿಷೇಧ ಹೇರಿಕೊಂಡು ದೇವರ ಕಾಡುಗಳ ಮೂಲಕ ನಮ್ಮ ಪ್ರಾಚೀನರು ಕಾಯ್ದಿಟ್ಟುಕೊಂಡು ಬಂದ ಅಂತರ್ಜಲದ ಮರು ಪೂರಣದ ಕ್ರಮ ಮತ್ತು ಔಷಧೀಯ ಗಿಡಮೂಲಕೆಗಳ ಉಳಿವು-ಅಳಿವು ನಮ್ಮ ಸಂಸ್ಕೃತಿಯ ಪಾರಂಪರಿಕ ಹೆಮ್ಮೆಯೆಂದೂ ಗುರುತಿಸಿಕೊಳ್ಳಲಾಗಿದೆ. ಸತ್ತ ಹಾವಿನ ದೇಹಭಾಗದಲ್ಲಿಯೂ ಉಳಿದುಕೊಳ್ಳಬಹುದಾದ ವಿಷ ಅದರದೇಹ ಕೊಳೆತ ಜಾಗದಲ್ಲಿ ಬೆಳೆಯುವ ಹುಲ್ಲು ತಿನ್ನುವ ದನಕರುಗಳಿಗೆ ವರ್ಗಾವಣೆಗೊಳ್ಳದಿರಲಿ ಎಂಬ ಕಾರಣಕ್ಕಾಗಿ ಹಾವನ್ನೂ ಸುಟ್ಟುಹಾಕುವ ರೂಢಿಯನ್ನು ಬೆಳೆಸಲಾಯಿತು ಎಂದು ವೈಜ್ಞಾನಿಕ ಕಾರಣವನ್ನು ಹೇಳಲಾಗಿದೆ. ಆದರೆ ವೈಜ್ಞಾನಿಕತೆಯ ಜೊತೆಗೆ ಇವೇ ನಂಬಿಕೆ, ಶ್ರದ್ಧೆಯ ಕಾರಣದಿಂದ ಶತಮಾನ ಹೋಗಲಿ ದಶಮಾನದ ಹಿಂದಿನವರೆಗೆ ಕಣ್ಣೆದುರೇ ಉಳಿದುಕೊಂಡಿದ್ದ ನಿಸರ್ಗರಚನೆಗಳು ಹೀಗೆ ದಂದೆಕೋರರ ಕೈಗೆ ಸಿಕ್ಕಿ ನೆಲೆಕಳೆದುಕೊಳ್ಳುವಾಗ ಯಾಕೆ ನಂಬುಗೆಯ ವಕಾಲತ್ತಿನ ಮನಸ್ಸುಗಳು ಎಚ್ಚರಾಗಲೇ ಇಲ್ಲ(ಇನ್ನೂ ಎಚ್ಚರಾಗುತ್ತಲೇ ಇಲ್ಲ)?. ಈಗ ಕಟ್ಟಲಾಗುತ್ತಿರುವ ನಾಗಗೋಪುರಗಳೆಂಬ ಇಸ್ಲಾಮಿಕ್ ಶೈಲಿಗೆ ಹತ್ತಿರವಿರುವ ಸಿಮೆಂಟ್ ನಿರ್ಮಿತ ವಾಸ್ತುರಚನೆಯಲ್ಲಿ ನಾಗ ಬಂದು ನೆಲೆಗೊಳ್ಳಲು ಸಾಧ್ಯವೇ? ಇದಕ್ಕೆಲ್ಲಾ ಬಳಕೆಯಾಗುತ್ತಿರುವ ಹಣದ ಮೂಲಕ್ಕೂ ಒಂದು ಪಾವಿತ್ರ್ಯ ಇರಬೇಕಲ್ಲವೆ? ಅಡ್ಡದಾರಿಯ ಸಂಪಾದನೆ ಮಾಡಿದ ಕಳ್ಳ-ಸುಳ್ಳರ ಜೊತೆಗೆ ನಿಷ್ಪಾಪಿ ಬಡವರೂ ಈ ಹೊಸ ರೂಪಾಂತರಕ್ಕೆ ತೆರಿಗೆ ಕಟ್ಟಿ ಸೋಲುತ್ತಿರುವುದನ್ನು ಈ ನಂಬುಗೆಯ ವಕೀಲರು ಹೇಗೆ ಸಮರ್ಥಿಸುತ್ತಾರೆ? ನಾಗನ ಸಂಸ್ಕಾರಕ್ಕೆಂದು ವಂತಿಗೆ ಕೊಡಲಾಗದವರು ಊರೆಲ್ಲ ಜೋಳಿಗೆ ಹಿಡಿದು ಭಿಕ್ಷೆ ಬೇಡಿದ್ದನ್ನು ಕಂಡಿದ್ದೇನೆ. ಈ ಭಿಕ್ಷೆಯನ್ನೂ ದೇಣಿಗೆಯಾಗಿ ಕಸಿಯಲಾಗುವುದನ್ನು ನಂಬುಗೆ ಎಂದು ಹೇಗೆ ಸಮರ್ಥಿಸಲು ಸಾಧ್ಯ? ಹೇಗಾದರೂ ಮಾಡು ನನ್ನ ಸೇವೆಯನ್ನು ಬಾಕಿ ಇರಿಸಿಕೊಳ್ಳಬಾರದು ಎಂದು ಹುಕುಂ ಕೊಡುವ ನಾಗಪಾತ್ರಿಗಳ 'ನುಡಿ' ಅನೈತಿಕತೆಯನ್ನೂ ಉತ್ತೇಜಿಸುತ್ತದೆಯಲ್ಲವೆ? ಸಂಸ್ಕೃತಿ, ನಂಬುಗೆ, ಧರ್ಮ ಇವೆಲ್ಲಕ್ಕೂ ಕಾರ್ಯರೂಪದ ಅನುಷ್ಠಾನದಷ್ಟೇ ಪ್ರಾಮುಖ್ಯತೆ ಅವುಗಳ ನಿಷ್ಕಳಂಕ/ ಪಾರದರ್ಶಕ ಮುಂದುವರಿಕೆಗೂ ಇದೆಯಲ್ಲವೆ?

ಬೀದಿಯಲ್ಲಿ ಬಿದ್ದ ಮನುಷ್ಯರ ಹೆಣವನ್ನು ನೋಡಿಯೂ ಮುಂಬರಿದರೆ ಸೋಂಕದ ಪಾಪ, ಸತ್ತ ಸರ್ಪನಹಾವಿನ ಹೆಣಕ್ಕಷ್ಟೇ ಸೀಮಿತ ಮಾಡಿಕೊಂಡಿರುವುದರಿಂದ ಕರಾವಳಿಯ ಸಹಕಾರಿ ಬ್ಯಾಂಕುಗಳಲ್ಲಿಯ ಸಾಲದ ದಪ್ತರುಗಳು ಎಷ್ಟು ಪ್ರಮಾಣದಲ್ಲಿ ಬೆಳೆದಿವೆ ಎಂಬುದನ್ನು ಇವರುಗಳೇನಾದರೂ ಗಮನಿಸಿದ್ದಿದೆಯೇ ಓದುಬಿಡಿಸಿದ ಮಕ್ಕಳನ್ನು ಹೋಟೆಲು, ಅಂಗಡಿಗಳಲ್ಲಿ ಒತ್ತೆಯಿಟ್ಟು ದುಡಿಸಿದ ತಾಯ್ತಂದೆಗಳ ಗೋಳಿನ ಚೀಲದಿಂದಲೂ, ಈ ನಾಗ ಮತ್ತು ಸತ್ತನಾಗಗಳ ನೆವದ ಮೂಲಕ ಮಾಡುತ್ತಿರುವ ಲೂಟಿಯನ್ನು ನಂಬಿಕೆಯೆಂದಷ್ಟೇ ಭಾವಿಸಿ ತಣ್ಣಗೆ ಸಮರ್ಥಿಸಿಕೊಳ್ಳಲು ಹೇಗೆ ಸಾಧ್ಯವಾಗುತ್ತದೆ? ದರ್ಶನದ ಸಾಮಾನ್ಯ ನಿಯಮದಂತೆ ದಿನವೊಂದಕ್ಕೆ ಒಂದು ದರ್ಶನ ಮುಗಿಸಿದ ಪಾತ್ರಿಯ ಮೇಲೆ ಮತ್ತೊಂದು ಆಕರ್ಷಣೆಯಾಗಬೇಕೆಂದರೆ ಮುಂದಿನ ದಿನಕ್ಕಾಗಿ ಕಾಯಬೇಕು. ಅದಕ್ಕಾಗಿ ಆತ ಮತ್ತೊಂದು ದಿನದ ವೃತಾಚರಣೆ ಮಾಡಬೇಕೆಂದು ದೇವರು ಬರಿಸಿಕೊಂಡು ಅದನ್ನು ನಂಬಿಕೊಂಡು ಬಂದ ಭೂತಾರಾಧನಾ ಪರಂಪರೆಯವರ ನಂಬಿಕೆ. ಆದರೆ ಜಗತ್ತನ್ನು ೨೧ ಬಾರಿ ಸುತ್ತಿಬಂದವನೆಂದು ಹೇಳಲಾಗುವ ಆ ಕೊಡಲಿರಾಮನನ್ನು ನೆನಪಿಸುವಂತೆ, ಬೆಳಗಿನಿಂದ ಸಂಜೆಯ ತನಕ ದರ್ಶನಕ್ಕೊಂದರಂತೆ ತಲಾ ೨-೩ ಸಾವಿರವನ್ನು ಪೀಕುತ್ತಾ, ಉಟ್ಟ ಬಟ್ಟೆಯಲ್ಲಿಯೇ ಹತ್ತಾರು ದರ್ಶನಗಳನ್ನು ಮಾಡಬಲ್ಲ ನಾಗಪಾತ್ರಿಗಳು ಹಾಕುತ್ತಿರುವ ದುಡಿಮೆಯ ಸ್ಕೆಚ್ಚು ಈ ನಂಬುಗೆಯ ಕಾವಲುಗಾರರಿಗೆ ಯಾಕೆ ದಂದೆ ಎಂದು ಅರ್ಥವಾಗುವುದಿಲ್ಲ? ಈ ನಡುವೆ ಭಾರತದಾದ್ಯಂತ ದೇಶ ಮತ್ತು ಸಂಸ್ಕೃತಿಯನ್ನು ಅತಿಯಾಗಿ ಪ್ರೀತಿಸುವವರ ಬಾಯಲ್ಲಿ ಈಗ ಕಪ್ಪು ಹಣ-ಭ್ರಷ್ಟಾಚಾರದ್ದೇ ಸುದ್ದಿ. ಈ ಧಾರ್ಮಿಕತೆ ಹೆಸರಿನ ಲೂಟಿ ಆ ಭ್ರಷ್ಟಾಚಾರದ ಚಿಂತನೆಯೊಳಗೆ ಬರುವುದಿಲ್ಲವೇ? ನಾಗಪಾತ್ರಿಯಾದವನ ಆದಾಯ ಮತ್ತು ಮಾಮೂಲಿ ದೈವದ ಪಾತ್ರಿಗಳ ಆದಾಯದಲ್ಲಿರುವ ಅಂತರವನ್ನೇನಾದರೂ ಇವರು ಗಮನಿಸಿದ್ದಾರೆಯೇ? ೨೦-೩೦ ವರ್ಷಗಳ ಹಿಂದೆ ನಾಗಪಾತ್ರಿಗಳಾದವರು ಹೀಗೆಯೇ ಸಿರಿವಂತರಾಗಿದ್ದರೇ?

ನಂಬುಗೆಯ ಹೆಸರಿನಲ್ಲಿ ಮರೆಮಾಚಿ ನಡೆಸುತ್ತಿರುವ ಲೂಟಿಗೂ, ಹಳೆಯದು ಹಾಗೆಯೇ ಉಳಿಯಬೇಕೆಂದು ಮಡೆಸ್ನಾನದಂತಹ ಆಯ್ದ ಕೆಲವನ್ನು ಉಳಿಸಿಕೊಳ್ಳಬೇಕೆಂದು ಒದ್ದಾಡುವುದು ಎರಡೂ ಪರಸ್ಪರ ಪೂರಕವಾದ ಕಸರತ್ತುಗಳಲ್ಲವೆ? ಉಂಡ ಎಂಜಲಲ್ಲಿ ದೇಹವನ್ನೂ, ಹುಟ್ಟುಗತಿಯ ಹೆಸರಿನ ನುಡಿಯೆಂಜಲಿನಲ್ಲಿ ಆರ್ಥಿಕವಾದ ಉರುಳಾಟವನ್ನೂ ಉತ್ಪಾದನೆ ಮಾಡಿಕೊಂಡು ಬರುವುದು ಬೇರೆಬೇರೆಯಾದವುಗಳಲ್ಲ. ಆ ಕಾರಣಕ್ಕಾಗಿಯೇ ನಂಬುಗೆಗಳು ಪ್ರಶ್ನಿಸಲ್ಪಟ್ಟರೆ ಸಂಸ್ಕೃತಿಯೆಂಬ ಹೆಸರಿನ ಆಕರ್ಷಕ ಬಟ್ಟೆಯಲ್ಲಿ ಅವಿತಿರಿಸಿಕೊಂಡ ನಿಮ್ಮ ಆಯುಧಗಳು ಮತ್ತು ಈಗ ನಿರಾತಂಕವಾಗಿ ನಡೆಸಲಾಗುತ್ತಿರುವ ತಳವರ್ಗದ ಮೇಲಿನ ದಾಳಿಯ ಯೋಜನೆಗಳು ನಗ್ನವಾಗಿ ಎಲ್ಲರಿಗೂ ಕಾಣಿಸಬಹುದೆಂಬ ಭಯ ನಿಮ್ಮೊಳಗೆ ಇರಬಹುದಲ್ಲವೆ? ನಂಬುಗೆ ಮತ್ತು ಸಂಸ್ಕೃತಿಯ ಬಗೆಗೆ ಮಾತನಾಡುವವರಿಗೆ ಇಂತಹ ಪ್ರಶ್ನೆಗಳನ್ನು ಎದುರಾಗಿ ಉತ್ತರಿಸಿಕೊಳ್ಳುವ ಅಥವಾ ಹಾಗೆ ಆಗುತ್ತಿರುವ ನಂಬುಗೆಯ ಹೆಸರಿನ ಅನಾಚಾರವನ್ನು ತಡೆಯುವ ಹೊಣೆಗಾರಿಕೆಯೂ ಇರಬೇಕಲ್ಲವೆ? ಶತಮಾನದ ನಂಬಿಕೆಯನ್ನು ಗೌರವಿಸಬೇಕೆನ್ನುವವರು ಹತ್ತಾರು ವರ್ಷಗಳ ಹಿಂದಿನ ಕನಿಷ್ಠ ಆರೋಗ್ಯಕರ ಸ್ಥಿತಿಯಾದರೂ ಉಳಿಬೇಕೆಂದು ಆಗ್ರಹಿಸಿಕೊಂಡು ಬರಬೇಕಾದುದು ಕರ್ತವ್ಯವಲ್ಲವೇ? ■

ಹೊಸ ಪುಸ್ತಕ

ರಿಚಾರ್ಡ್ ರಿಚ್ಚಿ
ಸಂ: ರಿಚ್ಚಿ ಗೆಳೆಯರು
ಬೆಲೆ: ರೂ. 100/-

ಜಗತ್ತಿನಾದ್ಯಂತ ಇರುವ ಕನ್ನಡಿಗರನ್ನು ತಮ್ಮ ಮಾತಿನ ಮೋಡಿಯಿಂದ ಬೆಸೆಯುವ ನಗೆಯ ರಾಯಭಾರಿ ರಿಚರ್ಡ್ ಲೂಯಿಸ್ 2500 ನಗೆಹಬ್ಬ ಪೂರೈಸಿದ ಸಂಭ್ರಮದಲ್ಲಿ ಅವರ ಗೆಳೆಯರೆಲ್ಲ ಸೇರಿ ರಿಚರ್ಡ್‌ರ ಶ್ರಮ ಸಾಧನೆಗಳನ್ನು ಗುರುತಿಸಿ ದಾಖಲಿಸುವ ಪ್ರಯತ್ನವಾಗಿ ಈ ಕೃತಿ ಹೊರಬಂದಿದೆ. ರಂಗಭೂಮಿ ನಟರಾಗಿ, ಚಿತ್ರಸಾಹಿತಿಯಾಗಿ, ಕನ್ನಡಪರ ಹೋರಾಟಗಾರರಾಗಿ, ಕಾರ್ಮಿಕ ನಾಯಕರಾಗಿ, ಬದುಕಿನ ಎಲ್ಲಾ ಸ್ಥರಗಳಲ್ಲಿ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ರಿಚರ್ಡ್ ಲೂಯಿಸ್‌ರವರು ತಮ್ಮ ಮನದಾಳದ ಮಾತುಗಳನ್ನು ತೆರೆದಿಟ್ಟಿದ್ದಾರೆ. ಗೆಳೆಯರೂ ಕೂಡ ಇವರ ಒಡನಾಟದ ಬಗ್ಗೆ ಬರೆದಿದ್ದು, ಪ್ರತಿ ಪುಟವೂ ಹಾಸ್ಯದ ಹೊನಲನ್ನು ಹರಿಸುತ್ತದೆ.

ಪ್ರ: **ರಿಚ್ಚಿ ಗೆಳೆಯರು, ಬೆಂಗಳೂರು.**



ಹೊಸ ಶತಮಾನದ ಕಾವ್ಯ
ಸಂ: ಡಾ॥ ಕೆ. ಪರೀಘಾ
ಬೆಲೆ: ರೂ. 160/-

ಹೊಸ ಶತಮಾನದ ಈ ಕಾವ್ಯ ಸಂಕಲನದಲ್ಲಿ ಮೂರು ತಲೆಮಾರುಗಳ ಕಾವ್ಯ ಸ್ಪಂದನವಿದೆ. ವಿವಿಧ ಸಾಂಸ್ಕೃತಿಕ ಚಳವಳಿಗಳ ಜೊತೆಗೆ ದಲಿತ, ಮುಸ್ಲಿಮ್, ಬುಡಕಟ್ಟು ಹಾಗೂ ಗ್ರಾಮೀಣ ಮಹಿಳೆಯರ ಸಂವೇದನೆಗಳನ್ನು ಒಳಗೊಂಡ ವಿಶಿಷ್ಟ ಕಾಲಘಟ್ಟದಲ್ಲಿ ಮೂಡಿಬಂದಿರುವ ಇಲ್ಲಿನ ಅನೇಕ ಕವನಗಳು ಮನುಕುಲದ ವಿಮೋಚನೆಗಾಗಿ ಮಿಡಿಯುತ್ತಿವೆ. ಹೊಸ ತಲೆಮಾರಿನ ಒಲವು, ನಿಲುವುಗಳು ವಾಸ್ತವದ ಕ್ರೌರ್ಯಕ್ಕೆ ಹಿಂಸೆಯ ವಿರುದ್ಧವಾಗಿ ಶಾಂತಿ ಹಾಗೂ ಪ್ರೀತಿಯ ತತ್ವವನ್ನು ಸಾರುತ್ತಿರುವುದು ಗಮನಾರ್ಹವಾಗಿದ್ದು 217 ಕವಿಗಳ ಅನುಭವದ ಒಳನೋಟಗಳನ್ನು ಒಂದು ತೆಕ್ಕೆಗೆ ತಂದಿರುವುದು ಕಾವ್ಯಲೋಕದ ಪಲ್ಲಟಗಳನ್ನು ಅವಲೋಕಿಸಲು ಸಹಕಾರಿಯಾಗಿದೆ.



ಕೆಂಗುಲಾಬಿ
ಲೇ: ಹನುಮಂತ ಹಾಲಿಗೇರಿ
ಬೆಲೆ: ರೂ. 60/-

ಲೈಂಗಿಕ ವೃತ್ತಿ ಜಗತ್ತಿನಲ್ಲಿ ತುತ್ತು ಅನ್ನಕ್ಕಾಗಿ ಈ ಕಾರ್ಯಕರ್ತೆಯರು ನಡೆಸುವ ನಿರಂತರ ಹೋರಾಟದ ಬದುಕನ್ನು ಹಾಗೂ ಅವರು ಅನಿವಾರ್ಯವಾಗಿ ಬೀದಿಗೀಳಿಯಬೇಕಾಗಿ ಬಂದ ದುರಂತವನ್ನು ಹೃದಯಕ್ಕೆ ತಟ್ಟುವಂತೆ ಈ ಕಾದಂಬರಿಯಲ್ಲಿ ನಿರೂಪಿಸಲಾಗಿದೆ. ಬಾಗಲಕೋಟೆಯ ದೇವದಾಸೀ ಪದ್ಧತಿಯಿಂದ ಹಿಡಿದು, ಬೆಂಗಳೂರಿನ ಫ್ಲೈಓವರ್ ಕೆಳಗೆ, ಬೀದಿ ಬದಿಯಲ್ಲಿ ಮೈಮಾರಿಕೊಂಡು ಬದುಕು ಸಾಗಿಸುವ ಇವರು ನಯವಂಚಕರ ತೆವಲುಗಳಿಗೆ ಬಲಿಯಾಗಿ ಅನುಭವಿಸುತ್ತಿರುವ ರೋಗ-ರುಜಿನಗಳ ತಾಕಲಾಟಗಳನ್ನು ಸೂಕ್ಷ್ಮವಾಗಿ ದಾಖಲಿಸಿದ್ದು ಓದುಗರಲ್ಲಿ ತಲ್ಲಣಗಳನ್ನು ಮೂಡಿಸುತ್ತದೆ.

ಪ್ರ: **ಚೆ ಪುಸ್ತಕ, ವೆಂಕಟಾಲ.**

ವಿಚಾರ ಸಾಹಿತ್ಯ
ಸಂ: ಡಾ॥ ಕಾ.ವೆಂ ಶ್ರೀನಿವಾಸಮೂರ್ತಿ
ಬೆಲೆ: ರೂ. 190/-

1970ರ ದಶಕದಿಂದೀಚೆಗಿನ ನಾಲ್ಕು ದಶಗಳ ಕಾಲಘಟ್ಟದ ಪ್ರಾತಿನಿಧಿಕ ಸಂಪುಟದಲ್ಲಿ ವಿಚಾರ ಸಾಹಿತ್ಯಕ್ಕಷ್ಟೇ ಸೀಮಿತವಾಗದೆ ಸಾಹಿತ್ಯ ಬರಹದ ಹಲವು ಹರವುಗಳ ನೋಟವನ್ನಿಲ್ಲಿ ಕಾಣಬಹುದು. ಮೊದಲೆರಡು ದಶಕಗಳಲ್ಲಿ ಜನಮುಖಿಯಾಗಿ ನಡೆದ ದೇಶ ಆನಂತರದ ಎರಡು ದಶಕಗಳಲ್ಲಿ ವಿರುದ್ಧ ದಿಕ್ಕಿನಲ್ಲಿ ಸಾಗಿರುವುದರ ಹಿಂದಿನ ಕಾರಣಗಳನ್ನು ಇಲ್ಲಿನ ಬರಹಗಳು ಸವಿಸ್ತಾರವಾಗಿ ತೆರೆದಿಡುತ್ತವೆ. ನವ ಪುರೋಹಿತಶಾಹಿ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳು ನಿರ್ಮಿಸುವ ಸವಾಲಿನ ವಿರುದ್ಧದ ಹೋರಾಟಕ್ಕೆ ಅಣಿಗೊಳಿಸುವಂತ ಬರಹಗಳಿವೆ.

ಗಂಗಾವತಿಯಲ್ಲಿ ನಡೆದ 78ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಹೊರತಂದ ಈ ಎರಡು ಪುಸ್ತಕಗಳ ಪ್ರಕಾಶಕರು **ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.**



ಒಂದು ಹನಿ ಬೆಳಕು
ಅನು: ಡಾ॥ ಸಿ. ರವೀಂದ್ರನಾಥ್
ಬೆಲೆ: ರೂ. 70/-

ವಿವಿಧ ಜಪಾನಿ ಕವಿಗಳ ಹಾಯ್ಕುಗಳ ಮೂಲಕ, ಜಪಾನಿನ ಸಂಸ್ಕೃತಿ, ಪ್ರಕೃತಿಯ ದರ್ಶನಗಳನ್ನು, ವಿನ್ಯಾಸಗಳನ್ನು, ಹಾಗೂ ಅರ್ಥದ ಹೊಳಹುಗಳನ್ನು, ಕನ್ನಡ ಭಾಷೆಯ ಮೂಸೆಯೊಳಗೆ ಒಗ್ಗಿಸಿರುವ ರೀತಿ ಗಮನ ಸೆಳೆಯುತ್ತದೆ. ಕಾಲದೇಶಗಳನ್ನು ಮೀರಿ ತಗ್ಗಿಗೆ ಹರಿದು ಬಂದಿರುವ ಮೂರು ಸಾಲಿನ ಇಲ್ಲಿನ ಹಾಯ್ಕುಗಳು ಮನುಷ್ಯನ ಮೂಲ ನೆಲೆಗಳಾದ ಪ್ರೇಮ, ಕಾಮ, ಭಯ, ನೋವು, ಆಸೆ, ಆತಂಕ... ಹೀಗೆ ಎಲ್ಲವನ್ನು ಹಿಡಿದಿಟ್ಟಿವೆ. ಕವಿಯ ಸೂಕ್ಷ್ಮತೆ ಮತ್ತು ನಮ್ರತೆಗಳು ಹಾಯ್ಕುವಿನ ಚೌಕಟ್ಟನ್ನು ಮೀರಿ ಅನುಭವಲೋಕದೆಡೆಗೆ ದಾರಿ ತೋರುತ್ತವೆ.

ಪ್ರ: **ಅಂಕಿತ ಪುಸ್ತಕ, ಬೆಂಗಳೂರು**





ಕನಕದಾಸ: ಸಮ ಸಮಾಜದ ಹರಿಕಾರ
ಸಂ: ದಾಸನೂರು ಕೂಸಣ್ಣ
ಬೆಲೆ: ರೂ. 100/-

ವ್ಯಾಸರಾಯರಿಂದ ಪೇಜಾವರರ ಈ ಕಾಲದವರೆಗೆ ನಡೆದ ಕನಕ ದ್ರೋಹದ ಬಗ್ಗೆ ನಾಡಿನ ಅನೇಕ ಖ್ಯಾತ ಬರಹಗಾರರ ಚಿಂತನೆಗಳನ್ನು ಒಳಗೊಂಡ ಸಂಪಾದಿತ ಕೃತಿ ಇದು. ಕನಕದಾಸರ ಸಾಮಾಜಿಕ ಕಳಕಳಿ ಮತ್ತು ಎಚ್ಚರವನ್ನು ಪ್ರಜ್ಞಾಪೂರ್ವಕವಾಗಿ ಮನದಷ್ಟು ಮಾಡಿಸುವ ಹಾಗೂ ಅವರ ಸಾಹಿತ್ಯದಿಂದ ಗುರುತಿಸುವಲ್ಲಿ ಇಲ್ಲಿನ ಲೇಖನಗಳು ಸಫಲವಾಗಿವೆ. ಐನೂರು ವರ್ಷಗಳ ಹಿಂದಿನಿಂದಲೂ ಜಾಗೃತಿ ಹಾಗೂ ಪ್ರತಿರೋಧದ ಪ್ರತೀಕವಾಗಿರುವ ಕನಕದಾಸರ ಅನುಭಾವದ ಆಳ ಹಾಗೂ ಹುಡುಕಾಟದ ಬಗ್ಗೆ ಬೆಳಕು ಚೆಲ್ಲುತ್ತವೆ.

ಪ್ರ: **ಮಾತಂಗ ಪ್ರಕಾಶನ, ಮೈಸೂರು**

ದೆಹಲಿ ಪೊಲೀಸ್ ಇಲಾಖೆಯ 'ವಿಶೇಷ ದಳ' (ದೆಪೊವಿದ) ಸ್ಥಾಪನೆಯಾದದ್ದು ೧೯೮೬ರಲ್ಲಿ. ಆಗ ಅದಕ್ಕೆ ಎರಡು ನಿರ್ದಿಷ್ಟ ಕಾರ್ಯಭಾರಗಳನ್ನು ವಹಿಸಿಕೊಡಲಾಗಿತ್ತು. ಒಂದು, ವ್ಯಾಪಕ ಪ್ರಚಾರ ಪಡೆದಂತಹ ಅಪರಾಧಗಳ ತನಿಖೆ. ಎರಡು, ಭಯೋತ್ಪಾದನೆ ವಿರುದ್ಧ ಕಾರ್ಯಾಚರಣೆ. ಆದರೆ ಅದರ ಇಂದಿನ ಪರಿಸ್ಥಿತಿ 'ಬರಬರುತ್ತಾ ರಾಯರ ಕುದುರೆ ಕತ್ತೆಯಾಯಿತು' ಎನ್ನುವ ಗಾದೆ ಮಾತನ್ನು ನೆನಪಿಸುವಂತಿದೆ. ಒಂದು ಸುಲಿಗೆಕೋರರ ತಂಡವಾಗಿ ಪರಿಣಮಿಸಿರುವ ಅದನ್ನು ಹೇಳುಕೇಳುವವರೇ ಇಲ್ಲದಂತಾಗಿದೆ. 'ಆರೋಪಿ'ಗಳನ್ನು ವಶಕ್ಕೆ ತೆಗೆದುಕೊಳ್ಳುವ ಅಥವಾ 'ಎನ್ಕೌಂಟರ್'ಗಳಲ್ಲಿ ಸಾಯಿಸುವ ಕೃತ್ಯಗಳು ಹೆಚ್ಚೂಕಮ್ಮಿ ಇಚ್ಛಾನುಸಾರವಾಗಿ ನಡೆಯುತ್ತಿವೆ. 'ದೆಪೊವಿದ' ಕಳೆದ ಐದು ವರ್ಷಗಳ ಅವಧಿಯಲ್ಲಿ ಸಲ್ಲಿಸಿರುವ ಆರೋಪಪಟ್ಟಿಗಳನ್ನು ವಿಶ್ಲೇಷಣೆಗೊಳಪಡಿಸಿದಾಗ ಹಲವಾರು ವಿಸ್ಮಯಕಾರಿ ಮಾಹಿತಿಗಳು ಹೊರಬೀಳುತ್ತವೆ. ಮಾಹಿತಿ ಹಕ್ಕು ಕಾಯ್ದೆ ಬಳಸಿ ಪಡೆದುಕೊಂಡ ದಾಖಲೆಗಳ ಪ್ರಕಾರ ನೂರಕ್ಕೆ ಎಪ್ಪತ್ತರಷ್ಟು ಪ್ರಕರಣಗಳಲ್ಲಿ ನ್ಯಾಯಾಲಯಗಳು ಆರೋಪಿಗಳನ್ನು ಖುಲಾಸೆಗೊಳಿಸಿವೆ. ಕಾರಣ? 'ದೆಪೊವಿದ' ಒದಗಿಸಿದ್ದ ಪುರಾವೆಗಳು ನಂಬಲನರ್ಹವಾಗಿದ್ದವು.

ದೆಹಲಿ ಪೊಲೀಸರು ಭಯೋತ್ಪಾದಕರ ಘಟಕಗಳನ್ನು ಭೇದಿಸಿರುವ ಕಥಾನಕಗಳೆಲ್ಲವೂ ಹೆಚ್ಚೂಕಮ್ಮಿ ಒಂದೇ ತೆರನಾಗಿದ್ದು ವಾಕರಿಕೆ ಬರಿಸುವಂತಿವೆ: "ಬಸ್ಸು/ಕಾರು/ರೈಲು ಮೂಲಕ ದೆಹಲಿಗೆ ಆಗಮಿಸಲಿರುವ ಭಯಾನಕ ಉಗ್ರಗಾಮಿಯೊಬ್ಬ ಇಲ್ಲಿ ತನ್ನ ಸಹಚರನೊಬ್ಬನನ್ನು ಭೇಟಿಯಾಗಿ ದಾಳಿಯ ಷಡ್ಯಂತ್ರ ಹೂಡಲಿದ್ದಾನೆ ಅಥವಾ ಶಸ್ತ್ರಾಸ್ತ್ರಗಳನ್ನು ಹಸ್ತಾಂತರಿಸಲಿದ್ದಾನೆ ಎಂಬ ಗುಪ್ತ ಮಾಹಿತಿ ಪೊಲೀಸರಿಗೆ ಸಿಕ್ಕಾಕ್ಷಣ ಪೊಲೀಸ್ ತಂಡವೊಂದನ್ನು ಸ್ಥಳಕ್ಕೆ ರವಾನಿಸಲಾಗುತ್ತದೆ. ಪೊಲೀಸರು ನಡೆಸಲಿರುವ ದಾಳಿಗೆ ಸಾಕ್ಷಿಗಳಾಗುವಂತೆ ಕೆಲವು ಮಂದಿ ಸಾರ್ವಜನಿಕರಲ್ಲಿ ವಿನಂತಿಸಿಕೊಳ್ಳಲಾಗುತ್ತದೆ. ಆದರೆ ಯಾರೂ ಸಾಕ್ಷಿಯಾಗಲೊಪ್ಪುವುದಿಲ್ಲ. ಬಳಿಕ ಎನ್ಕೌಂಟರ್ ನಡೆದು ಉಗ್ರನನ್ನು ಬಂಧಿಸಲಾಗುತ್ತದೆ. ಉಗ್ರನಿಂದ ನಗದು, ಶಸ್ತ್ರಾಸ್ತ್ರ ಹಾಗೂ ಸ್ಫೋಟಕಗಳನ್ನು ವಶಕ್ಕೆ ತೆಗೆದುಕೊಳ್ಳಲಾಗುತ್ತದೆ. ಕೂಡಲೆ ಪತ್ರಿಕಾಗೋಷ್ಠಿಯೊಂದನ್ನು ಕರೆದು ಅಲ್ಲಿ ಉಗ್ರನನ್ನು ಹಾಗೂ ಆತನಿಂದ ವಶಪಡಿಸಿಕೊಂಡ ವಸ್ತುಗಳನ್ನು ಪ್ರದರ್ಶಿಸಲಾಗುತ್ತದೆ." ಇದು ಅಂದಿಗೆ ಭಾರಿ ದೊಡ್ಡಸುದ್ದಿಯಾಗಿಬಿಡುತ್ತದೆ. ದೇಶದೆಲ್ಲೆಡೆಗಳಿಂದ ಅಭಿನಂದನೆಗಳ ಸುರಿಮಳೆಯೇ ಹರಿದುಬರುತ್ತದೆ. 'ದೆಪೊವಿದ'ದ ಕೀರ್ತಿಮುಕುಟಕ್ಕೆ ಮತ್ತೊಂದು ಗರಿ ಸೇರ್ಪಡೆಯಾಗುತ್ತದೆ. ಆದರೆ ಇದರ ಹಿಂದಿರುವ ಅಕ್ರಮ ಬಂಧನ, ಚಿತ್ರಹಿಂಸೆ, ಸುಲಿಗೆ

ಮತ್ತು ಹುಸಿ ಪ್ರಕರಣಗಳ ಘನಘೋರ ಸತ್ಯ ಹೊರಬೀಳುವಷ್ಟರಲ್ಲಿ ಹಲವಾರು ವರ್ಷಗಳೇ ಉರುಳಿರುತ್ತವೆ. ಅಷ್ಟರಲ್ಲಾಗಲೇ 'ಆರೋಪಿ' ತನ್ನ ನೌಕರಿ/ವ್ಯಾಪಾರವನ್ನು ಕಳೆದುಕೊಂಡಿರುತ್ತಾನೆ; ಮಕ್ಕಳು ಶಾಲೆಗೆ ಹೋಗುವುದನ್ನು ನಿಲ್ಲಿಸಿರುತ್ತಾರೆ; ಬಹುತೇಕ ಪ್ರಕರಣಗಳಲ್ಲಿ ಕುಟುಂಬದ ಸದಸ್ಯರು ತೀವ್ರ ಮಾನಸಿಕ ಖಿನ್ನತೆಗೊಳಗಾಗಿರುತ್ತಾರೆ. ಭಯೋತ್ಪಾದನೆಯ ಪ್ರಕರಣಗಳಲ್ಲಿ ದೇಶಭಕ್ತಿ, ರಾಷ್ಟ್ರೀಯ ಭದ್ರತೆ ಮತ್ತು ಪೂರ್ವಗ್ರಹಗಳನ್ನು ನೆಪವಾಗಿ ಬಳಸಿಕೊಂಡರೆ ಸಾಕು, ನ್ಯಾಯಾಲಯದಲ್ಲಿ ಪುರಾವೆಗಳನ್ನು ಹಾಜರುಪಡಿಸದಿದ್ದರೂ ನಡೆಯುತ್ತದೆಂದು ಭಾವಿಸುತ್ತಿರುವಂತಿದೆ 'ದೆಪೊವಿದ'.

ಆರೋಪಿಗಳನ್ನು ಅಪರಾಧಿಗಳೆಂದು ತೀರ್ಮಾನಿಸಿರುವುದು ಕೇವಲ 30 ಪ್ರತಿಶತ ಪ್ರಕರಣಗಳಲ್ಲಿ.

ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ಪ್ರಕಾರ "ಕೆಲವೊಮ್ಮೆ ಪರಸ್ಪರ ವಿರುದ್ಧವಾಗಿರುವ ಪುರಾವೆಗಳಿರುತ್ತವೆ. ಪೊಲೀಸರು ಆಗ ಸಾಂದರ್ಭಿಕ ಪುರಾವೆಗಳ ಮೇಲೆ ಹೆಚ್ಚೆಚ್ಚಾಗಿ ಅವಲಂಬಿಸಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಬಹಳ ಕ್ಲಿಷ್ಟಕರ ಪರಿಸ್ಥಿತಿ ಇರುತ್ತದೆ." ಇದನ್ನು ಕೇಳಿದಾಗ ರಾಶಿಗಟ್ಟಲೆ ಪುರಾವೆಗಳನ್ನಿಟ್ಟುಕೊಂಡು ಆರೋಪಿಗಳ ವಿರುದ್ಧ ಒಂದು ಸದೃಢವಾದ ಪ್ರಕರಣ ತಯಾರಿಸಲೆತ್ನಿಸುವ ಪೊಲೀಸರ ಚಿತ್ರಣವೊಂದು ನಮ್ಮ ಕಣ್ಣ ಮುಂದೆ ಸುಳಿಯುತ್ತದೆ. ಆದರೆ 'ದೆಪೊವಿದ'ದ ಮಟ್ಟಿಗೆ ಇದು ನಿಜವಲ್ಲ. ಅಲ್ಲಿ ಆರೋಪಿಗಳು ಖುಲಾಸೆಗೊಳ್ಳುತ್ತಿರುವುದಕ್ಕೆ ತನಿಖಾ ನೈಪುಣ್ಯದ ಅಭಾವವಾಗಲಿ ಅಥವಾ ಮೂಲಭೂತ ಸೌಕರ್ಯಗಳ ಕೊರತೆಯಾಗಲಿ ಕಾರಣವಲ್ಲ. ಪೊಲೀಸರು ತಮ್ಮ ವಾದಗಳಿಗೆ ಪೂರಕವಾದ ಸಾಕ್ಷ್ಯಾಧಾರಗಳನ್ನು ಒದಗಿಸುವಲ್ಲಿ ಅಸಮರ್ಥರಾಗಿರುವುದೇ ಮುಖ್ಯ ಕಾರಣವಾಗಿದೆ. ನ್ಯಾಯಾಲಯಗಳು ಒಂದಾದ ಮೇಲೊಂದರಂತೆ ನೀಡಿರುವ ತೀರ್ಪುಗಳನ್ನು ನೋಡಿದರೆ ಸಾಕು, ನಗ್ನಸತ್ಯ ವಿಶದವಾಗುತ್ತದೆ.

1. ಮೊಯಿನುದ್ದೀನ್ ದಾರ್ ಪ್ರಕರಣ

ಮೊಯಿನುದ್ದೀನ್ ದಾರ್ ಮತ್ತು ಬಶೀರ್ ಅಹಮದ್ ಶಾ ಕಾಶ್ಮೀರದ ಚಹಾ ವ್ಯಾಪಾರಿಗಳು. ವ್ಯಾಪಾರ ನಿಮಿತ್ತ ಸುಮಾರು 4.5 ಲಕ್ಷ ರೂಪಾಯಿ ಹಿಡಿದುಕೊಂಡು ದಿನಾಂಕ ಜೂನ್ 14, 2005ರಂದು ಅವರು ದೆಹಲಿಗೆ ಆಗಮಿಸಿದ್ದರು. ಎಂದಿನಂತೆ ಕರೋಲ್ ಬಾಗ್ ಪ್ರದೇಶದ ಹೋಟೆಲ್ ಒಂದರಲ್ಲಿ ಉಳಿದುಕೊಂಡಿದ್ದರು. ಅಲ್ಲಿ ಪಕ್ಕದ ರೂಂನಲ್ಲಿದ್ದ ಇನ್ನಿಬ್ಬರು ಕಾಶ್ಮೀರಿಗಳ ಪರಿಚಯವಾಯಿತು. ಎರಡು ದಿನಗಳ ಬಳಿಕ ಒಂದು ಸಂಜೆ ದಾರ್ ಒಬ್ಬರೇ ರೂಂನಲ್ಲಿದ್ದಾಗ ಇಬ್ಬರು ಅಪರಿಚಿತ ವ್ಯಕ್ತಿಗಳು

ಭಯೋತ್ಪಾದನೆ ವಿರುದ್ಧದ ಸಮರ ಮತ್ತು ದೆಹಲಿ ಪೊಲೀಸ್ ಇಲಾಖೆಯ ವಿಶೇಷ ದಳ

ದೇಶದಲ್ಲಿಂದು ಪ್ರಮಾದಗಳು ಆಗಾಗ ಸಂಭವಿಸುತ್ತಿರುವುದಕ್ಕೆ ಒಂದು ಕಾರಣವೇನೆಂದರೆ ಕೆಲವರ ಮಟ್ಟಿಗೆ ಅಮಾಯಕರನ್ನು ಉಗ್ರರೆಂದು ಬಿಂಬಿಸುವುದೇ ಒಂದು ವ್ಯವಸ್ಥಿತ ದಂಧೆಯಾಗಿಬಿಟ್ಟಿದೆ. ಇದರ ಹಿಂದೆ ಮುಂಬಡ್ತಿಯ ಆಮಿಷ, ಅವಕಾಶಗಳು, ನಗದು ಪಾರಿತೋಷಕಗಳು, ಸಾರ್ವಜನಿಕರ ಮಧ್ಯೆ ಹೀರೋ ಆಗಿ ಮಿಂಚುವ ಅವಕಾಶಗಳು, ಇಲಾಖೆಯ ಆಜ್ಞಾವರ್ತಿಗಳಂತಿರುವ ಮಾಧ್ಯಮದ ಒಂದು ವರ್ಗದಿಂದ ವೈಭವೀಕರಣ ಇವೆಲ್ಲವೂ ಅಡಗಿವೆ.

ಮೂಲ: ಮನಿಷಾ ಸೇಠಿ
ಅನು: ಸುರೇಶ್‌ಭಟ್ ಬಾಕ್ರಬೈಲ್

ಬಂದುನಿಂತರು. ಅವರಲ್ಲೊಬ್ಬಾತ 'ದೇಪೋವಿದ'ದ ರವೀಂದರ್ ತ್ಯಾಗಿ. ಮತ್ತೊಬ್ಬ ಭಾರತೀಯ ಭೂಸೇನೆಯ ಮೇಜರ್ ಶರ್ಮ. ಅಲ್ಲಿಂದ ಆರಂಭವಾಯಿತು ದಾರ್‌ನ ದುಃಸ್ವಪ್ನ. ಮುಂದಿನ ಎರಡು ದಿನಗಳ ಕಾಲ ಆ ನಾಲ್ವರೂ ಕಾಶ್ಮೀರಿಗಳನ್ನು ಹೋಟೆಲ್ ರೂಂನಲ್ಲಿ ಕೂಡಿಟ್ಟು ಚಿತ್ರಹಿಂಸೆ ಕೊಟ್ಟು, ಅವಮಾನ ಮಾಡಿ ಬಲಾತ್ಕಾರಪೂರ್ವಕವಾಗಿ ಖಾಲಿ ಹಾಳೆಗಳ ಮೇಲೆ ಸಹಿ ಪಡೆದುಕೊಳ್ಳಲಾಯಿತು. ತ್ಯಾಗಿ ಮತ್ತಾತನ ಅನುಚರರು ಇಡೀ ಹೋಟೆಲನ್ನೇ ತಮ್ಮ ಖಾಸಗಿ ಚಿತ್ರಹಿಂಸಾಗೃಹವಾಗಿ ಪರಿವರ್ತಿಸಿದರು. ಅವರು ಒಟ್ಟು 13 ಮಂದಿ ಕಾಶ್ಮೀರಿಗಳನ್ನು ಅದೇ ಹೋಟೆಲ್‌ನಲ್ಲಿ ಕೂಡಿಹಾಕಿದರು. ನಂತರ ಒಂದು ದಿನ ಅವರನ್ನೆಲ್ಲ ದೌಲಾ ಕುವಾಂ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಅಲ್ಲಿ ಹಿರಿಯ ಅಧಿಕಾರಿಗಳು ದುಡ್ಡು ಕೊಟ್ಟರೆ ಬಿಡುಗಡೆ ಮಾಡುವುದಾಗಿ ಬೇಡಿಕೆ ಇಟ್ಟರು. ದಾರ್, ಬಶೀರ್ ಮತ್ತಿತರರನ್ನು ಹೀಗೆ ಸುಮಾರು ಎರಡು ವಾರಗಳ ಕಾಲ ಹೋಟೆಲ್ ರೂಂನಲ್ಲಿ ಕೂಡಿಹಾಕಿದ ನಂತರ ಒಂದು ದಿನ ಅವರನ್ನು ಐಟಿಒದಲ್ಲಿರುವ ಪೊಲೀಸ್ ಹೆಡ್‌ಕ್ವಾರ್ಟರ್ಸ್‌ಗೆ ಕರೆದೊಯ್ಯಲಾಯಿತು. ಅವರು ವಾಹನದಿಂದ ಕೆಳಗಿಳಿಯುತ್ತಿದ್ದಂತೆ ಮಾಧ್ಯಮ ಪ್ರತಿನಿಧಿಗಳು ಸುತ್ತುವರಿದರು. ಅವರನ್ನೆಲ್ಲ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ರಾಷ್ಟ್ರೀಯ ಹೆದ್ದಾರಿ 8ರಲ್ಲಿ ನಡೆದ ಎನ್ಕೌಂಟರ್ ಒಂದರಲ್ಲಿ ಬಂಧಿಸಲಾಯಿತೆಂದು ತ್ಯಾಗಿ ಮಾಧ್ಯಮಗಳಿಗೆ ತಿಳಿಸಿದರು. ಆರೋಪಿಗಳಿಂದ ವಶಪಡಿಸಿಕೊಂಡದ್ದೆನ್ನಲಾದ ಶಸ್ತ್ರಾಸ್ತ್ರ ಹಾಗೂ ಸ್ಫೋಟಕಗಳನ್ನು ತೋರಿಸಲಾಯಿತು. ಇದೆಲ್ಲವೂ ಫೋಟೊ ಸಮೇತ ಮಾಧ್ಯಮಗಳಲ್ಲಿ ವರದಿಯಾಯಿತು.

ಪ್ರಾಸಿಕ್ಯೂಷನ್ ವಕೀಲರು ನ್ಯಾಯಾಲಯಕ್ಕೆ ಹೇಳಿದ ಕತೆ:

ಜೂನ್ 27, 2005ರಂದು ದೌಲಾ ಕುವಾಂ ಠಾಣೆಯಲ್ಲಿ ಎಸ್‌ಐ ಆಗಿದ್ದ ತ್ಯಾಗಿಯನ್ನು ಸಂಪರ್ಕಿಸಿದ ರಹಸ್ಯ ಮಾಹಿತಿದಾರನೊಬ್ಬ 'ಮಸೂದ್ ಮತ್ತು ಜಹೀದ್ ಎಂಬಿಬ್ಬರು ಕಾಶ್ಮೀರಿ ಉಗ್ರರು ದುಷ್ಕೃತ್ಯ ನಡೆಸಲು ಸಂಚು ಹೂಡುತ್ತಿದ್ದಾರೆ' ಎಂದು ತಿಳಿಸಿದ. ಇದಕ್ಕುತ್ತರಿಸಿದ ತ್ಯಾಗಿ ಇನ್ನಷ್ಟು ಮಾಹಿತಿಗಳನ್ನು ಕಲೆಹಾಕುವಂತೆ ಆದೇಶಿಸಿದ. ಜುಲೈ 1ರಂದು ಮತ್ತೆ ಕರೆಮಾಡಿದ ಮಾಹಿತಿದಾರ 'ಆ ಇಬ್ಬರು ಕಾಶ್ಮೀರಿ ಉಗ್ರರು ಮತ್ತು ಇನ್ನಿಬ್ಬರು ಸಹಚರರು ಸೇರಿಕೊಂಡು ಭಾರಿ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ದೆಹಲಿಗೆ ಸಾಗಿಸುತ್ತಿದ್ದಾರೆ. ನಾಲ್ವರೂ ನೀಲವರ್ಣದ ಟಾಟಾ ಇಂಡಿಕಾ (HR 26 S 0440) ವಾಹನವೊಂದರಲ್ಲಿ ಜೈಪುರದಿಂದ ಬರುತ್ತಿದ್ದಾರೆ' ಎಂದು ತಿಳಿಸಿದ. ತ್ಯಾಗಿ ಕೂಡಲೇ ಒಂದು ಪೊಲೀಸ್ ತಂಡದೊಂದಿಗೆ ಹೆದ್ದಾರಿಯಲ್ಲಿ ಕಾದು ಕುಳಿತರು. ಮಧ್ಯರಾತ್ರಿ ನಂತರ ಬಂದ ನೀಲವರ್ಣದ ಇಂಡಿಕಾ ಕಾರನ್ನು ತಡೆಯಲೆತ್ನಿಸಿದರೂ ಅದು ನಿಲ್ಲಲಿಲ್ಲ. ಪೊಲೀಸರು ಕಾರನ್ನು ಹಿಂಬಾಲಿಸಿದರು. ಕೊನೆಗೆ ಇತ್ತಂಡಗಳ ಮಧ್ಯೆ ಚಕಮಕಿ ಏರ್ಪಟ್ಟು ಗುಂಡು ಹಾರಾಟ ನಡೆಯಿತು. ಕೈಬಾಂಬ್‌ಗಳನ್ನೂ ಸಿಡಿಸಲಾಯಿತು. ಅಂತಿಮವಾಗಿ ಉಗ್ರರನ್ನು ಸೆರೆಹಿಡಿಯಲಾಯಿತು. ಜಹೀದ್ ಎಂಬಾತ ಇನ್ಯಾರೂ ಅಲ್ಲ ಮೊಯಿನುದ್ದೀನ್ ದಾರ್.

ನ್ಯಾಯಾಧೀಶರು ಪಾಟೀಸವಾಲು ಹಾಕುತ್ತಿದ್ದಂತೆ ತ್ಯಾಗಿಯ ಕಟ್ಟುಕತೆ ಬಯಲಾಗತೊಡಗಿತು. ಆ ರಹಸ್ಯ ಮಾಹಿತಿದಾರ ಯಾರು; ಉಗ್ರರ ಸಂಭಾವ್ಯ ದಾಳಿ ಬಗ್ಗೆ ಗುಪ್ತಚರ ಇಲಾಖೆಗಾಗಲಿ ಹಿರಿಯ ಅಧಿಕಾರಿಗಳಿಗಾಗಲಿ ಯಾಕೆ ತಿಳಿಸಿಲ್ಲ ಎಂಬ ಪ್ರಶ್ನೆಗಳಿಗೆ ಉತ್ತರಿಸಲು ತಡವರಿಸಿದರು. ಆಗ ಮಾಹಿತಿದಾರನನ್ನು ಪಾಟೀಸವಾಲಿಗೆ ಒಳಪಡಿಸದೆ ಯಾರಿಗೂ ಶಿಕ್ಷೆ ವಿಧಿಸಲಾಗದೆಂದು ನ್ಯಾಯಾಧೀಶರು ಹೇಳಿದರು.

ಪೊಲೀಸರು ವಶಪಡಿಸಿಕೊಂಡದ್ದೆನ್ನಲಾದ ಭೂಸೇನೆಯ ಸಮವಸ್ತ್ರವೊಂದನ್ನು 'ಉಗ್ರ'ರು ದೆಹಲಿ ಕಂಟೋನ್ಮೆಂಟ್‌ನ ಗೋಪಿನಾಥ್ ಬಜ್ಹಾರ್‌ನಲ್ಲಿರುವ ದರ್ಜಿಯೊಬ್ಬನಿಂದ ಪಡೆದಿದ್ದರೆಂದು ತಿಳಿಸಲಾಗಿತ್ತು. ದರ್ಜಿಯನ್ನು ಪತ್ತೆ ಹಚ್ಚಲು ಹೋಗಿದ್ದ ಪೊಲೀಸ್ ವಾಹನದ ಸಂಖ್ಯೆಯನ್ನೂ (DL 1 LD 1264) ನ್ಯಾಯಾಲಯಕ್ಕೆ ಒದಗಿಸಲಾಗಿತ್ತು. ಆದರೆ ವಾಹನದ ದಿನಚರಿಯನ್ನು ಪರಿಶೀಲಿಸಲಾಗಿ ವಾಹನ ಅಂದು ದಿನವಿಡೀ ಠಾಣೆಯಲ್ಲೇ ಇತ್ತೆಂದು ತಿಳಿದುಬಂತು. ನ್ಯಾಯಾಲಯದಲ್ಲಿ ಸಾಕ್ಷಿ ನುಡಿದ ದರ್ಜಿ ಒಮ್ಮೆ ಸಿದ್ಧ ಯುನಿಫಾರ್ಮ್ ಮಾರಿದ್ದಾಗಿ ಹೇಳಿದರೆ ಮತ್ತೊಮ್ಮೆ ದಾರ್‌ನ ಅಳತೆ ಪ್ರಕಾರ ಹೊಲಿಯಲಾಗಿತ್ತೆಂದು ಹೇಳಿದ. ಮತ್ತಷ್ಟು ಕೂಲಂಕಷವಾಗಿ ಪ್ರಶ್ನಿಸಿದಾಗ ಗುಟ್ಟು ರಟ್ಟಾಯಿತು. ದರ್ಜಿಯ ಅಂಗಡಿ ಇದ್ದುದು ಫುಟ್‌ಪಾತ್ ಮೇಲೆ. ಪೊಲೀಸರಿಗೆ ಮತ್ತು ನಗರಪಾಲಿಕೆಯ ಅಧಿಕಾರಿಗಳಿಗೆ ಹಫ್ತಾ ಕೊಡಲು ಅಸಮರ್ಥನಾದ ಆತ ಪೊಲೀಸರು ಕರೆದಾಗೆಲ್ಲ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುವುದಾಗಿ ಒಪ್ಪಂದ ಮಾಡಿಕೊಂಡಿದ್ದ. ನ್ಯಾಯಾಲಯಕ್ಕೆ ಹಾಜರಾಗುವ ಮುನ್ನ ಆತನನ್ನು ಠಾಣೆಗೆ ಕರೆಸಿದ್ದ ಪೊಲೀಸರು ದಾರ್ ಯಾರೆಂದು ತೋರಿಸಿದ್ದರು.

ದಾರ್ ಕಿಸೆಯಲ್ಲಿ ದೊರೆತ ಪಾಲಂ ವಿಮಾನ ನಿಲ್ದಾಣದ ನಕಾಶೆಯೂ ಉಗ್ರರ ಸಂಚಿಗೆ ಪುರಾವೆಯೆಂದು ಪೊಲೀಸರು ನ್ಯಾಯಾಲಯಕ್ಕೆ ಹೇಳಿದ್ದರು. ಆದರೆ ನಕಾಶೆಯನ್ನು ಉದ್ದಕ್ಕೆ ಒಂದೇ ಬಾರಿ ಮಡಚಿರುವುದನ್ನು ಗಮನಿಸಿದ ನ್ಯಾಯಾಧೀಶರು, ನಕಾಶೆ ಕಿಸೆಯೊಳಗಿದ್ದಿದ್ದರೆ ಎರಡು ಬಾರಿ ಮಡಚಬೇಕಿತ್ತಲ್ಲವೇ ಎಂದು ಪ್ರಶ್ನಿಸಿದಾಗ ಪೊಲೀಸರು ನಿರುತ್ತರರಾದರು. ಪೊಲೀಸರು ನಕಾಶೆಯಲ್ಲಿದ್ದ ಬರಹ ದಾರ್‌ನದ್ದೇ ಎಂದು ಪರೀಕ್ಷಿಸುವ ಗೋಜಿಗೇ ಹೋಗಿರಲಿಲ್ಲ. ಪಾಲಂ ನಿಲ್ದಾಣಾಧಿಕಾರಿಗಳಿಗೆ ಸಂಭಾವ್ಯ ದಾಳಿ ಬಗ್ಗೆ ಮಾಹಿತಿ ಕೊಟ್ಟಿರಲಿಲ್ಲ. ಉಗ್ರರು ಬಳಸಿದ್ದರೆನ್ನಲಾದ ಇಂಡಿಕಾ ಕಾರನ್ನು ಕದಿಯಲಾಗಿತ್ತೆಂದು ಹೇಳಿ ಹಾಜರುಪಡಿಸಲಾದ ಎಫ್‌ಐಆರ್ ಜೆರಾಕ್ಸ್

ಕಾರಣವಾಗಿತ್ತು. ಇಂಡಿಕಾ ಕಾರಿನ ನೋಂದಣಿಯಾಗಿರುವುದು ಘಟನೆ ನಡೆದ ಹಲವು ತಿಂಗಳ ಬಳಿಕ ಎಂಬುದನ್ನು ಗಮನಿಸಿದ ನ್ಯಾಯಾಲಯ, ಪೊಲೀಸರು ಆ ಕಾರನ್ನು ಬಳಸಿರುವುದು ಆರೋಪಿಗಳನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸುವ ಉದ್ದೇಶಕ್ಕಾಗಿ ಎಂಬ ತೀರ್ಮಾನಕ್ಕೆ ಬಂದಿದೆ.

ಪೊಲೀಸರು ಎನ್ಕೌಂಟರ್‌ನ ದಿನ ತಾವು ನಡೆಸಿದ್ದ ಪತ್ರಿಕಾಗೋಷ್ಠಿಯ ವಿಚಾರವನ್ನು ಪ್ರಕರಣದ ದಾಖಲೆಪತ್ರಗಳಲ್ಲಿ ಸೇರಿಸಲು ಮರೆತಿದ್ದರು. ಈ ವಿಷಯ ಹೊರಬಿದ್ದದ್ದು ಎಸ್ಐ ಮಹೇಂದರ್ ಸಿಂಗ್‌ನ ವಿಚಾರಣೆ ವೇಳೆ. ಮಹೇಂದರ್ ಸಿಂಗ್‌ನ ಹೇಳಿಕೆಯಂತೆ ಎನ್ಕೌಂಟರ್ ನಂತರದಲ್ಲಿ ಆತ ಆರೋಪಿಯನ್ನು ಕಾಪಸಹೇರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದ. ಅಲ್ಲಿಗೆ ಬೆಳಗ್ಗೆ 10:45ಕ್ಕೆ ಮುಟ್ಟಿದ್ದ. ಅಲ್ಲಿಂದ ಹೊರಟು ಮಧ್ಯಾಹ್ನ 12 ಗಂಟೆಗೆ ಕರೋಲ್‌ಬಾಗ್‌ನ ಹೋಟೆಲ್ ಬಾಬಾ ಇಂಟರ್‌ನ್ಯಾಷನಲ್‌ಗೆ ತಲುಪಿದ್ದ. ಅಪರಾಹ್ನ 1:30ಕ್ಕೆ ಹೋಟೆಲ್‌ನಿಂದ ಹೊರಟು ಪಟಿಯಾಲಾ ಹೌಸ್ ನ್ಯಾಯಾಲಯಕ್ಕೆ ತೆರಳಿದ್ದ. ಹಾಗಾದರೆ ಪತ್ರಿಕಾಗೋಷ್ಠಿ ನಡೆಸಿದ್ದು ಯಾವಾಗ ಎಂದು ಪ್ರಶ್ನಿಸಿದಾಗ ಗೋಷ್ಠಿ ನಡೆಸಿಲ್ಲವೆಂದು ಉತ್ತರಿಸಿದ. ಆದರೆ ಹಿಂದಿ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ಫೋಟೊ ತೋರಿಸಿದಾಗ ಸಿಂಗ್‌ನ ಮೊಗ ಸಪ್ಪಗಾಯಿತು.

ರವೀಂದರ್ ತ್ಯಾಗಿ ಜೊತೆಗಿದ್ದ ಮೇ। ಶರ್ಮ ಭೂಸೇನೆಯ ಗುಪ್ತಚರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ. ಕಾಶ್ಮೀರದಲ್ಲಿ 6 ವರ್ಷಗಳ ಸೇವೆ ಸಲ್ಲಿಸಿದ ನಂತರ ಲೆ। ಕ। ಆಗಿ ಬಡ್ತಿ ಪಡೆದು ದೆಹಲಿಗೆ ವರ್ಗಾವಣೆಗೊಂಡಿದ್ದ. ಮೊಯಿನುದ್ದೀನ್ ದಾರ್ ಮತ್ತು ಇನ್ನೊರ್ವ ಆರೋಪಿ ಅಬ್ದುಲ್ ಮಜೀದ್ ಭಟ್ ಇವರಿಬ್ಬರೂ ಕಾಶ್ಮೀರದ ಹಲವು ಉಗ್ರಗಾಮಿಗಳು ಪೊಲೀಸರಿಗೆ ಶರಣಾಗತರಾಗುವಲ್ಲಿ ಸಹಕರಿಸಿದ್ದರು. ಈ ವಿಚಾರ ತಿಳಿದು ತಾನೂ ಪ್ರಶಸ್ತಿ, ಪಾರಿತೋಷಕ ಯಾಕೆ ಪಡೆಯಬಾರದೆಂದು ಯೋಚಿಸಿದ ಮೇ। ಶರ್ಮ ತನ್ನ ಮುಂದೆಯೂ ಶರಣಾಗತಿಗೆ ವ್ಯವಸ್ಥೆ ಮಾಡುವಂತೆ ಹೇಳಿದ್ದ. ಆದರೆ ಅವರಿಬ್ಬರೂ ನಿರಾಕರಿಸಿದಾಗ ತ್ಯಾಗಿ ಜೊತೆ ಸೇರಿ ಅವರನ್ನು ಭಯೋತ್ಪಾದಕ ಕೃತ್ಯದ ಪಿತೂರಿಯಲ್ಲಿ ಸಿಲುಕಿಸಿದ. ಈ ವಿಷಯವನ್ನು ನ್ಯಾಯಾಲಯ ಗಮನಿಸಿದೆ. ನ್ಯಾಯಾಲಯದ ಅಂತಿಮ ತೀರ್ಪಿನಲ್ಲಿ "ಆರೋಪಿಗಳು ಸಂಪೂರ್ಣವಾಗಿ ನಿರ್ದೋಷಿಗಳು. ಮೇಲೆ ಹೆಸರಿಸಿರುವ ನಾಲ್ವರು ಪೊಲೀಸ್ ಅಧಿಕಾರಿಗಳು ತಮ್ಮ ಸ್ವಂತ ಲಾಭಕ್ಕೋಸ್ಕರ ಮತ್ತು/ಅಥವಾ ವೈಯುಕ್ತಿಕವಾದ ಸೇಡು ತೀರಿಸುವುದಕ್ಕೋಸ್ಕರ ಆರೋಪಿಗಳ ವಿರುದ್ಧ ಮಿಥ್ಯಾರೋಪ ಸೃಷ್ಟಿಸಿದ್ದಾರೆ. ಅದು ಮೇ। ಶರ್ಮನ ಕೋರಿಕೆ ಮೇರೆಗೆ ಕಾಶ್ಮೀರದಲ್ಲಿ ಉಗ್ರಗಾಮಿಗಳ ಶರಣಾಗತಿಗೆ ಏರ್ಪಾಟು ಮಾಡಲು ನಿರಾಕರಿಸಿದ ದಾರ್ ವಿರುದ್ಧ ಸೇಡು ತೀರಿಸಲೆಂದಿರಬಹುದು ಅಥವಾ ಅನುಚಿತ ಪ್ರಶಸ್ತಿ, ಪದಕಗಳನ್ನು ಪಡೆಯಲೆಂದಿರಬಹುದು" ಎಂದು ಬರೆಯಲಾಗಿದೆ.

2. ಇರ್ಷಾದ್ ಅಲಿ ಪ್ರಕರಣ

ಇರ್ಷಾದ್ ಅಲಿ ಮತ್ತು ಮೊಹಮ್ಮದ್ ಕಮಾರ್ ಎಂಬವರು ಗುಪ್ತಚರ ಇಲಾಖೆಯ ಮಾಹಿತಿದಾರರಾಗಿದ್ದರು. ನಿರಂತರ ಪ್ರಾಣಾಪಾಯದ ಭೀತಿಯನ್ನು ಎದುರಿಸುತ್ತಿದ್ದ ಈ ಜೋಡಿ ಕೊನೆಗೊಮ್ಮೆ ಬೇಸತ್ತು ಆ ಕೆಲಸಕ್ಕೆ ವಿದಾಯ ಹೇಳಲು ಬಯಸಿತ್ತು. ಒಮ್ಮೆ ಇವರನ್ನು ಕಾಶ್ಮೀರದ ಬಂಡಾಯಕೋರ ಕ್ರಾಂತಿಕಾರಿ

ಗುಂಪೊಂದರೊಳಗೆ ನುಸುಳುವಂತೆ ಒತ್ತಾಯಿಸಿದಾಗ ಇಬ್ಬರೂ ನಿರಾಕರಿಸಿದರು. ಆಗ ಅವರಿಬ್ಬರನ್ನು 'ದೆಪೊವಿದ'ದ ಮೂಲಕ ಅಪಹರಿಸಿ, ಹಲವು ತಿಂಗಳ ಕಾಲ ಕೂಡಿಹಾಕಿ ಚಿತ್ರಹಿಂಸೆ ನೀಡಲಾಯಿತು. ಮುಂದೊಂದು ದಿನ ಅವರನ್ನು ಅಲ್ ಬದರ್ ಉಗ್ರರೆಂದು ಮಾಧ್ಯಮಗಳ ಮುಂದೆ ಪ್ರದರ್ಶಿಸಲಾಯಿತು. ದೆಹಲಿ ಗಡಿಯಲ್ಲಿರುವ ಮುತಬ್ರಾ ಚೌಕ್‌ನಲ್ಲಿ ಬಸ್ಸಿನಿಂದ ಕೆಳಗಿಳಿಯುತ್ತಿದ್ದಾಗ ಮದ್ದುಗುಂಡು ಮತ್ತು ಸ್ಫೋಟಕಗಳ ಸಮೇತ ಅವರನ್ನು ಸೆರೆಹಿಡಿಯಲಾಯಿತೆಂದು ಹೇಳಲಾಯಿತು. ಈ ಪ್ರಕರಣದಲ್ಲಿಯೂ ಪ್ರಮುಖ ಪಾತ್ರ ವಹಿಸಿದಾತ ದೆಪೊವಿದದ ರವೀಂದರ್ ತ್ಯಾಗಿ.

ಕೊನೆಗೆ ಪ್ರಕರಣ ಹೈಕೋರ್ಟಿನ ಮೆಟ್ಟಿಲೇರಿದಾಗ ಸಿಬಿಐ ತನಿಖೆಗೆ ಆದೇಶಿಸಲಾಯಿತು. ಆರೋಪಿಗಳ ದೂರವಾಣಿ ಕರೆಗಳ ದಾಖಲೆಯನ್ನು ಪರಿಶೀಲಿಸಿದಾಗ ಅವರಿಬ್ಬರೂ ಸುದೀರ್ಘ ಕಾಲದಿಂದ ಗುಪ್ತದಳದೊಂದಿಗೆ ಸಂಪರ್ಕದಲ್ಲಿದ್ದ ವಿಷಯ ಬಹಿರಂಗಗೊಂಡಿತು. ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದ ಬಸ್ ಟಿಕೆಟುಗಳು ಅವರನ್ನು ಬಂಧಿಸಲಾಗಿತ್ತೆಂದು ಹೇಳಲಾದ ದಿನದ್ದಾಗಿರಲಿಲ್ಲ, ಹಿಂದಿನ ದಿನದ ಟಿಕೆಟುಗಳಾಗಿದ್ದವು. ಸಿಬಿಐ ತನ್ನ ಅಂತಿಮ ವರದಿಯಲ್ಲಿ 'ದೆಪೊವಿದ'ದ ರವೀಂದರ್ ತ್ಯಾಗಿ, ವಿನಯ್ ತ್ಯಾಗಿ ಮತ್ತು ಸುಭಾಷ್ ವತ್ಸ್ ಎಂಬ ಮೂವರು ಅಧಿಕಾರಿಗಳ ವಿರುದ್ಧ ಕೆಲವು ಗುರುತರ ಆರೋಪಗಳನ್ನು ಹೊರಿಸಿದೆ. ಮೂವರೂ ನ್ಯಾಯಾಲಯದಲ್ಲಿ ಪ್ರಮಾಣವಚನ ಸ್ವೀಕರಿಸಿ ಸುಳ್ಳುಸಾಕ್ಷಿ ನುಡಿದಿದ್ದಾರಲ್ಲದೆ ಸುಳ್ಳುಸಾಕ್ಷ್ಯಗಳನ್ನೂ ಸೃಷ್ಟಿಸಿದ್ದಾರೆಂದು ಹೇಳಿದ ಸಿಬಿಐ ಅವರ ವಿರುದ್ಧ ಕಾನೂನುಕ್ರಮ ಜರುಗಿಸಲು ಸೂಚಿಸಿದೆ. ಇದರ ಬಳಿಕ ಸಿಬಿಐ ಇನ್ಸ್‌ಪೆಕ್ಟರ್ ಸಂತೋಷ್ ಕುಮಾರ್ ವಿನಯ್ ತ್ಯಾಗಿ ತನಗೆ ಬೆದರಿಕೆ ಹಾಕುತ್ತಿದ್ದಾನೆಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ದೂರು ಕೊಟ್ಟಿರುವ ಘಟನೆಯೂ ನಡೆದಿದೆ. ಇದುವರೆಗೂ ಈ ದುಷ್ಟ ಅಧಿಕಾರಿತ್ರಯರ ವಿರುದ್ಧ ಯಾವುದೇ ಕಾನೂನುಕ್ರಮ ಜರುಗಿಸಲಾಗಿಲ್ಲ.

3. ಇಂಡಿಯನ್ ಮಿಲಿಟರಿ ಅಕಾಡೆಮಿ ದಾಳಿ ಪ್ರಕರಣ

2005ರಲ್ಲಿ ಮತ್ತೊಮ್ಮೆ ತಮ್ಮ 'ಶೌರ್ಯ'ವನ್ನು ಮೆರೆದ ದೆಪೊವಿದದ ಅಧಿಕಾರಿಗಳು ತಪ್ಪದೆ ಪತ್ರಿಕಾಗೋಷ್ಠಿಯೊಂದನ್ನು ಕರೆದು ಲಷ್ಕರ್-ಎ-ತಯ್ಯಬದವರೆನ್ನಲಾದ ನಾಲ್ವರು ಭಯೋತ್ಪಾದಕರನ್ನು ಪ್ರದರ್ಶಿಸಿದರು. ಅವರನ್ನು ದೆಹಲಿಯ ಉತ್ತಮ್‌ನಗರ ಎಂಬಲ್ಲಿ ನಡೆದ ಎನ್ಕೌಂಟರ್ ಒಂದರಲ್ಲಿ ಬಂಧಿಸಲಾಯಿತು; ಅವರು ಇಂಡಿಯನ್ ಮಿಲಿಟರಿ ಅಕಾಡೆಮಿ ಮೇಲೆ ಭಾರಿ ದಾಳಿಯೊಂದನ್ನು ನಡೆಸಲು ಉದ್ದೇಶಿಸಿದ್ದರೆಂದು ಎಂದಿನ ಪುರಾಣ ಹೇಳಿ ಮಾಧ್ಯಮಗಳಲ್ಲಿ ಭಾರಿ ಪ್ರಚಾರ ಗಿಟ್ಟಿಸಿಕೊಂಡರು.

5 ವರ್ಷಗಳ ಕಾಲ ವಿಚಾರಣೆ ನಡೆದ ಬಳಿಕ ನ್ಯಾಯಾಲಯ ಇದೊಂದು ಅಮಾಯಕರನ್ನು ಸಿಲುಕಿಸುವ ಪೂರ್ವಯೋಜಿತ ಕಾರ್ಯಾಚರಣೆ ಎಂಬ ತೀರ್ಮಾನಕ್ಕೆ ಬಂದಿದೆ. ಪಾಟೀಸವಾಲಿನ ಸಮಯ ದೆಪೊವಿದದ ಸುಳ್ಳುಗಳು, ವಾಸ್ತವಾಂಶಗಳ ತಿರುಚುವಿಕೆ ಮತ್ತು ದ್ವಂದ್ವ ಹೇಳಿಕೆಗಳೆಲ್ಲವೂ ಬಯಲಾದವು. ಹಾರೂನ್ ಎಂಬೊಬ್ಬ ಆರೋಪಿ ವೆಸ್ಟರ್ನ್ ಯೂನಿಯನ್ ಮೂಲಕ ಕಳುಹಿಸಿದ ದುಡ್ಡನ್ನು ಬಳಸಿಕೊಂಡ ಲಷ್ಕರ್-ಎ-ತಯ್ಯಬ ಅದನ್ನು ಈ ದಾಳಿಯ ಯೋಜನೆಗೆ ಬಳಸಿತ್ತೆಂದು ಪೊಲೀಸರು ವಾದಿಸಿದ್ದರು. ವಾಸ್ತವದಲ್ಲಿ ಹಾರೂನ್ ಒಮ್ಮೆ ಸಿಂಗಾಪುರಕ್ಕೆ ಹೋಗುವಾಗ ಚಿಕ್ಕಪ್ಪನಿಂದ ಪಡೆದಿದ್ದ ಸಾಲವನ್ನು ವೆಸ್ಟರ್ನ್ ಯೂನಿಯನ್ ಮೂಲಕ ಮರಳಿಸಿದ್ದ. ಹಾರೂನ್ ಮತ್ತು ಪಾಕಿಸ್ತಾನದಲ್ಲಿರುವ ಆತನ ಸಂಪರ್ಕವ್ಯಕ್ತಿಯ ನಡುವಿನ ಈಮೇಲ್‌ಗಳೆಂದು ಪೊಲೀಸರು ಹಾಜರುಪಡಿಸಿದ ದಾಖಲೆಗಳೆಲ್ಲವೂ ಪೊಲೀಸರೇ ತಯಾರಿಸಿದ್ದ ನಕಲಿ ದಾಖಲೆಗಳೆಂದು ಸಾಬೀತಾಯಿತು.

ಮತ್ತೊಬ್ಬ ಆರೋಪಿ ಇಫ್ತಿಕಾರ್ ಡೆಹರಾಡೂನ್‌ನ ಶಿಕ್ಷಣ ಸಂಸ್ಥೆಯೊಂದರಲ್ಲಿ ಬಯೊಟೆಕ್ನಾಲಜಿ ವಿದ್ಯಾರ್ಥಿಯಾಗಿದ್ದವನು. ಇಫ್ತಿಕಾರ್ ಪ್ರಸಕ್ತ ಪ್ರಕರಣದಲ್ಲಿ ಸಂಪೂರ್ಣವಾಗಿ ಭಾಗಿಯಾಗಿದ್ದನೆಂದು ಪೊಲೀಸರು ವಾದಿಸಿದ್ದರು. ಇಫ್ತಿಕಾರ್ ಬಳಿ ಐಎಂಎ ಪಥಸಂಚಲನದ ವೀಕ್ಷಣೆಗಾಗಿದ್ದ ಒಂದು ಪಾಸ್ ಮತ್ತೊಂದು ದಿನಚರಿ ದೊರೆತಿದ್ದು ಅವನ್ನು ಮುಟ್ಟುಗೋಲು

ಲೇಖಕರಿಗೆ ಸೂಚನೆ

ಲೇಖಕರು ತಮ್ಮ ಲೇಖನದ ಮೂಲ ಪ್ರತಿಯನ್ನು ಮಾತ್ರ ಕಳುಹಿಸಬೇಕು. ಈ ಹಿಂದೆಯೇ ತಿಳಿಸಿದ್ದರೂ ಕೆಲ ಲೇಖಕರು ಝೆರಾಕ್ಸ್ ಪ್ರತಿಗಳನ್ನು ಈಗಲೂ ಕಳುಹಿಸುತ್ತಿದ್ದಾರೆ. ಅವುಗಳನ್ನು ಪರಿಗಣಿಸುವುದಿಲ್ಲ. ಬೇರೆ ಪತ್ರಿಕೆಗಳಿಗೆ ಕಳುಹಿಸಿದ ಲೇಖನವನ್ನು 'ಸಂವಾದ'ಕ್ಕೂ ಕಳುಹಿಸಿದ್ದಲ್ಲಿ ಆ ಬಗ್ಗೆ ತಿಳಿಸಬೇಕು. 'ಸಂಪಾದಕರೊಂದಿಗೆ ಸಂವಾದ'ಕ್ಕೆ ಬರೆಯುವ ಬರಹಗಳು ಕನಿಷ್ಠ ಒಂದು ಸಾವಿರ ಪದಗಳ ಮಿತಿಯಲ್ಲಿರಬೇಕು. ಉಳಿದ ಲೇಖನಗಳು ಎರಡು ಸಾವಿರ ಪದಗಳ ಆಸುಪಾಸಿನಲ್ಲಿರಬೇಕು. ದೀರ್ಘವಾದ ಲೇಖನಗಳನ್ನು ಯಾವ ಕಾರಣಕ್ಕೂ ಪ್ರಕಟಿಸುವುದಿಲ್ಲ. ಲೇಖನಗಳನ್ನು ಇ-ಮೈಲ್ ಮೂಲಕ ಕಳುಹಿಸುವವರು 'ನುಡಿ' ತಂತ್ರಾಂಶದಲ್ಲಿ ಟೈಪ್ ಮಾಡಿಸಿ **Page Maker** ಅಥವಾ **Word File** ನಲ್ಲಿ ಮಾತ್ರ ಇ-ಮೈಲ್ ಮಾಡಬೇಕು ಹಾಗೂ ಲೇಖನದೊಂದಿಗೇ ತಮ್ಮ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಕಳುಹಿಸಬೇಕು.-ಸಂ.

ಹಾಕಿಕೊಳ್ಳಲಾಗಿತ್ತೆಂದು ಪೊಲೀಸರು ನ್ಯಾಯಾಲಯಕ್ಕೆ ತಿಳಿಸಿದ್ದರು. ಸದರಿ ದಿನಚರಿಯ ಒಂದು ಹಾಳೆಯಲ್ಲಿ ಆತ ಖುರಾನ್‌ನ ಪ್ರಚೋದನಕಾರಿ ವಾಕ್ಯಗಳನ್ನು ಹಾಗೂ 2002ರ ಗುಜರಾತ್ ಘಟನೆಗಳಿಗೆ ಪ್ರತೀಕಾರ ತೀರಿಸುವೆನೆಂದು ಬರೆದಿದ್ದನೆಂದೂ ಹೇಳಿದ್ದರು. ('ದೆಪೊವಿದ' ವಸ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಾಗ ಸ್ವತಂತ್ರ ಸಾರ್ವಜನಿಕ ಸಾಕ್ಷಿಗಳ ಸಹಿ ಪಡೆಯುವ ಅಭ್ಯಾಸ ಇಟ್ಟುಕೊಂಡಿಲ್ಲ). ವಾಸ್ತವದಲ್ಲಿ ಪಾಸ್ ಐದು ತಿಂಗಳು ಹಿಂದಿನದಾಗಿತ್ತು. ಐಎಂಎ ಪರೇಡ್ ಕಾರ್ಯಕ್ರಮ ಉಗ್ರರ ದಾಳಿಯ ಸಂಚಿಗೆ ಮೊದಲೇ ನಡೆದುಹೋಗಿತ್ತು. ಡೆಹರಾಡೂನ್‌ಗೆ ತೆರಳಿ ಇಫ್ತಿಕಾರ್ ನಿವಾಸಸ್ಥಳದ ಮೇಲೆ ದಾಳಿ ನಡೆಸಿದ್ದ ಅಧಿಕಾರಿ ಯಾರೆಂದು ನ್ಯಾಯಾಲಯ ಕೇಳಿದಾಗ ಪೊಲೀಸರು ನಿರುತ್ತರರಾದರು. ನ್ಯಾಯಾಲಯ ದಿನಚರಿಯಲ್ಲಿದ್ದ ಖುರಾನ್‌ನ ವಾಕ್ಯಗಳು ಪ್ರಚೋದನಕಾರಿಯಾಗಿರಲಿಲ್ಲವೆಂದು ಅಭಿಪ್ರಾಯಪಟ್ಟಿತು. ಗುಜರಾತ್ 2002ರ ಪ್ರತೀಕಾರ ತೀರಿಸುವೆನೆಂದು ಬರೆದದ್ದು ಹಿಂದಿಯಲ್ಲೇ ಅಥವಾ ಇಂಗ್ಲಿಷ್‌ನಲ್ಲೇ ಎಂಬ ಪ್ರಶ್ನೆಗೂ ಪೊಲೀಸರಿಂದ ಉತ್ತರಿಸಲಾಗಿಲ್ಲ. ಪೊಲೀಸರು ಅದನ್ನು ಬಲವಂತವಾಗಿ ತನ್ನ ಕೈಲಿ ಬರೆಸಿದ್ದರೆಂದು ಇಫ್ತಿಕಾರ್ ನೀಡಿದ ಹೇಳಿಕೆಯ ಮೇಲೆ ನ್ಯಾಯಾಲಯ ವಿಶ್ವಾಸ ವ್ಯಕ್ತಪಡಿಸಿತು. ('ಗುಜರಾತ್ 2002ಕ್ಕೆ ಪ್ರತೀಕಾರ' ಎಂಬ ಸಿದ್ಧಾಂತವನ್ನು ಮಹಾರಾಷ್ಟ್ರದ ಎಟಿಎಸ್‌ನಿಂದ ಎರವಲು ಪಡೆದಿರುವಂತಿದೆ). ವಿಶೇಷ ದಳವನ್ನು ತರಾಟೆಗೆ ತೆಗೆದುಕೊಂಡ ನ್ಯಾಯಾಲಯ ಇಡೀ ಕಾರ್ಯಾಚರಣೆಯ ರೂವಾರಿಯೇ 'ದೆಪೊವಿದ' ಎಂದು ಸ್ಪಷ್ಟವಾಗಿ ಹೇಳಿದೆ.

4. ಏರೊನಾಟಿಕಲ್ ಎಂಜಿನಿಯರ್ ಇಮ್ರಾನ್ ಕೀರ್ಮಾನಿ ಪ್ರಕರಣ

ವಾಯುಯಾನ ತಂತ್ರಜ್ಞಾನದಲ್ಲಿ ಎಂಜಿನಿಯರಿಂಗ್ ಶಿಕ್ಷಣ ಪಡೆದ ಇಮ್ರಾನ್ ಕೀರ್ಮಾನಿ ಎಂಬಾತನನ್ನು 2006ರ ನವೆಂಬರ್‌ನಲ್ಲಿ ಬಂಧಿಸಲಾಯಿತು. ಇಮ್ರಾನ್ ದೆಹಲಿಯಲ್ಲಿ 9/11ರ ಮಾದರಿಯ ದಾಳಿಯೊಂದನ್ನು ನಡೆಸಲು ಸಂಚು ರೂಪಿಸುತ್ತಿದ್ದನೆಂದು ಆರೋಪಿಸಿ ಎಂದಿನಂತೆ ಆತನನ್ನು ಮಾಧ್ಯಮಗಳೆದುರು ಪ್ರದರ್ಶಿಸಲಾಯಿತು.

ಈ ಪ್ರಕರಣದ ತೀರ್ಪು ಹೊರಬೀಳಲು ಸುಮಾರು 5 ವರ್ಷಗಳು ಹಿಡಿದವು. ರವೀಂದರ್ ತ್ಯಾಗಿ, ಎಸ್‌ಐ ಆರ್.ಎಸ್. ಶೆಹರಾವತ್, ರಮೇಶ್ ಲಾಂಬಾ ಮತ್ತು ಎಸಿಪಿ ಎಸ್.ಕೆ. ಯಾದವ್ ಇವರು ತಮಗೆ ಒಳಸಂಚಿನ ಕುರಿತಂತೆ ರಹಸ್ಯ ಮಾಹಿತಿ ಬಂದಿತ್ತೆಂದು ನ್ಯಾಯಾಲಯಕ್ಕೆ ಹೇಳಿಕೆಯಿತ್ತಿದ್ದರು. ಆದರೆ ಈ ಹೇಳಿಕೆಗಳನ್ನು ಕ್ಷುಲ್ಲಕವೆಂದು ಕರೆದ ನ್ಯಾಯಾಲಯ ಅದನ್ನೆಲ್ಲ ತಳ್ಳಿಹಾಕಿತು. ಕೀರ್ಮಾನಿಯಿಂದ ಆರ್‌ಡಿಎಕ್ಸ್‌ಅನ್ನು ವಶಪಡಿಸಿಕೊಳ್ಳಲಾಗಿತ್ತೆಂದು ಪೊಲೀಸರು ವಾದಿಸಿದ್ದರು. ಆದರೆ ವಿಧಿವಿಜ್ಞಾನ ಪ್ರಯೋಗಶಾಲೆಯ ವರದಿ ಇದನ್ನು ಅಲ್ಲಗಳೆದಿದೆ. ಪೊಲೀಸರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುವುದೂ ನ್ಯಾಯಾಲಯದ ಗಮನಕ್ಕೆ ಬಂದಿದೆ. ಮೊದಲು ಎರಡು ಪುಟಗಳಷ್ಟಿದ್ದ ದಾಖಲೆಪತ್ರವೊಂದು ಆರೋಪಪಟ್ಟಿ ಜೊತೆ ಏಳು ಪುಟಗಳೊಂದಿಗೆ ಕಾಣಿಸಿಕೊಂಡದ್ದು ಹೇಗೆಂದು ನ್ಯಾಯಾಲಯ ಪ್ರಶ್ನಿಸಿದಾಗ ಸಮರ್ಪಕ ಉತ್ತರ ಬಂದಿಲ್ಲ. ಅದಲ್ಲದೆ ಲಷ್ಕರ್ ಉಗ್ರನನ್ನು ಬಂಧಿಸಿದ್ದೇವೆಂದಿರುವ ಪೊಲೀಸರು ತರುವಾಯದಲ್ಲಿ ಉಗ್ರರ ಅಡಗುತಾಣವನ್ನು ಪತ್ತೆಹಚ್ಚಲು ಯಾವುದೇ ಪ್ರಯತ್ನ ಮಾಡದಿರುವುದು ವಿಚಿತ್ರವಾಗಿದೆ ಎಂದೂ ನ್ಯಾಯಾಲಯ ಟೀಕಿಸಿದೆ.

5. 2008ರ ದೆಹಲಿ ಸ್ಫೋಟ ಪ್ರಕರಣ

● 2008ರ ದೆಹಲಿ ಸ್ಫೋಟ ಪ್ರಕರಣದಲ್ಲಿ ಶಹಜ್ಞಾದ್ ಎಂಬಾತನನ್ನು ಬಂಧಿಸಿದ ದೆಪೊವಿದ, ಆತ ಇಂಡಿಯನ್ ಮುಜಾಹಿದೀನ್‌ನ ವಾಯುಸೇನಾ ವಿಭಾಗದ ಮುಖ್ಯಸ್ಥನೆಂದೂ ಪೈಲಟ್ ತರಬೇತು ಪಡೆದಿದ್ದನೆಂದೂ ಆರೋಪಿಸಿತು. ಆದರೆ ಶಹಜ್ಞಾದ್ ಎಂದೂ ಪೈಲಟ್ ಕೋರ್ಸಿಗೆ ಸೇರಿರಲಿಲ್ಲ; ಆತನಿಗೆ ವಿಮಾನ ಹಾರಾಟದ ಬಗ್ಗೆ ಏನೇನೂ ಅರಿಯದೆಂದು ವಿಚಾರಣೆ ವೇಳೆ ತಿಳಿದುಬಂತು. ಹೀಗೆ ದೆಪೊವಿದದ ಮತ್ತೊಂದು ಕಪೋಲಕಲ್ಪಿತ ಕತೆ ಪುರಾವೆ ಮತ್ತು ಕಾನೂನುಗಳ ಪರೀಕ್ಷೆಯನ್ನು ಎದುರಿಸಲಾಗದೆ ಅವಸಾನಗೊಂಡಿತು.

● ದೆಹಲಿ ಸ್ಫೋಟದ ಮತ್ತೊರ್ವ ಆರೋಪಿ ಮೊಹಮ್ಮದ್ ಸಲ್ಮಾನ್ ಸ್ಫೋಟ ಕೃತ್ಯಗಳಲ್ಲಿ ಭಾಗಿಯಾಗಿರುವುದನ್ನು ಸಾಬೀತುಪಡಿಸುವಂತೆ ನ್ಯಾಯಾಲಯ ಹೇಳಿದಾಗ ಸರಕಾರಿ ವಕೀಲರು ಸಾಕ್ಷ್ಯಾಧಾರಗಳನ್ನು ಹಾಜರುಪಡಿಸುವ ಬದಲಿಗೆ ಭಯೋತ್ಪಾದನೆಯಿಂದಾಗಿ ದೇಶ ಎದುರಿಸುತ್ತಿರುವ ಸವಾಲುಗಳ ಬಗ್ಗೆ ಭಾಷಣ ಬಿಗಿದರು. ಸಲ್ಮಾನ್ ಮಾಡಿದ್ದ ನಿರುಪದ್ರವಿ, ದೂರವಾಣಿ ಕರೆಗಳಿಂದ ಅದು ಹೇಗೆ ಆತ ತಪ್ಪಿತಸ್ಥನೆಂದು ಸಾಬೀತಾಗುತ್ತದೆಂದು ನ್ಯಾಯಾಧೀಶರು ಕೇಳಿದಾಗ ಉತ್ತರವಾಗಿ ಸಿಕ್ಕಿದ್ದು ಭಯೋತ್ಪಾದನೆ ವಿರುದ್ಧ ಸಮರದ ಬಗ್ಗೆ ಮತ್ತೊಂದು ಭಾಷಣ. ಪ್ರಾಯಶಃ ನ್ಯಾಯಾಲಯ ತನ್ನ ಭಾಷಣವನ್ನೇ ಪುರಾವೆಯಾಗಿ ಪರಿಗಣಿಸುವುದೆಂದು ಸರಕಾರಿ ವಕೀಲರ ನಿರೀಕ್ಷೆಯಾಗಿದ್ದಿರಬೇಕು.

6. ಕನಾಟ್ ಪ್ಲೇಸ್ 'ಎನ್ಕೌಂಟರ್'

1997ರಲ್ಲಿ ದೆಹಲಿಯ ಕನಾಟ್ ಪ್ಲೇಸ್‌ನಲ್ಲಿ ನಡೆದ 'ಎನ್ಕೌಂಟರ್' ಒಂದರಲ್ಲಿ ಇಬ್ಬರು ವಾಣಿಜ್ಯೋದ್ಯಮಿಗಳನ್ನು ಕೊಲ್ಲಲಾಯಿತು. ಆ 'ಎನ್ಕೌಂಟರ್' ನಡೆಸಿದವರು ಎಸ್.ಎಸ್. ರಾಠಿ ನೇತೃತ್ವದ ಇದೇ ವಿಶೇಷ ದಳದ ಪೊಲೀಸರು. ಅಂತಿಮವಾಗಿ 'ಎನ್ಕೌಂಟರ್' ನಡೆಸಿದ ರಾಠಿ ಮತ್ತಾತನ 9 ಸಹಚರರಿಗೆ ನ್ಯಾಯಾಲಯ ಶಿಕ್ಷೆ ವಿಧಿಸಿತು. ಆರೋಪಿಗಳು ಮೇಲ್ಮನವಿ ಸಲ್ಲಿಸುತ್ತಾ ಸುಪ್ರೀಂ ಕೋರ್ಟ್ ತನಕ ಹೋದರೂ ಪ್ರಯೋಜನವಾಗಿಲ್ಲ. ಮೇ 2011ರಲ್ಲಿ ಸುಪ್ರೀಂ ಕೋರ್ಟ್ ಕೂಡಾ ಶಿಕ್ಷೆಯನ್ನು ಎತ್ತಿಹಿಡಿಯಿತು.

7. ಅನ್ಸಲ್ ಪ್ಲಾಜಾ 'ಎನ್ಕೌಂಟರ್'

2002ರಲ್ಲಿ ದೆಹಲಿಯ ಅನ್ಸಲ್ ಪ್ಲಾಜಾದಲ್ಲಿ ದೆಪೊವಿದ ಮತ್ತು 'ಕಾಶ್ಮೀರಿ ಉಗ್ರ'ರ ನಡುವೆ ನಡೆದ 'ಎನ್ಕೌಂಟರ್' ಒಂದರಲ್ಲಿ 'ಉಗ್ರರು' ಸಾವಿಗೀಡಾದರೆನ್ನಲಾಯಿತು. ದೆಪೊವಿದ ಮತ್ತೊಮ್ಮೆ ಭಾರಿ ಹೊಗಳಿಕೆಗೆ ಪಾತ್ರವಾಯಿತು. ಸ್ಥಳಕ್ಕೆ ಧಾವಿಸಿಬಂದ ಅಂದಿನ ಗೃಹಸಚಿವ ಅಡ್ವಾನಿ ಕೂಡಾ ಪ್ರಶಂಸೆಯ ಮಳೆಯಲ್ಲಿ ಮಿಂದರು. ಗೃಹಸಚಿವರ ಉಪಸ್ಥಿತಿ 'ಎನ್ಕೌಂಟರ್'ಗೆ ಸಾಚಾತನದ ಕವಚವನ್ನು ದೊರಕಿಸಿಕೊಡುವಲ್ಲಿ ಸಹಕಾರಿಯಾಯಿತು. ಆದರೆ ಹತರಾದ ಇಬ್ಬರೂ ಉಗ್ರರಾಗಿರಲಿಲ್ಲವೆಂಬ ಸತ್ಯ ತಡವಾಗಿ ಬೆಳಕಿಗೆ ಬಂದಿದೆ. ಪೊಲೀಸರ ಅಡುಗೂಲಜ್ಜಿ ಕತೆಯನ್ನು ಘಟನೆಯ ಪ್ರತ್ಯಕ್ಷದರ್ಶಿಯಾಗಿದ್ದ ಡಾ। ಹರಿಕೃಷ್ಣ ಎಂಬಾತನ ಹೇಳಿಕೆ ಚಿಂದಿಚೂರು ಮಾಡಿತು. 'ಉಗ್ರ'ರು ಮಾರುತಿ *800* ಕಾರಿನಲ್ಲಿ ಸ್ಥಳಕ್ಕೆ ಆಗಮಿಸಿದ್ದರೆಂದು ಪೊಲೀಸರು ಹೇಳಿದ್ದರು. ಆದರೆ ಡಾ। ಹರಿಕೃಷ್ಣ ಎದ್ದು ನಿಲ್ಲಲೂ ಆಗದ ಸ್ಥಿತಿಯಲ್ಲಿದ್ದ ಇಬ್ಬರು ವ್ಯಕ್ತಿಗಳನ್ನು ಪೊಲೀಸ್ ಅಧಿಕಾರಿಗಳು ದರದರನೆ ಎಳೆದು ತಂದು ಗುಂಡು ಹಾರಿಸಿ ಕೊಂದದ್ದನ್ನು ಕಣ್ಣಾರೆ ಕಂಡಿದ್ದರು. ದಿಟ್ಟತನದಿಂದ ಸತ್ಯ ನುಡಿದ ಡಾ। ಹರಿಕೃಷ್ಣ ಮುಂದಿನ ಹಲವು ವರ್ಷಗಳ ಕಾಲ ಪೊಲೀಸರ ಕೈಲಿ ನರಕಯಾತನೆ ಅನುಭವಿಸಬೇಕಾಯಿತು. ಮೊಬೈಲ್ ಕಂಪೆನಿಯೊಂದರ ಮೇಲೆ ಒತ್ತಡ ಹೇರಿ ಆತನ ಮೊಬೈಲ್ ದಾಖಲೆಗಳನ್ನು ತಿದ್ದಿ ಆತ ಎನ್ಕೌಂಟರ್ ಸ್ಥಳದಲ್ಲಿ ಇರಲೇ ಇಲ್ಲವೆಂದು ಸಾಧಿಸಲಾಯಿತು. ಆತನ ಹೆಸರಿಗೆ ಕಳಂಕ ಹಚ್ಚಲಾಯಿತು. ಎಂದೋ ಮುಗಿದುಹೋಗಿದ್ದ ಹಳೆಯ ಪ್ರಕರಣಗಳಿಗೆ ಮರುಜೀವ ಕೊಡಲಾಯಿತು. 7 ವರ್ಷಗಳ ಬಳಿಕ, 2009ರಲ್ಲಿ ದೆಹಲಿಯ ನ್ಯಾಯಾಲಯದ ಅನುಮತಿ ಮೇರೆಗೆ ಡಾ। ಹರಿಕೃಷ್ಣರಿಗೆ ಸಾಕ್ಷಿ ನುಡಿಯಲು ಅವಕಾಶ ಸಿಕ್ಕಿತು. ಆದರೆ ಅಷ್ಟರಲ್ಲಾಗಲೇ ಮುಖ್ಯ ಆರೋಪಿ ಎಸಿಪಿ ರಾಜ್‌ಬೀರ್ ಸಿಂಗ್ ಓರ್ವ ರಿಯಲ್ ಎಸ್ಟೇಟ್ ವ್ಯಾಪಾರಿ ಕೈಲಿ ಅನುಮಾನಾಸ್ಪದವಾಗಿ ಹತರಾಗಿದ್ದರು.

(29.2.2012ರಂದು ದೆಹಲಿಯಲ್ಲಿ ಸ್ಫೋಟ ನಡೆಸುವ ಸಂಚು ರೂಪಿಸುತ್ತಿದ್ದರೆಂಬ ಆರೋಪದ ಮೇಲೆ ಇಬ್ಬರು 'ಲಷ್ಕರ್-ಎ-ತಯ್ಯಬ ಉಗ್ರ'ರನ್ನು ಬಂಧಿಸಿದ ಮರುಕ್ಷಣದಲ್ಲೇ ಗೃಹಸಚಿವ ಚಿದಂಬರಂ ಪತ್ರಿಕಾಗೋಷ್ಠಿ ನಡೆಸಿದರು. ಪ್ರಕರಣ ನ್ಯಾಯಾಲಯದಲ್ಲಿ ಇತ್ಯರ್ಥಗೊಳ್ಳುವುದಕ್ಕೂ ಮುನ್ನ ಇದನ್ನೆಲ್ಲ ಇಷ್ಟೊಂದು ತರಾತುರಿಯಿಂದ ಮಾಧ್ಯಮಗಳ ಮೂಲಕ ಬಹಿರಂಗಗೊಳಿಸುವುದರ ಮರ್ಮವೇನು? ಹಾಗಾದರೆ ಕಾನೂನು ಪ್ರಕ್ರಿಯೆಗೇನೂ ಬೆಲೆ ಇಲ್ಲವೇ? – ಅನುವಾದಕ)

ದೆಹಲಿ ಪೊಲೀಸ್ ವಿಶೇಷ ದಳದ ದೌರ್ಜನ್ಯ ಖಂಡಿಸಿ ನಾಗರೀಕರ ಪ್ರತಿಭಟನೆ

ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರಾರು?

ಅಮಾಯಕರಾದ ಸಲ್ಮಾನ್, ದಾರ್, ಬಶೀರ್, ಇರ್ಷಾದ್ ಅಲಿ, ಕಮಾರ್, ಇಫ್ತಿಕಾರ್, ಹಾರೂನ್, ಕೀರ್ಮಾನಿ ಮೊದಲಾದವರು ಅಂತಿಮವಾಗಿ ಬಿಡುಗಡೆಗೊಂಡರು. ಆದರೆ ಅಷ್ಟರಲ್ಲಾಗಲೇ ಹಲವಾರು ವರ್ಷಗಳ ಸೆರೆಮನೆವಾಸದಲ್ಲಿ ಸಾಕಷ್ಟು ಚಿತ್ರಹಿಂಸೆ ಅನುಭವಿಸಿದ್ದರು.

(35ನೇ ಪುಟಕ್ಕೆ)

ಕೈವಾರ ತಾತಯ್ಯನ

ಈ ಊರೊಳಗಿಷ್ಟು ಉತ್ಪಾತವೇನೋ

ಡಾ॥ ಎಂ.ಡಿ ಒಕ್ಕುಂದ

ಕೈವಾರ ನಾರೇಯಣ ಯತಿಯ ಕಾಲ ಕ್ರಿ.ಶ. ಸು. 1730 ರಿಂದ 1840. ನೂರಾಹತ್ತು ವರುಷಗಳ ಸುದೀರ್ಘ ಬದುಕಿನಲ್ಲಿ ಮೊದಲಿನ ಅರ್ಧಶತಕ ಪ್ರಾಪಂಚಿಕ ಜೀವನ. ನಂತರದ್ದು ಯೋಗಿಯ ಬಾಳು. ಮೂಲತಃ ಆಂಧ್ರಪ್ರದೇಶದ ಬಲಿಜ ಜಾತಿಯ ಬಳೆಗಾರ ಕುಟುಂಬದ ನಾರೇಯಣ ಕರ್ನಾಟಕ ಮತ್ತು ಆಂಧ್ರಗಳ ಗಡಿಭಾಗಗಳಲ್ಲಿ ಬಳೆಮಾರಿ ಹೊಟ್ಟೆ ಹೊರೆದುಕೊಳ್ಳಲು ಪರದಾಡಿದವನು. ಕಠೋರವಾದ ಬಡತನ ಮತ್ತು ಸಾಲದ ಬದುಕಿಗೆ ಬೇಸತ್ತು ಭಕ್ತಿಮಾರ್ಗವನ್ನು ತುಳಿದವನು. ಚಿತ್ತೂರಿನ ಮೊಗಲಿ ವೆಂಕಟಗಿರಿಯ ಕಣಿವೆಯಲ್ಲಿ ಪರದೇಶಸ್ವಾಮಿಯಿಂದ ಗುರುದೀಕ್ಷೆ ಪಡೆದು, ಯೋಗಸಾಧಕನಾದವ. 'ಹರಿನಾಮ'ವನ್ನೇ ಗುರುನಾಮವನ್ನಾಗಿ ಸ್ವೀಕರಿಸಿ ಏಕಲವ್ಯನಂತೆ ಸ್ವಯಂ ಅರಿವಿನ ಹಾದಿ ಹಿಡಿದಿರುವ ಸಾಧ್ಯತೆಯನ್ನು ಅವನ ತತ್ವಪದಗಳು ಸೂಚಿಸುತ್ತವೆ.

ತತ್ವಪದ ಸಾಹಿತ್ಯಚರಿತ್ರೆಯಲ್ಲಿ ನಾರೇಯಣನದು ಶರೀಫನಿಗಿಂತ ಹಿಂದಿನ ಕಾಲಘಟ್ಟ. 1857ರ ಮೊದಲ ಸ್ವಾತಂತ್ರ ಸಂಗ್ರಾಮಕ್ಕಿಂತ ಹಿಂದಿನ ಕಾಲ. ದಕ್ಷಿಣಭಾರತ ಕಂಪನಿ ಸರ್ಕಾರಕ್ಕೆ ಒಳಪಡುತ್ತ ಹೋದ ಕಾಲ. ಹೀಗಾಗಿ ವಸಾಹತುಶಾಹಿ ಆಡಳಿತಕ್ಕೆ ಈತ ಸೂಕ್ಷ್ಮವಾಗಿ ಪ್ರತಿಕ್ರಿಯಿಸಲು ಸಾಧ್ಯವಾಗಿದೆ. ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ಈತ ತತ್ವಪದಗಳನ್ನು ರಚಿಸಿದ್ದಾನೆ. ಇವನ ತತ್ವಪದ ಸಾಹಿತ್ಯವನ್ನು ತತ್ವಪದಗಳು, ವಚನಗಳು, ಕಾಲಜ್ಞಾನಿ ವಚನಗಳು ಮುಂತಾಗಿ ವರ್ಗೀಕರಿಸಿ ಅದರ ವೈವಿಧ್ಯತೆಯನ್ನು ಗುರುತಿಸಲಾಗಿದೆ. ಕನ್ನಡದಲ್ಲಿ ಕಡಿಮೆ ಪ್ರಮಾಣದಲ್ಲಿ ಪದಗಳನ್ನು ರಚಿಸಿದ್ದರೂ ಮಾತೃಭಾಷೆ ತೆಲುಗಿನಲ್ಲಿ ಈತ ರಚಿಸಿದ ಉತ್ತಮ ತತ್ವಪದಗಳು ಕನ್ನಡಕ್ಕೆ ಅನುವಾದಗೊಂಡಿವೆ. ಈತನನ್ನು 'ಮೊದಲ ದ್ವಿಭಾಷಾ ತತ್ವಪದಕಾರ" ವಸಾಹತುಶಾಹಿಯ ಆರ್ಥಿಕ ಸೂಕ್ಷ್ಮಗಳಿಗೆ ಪ್ರತಿಕ್ರಿಯಿಸಿದವ', "ಅದ್ವೈತದ ದೀವಟಿಗೆ ಹಿಡಿದ ಯೋಗಿ" ಮುಂತಾಗಿ ಗುರುತಿಸಲಾಗಿದೆ.

ಈತ ಮೇಲುನೋಟಕ್ಕೆ ಭಾಗವತ ಪರಂಪರೆಯ ಭಕ್ತ ಹಾಗೂ ಕೀರ್ತನ ಸಾಹಿತ್ಯದ ಅನುಯಾಯಿಯಂತೆ ತೋರಿದರೂ ಭಕ್ತಿ ಮತ್ತು ಯೋಗಮಾರ್ಗಗಳ ಸಂಕರಿತ ತಾತ್ವಿಕತೆಯೊಂದನ್ನೂ ರೂಪಿಸಿಕೊಂಡಂತೆ ತೋರುತ್ತದೆ. ಇವನ 'ಈ ಊರೊಳಗಿಷ್ಟು ಉತ್ಪಾತವೇನೋ' ಎಂಬ ಕವಿತೆಯನ್ನು ಇಲ್ಲಿ ಚರ್ಚಿಸಲಾಗಿದೆ.

ತತ್ವಪದವೆಂಬ ಬೃಹತ್ ಅಂತರ್‌ಸಂಬಂಧಿ ಪಠ್ಯ

ತತ್ವಪದವೆಂಬುವದು ಒಂದು ಬೃಹತ್ ಅಂತರ್‌ಸಂಬಂಧಿ ಪಠ್ಯ. ಈ ಸಾಹಿತ್ಯ ಒಂದು ಅಖಂಡವಾದ ಸಿದ್ಧಾಂತವನ್ನು ರೂಪಿಸುತ್ತಲೇ ತಾನೂ ರೂಪತಾಳುತ್ತದೆ. ಅಖಂಡ ಸಿದ್ಧಾಂತವೆಂದರೆ ಪೂರ್ವಸಿದ್ಧ ತಾತ್ವಿಕತೆಯಲ್ಲಿ ಚಾರಿತ್ರಿಕವಾಗಿ ವಿಕಾಸಗೊಂಡ ಚಿಂತನಾಧಾರೆ. ಹಲವಾರು ವೈರುಧ್ಯ, ವೈವಿಧ್ಯ ಮತ್ತು ಪರಿವರ್ತನಶೀಲತೆಗಳನ್ನು ಒಳಗೊಂಡ ತಾತ್ವಿಕತೆ. ತತ್ವಪದ ಸಾಹಿತ್ಯದ ಎಲ್ಲ ರಚನೆಗಳೂ ಇದರ ಪ್ರತಿಪಾದನೆಗೆ ಶ್ರಮಿಸುತ್ತವೆ ಮತ್ತು ಅದನ್ನು ರೂಪಿಸುವ ಒತ್ತಡದಲ್ಲಿ ಮೈದಾಳುತ್ತವೆ. ಅದರ ಬಹುಮುಖತೆಯನ್ನು ಪರಿಚಯಿಸುತ್ತ ತಾವೂ ಬಹುಮುಖೀ ಆಕಾರ ತಾಳುತ್ತವೆ. ಬಹುಮುಖೀ ಅಭಿವ್ಯಕ್ತಿ ಕ್ರಮಗಳ ಮೂಲಕ ಒಂದು ವ್ಯಾಪಕವೂ ಸೂಕ್ಷ್ಮವೂ ಆಳವೂ ಆದ ತಾತ್ವಿಕತೆಯ ಏರಿಳಿವಿನಲ್ಲಿ ರೂಪತಾಳುತ್ತದೆ. ಹೀಗಾಗಿ ಒಂದು ತತ್ವಪದವನ್ನು ಬಿಡಿಯಾಗಿ ನೋಡುವಾಗ ಅದು ತನ್ನ ಅರ್ಥಗಳನ್ನು ಬಿಟ್ಟುಕೊಡುವುದಿಲ್ಲ. ಅರ್ಥದ ಎಲ್ಲ ಸಾಧ್ಯತೆಗಳೂ ದಕ್ಕುವದಿಲ್ಲ. ಒಂದು ಪದ ತನ್ನ ಗುಟ್ಟನ್ನು ಬಿಟ್ಟುಕೊಡಲು ಅದೇ ಪದಕಾರನ ಇತರ ಪದಗಳ ಹಾಗೂ ಇತರ ತತ್ವಪದಕಾರರ ಪದಗಳ ಸಹಕಾರವನ್ನು ಬಯಸುತ್ತದೆ. ಈ ಅರ್ಥದಲ್ಲಿ ಇದು ಬೃಹತ್ ಅಂತರ್ ಸಂಬಂಧಿ ಪಠ್ಯ. ಈ ತತ್ವಪದ ಏಕಾಕಾರಿ ಶಿಲ್ಪವಲ್ಲ, ಚಾರಿತ್ರಿಕವಾಗಿ ಬೆಳವಣಿಗೆ ಹೊಂದಿದ್ದು. ಒಂದು ತತ್ವಪದ ಸಿದ್ಧಾಂತದ ಯಾವ ಹಂತದಲ್ಲಿ ರೂಪ ತಾಳಿದ್ದು ಎಂಬುದು ಅದರ ತಾತ್ವಿಕತೆ ಮತ್ತು ರೂಪವನ್ನು ನಿರ್ಧರಿಸುವ ಮುಖ್ಯಸಂಗತಿಯಾಗಿದೆ. ಮತ್ತು ತತ್ವಪದಕಾರನ ವಿಕಾಸದ ಒಂದು ಹಂತವೂ ಆಗಿರಬಹುದು. ಈ ನೆಲೆಯಿಂದ ಕೂಡ ಇದು ಅಂತರ್‌ಸಂಬಂಧಿ ಪಠ್ಯ. ತತ್ವಪದ ತನ್ನ ವಿಶ್ಲೇಷಣೆಗೆ ಸದಾ ತನ್ನ ಕಾಲಘಟ್ಟದ ರಾಜಕೀಯ ಸಾಮಾಜಿಕ ಆರ್ಥಿಕ ಬದುಕಿನ ವಿವರ ವಾಸ್ತವಗಳನ್ನು ನಿರೀಕ್ಷಿಸುತ್ತವೆ. ಹೀಗಾಗಿ ಕೈವಾರ ನಾರೇಯಣನ ಈ ತತ್ವಪದವು ವ್ಯಾಪ್ತಿ ಮತ್ತು ಚರಿತ್ರೆಯ ದೃಷ್ಟಿಯಿಂದ ಒಂದು ಬೃಹತ್ ಪಠ್ಯದ ಮಧ್ಯದಿಂದ ಎದ್ದುಬರುವಂಥದ್ದು ಮತ್ತು ಆ ಪಠ್ಯ ಒಂದು ಕಾಲಘಟ್ಟದ ರಾಜಕೀಯ ಬದುಕಿನ ಒತ್ತಡದಲ್ಲಿ ಸೃಷ್ಟಿಯಾಗಿರುವಂಥದ್ದು. ಹೀಗಾಗಿ 'ಈ ಊರೊಳಗಿಷ್ಟು ಉತ್ಪಾತವೇನೋ' ಎಂಬ ತತ್ವಪದದ ವಿಶ್ಲೇಷಣೆಯಲ್ಲಿ ಈ ಎರಡು ಸಂಗತಿಗಳನ್ನು ಪರಿಕರಗಳಾಗಿ ಬಳಸಿಕೊಳ್ಳಲಾಗಿದೆ.

ಹೊಸಮಾದರಿಯ ಧಾರ್ಮಿಕತೆ

ಈ ಕವಿತೆ ಒಂದು ಹೊಸಮಾದರಿಯ ಪ್ರಯೋಗ. ತಾತ್ವಿಕತೆ ಮತ್ತು ಅಭಿವ್ಯಕ್ತಿ ಕ್ರಮಗಳೆರಡರ ದೃಷ್ಟಿಯಿಂದಲೂ ಇದು ಭಾಗವತ ಪರಂಪರೆಯ ಕೀರ್ತನದ ರೂಪವನ್ನು ಹೋಲುವಂತೆ ಕಂಡರೂ ಆಳದಲ್ಲಿ ಅದನ್ನು ನಿರಾಕರಿಸುತ್ತದೆ. ಶರೀಫ, ಶೈವ, ವೀರಶೈವ ಪರಿಭಾಷೆಯಲ್ಲಿ ಮಾತನಾಡುತ್ತಲೇ ಅವುಗಳನ್ನು ನಿರಾಕರಿಸಿ ಅವಧೂತ ತಾತ್ವಿಕತೆಯನ್ನು ಪ್ರತಿಪಾದಿಸುವ ಮಾದರಿಯನ್ನನುಸರಿಸುತ್ತಾನೆ. ಈ ಮಾದರಿಯ ಮೂಲವನ್ನು ನಾರೇಯಣ ಯತಿಯಲ್ಲಿ ಕಾಣಬಹುದು. ಈತ ಭಾಗವತ ಪರಿಭಾಷೆಯಲ್ಲಿ ಮಾತನಾಡುತ್ತ ಅದನ್ನು ನಿರಾಕರಿಸುತ್ತಾನೆ. ಭಕ್ತಿಜ್ಞಾನ ವೈರಾಗ್ಯಗಳಿಗಾಗಿ ಪ್ರಾಪಂಚಿಕ ಬದುಕಿನ ಸುಖ-ದುಃಖಗಳನ್ನು ತಿರಸ್ಕರಿಸುವ ಧಾರ್ಮಿಕತೆಯ ಮಾದರಿ ಇವನದಲ್ಲ.

ಒಂದು ತತ್ವಪದ ಸಿದ್ಧಾಂತದ ಯಾವ ಹಂತದಲ್ಲಿ ರೂಪ ತಾಳಿದ್ದು ಎಂಬುದು ಅದರ ತಾತ್ವಿಕತೆ ಮತ್ತು ರೂಪವನ್ನು ನಿರ್ಧರಿಸುವ ಮುಖ್ಯಸಂಗತಿಯಾಗಿದೆ. ಮತ್ತು ತತ್ವಪದಕಾರನ ವಿಕಾಸದ ಒಂದು ಹಂತವೂ ಆಗಿರಬಹುದು. ಈ ನೆಲೆಯಿಂದ ಕೂಡ ಇದು ಅಂತರ್‌ಸಂಬಂಧಿ ಪಠ್ಯ. ತತ್ವಪದ ತನ್ನ ವಿಶ್ಲೇಷಣೆಗೆ ಸದಾ ತನ್ನ ಕಾಲಘಟ್ಟದ ರಾಜಕೀಯ ಸಾಮಾಜಿಕ ಆರ್ಥಿಕ ಬದುಕಿನ ವಿವರ ವಾಸ್ತವಗಳನ್ನು ನಿರೀಕ್ಷಿಸುತ್ತವೆ. ಹೀಗಾಗಿ ಕೈವಾರ ನಾರೇಯಣನ ಈ ತತ್ವಪದವು ವ್ಯಾಪ್ತಿ ಮತ್ತು ಚರಿತ್ರೆಯ ದೃಷ್ಟಿಯಿಂದ ಒಂದು ಬೃಹತ್ ಪಠ್ಯದ ಮಧ್ಯದಿಂದ ಎದ್ದುಬರುವಂಥದ್ದು ಮತ್ತು ಆ ಪಠ್ಯ ಒಂದು ಕಾಲಘಟ್ಟದ ರಾಜಕೀಯ ಬದುಕಿನ ಒತ್ತಡದಲ್ಲಿ ಸೃಷ್ಟಿಯಾಗಿರುವಂಥದ್ದು. ಹೀಗಾಗಿ 'ಈ ಊರೊಳಗಿಷ್ಟು ಉತ್ಪಾತವೇನೋ' ಎಂಬ ತತ್ವಪದದ ವಿಶ್ಲೇಷಣೆಯಲ್ಲಿ ಈ ಎರಡು ಸಂಗತಿಗಳನ್ನು ಪರಿಕರಗಳಾಗಿ ಬಳಸಿಕೊಳ್ಳಲಾಗಿದೆ.

ಬದಲಾಗಿ ಪ್ರಾಪಂಚಿಕ ಬದುಕು ಸೃಷ್ಟಿಸಿದ ಹಿಂಸೆಯನ್ನು ದಾಖಲಿಸುತ್ತ ಹಿಂಸೆಯಿಂದ ಪಾರಾಗಲು ಅನಿವಾರ್ಯವಾಗಿ ಭಕ್ತಿ ಮತ್ತು ಗುರುಮಾರ್ಗಗಳ ಸಂಕರಿತ ತಾತ್ವಿಕತೆಯನ್ನು ವಿಷಾದದಿಂದಲೇ ಸ್ವೀಕರಿಸುವ ವಾಸ್ತವವನ್ನು ಅವನ ಹಲವಾರು ತತ್ವಪದಗಳು ಹಲವು ನೆಲೆಗಳಿಂದ ವಿವರಿಸುತ್ತವೆ. ಆ ಎಲ್ಲ ಪದಗಳ ಕೇಂದ್ರವನ್ನು ಈ ತತ್ವಪದ ಒಳಗೊಂಡಿದೆ. ಭಕ್ತಿ ಎನ್ನುವದು 'ಮುಖವಾಡವೋ' ಎಂಬ ಚರ್ಚೆಗೂ ಅವನ ಪದಗಳು ಅವಕಾಶ ನೀಡುತ್ತವೆ. ಯೋಗಮಾರ್ಗವೇ ಅಂತಿಮವೆಂಬ ದಾರ್ಶನಿಕತೆ ಅವನ ಹಲವಾರು ಕವಿತೆಗಳಲ್ಲಿದೆ.

ದ್ವಂದ್ವಗಳ ಮುಖಾಮುಖಿ
ಈ ಊರೊಳಗೆ ಇಷ್ಟು ಉತ್ಪಾತವೇನೋ
ದುರಿತ ಸಂಹಾರಿ ನಾರೇಯಣ ಹರಿ ॥ಪ॥

ಪಲ್ಲವಿಯ ಈ ಸಾಲುಗಳು 'ಊರೊಳಗಿನ ಉತ್ಪಾತ' ಮತ್ತು 'ದುರಿತ ಸಂಹಾರಿ ಹರಿ' ಎಂಬ ಎರಡು ಲೋಕಗಳನ್ನು ಮುಖಾಮುಖಿಯಾಗಿಸುತ್ತದೆ. ಅವನ 'ನಮ್ಮೂರ' ಎಂಬ ತತ್ವಪದವು, 'ಶ್ರೀಹರಿಯ' ಊರಿನ ಸ್ವರೂಪವನ್ನು ವಿವರಿಸುವದನ್ನಿಲ್ಲಿ ನೆನಪಿಸಿಕೊಳ್ಳಬಹುದು. ಇದು ಎರಡು ಊರುಗಳ ಎರಡು ಲೋಕಗಳ ಮುಖಾಮುಖಿ. ಕೇವಲ ಮುಖಾಮುಖಿಯಲ್ಲ, ಸಂಘರ್ಷ ಕೂಡ. ನಾರೇಯಣತಾತನ ಬಹುತೇಕ ಪದಗಳು ಈ ಎರಡು ಲೋಕಗಳ ಸಂಘರ್ಷದಲ್ಲಿಯೇ ರೂಪತಾಳುತ್ತವೆ. ಈ ಎರಡೂ ಲೋಕಗಳ ಸಂಘರ್ಷ ನಡೆದಿರುವುದು ನಿರೂಪಕನಲ್ಲಿ. ಆತ ಆ ಕಾಲದ ಸಾಮಾನ್ಯ ಮನುಷ್ಯನ ಪ್ರತಿನಿಧಿ. 'ಊರೊಳಗಿನ ಉತ್ಪಾತ' 'ಹಿಂಸಾಭರಿತವೂ' 'ನಾರೇಯಣಹರಿಯ ಲೋಕ' ಈ ದುರಿತಗಳನ್ನು ಸಂಹಾರ ಮಾಡುವ ಪರ್ಯಾಯವೂ ಆಗಿ ನಿರೂಪಿತವಾಗುತ್ತವೆ.

ಇಲ್ಲಿ ಊರು ಎಂದರೆ ಮೂರು ಅರ್ಥಗಳುಂಟು. ಮೊದಲನೆಯದು ತಾತ್ವಿಕ ಅಥವಾ ಅನುಭಾವಿಕ ನೆಲೆಯಿಂದ ದೇಹ, ಅಥವಾ ದೇಹಮೂಲ ಲೌಕಿಕ ಬದುಕು. ಎರಡನೆಯದು ಕವಿಯ ಬಡತನದಿಂದ ಕೂಡಿದ ಕೌಟುಂಬಿಕ ಬದುಕು. ಮೂರನೆಯದು ವಸಾಹತುಶಾಹಿ ಜಮೀನ್ದಾರೀ ಹಾಗೂ ಪುರೋಹಿತಶಾಹಿ ಹಿಡಿತದಲ್ಲಿ ರೂಪತಾಳಿದ ಆ ಕಾಲದ ಸಾಮಾಜಿಕ ಬದುಕು. ಉತ್ಪಾತವೆಂದರೆ ಮೂರು ಅರ್ಥಗಳುಂಟು: "ಮೇಲಕ್ಕೆ ನೆಗೆತ–ಮೇಲಕ್ಕೆ ಜಿಗಿತ, ಭೂಕಂಪ ಉಲ್ಕಾಪಾತದಂಥ ಅನಿರೀಕ್ಷಿತ ದುರ್ಘಟನೆಗಳು ಮತ್ತು ಅಪಶಕುನ". ಹರಿ ಅಥವಾ 'ಹರಿನಾಮ'ವೆನ್ನುವದು ಒಂದು ಪರ್ಯಾಯ ಮಾರ್ಗ. ಅದು ಭಕ್ತಿಯೂ ಹೌದು, ಅದರಾಚೆಯ ಸಾಧನಮಾರ್ಗವೂ ಹೌದು. ಒಟ್ಟಾರೆ ಸ್ಥಿತ್ಯಂತರ ಹಾಗೂ ಸ್ಥಿತ್ಯಂತರ ಕಾಲದ ಸಂಕಟದ ನಿರೂಪಣೆ ಈ ಕವಿತೆಯ ಮುಖ್ಯ ಆಶಯ. 'ಭವನಿವಾರಣೆ ಮಾಡೋ ಭವರೋಗ ವೈದ್ಯಾ' ಎಂಬ ಕವಿತೆಯ ಸಾಲನ್ನು ನೆನಪಿಸಿಕೊಂಡರೆ ಒಂದು ಅವಸ್ಥೆಯಿಂದ ಇನ್ನೊಂದು ಅವಸ್ಥೆಗೆ ತೆರಳುವ ಆಶಯ ಇನ್ನೂ ಖಚಿತವಾಗುತ್ತದೆ. ನಾರೇಯಣ ತಾತನು ಹಲವಾರು ಪದಗಳಲ್ಲಿ ಎರಡು ಊರುಗಳ ಸ್ವರೂಪವನ್ನು ವಿವರಿಸಿ ಒಂದನ್ನು ಬಿಟ್ಟು ಇನ್ನೊಂದನ್ನು ಆಯ್ದುಕೊಳ್ಳುವ ಆಶಯವನ್ನು ವ್ಯಕ್ತಪಡಿಸಿದ್ದಾನೆ. ವಸಾಹಾತುಶಾಹಿ ಪ್ರವೇಶದಿಂದ ದೇಶೀ ಜಮೀನ್ದಾರರು ಮತ್ತು ಪುರೋಹಿತರ ಮೇಲ್ನೆಗೆತ, ಅದರ ಪರಿಣಾಮವಾಗಿ ಸಾಮಾನ್ಯ ಮನುಷ್ಯನ ಬದುಕಿನಲ್ಲಿ ಉಂಟಾದ ಭೂಕಂಪ ಸದೃಶವಾದ ಕನಸು ಕಳೆದುಹೋದ ತಲ್ಲಣ, ಆತಂಕ, ಅಸ್ಥಿರತೆಗಳು ಸಮುದಾಯದ ಪಾಲಿಗೆ ಅದೊಂದು ಮಹಾ ದುಃಸ್ವಪ್ನವಾಗುವದು ಹಾಗೂ ಅವೆಲ್ಲವುಗಳ ಪರಿಣಾಮವಾಗಿ ದೇಹ ನಿರಾಕರಣೆಯ ತಾತ್ವಿಕತೆ ರೂಪತಾಳಿದ್ದನ್ನು ಕವಿತೆ ವಿವರಿಸುತ್ತದೆ. ಕವಿತೆ ಮೂರು ಬಗೆಯ ಉತ್ಪಾತಗಳನ್ನು ವಿವರಿಸುತ್ತದೆ. ಮೊದಲನೆಯದಾಗಿ ವಸಾಹಾತುಶಾಹಿಯು ದೇಶದಲ್ಲಿ ಉಂಟುಮಾಡಿದ ಉತ್ಪಾತ, ಎರಡನೆಯದು ಆ ಮೂಲಕ ನಿರ್ಮಾಣವಾದ ಆರ್ಥಿಕ ಅಸಮಾನತೆ ಮತ್ತು ಬಡತನದ ಉತ್ಪಾತ. ಮೂರನೆಯದು ತಾತ್ವಿಕವಾಗಿ ದೇಹದ ನೆಲೆಯಲ್ಲಿ ನಡೆಯುವ ಉತ್ಪಾತ. ಈ ಮೂರು ಉತ್ಪಾತಗಳ ಆತ್ಯಂತಿಕ ಪರಿಣಾಮವೆಂದರೆ ಜೀವ ಪ್ರಾಪಂಚಿಕ ಬದುಕಿನಿಂದ ಯೋಗಿಯ ಬದುಕಿನೆಡೆಗೆ ಚಲಿಸುವದು.

ವಿಶ್ವಾಸಘಾತಕನು ಶಾನುಭೋಗ
ವಿಶ್ವಾಸಘಾತಕನು ಇಲ್ಲಿರುವ ಶಾನುಭೋಗ
ಕೆಟ್ಟ ದುಷ್ಟ ಭಂಢಗುರಿಕಾರ

ಕವಿತೆಯ ಈ ಸಾಲುಗಳು ಭಾರತದ ಆ ಕಾಲದ ರಾಜಕೀಯ ವ್ಯವಸ್ಥೆಯ ವಿವರವನ್ನು ಕೇಳುತ್ತವೆ. ಡಾ. ಎಸ್.ಚಂದ್ರಶೇಖರ ಅವರ ಚಿಂತನೆಗಳನ್ನು ಸಂಗ್ರಹಿಸಿ ಹೇಳುವದಾದರೆ ನಾರೇಯಣ ಯತಿ ಬದುಕಿದ ಕಾಲವು "ವಸಾಹತುಶಾಹಿಯು ಅತ್ಯಂತ ಹಿಂಸಾತ್ಮಕವಾಗಿ ಮತ್ತು ಆಕ್ರಮಣಕಾರಿಯಾಗಿ ಅತ್ಯಂತ ಶೀಘ್ರಗತಿಯಲ್ಲಿ ದಕ್ಷಿಣಭಾರತವನ್ನು ಆವರಿಸುತ್ತಿದ್ದ ಕಾಲ. ಅದು ತನ್ನ ಆಡಳಿತ ವ್ಯವಸ್ಥೆಯನ್ನು ಬಲಪಡಿಸಿಕೊಳ್ಳಲು ಎದುರು ಬಿದ್ದವರನ್ನು ಸಾರ್ವಜನಿಕವಾಗಿ ಗಲ್ಲಿಗೇರಿಸುತ್ತ ಬೆನ್ನುಬಿದ್ದವರನ್ನು ಜಮೀನ್ದಾರರನ್ನಾಗಿ ಗ್ರಾಮಗಳ ಮುಖಂಡರಾಗಿ ನಿಯಮಿಸತೊಡಗಿತು. ಆ ಕಾಲದಲ್ಲಿ ವಸಾಹತುಶಾಹಿಯ ಬೆನ್ನುಬಿದ್ದವರಲ್ಲಿ ಪುರೋಹಿತ ವರ್ಗಕ್ಕೆ ಮೊದಲ ಸ್ಥಾನ. ಬ್ರಾಹ್ಮಣವರ್ಗ ಪ್ರಬಲವಾಗಲು ಕಾರಣ ಆಡಳಿತ ವಹಿಸಿಕೊಂಡವರು ಯಾರೇ ಇರಲಿ ಅವರನ್ನು ಹೊಗಳುತ್ತ ಹೊಂದಾಣಿಕೆ ಮಾಡಿಕೊಳ್ಳುವ ಗುಣವನ್ನು ಪ್ರದರ್ಶಿಸಿದ್ದು. ಹೀಗಾಗಿ ದಕ್ಷಿಣ ಭಾರತದಲ್ಲಿ ಬ್ರಾಹ್ಮಣ ವರ್ಗ ವಿಶೇಷವಾಗಿ ಸ್ಮಾರ್ತರು ಮತ್ತು ವೈಷ್ಣವರು (ಕರ್ನಾಟಕದಲ್ಲಿ) ಜಮೀನ್ದಾರರೂ ಗ್ರಾಮ ಮುಖ್ಯಸ್ಥರೂ, ಶಾನುಭೋಗರೂ ಆದರು."15 ಈ ಮೇಲ್ನೆಗೆತವನ್ನು ನಾರೇಯಣತಾತ ಪ್ರಶ್ನಿಸುತ್ತಿದ್ದಾನೆ. ವಸಾಹತುಶಾಹಿ ಜಮೀನ್ದಾರಿ ಮತ್ತು ಪುರೋಹಿತಶಾಹಿಗಳ (ಒಪ್ಪಂದವೇ) ಈ ಶಾನುಭೋಗ. 'ವಿಶ್ವಾಸಘಾತಕ ಇಲ್ಲಿರುವ ಶಾನುಭೋಗ' ಎಂಬ ಸಾಲು ಪುರೋಹಿತಶಾಹಿ ವಸಾಹತುಶಾಹಿಯೊಂದಿಗೆ ಪಡೆದ ನೈಚ್ಯಾನು ಸಂಧಾನವನ್ನು ಪ್ರಶ್ನಿಸುತ್ತದೆ. ಇಲ್ಲಿರುವ ಪಾಳೆಪಟ್ಟುಗಳು, ಪಾಳೆಗಾರಿಕೆ ಅರಸೊತ್ತಿಗೆಗಳು, ಪುರೋಹಿತ ವರ್ಗದ ಧಾರ್ಮಿಕ ಆಚರಣೆಗಳ ಮೂಲಕವೇ ಸಾಮಾಜಿಕ ಸ್ಥಾನೀಕರಣವನ್ನು ಸ್ಥಾನಬದ್ಧತೆಯನ್ನು ಪಡೆಯುತ್ತಿದ್ದವು. ಈ ಜಮೀನ್ದಾರಿಕೆ, ಶಾನುಭೋಗಿಕೆಗಳು ವಸಾಹತುಶಾಹಿ ಜನರನ್ನು ಆಳಲು ರೂಪಿಸಿದ ನಿಯಮಗಳನ್ನು ಅನುಷ್ಠಾನಕ್ಕೆ ಬರುವಂತೆ ನೋಡಿಕೊಳ್ಳುತ್ತಿದ್ದು ಕೆಲವೊಮ್ಮೆ ನಿಯಮಗಳ ರಚನೆಯಲ್ಲೂ ವಸಾಹತುದಾರರಿಗೆ ಮಾರ್ಗದರ್ಶಿಗಳಾಗಿದ್ದವು. ಶಾನುಭೋಗಿಕೆಯ ವಿಶ್ವಾಸಘಾತಕತನ, ದೇಶದ್ರೋಹದ ಕ್ರಿಯೆಯಾದಂತೆಯೇ ಆ ನಿಯಮಗಳನ್ನು ಜಾರಿಗೆತರುವಲ್ಲಿ ಜನರನ್ನು ಈಡುಮಾಡುತ್ತಿದ್ದ ಹಿಂಸೆ ಕೂಡ ಭೀಕರವಾಗಿತ್ತು. 'ಕೆಟ್ಟ, ದುಷ್ಟ, ಭಂಡಗುರಿಕಾರ' ಎಂಬ ಪದಗಳು ಆ ಹಿಂಸಾತ್ಮಕ ಸ್ವರೂಪವನ್ನು ವಿವರಿಸುತ್ತವೆ. ಇದು ಕೇವಲ ಶಾನುಭೋಗನೊಂದಿಗಿನ ಮುಖಾಮುಖಿಯಲ್ಲ. ಆತ ತಕ್ಷಣದ ವೈರಿ. ಆತನನ್ನು ರೂಪಿಸಿದ ವಸಾಹತುಶಾಹಿಯ ಹಿಂಸಾತ್ಮಕತೆಗೆ ತೋರಿಸಿದ ಪ್ರತಿರೋಧವೂ ಇಲ್ಲಿದೆ. 'ಅರಸರ ಬಳಿ ಕಾರಖೂನರಾಗಿ ಶ್ರೇಷ್ಠರೆಂದು ಬೀಗುವ ಬ್ರಾಹ್ಮಣರ ಪ್ರಾಬಲ್ಯ ಸ್ಥಿರವಾಗಿ ಉಳಿಯದು' ಎಂಬ ಕೈವಾರ ನಾರೇಯಣ ತಾತನ ಕಾಲಜ್ಞಾನ, ಈ ಹಿಂಸೆಯ ನಡುವೆಯೂ ಪುರೋಹಿತಶಾಹಿಯ ಅವಸಾನದ ಕನಸುಗಾರಿಕೆಯನ್ನು ಒಳಗೊಂಡಿದೆ. ಅದೊಂದು ಬಗೆಯ ಹತಾಶೆಯಲ್ಲಿ ಹುಟ್ಟುವ ಕನಸುಗಾರಿಕೆ. ಬ್ರಿಟಿಷರ ಬಗ್ಗೆ ಕೂಡ ಇಂಥದೇ ಕಾಲಜ್ಞಾನವನ್ನು ನುಡಿಯುತ್ತಾನೆ. 'ಅವರು ತಮ್ಮೊಳಗೆ ಜಗಳಾಡಿ ದೇಶವನ್ನು ಬಿಟ್ಟುಹೋಗುತ್ತಾರೆ'. ಕಾಲಜ್ಞಾನವೆಂಬ ಭವಿಷ್ಯತ್‌ನುಡಿಯ ಹಿಂದೆ ಜನಸಾಮಾನ್ಯರು ಹಿಂಸೆಗೀಡಾದ ಬದುಕಿನ ಒತ್ತಡವಿದ್ದಂತೆ ತೋರುತ್ತದೆ.

ವಿಶ್ವಾತ್ಮಕವಾಗಿ ವಸಾಹತುಶಾಹಿ ಹುಟ್ಟುಹಾಕಿದ ಜನವಿರೋಧಿ ಅಮಾನವೀಯ ಬದುಕಿಗೆ ಪ್ರತಿಕ್ರಿಯೆ ನೀಡುವ ನಾರೇಯಣ ತಾತ 'ಈ ಊರೊಳಗಿಷ್ಟು ಉತ್ಪಾತವೇನೋ' ಎಂಬ ಕವಿತೆಯಲ್ಲಿ ಸ್ಥಾನಿಕ ನೆಲೆಯಿಂದಲೇ ತಿರುಗಿಬೀಳಲು ಯತ್ನಿಸಿದಂತಿದೆ.

ಪಂಚೇಂದ್ರಿಯಗಳೆಂಬ ಪಾಪಾತ್ಮರೈವರು
ಇವರಿಂದ ಪ್ರಾಣಕ್ಕೆ ಹಾನಿ ಬಂತು
ಚಾಡಿ ಹೇಳುವ ನೀಚ ಸಂಬಂಧಿ ಜನರುಂಟು
ಮೋಹವೆಂಬೊಬ್ಬ ಮೋಸಗಾರ
ಇದರ ಮೇಲೆ ಮೂವರು ಕಳ್ಳಬಂಟರ ಕಾಟ
ತಲೆಹುಳಕ ನಾಯಂಥ ತಳವಾರನೊಬ್ಬ.

ದೇಹ ಮೂಲವಾದ ಸಹಜ ಆಕಾಂಕ್ಷೆಗಳನ್ನು 'ಪಾಪ'ಗಳೆಂದು ಪರಿಭಾವಿಸುವ

ಮನಸ್ಥಿತಿಯೊಂದು ರೂಪತಾಳಲು ಕಾರಣ ಆರ್ಥಿಕ ವ್ಯವಸ್ಥೆ. ಆರ್ಥಿಕ ಅಸಮಾನತೆಯ ಮೂಲಕ ಮನುಷ್ಯ ಅನುಭವಿಸಿದ ಹಿಂಸೆ ಹಾಗೂ ಭಕ್ತಿಯ ನಡುವಿನ ಅವಿನಾಭಾವ ಸಂಬಂಧವನ್ನು ತಿಳಿಸುವ ಹಲವಾರು 'ಆತ್ಮಗೀತೆ'ಯಂಥ ಪದಗಳನ್ನು ನಾರೇಯಣ ರಚಿಸಿದ್ದಾನೆ. ತನ್ನ ಕುಟುಂಬದ ಭೀಕರವಾದ ಬಡತವನನ್ನು ಹೋಗಲಾಡಿಸಲು ಲಕ್ಷ್ಮೀದೇವಿಗೆ ನತ್ತುಕೊಡಲು ಮೊರೆ ಇಡುವುದೂ ಉಂಟು. ತನ್ನ ಕುಟುಂಬವನ್ನು ನಿರ್ವಹಿಸಲು ಸಂಪೂರ್ಣ ಅಸಹಾಯಕನಾದ ಸ್ಥಿತಿಯಲ್ಲಿ

ಹ್ಯಾಗೆ ರಕ್ಷಿಸಬೇಕೋ ಎನ್ನೊಡೆಯ ಶ್ರೀರಾಮ
ಬಡತನದ ಸಂಸಾರ ಬಿಡುವುದೇ ಲೇಸಯ್ಯ
ಅನವರತ ನಿಮ್ಮ ನಾಮ ಆತ್ಮದಲಿ ಇಟ್ಟಿರುವ
ದಾಸನಿಗೆ ಧನ ಧಾನ್ಯ ಕೊಡಬಾರದೇ?

ವಸಾಹತುಶಾಹಿ ಜಮೀನ್ದಾರಿ ಹಾಗೂ ಪುರೋಹಿತಶಾಹಿ ಮೌಢ್ಯಗಳು ಹುಟ್ಟುಹಾಕಿದ ಭಯಂಕರ ಹಸಿವು ಬಡತನಗಳಿಗೆ ತತ್ತರಿಸಿಹೋದ ಜೀವ ಅನಿವಾರ್ಯವಾಗಿ ಭಕ್ತಿಯನ್ನಾಶ್ರಯಿಸುತ್ತದೆ ಎಂಬ ಚಿಂತನೆಗೆ 'ಬಡತನದ ಸಂಸಾರ ಬಿಡುವುದೇ ಲೇಸಯ್ಯ' 'ದಾಸನಿಗೆ ಧನಧಾನ್ಯ ಕೊಡಬಾರದೇ?' ಎಂಬ ಕವಿತೆಯ ಸಾಲುಗಳಲ್ಲಿ ಆಕಾರ ನೀಡಲಾಗಿದೆ. 'ಸ್ಥಿರವಲ್ಲ ಈ ಕೊಂಪೆ' ಎಂಬ ದೇಹನಿರಾಕರಣ ಚಿಂತನೆ ರೂಪತಾಳುವ ಮುಂಚೆ ಕೂಡ 'ಧನ-ಧಾನ್ಯ'ಕ್ಕಾಗಿ ಮೊರೆ ಇಡುವುದು ಬದುಕಿನ ಬಗೆಗಿನ ವ್ಯಾಮೋಹ ಪ್ರೀತಿಯನ್ನು ತೋರಿಸುತ್ತದೆ. ಭಕ್ತಿಮಾರ್ಗವೆನ್ನುವದು ಬದುಕಿನ ಬಗ್ಗೆ ಪ್ರೀತಿ ಇದ್ದೂ ಅಲ್ಲಿ ಮೂಲಭೂತವಾದ ಕನಿಷ್ಠ ಸೌಲಭ್ಯಗಳು ದೊರೆಯದ ಕಾರಣಕ್ಕೆ ಅನಿವಾರ್ಯವಾಗಿ ಬಿಟ್ಟುಹೋಗುವ ಒಂದು ಸಂಕಟದ ಸ್ಥಿತಿಯಾಗಿದೆ. 'ಊರೊಳಗಿಪ್ಪು ಉತ್ಪಾತವೇನೋ' ಎಂಬ ತತ್ವಪದದಲ್ಲಿ ಕೂಡ ಲೌಕಿಕ ಬದುಕಿನ ನಿರಾಕರಣೆ ಇದೆ. ಪಂಚೇಂದ್ರಿಯಗಳೆಂಬ ಪಾಪಾತ್ಮರು, ಮೋಹವೆಂಬ ಮೋಸಗಾರ, ಮೂವರು ಕಳ್ಳಬಂಟರು, ನಾಯಂಥ ತಳವಾರರು ಮೊದಲಾದ ಪಾರಿಭಾಷೆಗಳು ದೇಹದ ಸಹಜ ಸ್ಥಿತಿಯನ್ನು ಪಾಪವೆಂಬಂತೆ ಚಿತ್ರಿಸುತ್ತವೆ. ದೇಹ ಪಾಪದ ಗೂಡೆಂದೂ ಬದುಕು ಅಸ್ಥಿರ ಕೊಂಪೆಯೆಂದೂ ನಿರಾಕರಣತತ್ವ ಪ್ರತಿಪಾದಿತವಾಗಿದೆ. ಆರಂಭದ ಹಂತದಲ್ಲಿ ಅರ್ಥ ವ್ಯವಸ್ಥೆಯ ಜತೆಗಿನ

ಭವಹರಣ ಮಾಡೋ ನಾಮಾ' 'ಅವಸಾನ ಕಾಲಕ್ಕೆ ಹಾದಿತೋರಿಸೋ ನಾಮಾ' 'ಅಂತಕರ ದೂತರನು ಹಿಂದು ಮಾಡಿ' ..... ಇತ್ಯಾದಿ. ಅವನ ಬಹುತೇಕ ತತ್ವಪದಗಳಲ್ಲಿ ಕೊಲೆಗೆ ಇಲ್ಲವೆ ಆತ್ಮಹತ್ಯೆಯ ಭಯಕ್ಕೆ ಈಡಾದ ತಲ್ಲಣದ ಮನಸ್ಥಿತಿ ಇದೆ. ಬಹುತೇಕ ತತ್ವಪದಗಳು ವಿಷಾದಗೀತೆಗಳು, ನೋವು ಸಂಕಟ ಭಯಗಳೇ ಸ್ಥಾಯಿ. ಇದು ದಾಸರ ಭಕ್ತಿಮಾರ್ಗದ 'ಅಂತಕ'ನ ಭಯವಲ್ಲ. ಲೋಕ ನೀಡುವ ಹಿಂಸೆಯ ಭಯ. ವಸಾಹತುಶಾಹಿ ರಾಜನೀತಿ ಮತ್ತು ಆರ್ಥಿಕ ನೀತಿಗಳ ನಡುವೆ ಆ ಕಾಲದ ಸಾಮಾನ್ಯ ಮನುಷ್ಯ ಅನುಭವಿಸಿದ ಸಮಾಜ ಮೂಲದಿಂದಲೇ ಬರುವ ಸಾವಿನಭಯ. 'ಊರೊಳಗಿಪ್ಪು ಉತ್ಪಾತವೇನೋ' ಕವಿತೆಯಲ್ಲಿ ಬರುವ 'ಚಾಡಿ ಹೇಳುವ ನೀಚಸಂಬಂಧಿ', 'ಮೋಹವೆಂಬ ಮೋಸಗಾರ', 'ಕಳ್ಳಬಂಟರ ಕಾಟ', 'ತಲೆಹುಳಕನಾಯಂಥ ತಳವಾರ' ಮೊದಲಾದ ಪದಗುಚ್ಛಗಳಿಗೆ ಇನ್ನೊಂದು ಅರ್ಥವೂ ಉಂಟು. ಇವು ವಸಾಹತುಶಾಹಿ ಆ ಕಾಲದಲ್ಲಿ ಗ್ರಾಮ ಸಮುದಾಯವನ್ನು ನಿಯಂತ್ರಿಸಲು ರೂಪಿಸಿದ ಕ್ರೂರ ರಾಜಕೀಯ ವ್ಯವಸ್ಥೆಯನ್ನು ಸೂಚಿಸುತ್ತವೆ. ಆ ವ್ಯವಸ್ಥೆ ಮನುಷ್ಯನನ್ನು ಸಾವಿನ ಭಯಕ್ಕೆ ತಳ್ಳಿದಂತಿದೆ. ಶ್ರೀಹರಿನಾಮ ಈ ಹಿಂಸೆಯಿಂದ ದೂರಮಾಡುವ ಭಯವನ್ನು ನಿವಾರಿಸುವ ದಾರಿಯಾಗಿದೆ. ಅತ್ಯಂತ ಸಾಮಾಜಿಕ ಮತ್ತು ಲೌಕಿಕ ಅರ್ಥದ ಶ್ರೀಹರಿ ಈತ. 'ವೈಕುಂಠಪತಿ ನಿಮ್ಮ ನಾಮ ಖಡ್ಗವ ಪಿಡಿದು ಅಂತಕನ ದೂತರನು ಹಿಂದು ಮಾಡಿ' ಎಂದು ದುಷ್ಟ ವ್ಯವಸ್ಥೆಯ ವಿರುದ್ಧದ ಹೋರಾಟಕ್ಕೆ ಶ್ರೀಹರಿನಾಮವನ್ನು ಒಂದು ಅಸ್ತ್ರವನ್ನಾಗಿಯೂ ಮಾಡಿಕೊಂಡಿದ್ದಾನೆ. 'ದವಸ ಕೊಡು ಧಾನ್ಯ ಕೊಡು' ಎಂದು ಶ್ರೀಹರಿಯನ್ನು ಕೇಳಿಕೊಳ್ಳುತ್ತಾನೆ. ತನ್ನ ಸಾಮಾಜಿಕ ಬದುಕಿನ ಅಗತ್ಯಗಳನ್ನು ಪೂರೈಸುವ ಶಕ್ತಿಯನ್ನಾಗಿ ಶ್ರೀಹರಿಯನ್ನು ಗ್ರಹಿಸಲಾಗಿದೆ. ಇಂಥ ಲೌಕಿಕ ಲಾಭ ದಕ್ಕದ ಸ್ಥಿತಿಯಲ್ಲಿ 'ಸ್ಥಿರವಲ್ಲ ಈ ಕೊಂಪೆ' ಎಂಬ ವಾದ ಹುಟ್ಟುತ್ತದೆ. ತನ್ನನ್ನ ಗುರುಮಾರ್ಗಕ್ಕೆ ಕರೆದೊಯ್ಯಲು ವಿನಂತಿಸುತ್ತಾನೆ. ಕೈವಾರ ತಾತಯ್ಯ ಈ ಕವಿತೆಯನ್ನು ಬರೆದ ಕಾಲ ಆತನ ತಾತ್ವಿಕ ವಿಕಾಸದ ಮಧ್ಯಮ ಹಂತವಿರಬೇಕು. ಭಕ್ತಿಮಾರ್ಗದಿಂದ ಯೋಗಮಾರ್ಗದ ಕಡೆಗೆ ಚಲಿಸುವ ಪ್ರಕ್ರಿಯೆಯನ್ನು ಈ ಪದ ಸೂಚಿಸುತ್ತದೆ. ಮುಂದೆ ಆತ ಸಂಪೂರ್ಣ ಯೋಗಮಾರ್ಗದ ಅವಧೂತನಾದಂಥ ಸ್ಥಿತಿಯನ್ನು ವಿವರಿಸುವ

ಕೈವಾರ ನಾರೇಯಣನಿಗೆ ಹರಿನಾಮವೆನ್ನುವದು ಒಂದು ವೈಚಾರಿಕ ಆಕೃತಿ. ಮನುಷ್ಯ ಸಾಮಾಜಿಕ ಬದುಕಿನಲ್ಲಿ ಅನುಭವಿಸುವ ಹಿಂಸೆಗೆ ಒಂದು ಪರಿಹಾರ. ಹಿಂಸೆಯನ್ನು ಹುಟ್ಟುಹಾಕಿದ ಶಕ್ತಿಗಳ ವಿರುದ್ಧದ ಯುದ್ಧೋಪಾದಿ ಸಂಘರ್ಷದಲ್ಲಿ ಒಂದು ಅಸ್ತ್ರ ಮತ್ತು ದಾರ್ಶನಿಕವಾದ ಪರ್ಯಾಯ ಮಾರ್ಗ

ಸಂಬಂಧದಲ್ಲಿ ಭಕ್ತಿಯನ್ನು ವ್ಯಾಖ್ಯಾನಿಸಿದ ಕವಿ, ನಂತರ ಆ ವ್ಯವಸ್ಥೆಯ ಜತೆಗಿನ ಸಂಬಂಧವನ್ನು ಬಿಟ್ಟು ಕೇವಲ ನಿರಾಕರಣೆಯೊಂದನ್ನೇ ಪ್ರತಿಪಾದಿಸತೊಡಗಿದ. ಹೀಗಾಗಿ ಅವು ಪಲಾಯನವಾದಿ ರಚನೆಗಳಾಗಿ ತೋರುತ್ತವೆ. ಭಕ್ತಿ ಸಾಹಿತ್ಯದ ಚಾರಿತ್ರಿಕ ವಿಕಾಸವನ್ನು ಅರ್ಥೈಸಿಕೊಳ್ಳುವ ಅಗತ್ಯವಿದೆ. ಇಂಥ ಬಡತನ ಆ ಕಾಲದ ಸಾಮಾನ್ಯ ಮನುಷ್ಯನಿಗೆ ಪ್ರಾಪ್ತವಾದದ್ದು ವಸಾಹಾತುಶಾಹಿ ರೂಪಿಸಿದ ಹೊಸ ಅರ್ಥವ್ಯವಸ್ಥೆಯಿಂದ. "ವಸಾಹಾತುಶಾಹಿ ಆಡಳಿತ ವ್ಯವಸ್ಥೆ, ಹೊಸ ಭೂವಿತರಣಾ ವ್ಯವಸ್ಥೆಯನ್ನು ರೂಪಿಸಿತು. ಬ್ರಿಟಿಷರು ಸುಮಾರು ಹನ್ನೊಂದು ಬಗೆಯ ಗೇಣಿ ಕ್ರಮಗಳನ್ನು ಜಾರಿಗೆ ತಂದರು. ರೈತವಾರಿ ವ್ಯವಸ್ಥೆ ಜಾರಿಗೆ ಬಂದಿತು. ಅಸಂಖ್ಯ ತೆರಿಗೆಗಳು ಹೇರಲ್ಪಟ್ಟವು. ಜನ ತೆರಿಗೆಗಳನ್ನು ಕಟ್ಟದೇ ಹೋದಾಗ ಭೀಕರವಾದ ಹಿಂಸೆಯನ್ನು ಅನುಭವಿಸಬೇಕಾಗಿತ್ತು. ಮೈಸೂರು ವಲಯದಲ್ಲಿ ಸರ್ಕಾರವು ದಂಗೆ ಎದ್ದವರ ಹಾಗೂ ದುಬಾರಿ ತೆರಿಗೆಗಳನ್ನು ನೀಡಲು ಅಸಾಮರ್ಥ್ಯವನ್ನು ತೋಡಿಕೊಂಡವರ ಬೆರಳು ಕತ್ತರಿಸುವ ಮತ್ತು ಕೈಕಾಲು ತೆಗೆಯುವ ಶಿಕ್ಷೆಗಳು ಜಾರಿಯಲ್ಲಿದ್ದವು."16 ಕೈವಾರ ನಾರೇಯಣ ಕೂಡ ಬ್ರಿಟಿಷರು ಹೇರಿದ ತೆರಿಗೆಗಳನ್ನು ಕುರಿತು ಕಾಲಜ್ಞಾನ ವಚನವನ್ನು ಬರೆದಿದ್ದಾನೆ. ಲೋಕದ ಹಿಂಸೆಗೆ ಭಕ್ತಿ ಪರ್ಯಾಯವಾಗಿ ರೂಪಿತವಾಗಿದೆ.

ಶ್ರೀಹರಿನಾಮವೆಂಬ ಪರ್ಯಾಯ
ಸ್ಥಿರವಲ್ಲ ಈ ಕೊಂಪೆ ಶೀಘ್ರದಲಿ ಬಿಟ್ಟು
ನಿಮ್ಮ ಸನ್ನಿಧಿ ದ್ವಾರವನೇರಬೇಕೋ
ಯಾವಾಗ ಸಮಯವೋ ಹೇಳಬೇಕೋ ಗುರುವೆ
ಭಯನಿವಾರಣೆ ಮಾಡೋ ಭವರೋಗ ವೈದ್ಯಾ।

ಕೈವಾರ ನಾರೇಯಣನ ಪದಗಳಲ್ಲಿ ಭಯಗ್ರಸ್ತ ಆತ್ಮದ ಬೆದರಿದ ಭಾವವಿದೆ. ಶ್ರೀಹರಿ ಅವನ ಪಾಲಿಗೆ ಲೌಕಿಕದ ಭಯವನ್ನು ನಿವಾರಣೆ ಮಾಡುವ ಒಂದು ಶಕ್ತಿ. ಶ್ರೀ ಹರಿಯನ್ನು ಕುರಿತಾದ ಈ ಸಾಲುಗಳನ್ನು ಗಮನಿಸಬಹುದು : 'ಬಡಿವಂಥವಾದವನು

ಹಲವಾರು ಪದಗಳಿವೆ. ಉದಾಹರಣೆಗೆ – 'ಹೊಸತಾಗೊಂದು ಮೀನೇ ಬಂದು ತುಂಬು ಕೆರೆಯನೀರು ಕುಡಿದು ಬಟಾಬಯಲು ಮಾಡಿತೋ'

ಕೈವಾರ ತಾತಯ್ಯನ ಶ್ರೀಹರಿ, ದಾಸರ ಶ್ರೀಹರಿಯಲ್ಲ. ದಾಸರಲ್ಲಿ ದ್ವೈತರಂಗನಿದ್ದರೆ ಇಲ್ಲಿ ಅದ್ವೈತರಂಗನಿದ್ದಾನೆ. 'ಕನಕದಾಸನ ಮನೆಯ ಬಡದಾಸ' ಎಂದು ಗುರುತಿಸಿಕೊಳ್ಳುವುದು ಸೂಕ್ತವೆನ್ನಿಸುತ್ತದೆ. ಯಾಕೆಂದರೆ ಕನಕದಾಸ, ದಾಸಪರಂಪರೆಯಲ್ಲಿದ್ದು ಅದ್ವೈತಕ್ಕೆ ಹಾತೊರೆದವನು. ಕೈವಾರನ ಶ್ರೀಹರಿ ಅದ್ವೈತದಾಚೆಗೂ ವಿಸ್ತಾರ ಹೊಂದುತ್ತಾನೆ. ಶಿಶುನಾಳನ ಶಿಶುನಾಳಧೀಶನ ಹಾಗೆ ಒಂದು ದಾರ್ಶನಿಕ ಪಂಥವಾಗುತ್ತಾನೆ.

ಅಭಿವ್ಯಕ್ತಿ ವಿಧಾನ

ಕೈವಾರ ನಾರೇಯಣನಿಗೆ ಹರಿನಾಮವೆನ್ನುವದು ಒಂದು ವೈಚಾರಿಕ ಆಕೃತಿ. ಮನುಷ್ಯ ಸಾಮಾಜಿಕ ಬದುಕಿನಲ್ಲಿ ಅನುಭವಿಸುವ ಹಿಂಸೆಗೆ ಒಂದು ಪರಿಹಾರ. ಹಿಂಸೆಯನ್ನು ಹುಟ್ಟುಹಾಕಿದ ಶಕ್ತಿಗಳ ವಿರುದ್ಧದ ಯುದ್ಧೋಪಾದಿ ಸಂಘರ್ಷದಲ್ಲಿ ಒಂದು ಅಸ್ತ್ರ ಮತ್ತು ದಾರ್ಶನಿಕವಾದ ಪರ್ಯಾಯ ಮಾರ್ಗ "ಬಡವಂಥವಾದ ಭರ ಹರಣ ಮಾಡೋ ನಾಮಾ" "ವೈಕುಂಠಪತಿ ನಿಮ್ಮ ನಾಮ ಖಡ್ಗವ ಪಿಡಿದು" ಎಂಬ ಸಾಲುಗಳನ್ನು ಗಮನಿಸಬಹುದು. 'ಊರೊಳಗಿಪ್ಪು ಉತ್ಪಾತ' ತತ್ವಪದದಲ್ಲಿ ಆತ "ಭಯ ನಿವಾರಣೆ ಮಾಡೋ ಭವರೋಗ ವೈದ್ಯ', ಹರಿನಾಮವೆನ್ನುವದು ಖಡ್ಗವಾದರೆ ತತ್ವಪದವೆನ್ನುವದು ಅದನ್ನು ಸಂರಕ್ಷಿಸುವ ತಾಣವಾದ ಒರೆ. ಆ ಕಾಲದ ಒಬ್ಬ ಸಾಮಾಜಿಕ ಮನುಷ್ಯನಿಗೆ ಈ ಖಡ್ಗ ಮತ್ತು ಒರೆಗಳು ಒಂದಾಗಿ ದಕ್ಕುವ ಸಾಧ್ಯತೆ ಇರಲಿಲ್ಲ. ಎಲ್ಲ ತತ್ವಪದಕಾರರು ಯೋಗಿಯ ವ್ಯಕ್ತಿತ್ವಧಾರಣೆ ಮಾಡಿದೊಡನೆಯೇ ತಮ್ಮ ಸಮಕಾಲೀನ ಸಮಾಜವನ್ನು ಕುರಿತು ಮಾತನಾಡತೊಡಗುತ್ತಾರೆ. ಶ್ರೀರಂಗನ ದರ್ಶನ ತನ್ನನ್ನು ಸತ್ಕವಿಯನ್ನಾಗಿಸಿತು ಎಂಬುವದು ಕೈವಾರ ತಾತನ ಅಭಿಮತ. ಹೀಗಾಗಿ ಭಕ್ತಿಮಾರ್ಗ ಯೋಗಮಾರ್ಗಗಳು ಆ ಕಾಲದಲ್ಲಿ ಹತ್ತಿಕ್ಕಲ್ಪಟ್ಟ ಸಾಮಾಜಿಕ ಮನುಷ್ಯನ ಅಭಿವ್ಯಕ್ತಿ

ಸ್ವಾತಂತ್ರ್ಯವನ್ನು ಮರಳಿ ಪಡೆಯುವ ಮಾರ್ಗೋಪಾಯವಾಗಿದ್ದರೆ ಅದರ ಅಭಿವ್ಯಕ್ತಿಯೇ ತತ್ವಪದಗಳು. ಊರೊಳಗಿನ ಉತ್ಪಾತವನ್ನು ನಿರೂಪಿಸಲು ಕೈವಾರ ತಾತನಿಗೆ ಅವನ ಭಕ್ತ ವ್ಯಕ್ತಿತ್ವದ ಕಾರಣದಿಂದ ಸಾಧ್ಯವಾಗಿದೆ. ತನ್ನ ಕಾಲದ ಸಾಮಾಜಿಕ ಬದುಕು, ತಾನು ಮತ್ತು ತನ್ನ ಹೊಸಮಾರ್ಗಗಳ ಪ್ರವೇಶಗಳ ಮುಖಾಮುಖಿಯಲ್ಲಿ ಈ ತತ್ವಪದ ರಚನೆಗೊಂಡಿದೆ. ಒಂದು ಸಮುದಾಯದ ಒಡಲಾಳದ ಅಸಹನೀಯವಾದ ಶೋಷಿತ ಬದುಕಿನ ಹತ್ತಿಕ್ಕಲ್ಪಟ್ಟ ಮೌನ ಮಾತುಪಡೆಯುವ ವಿಧಾನ ಈ ತತ್ವಪದದಲ್ಲಿದೆ. ತಾನು ಆ ಬದುಕನ್ನು ಬಿಟ್ಟುಬಂದರೂ. ತನ್ನ ಸಮುದಾಯದ ಸಂಕಟವನ್ನು ಅಭಿವ್ಯಕ್ತಿಸುವ ಈ ಬಗೆಯ ರಚನೆಗಳ ಸಾಮಾಜಿಕ ಜವಾಬ್ದಾರಿ ದೊಡ್ಡದೆಂದೇ ಹೇಳಬೇಕು. ಸಾಮಾನ್ಯ ಜನರನ್ನು ಹಿಂಸಿಸಿದಂತೆ ಒಬ್ಬ ಸನ್ಯಾಸಿಯನ್ನು ಹಿಂಸಿಸುವದು ಸುಲಭದ ಮಾತಾಗಿರಲಿಲ್ಲ. ಕೌಟುಂಬಿಕ ಬಂಧಗಳನ್ನು ಮೀರಿದವನ ಪ್ರತಿರೋಧ ಶಕ್ತಿಯ ಬಗ್ಗೆ ವ್ಯವಸ್ಥೆಗೆ ಭಯವಿದ್ದಂತೆ ತೋರುತ್ತದೆ. ನಿಷ್ಪಾಪಿ ಸನ್ಯಾಸಿಯ ಮೇಲಿನ ಹಿಂಸೆ ಸಮುದಾಯವನ್ನು ಉದ್ರೇಕಿಸಬಹುದೆಂಬ ಎಚ್ಚರ ವ್ಯವಸ್ಥೆಗಿದ್ದಂತಿದೆ. ವ್ಯವಸ್ಥೆಗಿರುವ ಭಯವನ್ನೇ ಬಂಡವಾಳ ಮಾಡಿಕೊಂಡು ಯೋಗಮಾರ್ಗದ ಖಡ್ಗವನ್ನು ತತ್ವಪದಕಾರರು ಝಳಪಿಸಿದಂತಿದೆ. 'ವಿಶ್ವಾಸಘಾತುಕ ಶಾನುಭೋಗ ಕೆಟ್ಟ ದುಷ್ಟ ಭಂಡ ಗುರಿಕಾರ' ಎಂಬ ಪದ್ಯವನ್ನು ಬರೆದು ಅದೇ ಊರಿನಲ್ಲಿ ಒಬ್ಬ ಸಾಮಾಜಿಕ ಮನುಷ್ಯ ಬದುಕುವ ಸಾಧ್ಯತೆಯನ್ನು ಕಲ್ಪಿಸುವದೂ ಅಸಾಧ್ಯ. ಆ ವ್ಯವಸ್ಥೆಯ ನೀಚತನ, ಹುಚ್ಚತನ, ಹಿಂಸಾತ್ಮಕತೆಗಳನ್ನು ಭಕ್ತಿಯ ಪಾರಿಭಾಷೆಯಲ್ಲಿಯೇ ಹೇಳಲು ಸಾಧ್ಯವಾಗಿರವದು ಈ ರಚನೆಯ ಮಹತ್ವವಾಗಿದೆ.

ಸಂದಿಗ್ಧತೆ

ಈ ತತ್ವಪದದ ರಚನೆಯನ್ನು ಗಮನಿಸಿದರೆ ಸಂದಿಗ್ಧತೆಯನ್ನು ತತ್ವಪದಕಾರ ಉದ್ದೇಶಪೂರ್ವಕವಾಗಿ ಬಳಸಿದಂತಿದೆ.

ಈ ಊರಿನೊಳಗಿಷ್ಟು ಉತ್ಪಾತವೇನೋ
ದುರಿತ ಸಂಹಾರ ನಾರೇಯಣ ಹರಿ
ವಿಶ್ವಾಸಘಾತುಕನು ಇಲ್ಲಿರುವ ಶ್ಯಾನುಭೋಗ
ಕೆಟ್ಟ ದುಷ್ಟ ಭಂಡ ಗುರಿಕಾರ

ಕೈವಾರ ನಾರೇಯಣ ಮೇಲುನೋಟಕ್ಕೆ ಭಾಗವತ ಪರಂಪರೆಯ ಭಕ್ತ ಹಾಗೂ ಕೀರ್ತನ ಸಾಹಿತ್ಯದ ಅನುಯಾಯಿಯಂತೆ ತೋರಿದರೂ ಭಕ್ತಿ ಮತ್ತು ಯೋಗಮಾರ್ಗಗಳ ಸಂಕರಿತ ತಾತ್ವಿಕತೆಯೊಂದನ್ನೂ ರೂಪಿಸಿಕೊಂಡಂತೆ ತೋರುತ್ತದೆ. ಇವನ 'ಈ ಊರೊಳಗಿಷ್ಟು ಉತ್ಪಾತವೇನೋ' ಎಂಬ ಕವಿತೆಯನ್ನು ಇಲ್ಲಿ ಚರ್ಚಿಸಲಾಗಿದೆ.

ಊರೊಳಗಿನ ಉತ್ಪಾತಕ್ಕೆ ದುಷ್ಟನಾದ ಶಾನುಭೋಗ ಕಾರಣವೆಂಬ ಬಹಿರಂಗದ ಸತ್ಯವನ್ನು ಹೇಳುತ್ತ ತಕ್ಷಣವೆ 'ಪಂಚೇಂದ್ರಿಯಗಳೆಂಬ ಪಾಪಾತ್ಮರೈವರು' ಎಂಬ ಅನುಭಾವಿಕ ಸಾಲು ಗೋಚರಿಸುತ್ತದೆ. ಸಮಾಜ ಮೂಲದ ರಚನೆ ದೇಹ ಮೂಲಕ್ಕೆ ನೆಗೆಯುತ್ತದೆ. 'ಚಾಡಿಹೇಳುವ ನೀಚ ಸಂಬಂಧಿ ಜನರುಂಟು' ಎಂದು ಮತ್ತೆ ಸಾಮಾಜಿಕ ವಾಸ್ತವವನ್ನು ವಿವರಿಸುತ್ತಲೇ 'ಮೋಹವೆಂಬೊಬ್ಬ ಮೋಸಗಾರ' ಎಂದು ದೇಹಕ್ಕೆ ನೆಗೆಯುತ್ತಾನೆ. 'ಇದರ ಮೇಲೆ ಮೂವರು ಕಳ್ಳಬಂಟರ ಕಾಟ' ವೆಂಬುದು ದೇಹ ಮೂಲದ ವಿವರಣೆಯಾದರೆ 'ತಲೆಹುಳಕ ನಾಯಂಥ ತಳವಾರನೊಬ್ಬ' ಎನ್ನುವದು ಸಾಮಾಜಿಕ ವಿವರಣೆ. ಹೀಗೆ ದೇಹದಿಂದ ಸಮಾಜಕ್ಕೆ ಸಮಾಜದಿಂದ ದೇಹಕ್ಕೆ ನೆಗೆಯುತ್ತ ಹೋಗುವ ರಚನೆಯ ಒಳಗಡೆ ಎಲ್ಲ ಹಂತಗಳಲ್ಲಿ ಒಂದು ಬಗೆಯ ಅರ್ಥಸಂಧಿಗ್ಧತೆ ಎದುರಾಗುತ್ತದೆ. ದೇಹಕ್ಕೂ ಸಮಾಜಕ್ಕೂ ಅನ್ವಯಿಸುವ ಎರಡೂ ಅರ್ಥದ ಧಾರೆಗಳನ್ನು ಬಿಚ್ಚುತ್ತ ಹೋಗುತ್ತದೆ. ಈ ಎರಡೂ ವಿವರಣೆಗಳ ಸಂಘರ್ಷದ ಮೂಲಕ ದೇಹದಲ್ಲಿ, ಊರಿನಲ್ಲಿ, ಸಮಾಜದಲ್ಲಿ ನಡೆಯುವ ಉತ್ಪಾತ ಕವಿತೆಯ ರಚನೆಯಲ್ಲಿಯೂ ಜರುಗುವದನ್ನು ಗಮನಿಸಬೇಕು. ದೇಹದಿಂದ ಸಮಾಜಕ್ಕೆ ಸಮಾಜದಿಂದ ದೇಹಕ್ಕೆ ನೆಗೆಯುವ ಪದ್ಯದೊಳಗಿನ ವಿವರಗಳು ತಮ್ಮ ಉತ್ಪಾತಿತ ಸ್ವರೂಪದಲ್ಲಿಯೇ ಎರಡೂ ಉತ್ಪಾತಗಳನ್ನು ಧ್ವನಿಪೂರ್ಣವಾಗಿ ಕಟ್ಟಿಕೊಡುತ್ತವೆ. ಹೀಗಾಗಿ ಇದು ಕೈವಾರ ನಾರೇಯಣನ ಒಂದು ಸಂಕೀರ್ಣವಾದ ಮತ್ತು ಉತ್ಕೃಷ್ಟವಾದ ಅಭಿವ್ಯಕ್ತಿಯ ಮಾದರಿಯಾಗಿದೆ.

ಸ್ಥಿರವಲ್ಲ ಈ ಕೊಂಪೆ ಶೀಘ್ರದಲಿ ಬಿಟ್ಟು
ನಿಮ್ಮ ಸನ್ನಿಧಿದ್ವಾರನೇರಬೇಕೋ
ಯಾವಾಗ ಸಮಯವೋ ಹೇಳಬೇಕೋ ಗುರುವೆ
ಭಯ ನಿವಾರಣೆ ಮಾಡೋ ಭವರೋಗ ವೈದ್ಯಾ

ಪದ್ಯದ ಕೊನೆಯ ಭಾಗದಲ್ಲಿ ಆ ಸಂದಿಗ್ಧತೆಗೆ ಸ್ಪಷ್ಟತೆ ದಕ್ಕುತ್ತದೆ. ಎರಡೂ ಅರ್ಥದ ನೆಲೆಗಳನ್ನು ಈ ಭಾಗ ಸ್ಪಷ್ಟಪಡಿಸುತ್ತದೆ.

ಕೈವಾರ ನಾರೇಯಣನ ಕಾವ್ಯದಲ್ಲಿ ಕಂಡುಬರುವ ಈ ಸಂದಿಗ್ಧತೆ ಆತ ಬದುಕಿರುವ ವ್ಯವಸ್ಥೆಯಲ್ಲಿ ಆತ ಎದುರಿಸಿದ ಸಂದಿಗ್ಧತೆಯಾಗಿದೆ. ಭಕ್ತಿ ಮತ್ತು ಯೋಗಮಾರ್ಗಕ್ಕೆ ಇನ್ನೂ ಅವಸ್ಥಾಂತರಗೊಳ್ಳದ ಸಧ್ಯದಲ್ಲಿಯೇ ಸಮಯ ಕೂಡಿಬರಲಿರುವ ಹಂತದಲ್ಲಿರುವ ತತ್ವಪದಕಾರ ವ್ಯವಸ್ಥೆಯನ್ನು ಮುಕ್ತವಾಗಿ ಟೀಕಿಸುವ ಸಾಮರ್ಥ್ಯವನ್ನು ಪಡೆದಂತಿಲ್ಲ. 'ಭವರೋಗ ವೈದ್ಯ' ಇನ್ನೂ ಭಯ ನಿವಾರಣೆ ಮಾಡಿಲ್ಲ. ಭಯದಿಂದ ನಿರ್ಭಯದೆಡೆಗಿನ ಚಲನೆಯ ಸಂದರ್ಭದಲ್ಲಿ ರಚನೆಗೊಂಡ ಪದ್ಯವಿದು. ಭಕ್ತಿಮಾರ್ಗ ಯೋಗಮಾರ್ಗದ ಬರಹಗಾರರು ಸಂದಿಗ್ಧತೆಯನ್ನು ಒಂದು ವಿಧಾನವಾಗಿ ಅಭಿವ್ಯಕ್ತಿಯಲ್ಲಿ ಬಳಸಿರುವ ಹಲವಾರು ರಚನೆಗಳನ್ನು ಅಧ್ಯಯನ ಮಾಡಿದರೆ ಈ ಬಗ್ಗೆ ಇನ್ನೂ ಹೆಚ್ಚಿನ ಹೊಳಹುಗಳನ್ನು ಪಡೆಯಬಹುದು. ■



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-560 091
ದೂರವಾಣಿ : 080-23480278, 9448048306

ಬಾಡಿಗೆ ಮನೆ

● ವಿಕಾಸ ಆರ್. ಮೌರ್ಯ

ಮದುವೆ ಆಗಿ ಎರಡು ವರ್ಷ ಕಳೆದ ಮೇಲೆ ಸುರೇಶನಿಗೆ ಸರ್ಕಾರಿ ನೌಕರಿ ಸಿಕ್ಕಿತ್ತು. ಇದು ಮನೆಯಲ್ಲಿದ್ದವರಿಗೆಲ್ಲ ಖುಷಿ ತಂದಿತ್ತು. ಹೆಂಡತಿ ಸುಮಿತ್ರಳಿಗಂತೂ ಹೇಳತೀರದಷ್ಟು ಖುಷಿ. ಆದರೂ ಬಂದು ವಿಚಾರಿಸುವವರ ಮುಂದೆ ಎಲ್ಲ ನಮ್ಮೆಜಮಾನರ ಶ್ರಮ ಎಂದು ಹೇಳುತಿದ್ದಳು. ಚಿಕ್ಕಂದಿನಿಂದಲು ಒಟ್ಟಿಗೆ ಬೆಳೆದ ಸುರೇಶ ಮತ್ತು ಸುಮಿತ್ರ ಮದುವೆ ಆಗುತ್ತಾರೆ ಎಂದು ಅವರಿಗೇ ತಿಳಿದಿರಲಿಲ್ಲ. ಬೆಳೆದು ದೊಡ್ಡವರಾದಾಗಲೂ ಸಹ ಚಿಕ್ಕವರಂತೆಯೇ ಕಚ್ಚಾಡುತ್ತಿದ್ದರು. ಸುಮಿತ್ರಳಂತೂ ಬಾಯಿ ಮಾಡಿದರೆ ಮುಗಿಯಿತು ಎಲ್ಲರು ಬಾಯಿ ಮುಚ್ಚಲೇಬೇಕು. ಸುರೇಶ ಸೌಮ್ಯ ಜೀವಿ, ಹೆಂಡತಿ ಅಂದರೆ ಪ್ರಾಣ. ಎರಡು ವರ್ಷ ಮಕ್ಕಳಾಗದಿದ್ದರೂ ಹೆಂಡತಿಗೆ ಒಂದು ಮಾತನ್ನದೆ ತನ್ನದು ಸಹ ಸಮಸ್ಯೆ ಇದೆಯೆಂದು ಹೇಳಿ ವೈದ್ಯರ ಬಳಿ ವಿಟಮಿನ್ ಮಾತ್ರೆಗಳನ್ನು ಬರೆಸಿಕೊಂಡು ಸುಮಿತ್ರಳ ಒಟ್ಟಿಗೆ ನುಂಗುತ್ತಿದ್ದ. ಊರೂರು ಸುತ್ತದ ಸುರೇಶನಿಗೆ ತನ್ನ ಜಿಲ್ಲೆಯಲ್ಲಿಯೇ ಕೆಲಸ ಸಿಕ್ಕಿದ್ದು ಸಂತಸ ತಂದಿತ್ತು. ಕೆಲಸಕ್ಕೆ ಹಾಜರಾಗಿ ಬಂದಿದ್ದ ಸುರೇಶ ಅಲ್ಲೆ ಮನೆ ಮಾಡಿಕೊಂಡು ಇರುವುದಾಗಿ ತೀರ್ಮಾನಿಸಿಕೊಂಡಿದ್ದ. ಇದಕ್ಕೆ ಸುಮಿತ್ರಳ ಒಪ್ಪಿಗೆಯನ್ನು ಸಹ ಪಡೆದಿದ್ದ. ಮನೆಗೆ ಬಂದ ಸುರೇಶನಿಗೆ ತುಂಬು ಹೃದಯದಿಂದ ಸ್ವಾಗತ ಕಾದಿತ್ತು. ಸಿಹಿ ಮಾಡಿ ಸುರೇಶನ ಬರುವಿಗಾಗಿಯೇ ಮನೆಯವರೆಲ್ಲ ಕಾಯುತ್ತಿದ್ದರು.

ಮಾತು ಕತೆ ಮುಗಿಸಿ ಮುಖತೊಳೆದು ಬಂದ ಸುರೇಶನ ಮುಂದೆ ಸಿಹಿ ಪಾಯಸವಿಟ್ಟಾಗ "ಈಗ್ಯಾಕೆ ಸುಮಿ ಸಿಹಿ ಮಾಡಿದೆ ಒಟ್ಟಿಗೆ ನನ್ನ ಮೊದಲ ತಿಂಗಳ ಸಂಬಳಕ್ಕೆ ಭರ್ಜರಿಯಾಗಿ ಮಾಡಬಹುದಿತ್ತಲ್ಲ" ಎಂದ. ಅದಕುತ್ತರಿಸಿದ ಸುಮಿತ್ರ "ಆಗಬೇಕಾದರೆ ಖಾರ ಮಾಡಿಕೊಂಡು ತಿನ್ನೋಣ ಈಗ ಸಿಹಿ ತಿನ್ನು ಮಾವ" ಎಂದು ನಾಚಿಕೊಂಡ ಸುಮಿತ್ರಳನ್ನು ನೋಡಿ "ಏನೇ ಇವತ್ತು ಹೊಸದಾಗಿ ನಾಚಿಕೊಳ್ಳುತ್ತಿದ್ದೀಯ" ಎಂದು ಮಾತು ಮುಂದುವರೆಸಿದವನೇ "ನಾಳೆ ಬಾಡಿಗೆ ಮನೆ ಹುಡುಕಲು ಹೇಳಿದ್ದೀನಿ, ಮನೆ ಸಿಕ್ಕ ತಕ್ಷಣ ನೀನು ಬರುವಿಯಂತೆ ಆಯ್ತ?" ಎಂದು ಪ್ರಶ್ನಿಸಿದ. ಯಾವುದೊ ಗುಂಗಿನಲ್ಲಿ ಇದ್ದ ಸುಮಿತ್ರ "ನಮ್ಮ ಜೊತೆಗೆ ಇನ್ನೊಬ್ಬರು ಬರುತ್ತಿದ್ದಾರೆ" ಎಂದಳು. ತಲೆಕೆರೆದುಕೊಂಡ ಸುರೇಶ "ಅಲ್ವೆ ನಾಳೆ ಮನೆ ನೋಡಿ ಒಟ್ಟಿಗೆ ಹೋಗೋಣ ಅಂದ್ರೆ ನಿನ್ನ ಜೊತೆಗೆ ಇನ್ನೊಬ್ಬರನ್ನು ಕರೆದುಕೊಂಡು ಬರುತ್ತೇನೆ ಅಂತಾಯಿದ್ದೀಯಲ್ಲ. ಮನೆ ನೋಡೋಕೆ ನೀನು ಬೇಕಾದರೆ ಬಾ ಆದರೆ ಇನ್ನೊಬ್ರು ಬೇಡ. ಆ ಜನಜಂಗುಳಿಯಲ್ಲಿ ಹಿಂಸೆ ಆಗತ್ತೆ" ಎಂದ ಸುರೇಶ. ಅದಕ್ಕೆ ಜೋರಾಗಿ ಮನೆಯವರೆಲ್ಲ ನಕ್ಕರು, ಸುರೇಶನಿಗೆ ಒಂದೂ ತಿಳಿಯದಾಯಿತು. ಅಷ್ಟೊತ್ತಿಗೆ ಸುಮಿತ್ರ "ಥೂ ನಿನ್ನ, ನಾನು ಹೇಳಿದ್ದು ಇನ್ನು ಏಳು ತಿಂಗಳಿಗೆ ನಮ್ಮ ಮನೆಗೆ ಒಬ್ಬ ಪುಟ್ಟ ಸುರೇಶ ಬರುತ್ತಾನೆ ಅಂತ" ಎಂದಳು.

ಅಷ್ಟಕ್ಕೆ ಅರ್ಥಮಾಡಿಕೊಂಡ ಸುರೇಶ "ನಿಜ! ಅಯ್ಯೋ ನನ್ನ ರಾಣಿ ಮನೆಗೆ ಬರಬೇಕಾಗಿರೋದು ಪುಟ್ಟ ಸುರೇಶ ಅಲ್ಲ ಪುಟ್ಟ ಸುಮಿ ಎಂದು ಸುಮಿತ್ರಳನ್ನು ಎಂಜಲ ಕೈಯಲ್ಲೆ ಎತ್ತಿ ಒಂದು ಸುತ್ತಾಕಿದ. ಮಧ್ಯರಾತ್ರಿವರೆಗೆ ಮನೆಯವರೆಲ್ಲ ಮಾತನಾಡಿಕೊಂಡೆ ಕಾಲ ಕಳೆದರು. ನಾಳೆ ಭಾನುವಾರ ಮೊದಲ ಬಸ್ಸಿಗೆ ಬಾಡಿಗೆ ಮನೆ ಹುಡುಕಲು ಹೋಗಬೇಕಾಗಿದ್ದರಿಂದ ಅಲ್ಲಿಗೆ ಮಾತು ನಿಂತು ಎಲ್ಲರೂ ಮಲಗಲು ಹೊರಟರು.

ಬೆಳಿಗ್ಗೆ ಬೇಗನೇ ಎದ್ದು ರೆಡಿಯಾದ ಸುರೇಶ ಮತ್ತು ಸುಮಿತ್ರ ಬಸ್ಸು ಹತ್ತಿ ಜಿಲ್ಲಾಕೇಂದ್ರವನ್ನು ತಲುಪಿದರು. ಹೋಟೆಲೊಂದರಲ್ಲಿ ಸುಮಿತ್ರಳಿಗೆ ಇಷ್ಟವಾದ ಮಸಾಲೆದೋಸೆಯನ್ನು ತಿಂದು ಮನೆ ಹುಡುಕಲು ಹೊರಟರು. ಸುರೇಶನ ಆಫೀಸಿನ ಸುತ್ತ ಒಳ್ಳೊಳ್ಳೆ ಮನೆಗಳಿದ್ದವು. ಆದರೆ ಅವುಗಳ ಬಾಡಿಗೆ ಅತಿ ಹೆಚ್ಚಿತ್ತು. ಧೈರ್ಯ ಮಾಡಿ ಸುರೇಶ ಇದ್ದದ್ದರಲ್ಲೆ ತಕ್ಕಮಟ್ಟಿನ ಮನೆ ಹುಡುಕಲು ತನ್ನ ಆಫೀಸಿನ ನೌಕರರೊಬ್ಬರಿಗೆ ಹೇಳಿದ್ದನಾದರೂ ಅವರು ಮರೆತಿದ್ದರು. ಅದಕ್ಕೆ ಖುದ್ದು ಗಂಡ-ಹೆಂಡತಿಯರಿಬ್ಬರೇ ಬಾಡಿಗೆಗೆ ಮನೆ ಖಾಲಿ ಇದೆ ಎಂಬ ಫಲಕವನ್ನು ನೋಡುತ್ತಾ ಹೊರಟವರಿಗೆ ಆರಂಭದಲ್ಲಿಯೆ ಒಂದು ಮನೆ ಕಂಡಿತು. ಗೇಟಿನ ಒಳಹೋಗಿ ಮಾಲೀಕರ ಮನೆಯ ಕರೆ ಗುಂಡಿಯನ್ನು ಒತ್ತಿದೊಡನೆ ಒಳಗಿಂದ ಹೆಣ್ಣು ಧ್ವನಿಯೊಂದು "ಯಾರದು" ಎಂದು ಪ್ರಶ್ನಿಸಲು ಏನು ಹೇಳಬೇಕೆಂದು ತಿಳಿಯದ ಸುರೇಶ ಸುಮ್ಮನೆ ನಿಂತದ್ದನ್ನು ನೋಡಿ ಸುಮಿತ್ರ "ಬಾಡಿಗೆ ಮನೆ ನೋಡಲು ಬಂದಿದ್ದೀವಿ" ಎಂದಳು. ಸ್ವಲ್ಪಹೊತ್ತಿನಲ್ಲೆ ಎದುರು ಕಿಟಕಿಯಿಂದ ಪ್ರತ್ಯಕ್ಷವಾದ ದಡೂತಿ ಹೆಂಗಸು ಇಲ್ಲಿ ಬನ್ನಿ ಪ್ಲೀಸ್, ಎಂದದನ್ನು ಕಂಡು ಕಿಟಕಿಯ ಬಳಿ ಸುಮಿತ್ರ ಹೊರಟಳು. ಸುಮಿತ್ರಳನ್ನು ಕಂಡ ಕೂಡಲೇ "ನೀವು ಬ್ರೋಕರ್ ಕಡೆಯವರಾ?" ಎಂದು ಪ್ರಶ್ನಿಸಿದಳು ಮನೆಯ ಮಾಲೀಕೆ. "ಇಲ್ಲ ಹಾಗೆ ಮನೆಹುಡುಕಿಕೊಂಡು ಬಂದಿದ್ದೇವೆ ಅಷ್ಟೆ" ಎಂದಳು ಸುಮಿತ್ರ. ಕಪ್ಪಗೆ ದುಂಡನೆ ಮುಖವಿದ್ದ ಸುಮಿತ್ರಳನ್ನು ನೋಡಿ ಏನನ್ನೋ ಅಂದಾಜಿಸುವಂತೆ ನೋಡುತ್ತಿದ್ದ ಮನೆ ಮಾಲೀಕೆ "ಇಲ್ಲಿ ಪಕ್ಕದ್ದೇ ಬಾಡಿಗೆಮನೆ, ಸಂಸಾರಸ್ಥರಿಗೆ ಮಾತ್ರ ನಾವು ಮನೆ ಕೊಡುತ್ತೇವೆ. ಅದರಲ್ಲೂ ಬ್ರಾಹ್ಮಣರೇ ಆಗಿರಬೇಕು" ಎಂದಳು. ಮೊದಲಿನಿಂದಲು ತಮ್ಮ ಊರಿನ ಮನೆ ಬಿಟ್ಟು ವಾಸಮಾಡದ ಸುರೇಶ ಮತ್ತು ಸುಮಿತ್ರರಿಗೆ ಇದು ಹೊಸ ಅನುಭವವೇ ಆಗಿತ್ತು. ಅವರಿವರ ಬಳಿ ಕೇಳಿದ್ದ ಸಂಗತಿಯನ್ನು ಇವರು ಪ್ರತ್ಯಕ್ಷವಾಗಿ ಗಮನಿಸಿದ್ದರು. ಊರಿನ ಮೇಲ್ಜಾತಿ ಕುಟುಂಬಗಳು ಸಹ ಇವರನ್ನು ಮನೆಗೆ ಸೇರಿಸಿಕೊಳ್ಳುತ್ತಿರಲಿಲ್ಲವಾದರೂ ಅವರ ಮನೆ ಬಳಿ ತೆರಳುವಂತ ಕೆಲಸವೇನು ಇವರಿಗೆ ಇರುತ್ತಿರಲಿಲ್ಲ. ಕೆಲಸವೇನಿದ್ದರೂ ಅವರ ಹೊಲಗಳಲ್ಲಿ ಮಾತ್ರ. ಆದರೆ ವಿದ್ಯಾವಂತರೇ ತುಂಬಿರುವ ಸಿಟಿಗಳಲ್ಲೂ ಕೂಡ ಇಂತಹ ನೀಚ ಪದ್ಧತಿಯನ್ನು ನೋಡಿ ಇಬ್ಬರಿಗು ಆಶ್ಚರ್ಯವಾಯಿತು. ಸೌಮ್ಯವಾಗಿ ಸುರೇಶ ಇರಲಿ ಬಿಡಿ ಅಮ್ಮ, ನಾವು ಬರ್ತಿವಿ ಎಂದು ಮುಂದೆ ಹೆಜ್ಜೆ ಇಡುತ್ತಿದ್ದಾಗ ಸುಮಿತ್ರ ರೇಗಿ " ಅಮ್ಮ ತಾಯಿ ಟೂ ಲೆಟ್ ಬೋರ್ಡ ಕೆಳಗಡೆ ಬ್ರಾಹ್ಮಣರಿಗೆ ಮಾತ್ರ ಅಂತ ಬರೆಸು. ನಮ್ಮಂತೋರಿಗೆ ಸಮಯ ಉಳಿಯತ್ತೆ" ಎಂದಳು. ಅದಕ್ಕುತ್ತರವಾಗಿ ಅವಳಿಗೆ ದಡ್ ಎಂಬ ಕಿಟಕಿ ಬಾಗಿಲು ಮುಚ್ಚಿದ ಶಬ್ದ ಉತ್ತರಿಸಿತ್ತು.

"ಈ ಜಾತಿ ಇಂತ ಸಿಟಿನೇ ಬಿಟ್ಟಿಲ್ಲವಲ್ಲ ಮಾವ, ನಮ್ ಊರಿನ ಗೌಡರ ತರಾನೆ ಈಯಮ್ಮನು ಅನಿಸ್ತಾಳೆ. ನೋಡೋಕೆ ಕುಂಕುಮ ಹಾಕ್ಕಂಡು ಸಂಪನ್ನಳಂಗೆ ಕಾಣ್ತಳೆ. ಆದ್ರೆ ಮನಸಿನೊಳಗೆ ವಿಷ ತುಂಬಿಕೊಂಡಿದ್ದಾಳೆ. ಬ್ರಾಹ್ಮಣರೇ ಬೇಕಂತೆ ಇವಳಿಗೆ. ದಿನಾ ಹಣೆಗೆ ಹಾಕೋ ಕುಂಕುಮಾನ ಬ್ರಾಹ್ಮಣರೇ ಮಾಡ್ತಾರೇನು ಮಾವ? ಇವಳ ಸೀರೆ, ಕುಬುಸಾನ ಬ್ರಾಹಣರೆ ಮಾಡ್ತಾರ? ಹೊಲಿತಾರ?" ಹೀಗೆಯೆ ಸುಮಿತ್ರಳ ಮಾತು ಮುಂದುವರೆಯುತ್ತಿರಲು ಅವಳ ಕೈ ಹಿಡಿದು ಸಮಾಧಾನಪಡಿಸುತ್ತಿದ್ದ ಸುರೇಶನಿಗೆ ಮತ್ತೊಂದು ಬಾಡಿಗೆಮನೆ ಖಾಲಿ ಇರುವ ಫಲಕ ಕಂಡಿತು. ಗೇಟಿನ ಬಳಿ ಹೋದ ತಕ್ಷಣ ಒಳಗಿದ್ದ ನಾಯಿಯು ಬೊಗಳಲು ಸುರುಮಾಡಿತು. ನಾಯಿಯ ಸದ್ದು ಕೇಳಿ ಹೊರಬಂದ ಮಾಲೀಕನಿಗೆ "ಬಾಡಿಗೆಗೆ ಮನೆ ಬೇಕಾಗಿತ್ತು" ಎಂದನು ಸುರೇಶ. "ಒಂದು ನಿಮಿಷ ಬಂದೆ" ಎಂದು ಒಳಹೋದ ಮಾಲೀಕ ತನ್ನ ಹೆಂಡತಿಯನ್ನು ಕಳಿಸಿದ. ಹೊರಬಂದ ಮಾಲೀಕೆ "ಮನೆ ನೋಡಿಕೊಂಡು ಬನ್ನಿ" ಎಂದು ಕೀಲಿಕೈ ಕೊಟ್ಟಳು. ಮಹಡಿಯ ಮೇಲಿದ್ದ ಮನೆಯನ್ನು ನೋಡಲು ಮೆಟ್ಟಿಲುಗಳನ್ನು ಹತ್ತುತ್ತಿರುವಾಗ ಏನನ್ನೋ ಜ್ಞಾಪಿಸಿಕೊಂಡವಳಂತೆ ಮನೆ ಮಾಲೀಕೆ ಸುರೇಶನನ್ನು ತಡೆದು ನಿಲ್ಲಿಸಿ "ನಿಮ್ಮ ಬ್ರೋಕರ್ ಎಲ್ಲಿ" ಎಂದು ಕೇಳಿದಳು. "ನಾವು ಯಾವುದೇ ಬ್ರೋಕರ್ ಕಡೆಯಿಂದ ಬಂದವರಲ್ಲ, ಹಾಗೆ ಬೋರ್ಡ್ ನೋಡಿ ಬಂದವರು" ಎಂದ ಕೂಡಲೆ ಬೆಚ್ಚಿಬಿದ್ದ ಮಾಲೀಕೆ "ನೀವು ಯಾವ ಕೆಟಗರಿಗೆ ಬರ್ತಿರ?" ಎಂದು ಕೇಳಿದಳು. ಕಣ್ಣು ಕೆಂಪಗಾಗಿಸಿಕೊಂಡ ಸುಮಿತ್ರ ಮರುಪ್ರಶ್ನಿಸುತ್ತ "ನಿಮಗೆ ಯಾವ ಕೆಟಗರಿಯವರು ಬೇಕು?" ಎಂದು ಕೇಳಿದಳು. "ನೋಡಿ ನಮಗೆ ಲಿಂಗಾಯತರೇ ಬೇಕು, ಅದರಲ್ಲು

ಸಾದರರಾದರೆ ಉತ್ತಮ" ಎಂದಳು. ಗಂಡನ ಕೈಲಿದ್ದ ಕೀಲಿಯನ್ನು ಕಿತ್ತುಕೊಂಡು ಮಾಲಿಕೆಯ ಕೈಗೆ ತುಕ್ಕರಿಸಿದ್ದ ಸುಮಿತ್ರ, ನಿಮ್ಮ "ಟೂ ಲೆಟ್ ಬೋರ್ಡಿನ ಕೆಳಗೆ ಸಾದಾರ ಲಿಂಗಾಯತರಿಗೆ ಮಾತ್ರ ಎಂದು ಬರೆಸಿ" ಎಂದು ಹೊರಡುತ್ತಿದ್ದಂತೆ. ಸಿಡುಕಿ ಮಾತಾಡಿದ ಮಾಲೀಕ "ನಿನ್ನನ್ನಾರು ಬಾರಮ್ಮ ಮನೆ ನೋಡು ಅಂದೋರು? ನಮ್ಮನೆ ನೋಡಬೇಕಂದ್ರೆ ಬ್ರೋಕರ್ ಕಡೆಯಿಂದಾನೆ ಬರಬೇಕು. ನಾಗರಿಕತೆಯಿಲ್ಲದ ಜನಗಳು" ಎಂದು ಬೈದುಕೊಳ್ಳುತ್ತ ಬೋರ್ಡನ್ನೆ ಕಿತ್ತುಹಾಕಿದಳು.

ಇತ್ತ ನಡೆಯುತ್ತಲೆ ಕಿರುಚಾಡುತ್ತಿದ್ದ ಸುಮಿತ್ರಳನ್ನು ಸಮಾಧಾನಪಡಿಸುವಷ್ಟರಲ್ಲಿ ಸುರೇಶನಿಗೆ ಸಾಕುಸಾಕಾಯಿತು. "ಅವಳಾವಳೋ ಬ್ರಾಹ್ಮಣರು ಬೇಕು ಅಂದಳು ಇವಳ್ಯಾವಳೊ ಲಿಂಗಾಯತರೊಳಗೆ ಸಾದರು ಬೇಕಂತಾಳೆ" ಗೋಣಗುತ್ತಲೆ ನಡೆಯುತ್ತಿದ್ದಳು ಸುಮಿತ್ರ "ನಮ್ ಮನೆಗೆ ಆ ಜಲಗಾರರ ಸ್ನೇಹಿತೆ ವಾಣಿ ಬಂದಾಗಲೂ ನಮ್ಮಜ್ಜಿ ಇದೇ ತರಹ ಅವ್ರ ಜಾತಿ ಕೇಳಿ ಮನೆಯಿಂದ ಹೊರಗೆ ನಿಲ್ಲಿಸಿದ್ದಳು. ಅವಳ ಮುಖ ಮುಚ್ಚ, ಅದಕ್ಕೆ ಬೇಗ ಸತ್ತಳು ಪಾಪಿಷ್ಟೆ. ನಮ್ಮಪ್ಪ ನಮ್ಮಮ್ಮಾನು ಹಂಗೆ ಆಡ್ತಾವೆ ಆದರೆ ಒಂದು ಸಾರೀನು ಮನೆಗೆ ಬರಬೇಡಿ ಅಂತ ಹೇಳಿಲ್ಲ ಅದೇ ನನ್ನ ಪುಣ್ಯ. ಅಲ್ಲ ಇವಕ್ಕೆಲ್ಲ ಏನು ಬಂದಿದೆ ಅಂತೀನಿ? ನಾಚಿಕೆ ಬುಟ್ಟು ಜಾತಿ ಜಾತಿ ಅಂತಾವಲ್ಲ ಮಾಮ. ಇವು ಓದಿ ಏನು ಪ್ರಯೋಜನ? ಇವರ್ ಮನೆಗೆ ಬುನಾದಿ ಹಾಕಿದೋನು, ಇಟ್ಟಿಗೆ ಕಟ್ಟಿದ್ದು, ಸಿಮೆಂಟ್ ಮಾಡಿದ್ದು, ಬಾಗಿಲು ಕಿಟಕಿ ಮಾಡಿದ್ದು, ಸುಣ್ಣ ಬಣ್ಣ ಬಳಿದದ್ದು ಲಿಂಗಾಯತಾನಾ? ಅದರಲ್ಲು ಸಾದರರ? ಬ್ರಾಹ್ಮಣರಾ? ಅವರವರ ಜಾತಿಯವರ? ಎಷ್ಟು ಓದಿದ್ದರೇನಂತೆ ನಮ್ಮಜ್ಜಿನು ಒಂದೇ ಇವೂ ಒಂದೇ. ಮನುಷ್ಯತ್ವವಿಲ್ಲದ ಮುಂಡೇವು. ಇಂತಾವಕ್ಕೆ ಅಂತಿಂತ್ರ ಸಾವು ಬರಲ್ಲ ನೋಡು" ಹೀಗೆ ಸುಮಿತ್ರಳ ವಿಮರ್ಶೆ ನಡುವೆ ಬೈಗುಳ ಮುಂದುವರಿದೇ ಇತ್ತು. ಅದಕ್ಕೆ ಸುರೇಶ ತಲೆ ಹಾಕುತ್ತ ನಡೆಯುತ್ತಲೇ ಇದ್ದಂತೆ ಮುಂದೆ ಟೂ ಲೆಟ್ ಬೋರ್ಡ ಕಾಣಿಸಿತು.

ಸುರೇಶ ಆ ಗೇಟಿನ ಬಳಿ ಹೊರಟಂತೆ ಅವನನ್ನೆ ಹಿಂಬಾಲಿಸಿದಳು ಸುಮಿತ್ರ. ಸುರೇಶ ಗೇಟಿನ ಬಾಗಿಲು ತೆಗೆಯಬೇಕೆನ್ನುವಷ್ಟರಲ್ಲಿ "ಮಾಮ" ಎಂದು ಕೂಗಿದ ಎಲ್ಲ ಜಾತಿಯಲ್ಲೂ ಜಾತಿವಾದಿಗಳು ಇದ್ದಾರೆ ಮಾನವತಾವಾದಿಗಳು ಇದ್ದಾರೆ" ಎಂದು ಸುಮಿತ್ರಳಿಗೆ ಹೇಳಿದ ಮೇಲೆ ಸ್ವಲ್ಪ ಸಮಾಧಾನವಾದ ಸುಮಿತ್ರ ಸರಿ ನಡಿ ಎಂದು ಅವಳೆ ಗೇಟು ತೆಗೆದಳು.

ಒಳಗೆ ಹೋಗಿ ಕರೆಗುಂಡಿಯನ್ನು ಒತ್ತಿದ ಸ್ವಲ್ಪಹೊತ್ತಿನಲ್ಲಿಯೇ ಸಾಮಾನ್ಯವಾಗಿ ಒಳಗಿನಿಂದ "ಯಾರದು?" ಎಂಬ ಗಂಡಸು ಧ್ವನಿ ಬಾಡಿಗೆಗೆ ಎಂದು ಖಚಿತಪಡಿಸಿಕೊಂಡ ಮೇಲೆ ಬಾಗಿಲು ತೆರೆದ ಕಸ್ಸಡಕಧಾರಿಯೊಬ್ಬರು ಪಕ್ಕದಲ್ಲಿಯೇ ಇದ್ದ ಹಂಚಿನ ಮನೆಯನ್ನು ತೋರಿಸಿ "ಅದೆ ಮನೆ" ಎಂದು ಹೇಳಿದ. ಸ್ವತಃ ಕೀಲಿಕೈ ತಂದವನೆ ಹೊರಗಿನ ಕಲ್ಲಿನ ಜಗುಲಿಯ ಮೇಲ ಕೂರಿಸಿ ಸುರೇಶನ ಪರಿಚಯಕ್ಕೆ ಮುಂದಾದ. "ನಿಮ್ಮದು ಯಾವ ಊರು? ಯಾವ ಮನೆದೇವರು? ಹೆಣ್ಣುದೇವರಾವುದು?" ಮುಂತಾದ ಪ್ರಶ್ನೆಗಳೆಲ್ಲ ಬಂದ ಮೇಲೆ, ಜಾತಿಯನ್ನು ಸಹ ಕೇಳಿದರು. ಪಕ್ಕದಲ್ಲೆ ಕುಳಿತಿದ್ದ ಸುಮಿತ್ರ ಸುರೇಶನ ಕೈ ಚಿವುಟಿ "ನಾವು ಕ್ರೈಸ್ತರು" ಎಂದಳು. ಅದಕ್ಕೆ ತಲೆಯಾಡಿಸಿ "ಓಹೋ ನೀವು ಯೇಸುವನ್ನು ನಂಬಿರುವವರು" ಎಂದು ಮೆಲ್ಲಗೆ ಹೇಳಿಕೊಂಡ ಮಾಲೀಕ ಮೇಲೆದ್ದು "ಮನೆ ನೋಡಿ ಬನ್ನಿ" ಎಂದು ಕರೆದುಕೊಂಡು ಹೋದ. ಸುಮಿತ್ರಳ ಉಪಾಯ ಫಲಿಸಿದ್ದನ್ನು ನೋಡಿ ಸುರೇಶನು ಕೂಡ ಸಂಭ್ರಮಿಸಿದ. ಆದರೆ ಮನೆಯೊಳಗೆ ಹೋಗಿ ನೋಡಿದಾಗ ಅವರಿಗೆ ನಿರಾಸೆ ಕಾದಿತ್ತು. ಬಹಳ ದಿನಗಳಿಂದ ಈ ಮನೆಯಲ್ಲಿ ಯಾರೂ ವಾಸವಿಲ್ಲ ಎನ್ನುವ ಸಂಗತಿ ಎದ್ದುಕಾಣುತ್ತಿತ್ತು. ಇಬ್ಬರಿಗೂ ಸಹ ಮನೆ ಇಷ್ಟವಾಗಲಿಲ್ಲ. ಮಾಲೀಕನಿಗೆ ನಾವು ನಾಳೆ ಮತ್ತೆ ಬರುತ್ತೇವೆ ಎಂದು ಹೊರಟರು.

ಸಂಜೆತನಕ ಹೊಟ್ಟೆಗೆ ಊಟವಿಲ್ಲದೆ ಕೇವಲ ಎಳೆನೀರಲ್ಲೆ ಕಾಲಕಳೆದಿದ್ದ ಅವರಿಗೆ ಜಾತಿ ಕೇಳದ ಕೆಲವು ಮನೆ ಸಿಕ್ಕಿದವಾದರೂ ಅಂತಹವು ವಾಸಮಾಡಲು ಯೋಗ್ಯವಾಗಿರಲಿಲ್ಲ. ಕೆಲವು ಪಾಳುಬಿದ್ದಿದ್ದವು ಇಂತಹ ಮನೆಗಳನ್ನು ಬಾಡಿಗೆಗೆ ಕೊಡುತ್ತಿದ್ದುದೆ ಬರಿ ದುಡ್ಡಿಗಾಗಿ, ಇನ್ನು ಕೆಲವು ಮನೆಗಳನ್ನು ದಲಿತರೆಂದ ಮೇಲೆ ಕೊಟ್ಟರಾದರೂ ಷರತ್ತುಗಳ ಸುರಿಮಳೆಯನ್ನೇ ಹರಿಸಿದರು. ಅವುಗಳಲ್ಲಿ ನೀರನ್ನು ಬೇರೆ ಕಡೆಯಿಂದ ತರಬೇಕು. ಉಪ್ಪು ಸೊಪ್ಪು ಎಂದುಕೊಂಡು ಮಾಲೀಕರ ಮನೆಗೆ

ಬಸ್ಸಿನಲ್ಲಿ ಆರಾಮಾಗಿ ಸುರೇಶ ನಿದ್ದೆ ಹೋದನಾದರೂ ಸುಮಿತ್ರಳಿಗೆ ಮಾತ್ರ ತಲೆ ತುಂಬ ಒಂದು ಪ್ರಶ್ನೆ ಕಾಡುತ್ತಿತ್ತು, ಅದೇನೆಂದರೆ " ಬಾಡಿಗೆ ಕೇಳಲು ಹೋದ ಪ್ರತಿ ಮನೆಯಲ್ಲೂ ನಾಯಿಗಳನ್ನು ಸಾಕಿದ್ದರು. ಅದನ್ನು ಅವರ ಮಕ್ಕಳು ಮುದ್ದಾಡಿಯೇ ಮುದ್ದಾಡುತ್ತಾರೆ. ಮನೆಯೊಳಗೆ ಬಿಟ್ಟುಕೊಳ್ಳುತ್ತಾರೆ. ಪ್ರೀತಿಸುತ್ತಾರೆ ಅದಕ್ಕೇನಾದರೂ ಆದರೆ ನೋವು ಪಡುತ್ತಾರೆ, ಅಳುತ್ತಾರೆ. ನಾವು ಅವರ ಹಾಗೆಯೆ ಮನುಷ್ಯರು, ಆದರೆ ನಮಗೆ ಅವರ ಮನೆಗೂ ಪ್ರವೇಶವಿಲ್ಲ ಮನಸ್ಸಿಗೂ ಪ್ರವೇಶವಿಲ್ಲ. ಆ ನಾಯಿಗಿರುವ ಸ್ವಾತಂತ್ರ್ಯ, ಬೆಲೆ ನಮಗೆ ಇಲ್ಲ. ಇದು ನ್ಯಾಯವಾ? ಇದು ಒಂದು ಧರ್ಮವಾ?" ಹೀಗೆ ಯೋಚಿಸುತ್ತಲೇ ನಿದ್ದೆಹೋದಳು.

ಸುಮಿತ್ರಳ ಕಡೆ ತಿರುಗಿ "ಈಗೇನಾಯಿತು?" ಎಂದ. "ಒಳಗಡೆಗೆ ಹೋಗುವ ಮೊದಲು ಮನೆ ಮಾಲೀಕರ ಹೆಸರು ನೋಡು ಬಾ" ಎಂದಳು. ನಾಮಫಲಕದಲ್ಲಿ ಬೆಟ್ಟೇಗೌಡ, ಪಾರ್ವತಿ ಎಂದು ಬರೆದಿತ್ತು. "ಅದಕ್ಕೇನಂತೆ ಬಾ ಹೋಗೋಣ" ಎಂದ ಸುರೇಶನನ್ನು "ತಲೆಕೆಟ್ಟಿದೆಯ ನಿನಗೆ? ನಮ್ಮೂರಿನಲ್ಲಿ ನಾವು ಗೌಡರ ಮನೆಯೊಳಗೆ ಹೋಗೋಕಾಗುತ್ತ? ಅವರು ನಮ್ಮನ್ನ ಬಿಡ್ತಾರ? ಒಂದು ಸಾರಿ ಹನುಮಂತನ ಗುಡಿಗೆ ನಮ್ಮವರು ಹೋಗಿದ್ದಕ್ಕೆ ಎಷ್ಟು ಜಗಳ ಆಗಿದ್ದು. ಗೌಡರುಗಳೆಲ್ಲ ನಮ್ಮನ್ನ ಹೇಗೆ ಬಡಿದಿದ್ದರು ನೆನಪಿಲ್ವ?" ಎಂದಳು. ಸುಸ್ತಾಗಿದ್ದ ಸುರೇಶ ಸುಮಿತ್ರಳನ್ನು ಪಕ್ಕದಲ್ಲೆ ಇದ್ದ ಕಲ್ಲಿನ ಕಟ್ಟೆಯ ಮೇಲೆ ಕೂರಿಸಿ " ನೋಡು ಸುಮಿ ನೀನು ತಿಳಿದುಕೊಂಡಿರುವ ಹಾಗೆ ಈ ಜಾತಿಯವರೆಲ್ಲ ಕೆಟ್ಟವರಲ್ಲ. ಅವರಲ್ಲೂ ಒಳ್ಳೆಯ ಮನಸ್ಸಿನವರಿದ್ದಾರೆ. ಜಾತಿ ವಿಚಾರ ಬಂದಾಗ ನಿಮ್ಮಪ್ಪ ಅಮ್ಮಾನು ಹೀಗೆ ಆಡ್ತಾರೆ. ನಿನ್ನ ತಮ್ಮನಿಗೆ ಬೇರೆ ಜಾತಿಯ ಹುಡುಗಿಯನ್ನ ಮದುವೆ ಮಾಡಿಸು ನೋಡೋಣ. ಇದನ್ನು ಸರಿಮಾಡಬೇಕಂದ್ರೆ ನಾವು ಮೊದಲು ಸರಿ ಆಗುತ್ತ ಜೊತೆಜೊತೆಗೆ ಬೇರೆಯವರನ್ನ ಸರಿಮಾಡಬೇಕು. ನಾವೆಲ್ಲ ಮನೇಲಿ ಅಂಬೇಡ್ಕರ್ ರವರ ಫೋಟೊ ಇಟ್ಟುಕೊಂಡಿದ್ದೀವಿ. ಅವರಿಗೆ ಅಂಬೇಡ್ಕರ ಅಂತ ಹೆಸರಿಟ್ಟವರು ಒಬ್ಬ ಬ್ರಾಹ್ಮಣ ಶಿಕ್ಷಕರು. ಅವರ ಹೋರಾಟದಲ್ಲೂ ಸಹ ಎಷ್ಟೋ ದಲಿತರಲ್ಲದವರು ಸಹಾಯ ಮಾಡಿದ್ದಾರೆ. ಇನ್ನು ಆಗಿನ ಕಾಲದಲ್ಲೇ ದಲಿತನ ಜೊತೆ ಬ್ರಾಹ್ಮಣರ ಮಗಳ ಮದುವೆ ಮಾಡಿಸಿದ್ದು ಯಾರು? ಇದೇ ಲಿಂಗಾಯತರ ಹುಟ್ಟಿಗೆ ಕಾರಣರಾಗಿರುವ ಬಸವಣ್ಣನವರು. ಮೈಸೂರು ಪ್ರಾಂತ್ಯದಲ್ಲಿ ದಲಿತರಿಗೆ ಪಾಠ ಮಾಡಲು ಶಿಕ್ಷಕರೇ ಮುಂದೆ ಬರಲಿಲ್ಲವಂತೆ ಆಗ ದಲಿತರಿಗೆ ಪಾಠಮಾಡಿದ್ದು ಒಬ್ಬ ಗೌಡರು. ಮುಂದೆ ಅವರು ದಲಿತರಿಗೆ ಹಾಸ್ಟೆಲ್‌ಗಳನ್ನು ಸಹ ಮಾಡಿದರಂತೆ. ಇಂತಹ ಮಹಾತ್ಮರೆಲ್ಲ ಜಾತಿಯನ್ನು ಮೀರಿದವರು. ಹೋಗಬಾರದು ಮತ್ತು ಕೆಲವು ಕಡೆ ಅಕ್ಕಪಕ್ಕದ ಮನೆಗೆ ಹೋಗಬಾರದು. ಯಾವುದೆ ಕಾರಣಕ್ಕೂ ನಿಮ್ಮ ನಿಜ ಜಾತಿಯನ್ನು ಹೇಳಬಾರದು. ಈ ರೀತಿ ಮನುಷ್ಯತ್ವಕ್ಕೆ ಬೆಲೆ ಇಲ್ಲದ ಊರಿನಲ್ಲಿ ಅಲೆದಾದ ಮೇಲೆ ಸಾಕುಸಾಕಾದ ದಂಪತಿಗಳು ಕೊನೆಗೆ ಬ್ರೋಕರನ್ನೆ ಭೇಟಿಯಾಗಿ ತಮ್ಮ ಕಷ್ಟವನ್ನು ಹೇಳಿಕೊಂಡಾದ ಮೇಲೆ "ಈ ಏರಿಯಾದಲ್ಲಿ ಇರುವವರೆಲ್ಲರು ಮೇಲ್ಜಾತಿಯವರು. ನಿಮ್ಮಂತವರಿಗೆ ವರ್ಷವಿಡೀ ಹುಡುಕಿದರೂ ಇಲ್ಲಿ ಸರಿಯಾದ ಮನೆ ಸಿಗುವುದಿಲ್ಲ" ಎಂದು ಹೇಳಿ ಅವರಿಗಾಗಿ ಪಕ್ಕದಲ್ಲೆ ಇರುವ ಕಾಲೋನಿಯೊಂದರಲ್ಲಿ ಮನೆ ಕೊಡಿಸುತ್ತೀನಿ ಎಂದು ಭರವಸೆ ನೀಡಿದ ಮೇಲೆ ಅದಾಗಲೆ ತಡವಾಗಿದ್ದ ಕಾರಣ ನಾಳೆ ಮನೆ ನೋಡಲು ಬರುವುದಾಗಿ ಹೇಳಿ ದಂಪತಿಗಳಿಬ್ಬರೂ ಅವನ ಫೋನ್ ನಂಬರ್ ತೆಗೆದುಕೊಂಡು ರಾತ್ರಿ ಬಸ್ಸನ್ನು ಹತ್ತಿದರು. ಬಸ್ಸಿನಲ್ಲಿ ಆರಾಮಾಗಿ ಸುರೇಶ ನಿದ್ದೆ ಹೋದನಾದರೂ ಸುಮಿತ್ರಳಿಗೆ ಮಾತ್ರ ತಲೆ ತುಂಬ ಒಂದು ಪ್ರಶ್ನೆ ಕಾಡುತ್ತಿತ್ತು, ಅದೇನೆಂದರೆ " ಬಾಡಿಗೆ ಕೇಳಲು ಹೋದ ಪ್ರತಿ ಮನೆಯಲ್ಲೂ ನಾಯಿಗಳನ್ನು ಸಾಕಿದ್ದರು. ಅದನ್ನು ಅವರ ಮಕ್ಕಳು ಮುದ್ದಾಡಿಯೇ ಮುದ್ದಾಡುತ್ತಾರೆ. ಮನೆಯೊಳಗೆ ಬಿಟ್ಟುಕೊಳ್ಳುತ್ತಾರೆ. ಪ್ರೀತಿಸುತ್ತಾರೆ ಅದಕ್ಕೇನಾದರೂ ಆದರೆ ನೋವು ಪಡುತ್ತಾರೆ, ಅಳುತ್ತಾರೆ. ಅದರ ಜೊತೆ ಆಟವಾಡಿಕೊಂಡು ನಗುತ್ತಾರೆ ಆದರೆ ನಾವು ಅವರ ಹಾಗೆಯೆ ಮನುಷ್ಯರು, ಅವರಿಗೂ ನಮಗೂ ಅಂಗಾಂಗಗಳಲ್ಲಿ ಸ್ವಲ್ಪವು ಕೂಡ ವ್ಯತ್ಯಾಸವಿಲ್ಲ. ಆದರೆ ನಮಗೆ ಅವರ ಮನೆಗೂ ಪ್ರವೇಶವಿಲ್ಲ ಮನಸ್ಸಿಗೂ ಪ್ರವೇಶವಿಲ್ಲ. ಆ ನಾಯಿಗಿರುವ ಸ್ವಾತಂತ್ರ್ಯ, ಬೆಲೆ ನಮಗೆ ಇಲ್ಲ. ಇದು ನ್ಯಾಯವಾ? ಇದು ಒಂದು ಧರ್ಮವಾ?" ಹೀಗೆ ಯೋಚಿಸುತ್ತಲೇ ನಿದ್ದೆಹೋದಳು. ■

ಮಾನವ ಸಂಸ್ಕೃತಿ ಮತ್ತು ಶಂಬಾ ಗ್ರಹಿಕೆ

ಡಾ॥ ಎಸ್. ನಟರಾಜ ಬೂದಾಳು

ಶಂಬಾ ಪ್ರಸ್ತುತತೆ

ಶಂಬಾ ಅವರ ಅನುಸಂಧಾನದ ವರ್ತಮಾನದ ಆಕರ್ಷಣೆಯೆಂದರೆ ಅವರೊಬ್ಬರು ಪ್ರಮಾಣಭಂಜಕರೆನ್ನುವುದು, ಈ ಶತಮಾನದ ಇನ್ನೊಬ್ಬ ಪ್ರಮುಖ ಪ್ರಮಾಣಭಂಜಕರೆಂದರೆ ಕುವೆಂಪು.

ಕುವೆಂಪು ಅವರ ಈ ಭಂಜನೆಗೆ ಪರಂಪರೆಯ ಸಾತತ್ಯ ಇದೆ. ಆಧುನಿಕ ವಿಜ್ಞಾನ ಮತ್ತು ಅನೇಕ ಅದ್ವೈತವಾದಿ ಪಂಥಗಳ ತಾರ್ಕಿಕ ಸಮರ್ಥನೆ ಇದೆ. ಆದರೆ ಶಂಬಾ ಅವರು ಒದಗಿಸಿಕೊಳ್ಳುವ ಪರಂಪರೆಯ ಸಮರ್ಥನೆಯ ಸ್ವರೂಪ ಬೇರೆ. ಅವರಿಗೆ ವೇದ-ಉಪನಿಷತ್ತುಗಳೇ ಕೇಂದ್ರ ಮತ್ತು ಸರ್ವಸ್ವ. ಅವುಗಳನ್ನು ವಿರೋಧಿಸಲೂ ಅವರು ಮತ್ತೆ ಅವುಗಳನ್ನೇ ಅವಲಂಬಿಸುತ್ತಾರೆ. ಶಂಬಾ ಜೀವನದ ಕೇಂದ್ರಾನುಭವವು ವೇದಾರ್ಥಗಳಿಗೆ ಸಂಬಂಧಪಟ್ಟದ್ದು ವೇದಾರ್ಥ ಪ್ರತಿಮೆಗಳು ಏಕಕಾಲಕ್ಕೆ ಶಂಬಾ ಅವರಿಗೆ ಪುರಾತನ ಮತ್ತು ನೂತನ. ಅವರ ಅಧ್ಯಯನದ ಇನ್ನೊಂದು ಆಕರ್ಷಣೆಯೆಂದರೆ ಸಂಸ್ಕೃತಿ ಚಿಂತನೆಯಲ್ಲಿ ಉತ್ತರ ಕೇಂದ್ರಿತ ಮಾದರಿಯನ್ನು ಭಂಗಿಸಿದವರು ಶಂಬಾ. ಅದು ಕರ್ನಾಟಕದ ನಕಾಶೆ ತೆಗೆಯುವುದರಿಂದ ಹಿಡಿದು ಕರ್ನಾಟಕ ಸಂಸ್ಕೃತಿಯ ಅಸ್ಮಿತೆಯನ್ನು ರೂಢಿಸಿಕೊಡುವವರೆಗೆ.

ಶಂಬಾ ಅವರ ಸಂಶೋಧನಾ ವಿಧಾನದಲ್ಲಿ ಪ್ರಮುಖವಾದುದು: ಮಾನವನ ಇತಿಹಾಸವು ಪುರಾಣದ ಮುಂದುವರಿಕೆ ಎಂಬ ನಂಬುಗೆಯನ್ನಾಧರಿಸಿದೆ. ನಮ್ಮ ಸಾಮಾನ್ಯ ಗ್ರಹಿಕೆಯಲ್ಲಿ ಇತಿಹಾಸ ಮತ್ತು ಪುರಾಣಗಳ ನಡುವೆ ವಿಭಜನೆಯ ಗೆರೆ ದಪ್ಪವಾಗಿಯೇ ಇದೆ. ಇದನ್ನು ಶಂಬಾ ಅಳಿಸಿಹಾಕುತ್ತಾರೆ. ಹಾಗಾಗಿ ಶಂಬಾ ಓದು ಒಂದು ರೀತಿಯ ಗೊಂದಲವನ್ನುಂಟುಮಾಡುತ್ತದೆ. ಆದರೆ ನಮ್ಮ ನಡುವಿನ ಸಂಸ್ಕೃತಿ ತಿಳಿವಳಿಕೆಯ ಸಂಗ್ರಹ ಇದೆಯಲ್ಲ ಅಥವಾ ಯಾವುದನ್ನು ನಾವು ಜ್ಞಾನ (epistemology ಎನ್ನುವ ಅರ್ಥದಲ್ಲಿ) ಎಂದು ಕರೆದುಕೊಂಡು ಅನುಸಂಧಾನ ಮಾಡುತ್ತಿದ್ದೇವೆಯೋ ಅದು ಸುಮಾರು ಮೂರು ಸಾವಿರ ವರ್ಷಗಳ ಈಚೆಗೆ ಕಂಡುಕೊಂಡದ್ದು ಮತ್ತು ಭಿನ್ನ ಉದ್ದೇಶಗಳ ಈಡೇರಿಕೆಗಾಗಿ 'ಉತ್ಪಾದಿತವಾದ ಜ್ಞಾನ' ಎನ್ನುವುದು ಶಂಬಾ ನಿಲುವು. ಮಾನವನ ಇತಿಹಾಸದ ದೀರ್ಘ ಯಾನದಲ್ಲಿ ಇದೇನು ಅಂಥಾ ದೊಡ್ಡ ಅವಧಿಯಲ್ಲ. ಹಾಗಾಗಿ ಇದನ್ನು ಸುಲಭವಾಗಿ ಪಕ್ಕಕ್ಕೆ ಸರಿಸಿ ನೋಡಬಹುದು ಎಂಬುದು ಶಂಬಾ ಅವರ ವಿಶ್ವಾಸ.

ಶಂಬಾ ಸಂಸ್ಕೃತಿ ಸಂಶೋಧಕರು. ಬಹು ಹಿಂದಿನಿಂದಲೂ ಭಾರತೀಯ ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿರುವ ಆರ್ಯಕೇಂದ್ರಿತ ಮಾದರಿಯನ್ನು ಪ್ರಶ್ನಿಸುತ್ತಿರುವವರು. ಸ್ಥಳೀಯರ ಸಾಂಸ್ಕೃತಿಕ ಚರಿತ್ರೆ ಎಂಬುದು ಕೇವಲ ಅನುಬಂಧವಾಗುತ್ತಿರುವ ಬಗೆಯನ್ನು ಅವರು ನಿರಾಕರಿಸಿದ್ದಾರೆ. ಆರ್ಯ-ದ್ರಾವಿಡ ತಾತ್ವಿಕ ಸಂಘರ್ಷದ ಸ್ವರೂಪವನ್ನು ಪುನಾರಚಿಸುವುದು ಅವರ ಗುರಿಯಾಗಿದೆ. ತಮಿಳುನಾಡನ್ನು ಹೊರತುಪಡಿಸಿ ದಕ್ಷಿಣಭಾರತವನ್ನು ಒಂದು ಭೌಗೋಳಿಕ-ಭಾಷಿಕ-ಸಾಂಸ್ಕೃತಿಕ ಘಟಕವನ್ನಾಗಿ ಪುನಾರಚಿಸುವ ಪ್ರಯತ್ನ ಮಾಡಿದ್ದಾರೆ. ಇದೊಂದು ಬಹುಮುಖಿಯಾದ ಪ್ರಯತ್ನ.

ಕನ್ನಡ ಸಂಸ್ಕೃತಿಯ ಆಮೂಲಾಗ್ರ ಶೋಧನೆ, ನಾಗಸಂಸ್ಕೃತಿ, ಜಲಸಂಸ್ಕೃತಿ, ಶಿವ ಸಂಸ್ಕೃತಿ, ಚಾಂದ್ರ ಸಂಪ್ರದಾಯ, ಮಾತೃಸಂಸ್ಕೃತಿಗಳ ಶೋಧನೆಗೆ ತಮ್ಮ ಬದುಕನ್ನು ಕೊಟ್ಟುಕೊಂಡ ಶಂಬಾ ಕನ್ನಡದ ಮಹಾವಿದ್ವಾಂಸರು. ಸುಮಾರು 2000 ಪುಟಗಳ ಶಂಬಾ ಅವರ ಸಂಶೋಧನಾ ಸಾಹಿತ್ಯದ ಒಟ್ಟು ಕ್ಯಾನ್‌ವಾಸನ್ನು ಗಮನಿಸಿದಾಗ ದ್ರಾವಿಡ ಮತ್ತು ಆರ್ಯರ ನಡುವಿನ ಸಾಂಸ್ಕೃತಿಕ ಸಂಘರ್ಷವನ್ನು ಅನುಸಂಧಾನ ಮಾಡುತ್ತಿರುವ ಅವರ ನಿಲುವು ಅವುಗಳ ಸಾಮರಸ್ಯದ ಉದ್ದೇಶದ್ದೋ, ಆರ್ಯಪರವಾದದ್ದೋ, ದ್ರಾವಿಡಪರವಾದದ್ದೋ ಅಥವಾ ನಿರ್ಲಿಪ್ತದ್ದೋ ಎಂಬ ಪ್ರಶ್ನೆಯನ್ನು ಎದುರಾಗದಿರಲು ಸಾಧ್ಯವಿಲ್ಲ. ಸರಳವಾಗಿ ಹೇಳುವುದಾದರೆ ಅವರು ಮಾಡುತ್ತಿರುವುದು ವೇದೋಪನಿಷತ್ತಿನ ಶಬ್ದಪ್ರತಿಮೆಗಳ ಮೂಲಕ ಒಂದು ಸನಾತನ ಜೀವನ ಮೀಮಾಂಸೆಯನ್ನು ಕಟ್ಟುವ ಪ್ರಯತ್ನ. ಈ ಪ್ರಯತ್ನದಲ್ಲಿ ಮೊದಲಿಗೆ ಎದ್ದುಕಾಣುವ ಅಂಶವೆಂದರೆ ಭಾರತದ ಇತರ ಪ್ರಮುಖ ಶ್ರಮಣಧಾರೆಗಳು ನಡೆಸಿರುವ ತಾತ್ವಿಕ ಸಂಘರ್ಷ ಶಂಬಾ ಅವರಿಗೆ ಅಷ್ಟು ಪ್ರಮುಖವಲ್ಲ. ವಿವಸ್ವನ್ ಮನುಪ್ರಣೀತ ಮಾನವಧರ್ಮ ಎಂದು ಅವರು ಹೆಸರಿಸುವ ಒಂದು ಜೀವನ ಮೀಮಾಂಸೆಯನ್ನು ತಮ್ಮ ಸಂಶೋಧನಾ ಬರಹಗಳ ಉದ್ದಕ್ಕೂ ಪ್ರಸ್ತಾಪಿಸುತ್ತಲೇ ಇರುತ್ತಾರೆ. ದಿಕ್ಕಾಪಾಲಾಗಿ ಹರಿಯುವ ಅವರ ಲಹರಿಯ ಬರವಣಿಗೆಯನ್ನು ಒಂದು ಬಂಧಕ್ಕೆ ಜೋಡಿಸಿಕೊಂಡು ಓದುವುದು ತುಂಬಾ ಪ್ರಯಾಸದ ಕೆಲಸ. ಅವರದ್ದು ಅತ್ಯಂತ ಅರಾಜಕವಾದ ನಡಿಗೆಯ ಬರವಣಿಗೆ.

ಅವರ ಮಾನವಧರ್ಮದ ಗ್ರಹಿಕೆಯ ಬಗೆಗೆ ಇದೊಂದು ಪ್ರತಿಕ್ರಿಯೆ ಮಾತ್ರ.

ಶಂಬಾ-ಮಾನವಧರ್ಮ

'ಭಾರತದಲ್ಲಿ ವಿವಸ್ವನ್ ಮನುಪ್ರಣೀತ ಮಾನವಧರ್ಮ ಎಂಬ ಒಂದು ಸಂಪ್ರದಾಯವು ಪ್ರಚಲಿತದಲ್ಲಿತ್ತು. ಆದರೆ ಅದನ್ನು ಸ್ವಾಯಂಭುವ ಮನುಪ್ರಣೀತ 'ಮಾನವ ಧರ್ಮವು ನೆಲಕ್ಕೆ ಉರುಳಿಸಿತು. ಭಾರತ ಸಮಾಜದ ಸದ್ಯದ ಸಂಕಟಕ್ಕೆ ಇದೇ ಕಾರಣ' ಇದು ಶಂಬಾ ಅವರ ದೃಢವಾದ ನಿಲುವು. ಇಲ್ಲಿ ವರ್ಣಿತ ಮನುವು ಒಂದು ಮಾನವ ವ್ಯಕ್ತಿಯಲ್ಲ. ದೇಹ ಮತ್ತು ಚೇತಸ ಈ ವಿಭಾಗದ್ವಯದಿಂದ ಕಾಲಚಕ್ರದ ಸುಳಿಯಲ್ಲಿ ಸಿಲುಕಿದ್ದ

ನರನಿಗೆ ಮನುಜತ್ವವು ಲಭಿಸಲು ಕಾರಣವಾದ ಪ್ರಜ್ಞೆಯ ಅಂಗವಾದ ಮನ:ಶಕ್ತಿಯನ್ನು 'ಮನು' ಸಂಕೇತದಿಂದ ಸೂಚಿಸಿದ್ದಾರೆ. ವಿವಸ್ವನ್ ಎಂಬುದು ಒಂದು ಸಾಂಸ್ಕೃತಿಕ ಪ್ರತಿಮಾ ಸಂಕೇತ. ಈ ಸಂಕೇತವು ಪ್ರಾಚೀನ ಸಂಸ್ಕೃತಿಯ ಜೀವನ ವಿಧಾನವನ್ನು ತಿಳಿಸುತ್ತಿದೆ. ಸೌರಪ್ರಕಾಶ ತತ್ತ್ವದಿಂದ ಪ್ರೇರಿತವಾದ ವಿವಸ್ವನ್ ಮಾನವನ ಜೀವನದರ್ಶನದ ಆಕೃತಿ ಸ್ವರೂಪದ ವೈಶಿಷ್ಟ್ಯವೆಂದರೆ ಅದು ವಿಶ್ವಮಾನವನ ಸಮಷ್ಟಿ ಪ್ರಜ್ಞಾಪ್ರವಾಹ ಅಥವಾ ನಿಸರ್ಗವಿವೇಕ. ಅದನ್ನು Folk wisdom ಎಂದೂ ಸೂಚಿಸುತ್ತಾರೆ. ಇಲ್ಲೊಂದು ವಿಶೇಷಾಂಶವಿದೆ ಅದೇನೆಂದರೆ ಇದು ಕೇವಲ ಜೈವಿಕಾಂಶಗಳ ಸಂಯೋಗದಿಂದ ಬಂದುದಲ್ಲ, ಬದಲಿಗೆ ಅದರಾಚೆಗಿನ ಸಮೂಹ ಪ್ರಜ್ಞೆಯ ಒಂದಂಶ ಇಲ್ಲಿ ಪ್ರಮುಖವಾಗಿದೆ. ವಿವಸ್ವನ್ ಪರಂಪರೆ (ವೈವಸ್ವತ ಮನು) ಮೂಲ ಮನುಪ್ರಣೀತ ಮಾನವಧರ್ಮವು ಇಡೀ ಮಾನವ ಜೀವನದಷ್ಟು ವಿಶಾಲವಿದೆ. ಇದು Supernaturalism ಅಲ್ಲ. ದೇವರು ಅಥವಾ ದೇವರ ಪ್ರತಿನಿಧಿ, ಗುರು ಇಂಥ ಗ್ರಹಿಕೆಗೆ ಈ ಮೂಲಮಾನವಧರ್ಮದಲ್ಲಿ ತಿಲಮಾತ್ರವೂ ಅವಕಾಶವಿಲ್ಲ. ಈ ವಿವಸ್ವನ್ ಮನು ಪ್ರಚೋದಿತ ಧರ್ಮವೇ ನಿಜವಾದ ಧರ್ಮ. ಪ್ರಜ್ಞಾಶಕ್ತಿಯೊಡನೆ ಬದ್ಧಮನಸ್ಸಿನ ಪ್ರೇರಣೆಯೊಡನೆ ಆಚರಿಸಲ್ಪಡುವ ಧರ್ಮವೇ ಮನುಜ ಧರ್ಮ. ಸಮಾಜ ಸಮಷ್ಟಿಯ ಪಾತಳಿಯ ಮೇಲೆ ಇರುವಂಥದ್ದು. ಸಮಾಜ ಸಮಷ್ಟಿಯ ಪ್ರಜ್ಞೆಯು ಹಗಲನ್ನು ಅಪೇಕ್ಷಿಸುತ್ತದೆ. ಇದು ಸೌರಕಾಲ. ಈ ಧರ್ಮದ ನೈಸರ್ಗಿಕತೆಯನ್ನು ಮನಗಾಣಿಸಿಕೊಡುವ ಪರಿಭಾಷೆ ಭಾರತೀಯರಲ್ಲಿ ಎಂದಿನಿಂದಲೇ ಇದೆ. ಇದು ಜನಪದ ಪ್ರಜ್ಞೆ, ಆದರೆ ಇದರ ಸ್ಪಷ್ಟ ಭಾಷಾ ಕುರುಹುಗಳು ಸಿಗುವುದು ವೇದೋಪನಿಷತ್ತಿನಲ್ಲಿ. ಪ್ರಪಂಚದ ಇತರ ಪ್ರಾಚೀನ ಜ್ಞಾನಕೋಶಗಳಲ್ಲಿಯೂ ಇದರ ಕುರುಹುಗಳಿವೆ. ಈ ವಿವಸ್ವನ್ ಮನುಧರ್ಮದ ತಾತ್ವಿಕ ಆಕಾರವೆಂದರೆ:

ಮೊದಲನೆಯ ಪಾತಳಿಯಲ್ಲಿ:

1. ಇದು ಭೌತವಾದಿ ಕಾಲ ಪ್ರವಾಹಕ್ಕೆ ಒಳಪಟ್ಟದ್ದು
2. ಆತ್ಮವಾದಿಯಾದದ್ದು. (Essence/ Form is imminent in all things)
3. Being in becoming – ಸ್ವಭಾವವಾದಿಯಾದದ್ದು.

ಪ್ರತಿಯಾಗಿ ನರ–ನಾಡಿಗಳ ಆಂತರಿಕ ಪ್ರಚೋದನೆಯಿಂದ ಆಚರಿಸಲ್ಪಡುತ್ತಿರುವ ಈಗಿನ ಧರ್ಮ 'ನರಧರ್ಮ'. ಇದರ ಕಾಲಚಕ್ರ ವೃತ್ತಾಕೃತಿಯದು. ಜನನ–ಮರಣ ರೂಪದ ಚಕ್ರಾಕೃತಿಯಲ್ಲಿ ಇರುತ್ತದೆ. ಇದು ಪ್ರಾಣಲಿಂಗ, ನಾಗ, ಚಂದ್ರರಿಂದ ಪ್ರೇರಿತ ಕಾಲ – ರಾತ್ರಿ ಪ್ರೇರಕ ಕಾಲ ಶಕ್ತಿ ಇದು ಚಾಂದ್ರ ಕಾಲ. ಇದೇ ವರ್ತಮಾನದ ಎಲ್ಲ ಕೇಡುಗಳಿಗೆ ಕಾರಣ. ನಮ್ಮ ಬದುಕಿನ ಕ್ರಮವನ್ನು ಇದು ದಿಕ್ಕುತಪ್ಪಿಸಿದೆ. ಇದರಿಂದ ಪ್ರಣೀತವಾದ ಪ್ರತಿಮಾ ಸಂಕೇತಗಳನ್ನು ಬದಲಿಸಿಕೊಳ್ಳುವವರೆಗೆ ನಮಗೆ ಸರಿದಾರಿ ತೋರುವುದಿಲ್ಲ. ಇದು ಇಂದಿನ ಸ್ವಾಯಂಭು ಮನುಧರ್ಮದ ಬಗೆಗೆ ಶಂಬಾ ಅವರ ನಿಲುವು. ಕಾಲ್ಪನಿಕ ವೈವಸ್ವತ ಮನುವಿನ ಮನ್ವಂತರದ ಬಗೆಗಿನ ಶ್ರದ್ಧೆ ಮತ್ತು ಸ್ವಾಯಂಭು ಮನುವಿನ ಮನ್ವಂತರದ ವಾಸ್ತವ ನಿರಾಕರಣೆ ಅವರಲ್ಲಿನ ಸ್ಥಾಯೀಭಾವ.

ಶಂಬಾ ಅವರು ಮುಂದಿಡುತ್ತಿರುವ ಮಾನವಧರ್ಮದ ಸ್ಥೂಲ ವಿವರಣೆ:

ಈ ಜೀವನ ಮೀಮಾಂಸೆಗೆ:

1. ಆದಿಯೊಂದನ್ನು ಮುಂದಿಡುತ್ತಿದ್ದಾರೆ
2. ಆತ್ಮವಾದಿ ದೃಷ್ಟಿಕೋನ (Form is imminent in all thing)
3. ನಿಶ್ಚಿತವಾಗಿ ಇರುವಿಕೆಯನ್ನಾಧರಿಸಿದ್ದು ಆಗುವಿಕೆಯನ್ನಾಧರಿಸಿಲ್ಲ
4. ರಸವಾದಿಯಾದರೂ ದು:ಖದ ಅನುಸಂಧಾನದ ಉದ್ದೇಶ ಹೊಂದಿದೆ.
5. ಕಾಲದೇಶಗಳನ್ನು ಮಾನ್ಯ ಮಾಡುತ್ತಾರೆ. ದೇಶ ಕಾಲ, ಅಪ್ಪ್ಯ ತ್ರಿತ್ವವನ್ನು ಮುಂದಿಡುತ್ತಾರೆ
6. ನಿಸರ್ಗ ವಿವೇಕವನ್ನು ಒಪ್ಪುತ್ತಾರೆ. ಅದು ಪ್ರತ್ಯೇಕ ಬುದ್ಧ ಕಲ್ಪನೆಗೆ ಸಮಾನವಾದುದು
7. ಪ್ರಜ್ಞಾ ಪ್ರಕಾಶ ಪಾತಳಿಯ ಪ್ರಚೋದನೆಯ ಮೂಲಕ ಆಕಾರ ಪಡೆವ ಸಮಯಾಚಾರಗಳು ಮಾನವಧರ್ಮದ ವೈಶಿಷ್ಟ್ಯ (ಇದಕ್ಕೆ ಪ್ರತಿಯಾಗಿ ಪ್ರಾಣಚೇತನದ ಪಾತಳಿಯ ಪ್ರಚೋದನೆಯ ಮೂಲಕ ಆಕಾರ ಪಡೆಯುವ ಸಮಯಾಚಾರಗಳು ನರಧರ್ಮದ ವೈಶಿಷ್ಟ್ಯ)

ತಾತ್ವಿಕ ಪ್ರಸ್ಥಾನವೊಂದರ ನಿಲುವುಗಳನ್ನು ಪರೀಕ್ಷಿಸಲು ಬಳಸುವ ನಿರ್ಣಾಯಕ ಅಂಶಗಳು ಇವೇ ಆಗಿವೆ. ಈ ನಿಲುವುಗಳು ಅತ್ಯಂತಿಕವಾಗಿ ವೈದಿಕ ಪ್ರಸ್ಥಾನದ ನಿಲುವುಗಳನ್ನೇ ಮುಂದಿಡುತ್ತಿವೆ. ಶುದ್ಧಬ್ರಾಹ್ಮಣನೊಬ್ಬ ವೇದವಿರೋಧಿಯಾಗಲಾರ ಎಂಬ ಮಾತು ಶಂಬಾ ಅವರಿಗೂ ಅನ್ವಯವಾಗುತ್ತದೆ. ಹಾಗಾಗಿ ಶಂಬಾ ಮುಂದಿಡುತ್ತಿರುವ ಚಿಂತನಾ ಪ್ರಸ್ಥಾನದ ಬಗೆಗೆ ಹಲವಾರು ಸಂದೇಹಗಳು ಉಂಟಾಗುತ್ತವೆ.

ಶಂಬಾ ಭಂಜನೆಗೆ ತೊಡಗಿರುವ ಸಂಪ್ರದಾಯಗಳು:

1. ನಾಗ ಸಂಪ್ರದಾಯ
2. ಚಾಂದ್ರ ಸಂಪ್ರದಾಯ
3. ರಸ–ಜಲ ಸಂಪ್ರದಾಯ
4. ಆಗುವಿಕೆ ಸಂಪ್ರದಾಯ
5. ಗುರು ಸಂಪ್ರದಾಯ
6. ಮಾತೃ ಸಂಪ್ರದಾಯದ
7. ಶೈವ ಸಂಪ್ರದಾಯ

ಇವರು ಕೆಡವುತ್ತಿರುವ ಕಟ್ಟಡ ಯಾವುದು? ಆರ್ಯರದ್ದೋ ದ್ರಾವಿಡರದ್ದೋ? ಮೊದಲನೆಯದಾಗಿ ಈ ಪಟ್ಟಿಯನ್ನು ಗಮನಿಸುತ್ತಿದ್ದಂತೆಯೇ ರನ್ನನ ಪದ್ಯವೊಂದು ತಾನಾಗಿಯೇ ಬಂದು ನಿಲ್ಲುವಷ್ಟು ಸಶಕ್ತವಾಗಿದೆ:

ಒದವಿದ ಭೀತಿಯಿಂದಮ್ ಅಪರಾದಿತನ್ ಅಬ್ಧಿಯನ್ ಓಡಿ ಪೊಕ್ಕೊಡೆ ಆಗದು ಕೊಲಲೆಂದು ಮಾಣ್ದನ್ ಅದು ತಕ್ಕುದೆ । ಲಿಂಗಮನ್ ಅಪ್ಪಕೆಯ್ದು ಪಿಂಗದೆ ನಿಲೆ ನೀರನ್ ಓಡಿಪುಗೆ ಪೆಣ್ಣುಡೆಯುಟ್ಟಿರೆ ಪುತ್ತನೇರೆ ಕೊಲ್ಲದ ತುಳಿಲಾಳ್ತನಕ್ಕೆ ಸಮನಾವನೊ ಸಾಹಸಭೀಮ ಭೂಪನೊಳ್।

ಲಿಂಗವನ್ನು ತಬ್ಬಿ ಹಿಡಿದು ಅಲುಗಾಡದೆ ನಿಂತವರಾಗಲಿ, ಓಡಿಹೋಗಿ ನೀರಿಗೆ ಇಳಿದವರಾಗಲಿ, ಹೆಣ್ಣುಡಿಗೆಯನ್ನು ಉಟ್ಟವರಾಗಲಿ, ಹುತ್ತವನ್ನು ಏರಿನಿಂತವರಾಗಲಿ – ಅಂಥ ಶರಣಾಗತನನ್ನು ಕೊಲ್ಲದ ಶೌರ್ಯ ಆ ಇರಿವ ಬೆಡಂಗ ಸತ್ಯಾಶ್ರಯನದು. ಪರೋಕ್ಷವಾಗಿ ಭೀಮನ ವೈರಿಗಳೆಂದು ವೈಷ್ಣವ ಸಂಸ್ಕೃತಿಯವರನ್ನು, ಅಗ್ನಿಸಂಸ್ಕೃತಿಯವರನ್ನು, ಪಿತೃಪ್ರಧಾನ ಸಂಸ್ಕೃತಿಯವರನ್ನು, ನಾಗಸಂಸ್ಕೃತಿಯನ್ನು ಮರ್ದಿಸಿದ ಆರ್ಯ ಪರಂಪರೆಯನ್ನು ಭೀಮನ ವೈರಿಗಳೆಂದು ರನ್ನ ಗುರುತಿಸಿಕೊಳ್ಳುತ್ತಿದ್ದಾನೆ. ಒಂದಂಶವನ್ನು ಗಮನಿಸಬೇಕು. ಈ ಅವೈದಿಕ ಪರಂಪರೆಗಳೆಲ್ಲವೂ ಶಂಬಾರವರ ವ್ಯಾಖ್ಯಾನದಿಂದಾಗಿ ತಮ್ಮ ಅವೈದಿಕ ಸ್ವಂತಿಕೆಯನ್ನು ಕಳೆದುಕೊಂಡು ತೀವ್ರವಾದ ಅನುಮಾನಕೀಡಾಗುತ್ತವೆ. ಅಣಬೆ, ಲಿಂಗ, ಹುತ್ತ, ನಾಗ, ಕವಡೆ, ನೀರು, ಕೋಡಿ ಮುಂತಾದ ಫಲವಂತಿಕೆಯ ಸಂಕೇತಗಳನ್ನು ಆರಾಧಿಸಿಕೊಂಡು ಬಂದ ಸ್ಥಳೀಯ ಪರಂಪರೆಯ ಎಲ್ಲ ಸಂಕೇತಗಳು ಭ್ರಷ್ಟಗೊಳ್ಳುತ್ತವೆ. ಈ ಪ್ರತಿಮೆಗಳನ್ನು ವೈದಿಕ ಪ್ರತಿಮೆಗಳೊಡನೆ ಸಂಯೋಜನಗೊಳಿಸುವ ಮೂಲಕ ಇವುಗಳ ಸ್ವತಂತ್ರ ಧ್ವನಿಯನ್ನು ಹತ್ತಿಕ್ಕಲಾಗುತ್ತದೆ. ಸಮೂಹದ ನಡುವೆ ಇಂದಿಗೂ ಜೀವಂತವಾಗಿರುವ ಅಗ್ನಿದ್ವೇಷ, ಜಲಪ್ರೀತಿ, ಉತ್ತರ ತಿರಸ್ಕಾರಗಳು ಶಂಬಾರವರ ಕಣ್ತಪ್ಪಿ ಹೋಗುತ್ತವೆ. ಈ ಸಂಕರ ಪ್ರಕ್ರಿಯೆಯಲ್ಲಿ ವೈದಿಕ ಪ್ರತಿಮೆಗಳು ಪುನರ್ ಪ್ರಜ್ವಲಿಸುವಂತಾಗಿ ನಿಸರ್ಗದೊಡನೆಯೇ ಬಾಳಿಕೊಂಡು ಬಂದ 'ದಕ್ಷಿಣ–ಪ್ರತಿಮೆಗಳು' ದುರ್ಬಲವಾಗುತ್ತಾ ಹೋಗುವುದನ್ನು ಶಂಬಾ ಪ್ರಯಾಣದಲ್ಲಿ ಕಾಣಬಹುದು. ಆರ್ಯ ಸಂಸ್ಕೃತಿಯ ನಿರಾಕರಣೆಯ ಒಂದು ಸಾಲಿನ ಜೊತೆಗೆ ಅದನ್ನು ಸಹ್ಯಗೊಳಿಸಬಲ್ಲ ಹತ್ತು ಸಾಲುಗಳು ಪುನರಾವೃತಗೊಳ್ಳುವ ಕ್ರಮವನ್ನು ಅವರ ಬರವಣಿಗೆಯಲ್ಲಿ ಗುರುತಿಸಬಹುದು. ಈ ಪ್ರತಿಮಾ ಸಂಕೇತಗಳ ದ್ರಾವಿಡ ಚಹರೆಗಳನ್ನು ಅವರು ಅತಂತ್ರಗೊಳಿಸುತ್ತಾರೆ.

ಶಂಬಾ ಭಾಷಾಕೋಶವನ್ನು, ಅರ್ಥಕೋಶವನ್ನು ತಮ್ಮ ಪ್ರಧಾನ ಆಕರವಾಗಿ ಬಳಸುತ್ತಾರೆ. ಪ್ರತಿ ಪದದ ನಿಷ್ಪತ್ತಿಯನ್ನನುಸರಿಸುತ್ತಾ ಅದರ ಜೊತೆ ಒಂದು

ಶಂಬಾ ಸಂಸ್ಕೃತಿ ಸಂಶೋಧಕರು. ಬಹು ಹಿಂದಿನಿಂದಲೂ ಭಾರತೀಯ ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿರುವ ಆರ್ಯಕೇಂದ್ರಿತ ಮಾದರಿಯನ್ನು ಪ್ರಶ್ನಿಸುತ್ತಿರುವವರು. ಸ್ಥಳೀಯರ ಸಾಂಸ್ಕೃತಿಕ ಚರಿತ್ರೆ ಎಂಬುದು ಕೇವಲ ಅನುಬಂಧವಾಗುತ್ತಿರುವ ಬಗೆಯನ್ನು ಅವರು ನಿರಾಕರಿಸಿದ್ದಾರೆ. ಆರ್ಯ–ದ್ರಾವಿಡ ತಾತ್ವಿಕ ಸಂಘರ್ಷದ ಸ್ವರೂಪವನ್ನು ಪುನಾರಚಿಸುವುದು ಅವರ ಗುರಿಯಾಗಿದೆ. ತಮಿಳುನಾಡನ್ನು ಹೊರತುಪಡಿಸಿ ದಕ್ಷಿಣಭಾರತವನ್ನು ಒಂದು ಭೌಗೋಳಿಕ–ಭಾಷಿಕ–ಸಾಂಸ್ಕೃತಿಕ ಘಟಕವನ್ನಾಗಿ ಪುನಾರಚಿಸುವ ಪ್ರಯತ್ನ ಮಾಡಿದ್ದಾರೆ. ಇದೊಂದು ಬಹುಮುಖಿಯಾದ ಪ್ರಯತ್ನ.

ಹಿಂಪಯಣವನ್ನು ಕೈಗೊಳ್ಳುತ್ತಾರೆ. ಪ್ರತಿ ಪದವೂ ತಾನು ಹೊತ್ತೊಯ್ಯುತ್ತಿರುವ ಅರ್ಥಕೋಶವನ್ನು ಬಿಚ್ಚಿ ಹರಡುತ್ತವೆ. ಆದರೆ ಶಂಬಾ ತಮಗೆ ಬೇಕಾದುದಷ್ಟನ್ನು ಎತ್ತಿಕೊಂಡು ಉಳಿದದ್ದನ್ನು ನಿಶ್ಚಿಂತೆಯಾಗಿ ಚೆಲ್ಲಿಬಿಡುತ್ತಾರೆ. ಸಂಶೋಧನೆಯ ಇನ್ನೊಂದು ಚಟುವಟಿಕೆಯೆಂದರೆ ನಾವೀಗ ನಡೆದು ಬಂದಿರುವ ದಾರಿಯನ್ನು ಕಳಚುತ್ತಾ ನಿರಸನಗೊಳಿಸುತ್ತಾ ಹಿಂಪಯಣವೊಂದನ್ನು ಕೈಗೊಳ್ಳುವುದು. ಹಿಂದಣ ಹೆಜ್ಜೆಯನರಿತಲ್ಲದೆ ನಿಂದ ನಿಲುವನರಿಯಲಾಗದು ಎಂಬ ಅಲ್ಲಮನ ಮಾತಿನಂತೆ. ಆದರೆ ಎಷ್ಟು ಹಿಂದಕ್ಕೆ ಎಂದರೆ 'ಎಲ್ಲಿಯವರೆಗೆ ತಮ್ಮ ಪೂರ್ವನಿರ್ಧಾರಗಳಿಗೆ ಒಪ್ಪುವ ಅರ್ಥಗಳು ದೊರಕುತ್ತವೆಯೋ ಅಷ್ಟರವರೆಗೆ ಮಾತ್ರ.'– ಇದು ಶಂಬಾ ಮಾದರಿ. ಹೀಗೆ ಹಿಂದಕ್ಕೆ ಹೋಗುವಾಗ ಎದುರಾಗುವ ಅನೇಕ ಸಂಗತಿಗಳನ್ನು ನಿಭಾಯಿಸುವ ಅನೇಕ ಮಾದರಿಗಳಿವೆ. ಈ ಹಿಂಪಯಣದಲ್ಲಿ ಮತ್ತೆ ಎದುರಾಗುವ ಎಲ್ಲವನ್ನೂ ಅನುಸಂಧಾನ ಮಾಡುವುದೋ ಅಥವಾ ತನಗೆ ಬೇಕಾದುದನ್ನು ಮಾತ್ರ ಪುನರ್‌ವ್ಯಾಖ್ಯಾನಿಸುವುದೋ? ತೀರ್ಮಾನಗಳನ್ನು ಈಗಾಗಲೇ ಸಿದ್ಧಗೊಳಿಸಿಕೊಂಡಿರುವ ಶಂಬಾ ತಮ್ಮ ತೀರ್ಮಾನವನ್ನು ಪ್ರಶ್ನಿಸುವ ಸಂಗತಿಗಳನ್ನು ಅನುಕೂಲಕರವಾಗಿ ನಿರ್ಲಕ್ಷಿಸುತ್ತಾರೆ. ಉದಾಹರಣೆಗೆ ಬೌದ್ಧಧರ್ಮದ ಕಾಲವನ್ನು ದಾಟಿ ಮುಂದಕ್ಕೆ ಹೋಗುವಾಗ ತಪ್ಪಿಯೂ ಅದನ್ನು ಮಾತನಾಡಿಸುವ ಗೋಜಿಗೆ ಹೋಗುವುದಿಲ್ಲ. ಗ್ರೀಕ್‌ನ ಅರಿಸ್ಟಾಟಲ್, ಪ್ಲೇಟೋ, ಪೈಥಾಗೊರಸ್ ಮಾತ್ರ ಎದುರಿಗೆ ಬರುತ್ತಾರೆ; ಲಾವೊತ್ಸು ಆಗಲೀ ಕನ್‌ಫ್ಯೂಷಿಯಸ್ ಆಗಲಿ ಎದುರಿಗೆ ಬರುವುದಿಲ್ಲ. ಇನ್ನು ಇಡಿಯಾಗಿ ಭಾರತೀಯ ತಾತ್ವಿಕತೆಯ ಪ್ರಧಾನ ಭೂಮಿಕೆಯ ಸಿದ್ಧಪಂಥವೂ ಶಂಬಾ ಅವರಿಗೆ ಒಂದೆರಡು ಸಾಲಿನ ಉತ್ತರಕ್ಕೆ ಮಾತ್ರ ಅರ್ಹವೆನ್ನಿಸುತ್ತದೆ.

ಸಂಶೋಧನೆಯ ಒಂದು ಪ್ರಮುಖ ನಿಲುವೆಂದರೆ:

ನಮಗೆ ಸಾಧ್ಯವಿರುವುದು ಸತ್ಯ ಶೋಧನೆಯಲ್ಲ ಬದಲಿಗೆ ಸತ್ಯವನ್ನು ವರ್ತಮಾನದಲ್ಲಿ ಕಟ್ಟುವುದು. ಸಿದ್ಧ ಸತ್ಯವೆನ್ನುವುದು ಇರಲಾರದು. ಹೀಗೆ ಸತ್ಯವನ್ನು ಕಟ್ಟುವ ಮಾದರಿಗೆ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ವಚನಗಳನ್ನು ಕಾಶ್ಮೀರ ಶೈವ ಸಿದ್ಧಾಂತದ ಮೂಲಕ, ತಮಿಳಿನ ಶೈವ ಪುರಾತನರ ಶೈವ ಸಿದ್ಧಾಂತದ ಮೂಲಕ, ಕಂಡದ್ದನ್ನು ಈ ವರೆಗೆ ಹೇಳುತ್ತಿದ್ದೇವೆಯೇ ಹೊರತು ನಾಥ ಪಂಥದ ಮೂಲಕವಾಗಲೀ, ಸಿದ್ಧ ಪರಂಪರೆಗಳ ಮೂಲಕವಾಗಲೀ, ಬೌದ್ಧ ತಾತ್ವಿಕತೆಯ ಮೂಲಕವಾಗಲೀ ವಚನಗಳನ್ನು ನೋಡಿದ್ದಿಲ್ಲ. ಹಾಗೆ ನೋಡಿದಾಗ ಕಾಣುವ ವಚನತಾತ್ವಿಕತೆ ಕೂಡ ನಮಗೆ ಮುಖ್ಯ.. ಏಕೆಂದರೆ ಈ ತಾತ್ವಿಕತೆಗಳೊಡನೆ ಕೂಡ ವಚನಕಾರರ ತಾತ್ವಿಕತೆ ಅನುಸಂಧಾನ ಮಾಡಿದೆ. ಹಾಗೆಯೇ ಪಂಪನನ್ನು ಭಾರತೀಯ ಕಾವ್ಯಮೀಮಾಂಸೆಯ ಮೂಲಕ ನೋಡಲಾಗಿದೆಯೇ ಹೊರತು ಜೈನ ಅನೇಕಾಂತವಾದದ ಮೂಲಕವಾಗಿಯಾಗಲೀ, ಅನಾತ್ಮವಾದಿ ನಿಲುವಿನ ಮೂಲಕವಾಗಿಯಾಗಲೀ ನೋಡುವ ಪ್ರಯತ್ನಗಳಾಗಿಲ್ಲ. ಪಂಪನನ್ನು ಜೈನ ತಾತ್ವಿಕತೆಯ ಮೂಲಕ ನೋಡುವುದು ಸರಿಯಾದ ಕ್ರಮವೆನ್ನುವುದರಲ್ಲಿ ಸಂಶಯವಿರಲಾರದು. ಶಂಬಾ ಸಂಶೋಧನೆಯ ಈ ನಿಲುವನ್ನು ನಿರಾಕರಿಸುವುದಿಲ್ಲ.



ಶಂಬಾ ಅವರ ಚಿಂತನೆಯಲ್ಲಿ ಅತಿ ಹೆಚ್ಚು ಜಾಗವನ್ನು ಪಡೆದಿರುವುದು ಲೋಕವಿವರಣೆ. ಈ ಲೋಕವಿವರಣೆಯ ಸ್ವರೂಪವನ್ನು ಗಮನಿಸಿದಾಗ ವಿಶ್ವದ ದರ್ಶನಗಳಲ್ಲಿನ 'ಇರುವಿಕೆ' ಪ್ರಸ್ಥಾನವನ್ನು (being school) ವಿಶ್ಲೇಷಿಸುತ್ತಾರೆಯೇ ಹೊರತು ತಪ್ಪಿಯೂ 'ಆಗುವಿಕೆ' ಪ್ರಸ್ಥಾನವನ್ನು (becoming school) ಪ್ರಸ್ತಾಪಿಸುವುದಿಲ್ಲ. ಆಗುವಿಕೆ ಪ್ರಸ್ಥಾನವನ್ನು ಈವರೆಗೆ ಮುಂದಿಟ್ಟವರು ಭಾರತದಲ್ಲಿ ಬುದ್ಧಗುರು, ಗ್ರೀಕರಲ್ಲಿ ಹಿರಾಕ್ಲೀಟಸ್. ಹಿರಾಕ್ಲೀಟಸ್‌ನನ್ನು ಹತ್ತಾರು ಬಾರಿ ಬೇರೆ ಕಾರಣಗಳಿಗೆ ಚರ್ಚಿಸುವ ಶಂಬಾ, ಅವನು ಮುಂದಿಟ್ಟ ಈ ಚಿಂತನೆಯನ್ನು ಮುಟ್ಟುವುದಿಲ್ಲ.

ಕೆಲವು ಸಂದೇಹಗಳು:

1. **ಶೈವ ಸಂಪ್ರದಾಯ:** ಅವೈದಿಕನಾದ ಶಿವನನ್ನು ಒಂದು ರೀತಿಯ ಸಂಕಲನಾನುಸಂಧಾನಕ್ಕೆ ಒಳಪಡಿಸಿ ವೇದದ ರುದ್ರನೊಡನೆ ಸಮೀಕರಿಸುವುದರ ಮೂಲಕ ಒಂದು ಹೊಸ ಹೈಬ್ರಿಡ್ ಪ್ರತಿಮೆ ರೂಪಿಸುತ್ತಾರೆ.

2. **ನಾಗ ಸಂಪ್ರದಾಯ:** ನಿಶ್ಚಯವಾಗಿಯೂ ವೈದಿಕರಲ್ಲಿ ಇರಲಿಲ್ಲ ಎನ್ನುತ್ತಲೇ ವೇದದಲ್ಲಿನ ಸೂಕ್ತವೊಂದನ್ನು ಉದಾಹರಿಸುತ್ತ ಅದು ಅಲ್ಲಿಯೂ ಇದ್ದಿರಬೇಕೆಂಬ ಸಂದೇಹವೊಂದನ್ನು ಸೃಷ್ಟಿಸುತ್ತಾರೆ. ಫಲಸಂಪ್ರದಾಯದ ಲಿಂಗಪೂಜೆ ಇತ್ಯಾದಿ ರಸಸಂಕೇತಗಳಿಂದ ತುಂಬಿ ಹೋಗಿರುವ ಭಾರತೀಯ ದೈವ ಪ್ರತಿಮೆಗಳನ್ನು ತೀವ್ರವಾಗಿ ಅನುಮಾನಿಸುತ್ತಾರೆ.

3. ಬೀರಪ್ಪ, ಖಂಡೋಬ, ಮೈಲಾರ, ವಿಠಲ ಬೀರಪ್ಪ, ಎಲ್ಲಮ್ಮ ಈ ದೈವಗಳು ಹೈಜಾಕ್ ಆಗಿ ವಿಷ್ಣು, ಕೃಷ್ಣ, ಪಾರ್ವತಿಯರೊಡನೆ ಸಮೀಕರಣಗೊಂಡು ಕಳೆದು ಹೋದ ಬಗೆಗಿನ ಚರಿತ್ರೆಯನ್ನು, ಬೌದ್ಧನಾಥ ಪಂಥಗಳ ನೂರಾರು ದೈವತಗಳು ನಂತರ ಹಿಂದೂ ದೇವರುಗಳಾಗಿ ಸಮೀಕರಣಗೊಂಡ ಸಂಗತಿಗಳನ್ನು ನಿರ್ಣಾಯಕ ದನಿಯಲ್ಲಿ ಮಂಡಿಸುವುದಿಲ್ಲ. ಉಡುಪಿಯ ದೈವತವನ್ನು ಕೃಷ್ಣನೆಂದು ಪ್ರತಿಷ್ಠಾಪಿಸಲು ಅವರು ತೋರುವ ಜಾಣ್ಮೆ ಆಕರ್ಷಕವಾಗಿದೆ.

4. ಭಾರತೀಯ ಸಂಸ್ಕೃತಿ ಉಳಿಯಬೇಕಾದರೆ ಅಗ್ನಿಪೂಜೆ ಪರೋಕ್ಷವಾಗಿ ಆರ್ಯಸಂಸ್ಕೃತಿಯಿಂದಲೇ ಎಂಬುದನ್ನು ನಿರ್ಣಾಯಕವಾಗಿ ಮುಂದಿಡುತ್ತಾರೆ. (ಋಗ್ವೇದದ ಅಗ್ನಿಸ್ತುತಿ)

5. ಆರ್ಯಸಂಸ್ಕೃತಿಯ ತಾತ್ವಿಕತೆಯನ್ನು ನಿರ್ಣಾಯಕವಾಗಿ ತಿರಸ್ಕರಿಸಿದ ಬೌದ್ಧ ತಾತ್ವಿಕತೆಯ ಬಗೆಗೆ ತೀವ್ರವಾದ ಅಸಹನೆ ವ್ಯಕ್ತಪಡಿಸುತ್ತಾರೆ.

ಅಂಬೇಡ್ಕರ್ ಬೌದ್ಧಧರ್ಮ ಸ್ವೀಕರಿಸಿದ ಬಗೆಗೆ ಶಂಬಾ ಜೋಶಿಯವರು ಹೀಗೆ ಪ್ರತಿಕ್ರಿಯಿಸುತ್ತಾರೆ:

"ಇತ್ತೀಚಿನ ಡಾ. ಅಂಬೇಡ್ಕರರಂಥ ಪ್ರತಿಭಾವಂತ ಕಾಯ್ದೆಪಂಡಿತರು ಸಹ ತಾನು ಹಿಂದೂ ಎಂಬ ಧರ್ಮ/ಜಾತಿಗೆ ಸಂಬಂಧಪಟ್ಟವರು ಎಂದು ಬಗೆಯಲು ಹೇಸಿಕೊಂಡು ಬೌದ್ಧಧರ್ಮ ಸ್ವೀಕರಿಸಿದರು. ಸುತ್ತಲಿನ ಪ್ರಪಂಚದಲ್ಲಿ ಮೋಕ್ಷಕಾಮಿ ಪರಲೋಕವಾದೀ ಧರ್ಮ ಪ್ರಭಾವಶಾಲಿಯಾಗಿದ್ದಾಗ, ಕ್ರೈಸ್ತಪಂಥೀಯರಾಗದೆ ಕ್ರಿಸ್ತರಿಗೂ ಪೂರ್ವದ ಬೌದ್ಧಧರ್ಮದಲ್ಲಿ ಹೋಗಿಬೀಳುತ್ತಾರೆ! ಇದೂ ಒಂದು ಭಾಗ್ಯ! ಜೈನಧರ್ಮವೂ ಇವರನ್ನು ಆಕರ್ಷಿಸಲಿಲ್ಲ? ಡಾ. ಅಂಬೇಡ್ಕರರಲ್ಲಿ ಐಹಿಕ ಜೀವನದ ಬಗೆಗೆ ಆಸ್ಥೆಯು ಇದ್ದುದೇ ಕಾರಣವಿರಬಹುದು ಅಥವಾ ಡೇವಿಡ್ಸ್ ಪ್ರಭೃತಿಗಳಿಂದ, ಪಾಶ್ಚಾತ್ಯರಿಂದ ಬೌದ್ಧಮತದ ಬಗೆಗೆ ಆಗಿರುವಷ್ಟು ಮತ ಪ್ರಚಾರವು ಜೈನ ಅಥವಾ ಬೇರೆ ವಿರಕ್ತ ಪಂಥಗಳ ಬಗೆಗೆ ಆಗಿಲ್ಲ. ಅದೂ ಒಂದು ಕಾರಣವಿರಬಹುದು."

ಶಂಬಾ ಅವರ ಇಲ್ಲಿನ ತೀರ್ಮಾನಗಳನ್ನು ಗಮನಿಸಿ:

1) ಪ್ರತಿಭಾವಂತನೊಬ್ಬ ಬೌದ್ಧ ಧರ್ಮವನ್ನು ಆಯ್ಕೆಮಾಡಿಕೊಂಡರೆ, ಅಲ್ಲಿಗೆ ಹೋಗಿ ಬಿದ್ದ! ಎನ್ನುತ್ತಿದ್ದಾರೆ. 2) ಬೌದ್ಧ ಧರ್ಮ ಇಹಪರವಾದದ್ದು ಹಾಗಾಗಿ ಲೌಕಿಕರಿಗೆ ಮಾತ್ರ ಪ್ರಿಯವಾದದ್ದು! 3) ಜೈನಧರ್ಮಕ್ಕಾದರೂ ಹೋಗಬಾರದಿತ್ತೆ ಎಂದು ಸಂಕಟಪಡುತ್ತಿದ್ದಾರೆ! 5) ಮತಪ್ರಚಾರದಿಂದ ಕಂಗೆಟ್ಟು ಗೊತ್ತಾಗದೆ ಅಲ್ಲಿಗೆ ಹೋಗಿದ್ದಾರೆ ಎಂದು ಹಲುಬುತ್ತಿದ್ದಾರೆ. ಇಡೀ ಭಾರತದ ವೈದಿಕ ಅಸಹನೆಯೇ ಈ ಪ್ರತಿಕ್ರಿಯೆಯಲ್ಲಿ ಹೆಪ್ಪುಗಟ್ಟಿದೆ ಮತ್ತು ಬೌದ್ಧ ತಾತ್ವಿಕತೆಯನ್ನು ಎದುರಿಸಲಾಗದ ಅಸಹಾಯಕತೆಯೊಂದು ಮೇಲ್ನೋಟಕ್ಕೆ ಗೋಚರವಾಗುತ್ತಿದೆ.

ಅಲ್ಲಮ ಪದ ಕೊನೆಯವರೆಗೂ ಶಂಬಾ ಅವರನ್ನು ಕೆಣಕುತ್ತಲೇ ಇತ್ತು. ಅವನ ಅನೇಕ ಪಾಂಥಿಕ ಮೂಲಗಳು ಕೆಣಕುತ್ತಿದ್ದವು. ಅವನ ಹೆಸರಿನ ನಿಷ್ಪತ್ತಿಯ ಬಗೆಗೆ ಅಪಾರ ಕುತೂಹಲ ತೋರಿಸುವ ಶಂಬಾ ಅವರಿಗೆ ವಚನತಾತ್ವಿಕತೆಯಲ್ಲಿ ಅವನ ಭಿನ್ನದನಿಯ ಬಗೆಗೆ ಒಂದಿಷ್ಟು ಆಸಕ್ತಿಯೂ ಮೂಡುವುದಿಲ್ಲ. ಅವನ ವಚನಗಳನ್ನು ಅವರು ಎದುರಾಗುವುದೇ ಇಲ್ಲ. 'ಅಲ್ಲ' ಇದು ಸಂಪ್ರದಾಯವೆ? ಶೈವದ ಅನೇಕ ಶಾಖೆಗಳಲ್ಲಿ ಇದೂ ಒಂದೆ? ಮಹಮ್ಮದೀಯರ ದೇವತಾನಾಮ ಇದೂ ಒಂದೆಯೆ? ಅವರ ಮನಸ್ಸು ಅದನ್ನು ಒಪ್ಪಲು ಹಿಂಜರಿಯುತ್ತದೆ! ಲ್ಹಾಮ ಎಂಬ ಪದವೇಕೆ ಅವರಿಗೆ ಹೊಳೆಯುವುದಿಲ್ಲವೋ ಕಾಣೆ.

ಹಿಂದೂ ವರ್ಣವ್ಯವಸ್ಥೆಯ ಮೂಲ ಆಕರವೆಂದು ಗುರುತಿಸಲ್ಪಟ್ಟಿರುವ ಋಗ್ವೇದದ 10ನೆಯ ಮಂಡಲದ ಪುರುಷ ಸೂಕ್ತದ ಬಗೆಗೆ ಶಂಬಾ ಅವರ ನಿಲುವುಗಳು ಇವು:

1. ಪುರುಷ ಸೂಕ್ತದಿಂದ ಆ ಕಾಲದವರು ಸೃಷ್ಟಿಕ್ರಮವು ಹೇಗಾಯಿತು ಎಂಬುದನ್ನು ಒಂದೆಡೆಗೆ ಹೇಳಿದ ಪ್ರಯತ್ನವಿದೆ. ಈ ಪ್ರಪಂಚವು ಸೂರ್ಯನಿಂದಾಯಿತು. ಸೂರ್ಯನೇ ಸೃಷ್ಟಿಕರ್ತನು. ಅವನ ಒಂದು ಅಂಶವು ವಿಶ್ವಾಭೂತಾನಿ. ಈ ಜೀವನವು ಸುವ್ಯವಸ್ಥಿತವಾಗಬೇಕಾದರೆ ಯಾರು ಯಾವ ಕಾರ್ಯ ಮಾಡಬೇಕು. ಅವರು ಯಾವ ಸ್ಥಾನದವರು ಎಂಬುದನ್ನು ವರ್ಣವ್ಯವಸ್ಥೆಯ ಮಾತುಗಳಿಂದ ಹೇಳಲಾಗಿದೆ. ಸ್ಥಾನವು ಯಾವುದೇ ಇದ್ದರೂ ಅವರು ಪುರುಷನ ಅಂಶವೆಂದೇ ತಿಳಿಯಬೇಕು. ಕಾರ್ಯವಿಭಾಗವೇ ಹೊರತು ಯೋಗ್ಯತಾ ವಿಭಾಗವಲ್ಲ. ಪುರುಷ ಸೂಕ್ತವು ಪ್ರವೃತ್ತಿ ಮಾರ್ಗವಾದಿಯಾಗಿದೆಯೆಂಬುದು ಸುಳ್ಳಲ್ಲ. ವೇದದಲ್ಲಿಯ ವಿಚಾರವೇ ಹಾಗಿದೆ.

2. ಪುರುಷಸೂಕ್ತದಲ್ಲಿ ಬಂದ ವರ್ಣನೆಯೂ ಗೀತೆಯಲ್ಲಿ ಹೇಳಿದ ಗುಣ ಕರ್ಮಗಳಿಂದ ಚಾತುರ್ವರ್ಣ್ಯಗಳುಂಟಾದುವೆಂಬುದನ್ನೇ ಪುಷ್ಟೀಕರಿಸುತ್ತದೆ.

ಇಂತಹ ಅನೇಕ ನಿಲುವುಗಳಿಂದಾಗಿ ಶಂಬಾ ತೀವ್ರವಾಗಿ ಪ್ರಶ್ನಿಸಬೇಕಾದ ವಿದ್ವಾಂಸರು. ಇಷ್ಟಾಗಿ ಹೀಗೆ ಪ್ರಶ್ನಿಸುವ ಒಂದು ಪರಂಪರೆಯನ್ನು ಅವರೇ ಪೋಷಿಸಿದ್ದಾರೆ ಎನ್ನುವುದು ಅಷ್ಟೇ ಪ್ರಿಯವಾದ ಸಂಗತಿಯಾಗಿದೆ. ■

(25ನೇ ಪುಟದಿಂದ)

ಭಯೋತ್ಪಾದನೆ ವಿರುದ್ಧದ ಸಮರ...

ಸಮಾಜದಲ್ಲಿ ಇದ್ದ ಗೌರವ, ನೌಕರಿ, ವ್ಯಾಪಾರ ಎಲ್ಲವನ್ನೂ ಕಳೆದುಕೊಂಡಿದ್ದರು. ಸದಾ ಪೊಲೀಸರ ಭೀತಿಯ ನೆರಳಲ್ಲೇ ಬದುಕುವಂತಾಗಿದ್ದ ಅವರ ಕೌಟುಂಬಿಕ ಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿತ್ತು.

ದೇಶದಲ್ಲಿಂದು ಇಂತಹ ಪ್ರಮಾದಗಳು ಆಗಾಗ ಸಂಭವಿಸುತ್ತಿರುವುದಕ್ಕೆ ಒಂದು ಕಾರಣವೇನೆಂದರೆ ಕೆಲವರ ಮಟ್ಟಿಗೆ ಅಮಾಯಕರನ್ನು ಉಗ್ರರೆಂದು ಬಿಂಬಿಸುವುದೇ ಒಂದು ವ್ಯವಸ್ಥಿತ ದಂಧೆಯಾಗಿಬಿಟ್ಟಿದೆ. ಇದರ ಹಿಂದೆ ಮುಂಬಡ್ತಿಯ ಆಮಿಷ, ಅವಕಾಶಗಳು, ನಗದು ಪಾರಿತೋಷಕಗಳು, ಸಾರ್ವಜನಿಕರ ಮಧ್ಯ ಹೀರೋ ಆಗಿ ಮಿಂಚುವ ಅವಕಾಶಗಳು, ಇಲಾಖೆಯ ಆಜ್ಞಾವರ್ತಿಗಳಂತಿರುವ ಮಾಧ್ಯಮದ ಒಂದು ವರ್ಗದಿಂದ ವೈಭವೀಕರಣ ಇವೆಲ್ಲವೂ ಅಡಗಿವೆ.

'ಎನ್ಕೌಂಟರ್ ತಜ್ಞ'ರ ವೈಭವೀಕರಣಕ್ಕೆ ಸಿನಿಮಾ ಮಾಧ್ಯಮವನ್ನು ಬಳಸಿಕೊಳ್ಳುತ್ತಿರುವುದು ಒಂದು ಕಳವಳಕಾರಿ ಬೆಳವಣಿಗೆ. ಈಗಾಗಲೇ 'ಅಬ್ ತಕ್ ಛಪ್ಪನ್' ಸಿನಿಮಾ ಮೂಲಕ ಮುಂಬಯಿನ ದಯಾನಾಯಕ್ ಮತ್ತಿತರ 'ಎನ್ಕೌಂಟರ್ ತಜ್ಞ'ರನ್ನು ಹೀರೋಗಳ ಮಟ್ಟಕ್ಕೇರಿಸಲಾಗಿದೆ. ಎಸಿಪಿ ರಾಜ್‌ಬೀರ್ ಸಿಂಗ್‌ನ ಜೀವನ ಚರಿತ್ರೆಯನ್ನು ಆಧರಿಸಿದ ಸಿನಿಮಾವೊಂದರ ಚಿತ್ರೀಕರಣ ನಡೆದಿದೆ. ನ್ಯಾಯಾಂಗ ವ್ಯವಸ್ಥೆಯನ್ನು ಧಿಕ್ಕರಿಸಿ ಸ್ಥಳದಲ್ಲೇ ನ್ಯಾಯದಾನ ಮಾಡುವ ಇಂತಹ ಪೊಲೀಸರನ್ನು ಹೀರೋಗಳಂತೆ ಬಿಂಬಿಸುವ ಸಿನಿಮಾರಂಗ ಬಹುದೊಡ್ಡ ತಪ್ಪು ಮಾಡುತ್ತಿದೆ.

ದೆಹಲಿ ಪೊಲೀಸ್ ಇಲಾಖೆಯ 'ಎನ್ಕೌಂಟರ್ ತಜ್ಞ'ರೆಂಬ (ಕು)ಖ್ಯಾತಿಗೆ ಪಾತ್ರರಾದ ಎಸ್.ಎಸ್. ರಾಠಿ, ಎಲ್.ಎನ್ ರಾವ್ ಮತ್ತು ರಾಜ್‌ಬೀರ್ ಸಿಂಗ್ ಸರದಿಗೆ ಮುನ್ನವೇ ಮುಂಬಡ್ತಿ ಪಡೆದುಕೊಳ್ಳುತ್ತಾ ಎಸಿಪಿಗಳಾದರು. 1982ರಲ್ಲಿ ಎಸ್‌ಐ ಆಗಿ ಸೇರಿದ್ದ ರಾಜ್‌ಬೀರ್ ಸಿಂಗ್ ಕೇವಲ 13 ವರ್ಷಗಳೊಳಗಾಗಿ ಎಸಿಪಿ ಹುದ್ದೆಗೇರಿರುವ ಏಕೈಕ ಅಧಿಕಾರಿ. ಇವರುಗಳ ಮುಂಬಡ್ತಿಯ ಹಿಂದೆ ದಾರ್, ಬಶೀರ್‌ರಂತಹ ಅನೇಕರ ಹಾಗೂ ಅವರ ಕುಟುಂಬವರ್ಗಗಳ ಕಣ್ಣೀರ ಕೊಡುಗೆಯಿದೆ.

ಅನೇಕ ಪ್ರಕರಣಗಳಲ್ಲಿ ನ್ಯಾಯಾಲಯಗಳು 'ದೆಪೊವಿದ'ವನ್ನು ಕಟು ಶಬ್ದಗಳಲ್ಲಿ ಟೀಕಿಸಿವೆ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ಇಲಾಖಾ ತನಿಖೆ ನಡೆಸಲು (ದಾರ್, ಬಶೀರ್ ಪ್ರಕರಣ) ಅಥವಾ ಕಾನೂನುಕ್ರಮ ಕೈಗೊಳ್ಳಲು (ಅಲ್ ಬದರ್ ಪ್ರಕರಣ, ಕನಾಟ್ ಪ್ಲೇಸ್ 'ಎನ್ಕೌಂಟರ್') ಆದೇಶಿಸಿವೆ. ಆದರೆ ಪ್ರತಿ ಸರ್ತಿಯೂ ತಪ್ಪಿತಸ್ಥರಿಗೆ ಅವರ ಹಿರಿಯ ಅಧಿಕಾರಿಗಳ ಶ್ರೀರಕ್ಷೆ ದೊರೆತಿದೆ. ಹಿರಿಯ ಅಧಿಕಾರಿಗಳು ಪ್ರತಿಯೊಂದು ಪ್ರಕರಣದಲ್ಲೂ ಮೇಲ್ಮನವಿಗೆ ಸಹಾಯಮಾಡಿದ್ದಾರೆ.

2011ರ ದೆಹಲಿ ಹೈಕೋರ್ಟ್ ಸ್ಫೋಟ ಪ್ರಕರಣದ ತನಿಖೆ ನಡೆಸುತ್ತಿದ್ದ ದೆಪೊವಿದದ ಹೆಚ್ಚುವರಿ ಡಿಸಿಪಿ ರವಿಶಂಕರ್ ಎಂಬಾತ ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸುವುದಾಗಿ ಬೆದರಿಸಿ ಜನರಿಂದ ಹಣ ಕೀಳುತ್ತಿರುವ ಸಂಗತಿ ಪತ್ತೆಯಾಗಿತ್ತು. ನ್ಯಾಯಾಲಯ ರವಿಶಂಕರ್ ಮತ್ತಾತನ ಸಹಚರರ ವಿರುದ್ಧ ಎಫ್‌ಐಆರ್ ದಾಖಲಿಸಬೇಕೆಂದು ಆದೇಶವಿತ್ತಾಗ ರವಿಶಂಕರ್ ಅದಕ್ಕೆ ತಡೆಯಾಜ್ಞೆ ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು.

ರವೀಂದರ್ ತ್ಯಾಗಿ ಮತ್ತು ತನಿಖಾಧಿಕಾರಿ ಮಹೇಂದರ್ ಸಿಂಗ್ ಸೇರಿ ದಾರ್ ಮತ್ತಿತರರ ಬಿಡುಗಡೆಯ ಆದೇಶ ಮತ್ತು ತಮ್ಮ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವ ಆದೇಶಗಳ ವಿರುದ್ಧ ಹೈಕೋರ್ಟಿನಲ್ಲಿ ತಡೆಯಾಜ್ಞೆ ಪಡೆದುಕೊಂಡಿದ್ದಾರೆ. ಈ ಕುರಿತಂತೆ ಜಾಮಿಯಾ ಟೀಚರ್ಸ್ ಸಾಲಿಡಾರಿಟಿ ಅಸೋಸಿಯೇಷನ್ ಸಲ್ಲಿಸಿದ ಮಾಹಿತಿ ಹಕ್ಕು ಅರ್ಜಿಗೆ ಉತ್ತರಿಸಿರುವ ಇಲಾಖೆ, ಪ್ರಕರಣ ನ್ಯಾಯಾಲಯದಲ್ಲಿರುವುದರಿಂದ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿಲ್ಲ, ಇಲಾಖಾ ತನಿಖೆಯೂ ಆರಂಭವಾಗಿಲ್ಲವೆಂದು ತಿಳಿಸಿದೆ.

ಹಾಗಾದರೆ ಪೊಲೀಸ್ ಆಯುಕ್ತರು ನ್ಯಾಯಾಲಯದ ತೀರ್ಪುಗಳನ್ನು ಓದಿಲ್ಲವೇ? ನ್ಯಾಯಾಲಯಗಳು ಇಲಾಖೆಯ ಬಿರುದಾಂಕಿತ ಅಧಿಕಾರಿಗಳ ವಿರುದ್ಧ ತೀಕ್ಷ್ಣ ದೋಷಾರೋಪಣೆ ಮಾಡಿರುವಾಗ ಹಿರಿಯ ಅಧಿಕಾರಿಗಳಿಗೆ ಒಂದು ತನಿಖೆ ನಡೆಸಬೇಕೆಂಬ ಕನಿಷ್ಠ ನೈತಿಕ ಪ್ರಜ್ಞೆಯಾದರೂ ಇಲ್ಲವೇ? ಅಮಾಯಕರನ್ನು ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸಿರುವ ಅಧಿಕಾರಿಗಳ ವಿರುದ್ಧ ಸಿಬಿಐ ಕೂಡಾ ದೋಷಾರೋಪಣೆ ಮಾಡಿರುವುದರ ಅರಿವು ಅವರಿಗಿಲ್ಲವೇ? ಪತ್ರಿಕಾಗೋಷ್ಠಿಗಳಲ್ಲಿ ಪ್ರದರ್ಶಿಸಲಾಗುವ ಸ್ಫೋಟಕ ಸಾಮಗ್ರಿಗಳು 'ದೆಪೊವಿದ'ಕ್ಕೆ ಎಲ್ಲಿಂದ ಸಿಗುತ್ತವೆಂದು ಇದುವರೆಗೂ ಪ್ರಶ್ನಿಸಿಲ್ಲವೇಕೆ?

"ಕೆಳಹಂತದ ನ್ಯಾಯಾಲಯದಲ್ಲಿ ರಾಠಿ ಮತ್ತು ಇತರ 9 ಅಧಿಕಾರಿಗಳು ದೋಷಿಗಳೆಂದು ತೀರ್ಮಾನವಾಗಿದ್ದರೂ ಮೇಲ್ಮನವಿ ಸಲ್ಲಿಸಿದ್ದಾರೆಂಬ ಕಾರಣ ಕೊಟ್ಟು ಅವರನ್ನೇಕೆ ಸೇವೆಯಲ್ಲಿ ಮುಂದುವರಿಸಲಾಗಿದೆ?" ಎನ್ನುವುದು ಗೃಹಸಚಿವಾಲಯಕ್ಕೆ ಹೈಕೋರ್ಟ್‌ನ ಆಕ್ರೋಶಭರಿತ ಪ್ರಶ್ನೆ. ಇಂತಹ ದುಷ್ಟ ಅಧಿಕಾರಿಗಳನ್ನು ಯಾವತ್ತೋ ಅಮಾನತುಗೊಳಿಸಿ ಸೇವೆಯಿಂದ ಕಿತ್ತುಹಾಕಬೇಕಿತ್ತಾದರೂ ಅವರಿಗೆ ಪದಕ, ಪ್ರಶಸ್ತಿ, ಶೀಘ್ರ ಮುಂಬಡ್ತಿ ಮತ್ತು ವಸ್ತುತಃ ಕೊಲೆಗೈಯುವ ಲೈಸೆನ್ಸ್ ಯಾಕೆ ನೀಡಲಾಗಿದೆ? ಸರಕಾರ ಯಾಕಾಗಿ ತಪ್ಪಿತಸ್ಥ ಅಧಿಕಾರಿಗಳ ಬೆಂಬಲಕ್ಕೆ ನಿಲ್ಲುತ್ತಿದೆ? ಯಾಕೆ ಅವರ ವೈಯುಕ್ತಿಕ ಕಾನೂನು ಸಮರಗಳಿಗೆ ಬೆಂಬಲ ನೀಡುತ್ತಿದೆ? ಬಾಟ್ಲಾ ಹೌಸ್ ಎನ್ಕೌಂಟರ್ ಪ್ರಕರಣದಲ್ಲಿ ಎನ್ಹೆಚ್ಚಾರ್ಸಿ ನಿಯಮಗಳಂತೆ ಮ್ಯಾಜಿಸ್ಟ್ರೇಟ್ ತನಿಖೆ ಆಗಬೇಕಿದ್ದರೂ ಸರಕಾರ ಅದನ್ನೇಕೆ ತಳ್ಳಿಹಾಕಿತು? ಯಾಕೆ ಹಿರಿಯ ಪೊಲೀಸ್ ಅಧಿಕಾರಿಗಳ ಹೇಳಿಕೆಯನ್ನು ಸಮರ್ಥಿಸಿತು?

ರಾಷ್ಟ್ರೀಯ ಭದ್ರತೆಯನ್ನು ಕಾಪಾಡುವವರೆಂದು ತಿಳಿಯಲಾದವರಿಗೆ ಈ ರೀತಿ ಶಿಕ್ಷೆಯ ಭಯವಿಲ್ಲದೆ ಕಾರ್ಯಾಚರಿಸುವ ಸ್ವಾತಂತ್ರ್ಯವನ್ನು ನೀಡಿರುವುದು ಅತ್ಯಂತ ಕಳವಳಕಾರಿ ಬೆಳವಣಿಗೆ. ಇದು ಕಾಶ್ಮೀರ, ಈಶಾನ್ಯ ರಾಜ್ಯಗಳು ಮೊದಲಾದೆಡೆ ಸೇನಾಪಡೆಗಳಿಗೆ ನೀಡಲಾಗುವ ವಿಶೇಷಾಧಿಕಾರಕ್ಕೆ ಸಮನಾಗಿದೆ. ವಾಸ್ತವವಾಗಿ 'ದೆಪೊವಿದ', ಎಟಿಎಸ್, ಎಸ್‌ಟಿಎಫ್ ಮುಂತಾದ ವಿಶೇಷ ತಂಡಗಳು ಕಾನೂನು ಪ್ರಕ್ರಿಯೆ ಬಗ್ಗೆ ನಮಗಿರುವ ಅಸಹನೆಯ ಸೂಚಕ.

'ದೆಪೊವಿದ' ದಾಖಲಿಸಿರುವ ಒಟ್ಟೂ ಪ್ರಕರಣಗಳಿಗೆ ಹೋಲಿಸಿದರೆ ಆರೋಪಿಗಳನ್ನು ಅಪರಾಧಿಗಳೆಂದು ತೀರ್ಮಾನಿಸಿರುವ ಪ್ರಕರಣಗಳ ಸಂಖ್ಯೆ ತೀರಾ ಕಮ್ಮಿಯಾಗಿರುವುದು ಆತಂಕ ಮೂಡಿಸಬೇಕು, ನಿಜ. ಆದರೆ ನಮಗೆ ಹೆಚ್ಚು ಆತಂಕ ಆಗಬೇಕಾಗಿರುವುದು ಸರಕಾರ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಯಾವುದೇ ಇಲಾಖಾ ತನಿಖೆ ಅಥವಾ ಕಾನೂನುಕ್ರಮ ಜರುಗಿಸದಿರುವ ಬಗ್ಗೆ. ■

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಮಲೆನಾಡು: ಒಂದಿಷ್ಟು ಟಿಪ್ಪಣಿಗಳು... ಭಾಗ 2

ಒಂದುಕಾಲದಲ್ಲಿ ಒಂದು ಊರಿನ ಕಾರ್ಮಿಕರು ಅದೇ ಊರಿನ ತೋಟಗಳಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಈಗ ಸನ್ನಿವೇಶ ಬದಲಾಗಿದೆ. ಕಾಫಿತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಒಂದುಕಾಲದಲ್ಲಿ ತಮ್ಮ ಗುಡಿಸಲು ಮನೆಗಳಿಂದಲೇ, ಲೈನುಗಳಿಂದಲೇ ಕೆಲಸ ಮಾಡುವ ತೋಟಕ್ಕೆ ನಡೆದುಕೊಂಡು ಹೋಗುತ್ತಿದ್ದರು. ಆದರೆ ಈಗ ಅವರು ಬಹುತೇಕ ಪಿಕ್‌ಅಪ್ ಗಾಡಿಗಳಲ್ಲಿ ಹೋಗುತ್ತಾರೆ. ಒಂದು ಊರಿನ ಕಾರ್ಮಿಕರು ಅದೇ ಊರಿನ ತೋಟಗಳನ್ನು ಅವಲಂಬಿಸಿಕೊಂಡಿಲ್ಲ. ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುತ್ತಾರೆ. ಕಾರ್ಮಿಕರಿಗೆ ಎಲ್ಲಿ ಸ್ವಲ್ಪ ಕೂಲಿ ಜಾಸ್ತಿ ಸಿಗುತ್ತದೋ ಆ ಕಡೆ ಹೋಗುತ್ತಾರೆ. ಇದರಿಂದ ಕೆಲವು ತೋಟಗಳಲ್ಲಿ ಕೆಲಸ ಮಾಡಲು ಜನಗಳು ಸಿಗುತ್ತಿಲ್ಲ. ಅದರಲ್ಲೂ ವಿಶೇಷವಾಗಿ ಸಣ್ಣ ಹಿಡುವಳಿದಾರರಿಗೆ ಈ ಸಮಸ್ಯೆ ಇದೆ. ಇದು ಕೆಲವು ಸಲ ದೊಡ್ಡ ಹಿಡುವಳಿದಾರರಿಗೂ ತಾಗುವುದುಂಟು. ಅದರಿಂದ ಅವರಿಗೆ ಕೆಲವು ಸಲ ತೊಂದರೆ ಆಯಿತೆಂದು ಅವರು ಭಾವಿಸಿದ್ದೂ ಇದೆ. ಅದಕ್ಕೆ ಸಂಬಂಧಿಸಿದಂತೆ ಅವರು ತಮಗೆ ಅನುಕೂಲವೆನಿಸುವ ಪರಿಹಾರಗಳನ್ನು ಮಾಡಿಕೊಂಡದ್ದೂ ಇದೆ. ಒಂದು ಊರಿನಿಂದ ಮತ್ತೊಂದು ಊರಿಗೆ ಕಾರ್ಮಿಕರನ್ನು ಸಾಗಿಸುವ ಪಿಕ್‌ಅಪ್ ಗಾಡಿಗಳು ಇಂತಿಷ್ಟೆ ಕಿ.ಮೀ. ಮಾತ್ರ ಓಡಾಡಬೇಕೆಂಬ ನಿರ್ಬಂಧ ಹಾಕಿಸಲು ಜಿಲ್ಲಾಡಳಿತವನ್ನು ದುರುಪಯೋಗಪಡಿಸಿಕೊಂಡಿದ್ದೂ ಇದೆ. ಅದರ ಪರಿಣಾಮವಾಗಿ ಕಾರ್ಮಿಕರನ್ನು ಸಾಗಿಸುವ ಸಲುವಾಗಿ ದೂರದೂರದ ಊರುಗಳಿಗೆ ಓಡಾಡುತ್ತಿದ್ದ ಪಿಕ್‌ಅಪ್ ಗಾಡಿಗಳಿಗೆ ತೊಂದರೆ ಆಗಿದ್ದೂ ಇದೆ.



ಸಣ್ಣ ಹಿಡುವಳಿದಾರರ ಸಮಸ್ಯೆಗಳು

ಕಾಫಿ ಎಸ್ಟೇಟ್ ಮಾಲೀಕರನ್ನು ಭಾರೀ ಹಿಡುವಳಿದಾರರು, ಮಧ್ಯಮ ಹಿಡುವಳಿದಾರರು ಮತ್ತು ಸಣ್ಣ ಹಿಡುವಳಿದಾರರು ಎಂದು ಮೂರು ವರ್ಗಗಳಲ್ಲಿ ಗುರುತಿಸಬಹುದು. ಭಾರೀ ಹಿಡುವಳಿದಾರರೆಂದರೆ ಅವರಿಗೆ 2 ಸಾವಿರ ಎಕರೆಗಿಂತಲೂ ಹೆಚ್ಚು ಪ್ರಮಾಣದ ಕಾಫಿ ತೋಟಗಳಿವೆ. ಹತ್ತು–ಹದಿನೈದು ಎಕರೆಗಿಂತ ಕಡಿಮೆ ತೋಟವುಳ್ಳವರನ್ನು ಸಣ್ಣ ಹಿಡುವಳಿದಾರರು ಎಂದು

ನೀರಿಗೆ ಬರ

'ಮಲೆನಾಡೆಂದರೆ ಮಳೆ; ಮಳೆ ಎಂದರೆ ಮಲೆನಾಡು' ಎಂಬುದು ಸುಮ್ಮನೆ ಒಂದು ಅಭಿಪ್ರಾಯ ಅಷ್ಟೆ. ಕಳೆದ ಸುಮಾರು 20–30 ವರುಷಗಳ ಅವಧಿಯಲ್ಲಿ ಮಲೆನಾಡಿನಲ್ಲಿ ಕಾಡು ತೀವ್ರ ಪ್ರಮಾಣದಲ್ಲಿ ಕಡಿಮೆಯಾಗುತ್ತಲೇ ಸಾಗಿದೆ. ಒಂದು ಕಡೆ ಮರಗಳ ಕಳ್ಳ ಸಾಗಣೆ ಜಾಸ್ತಿಯಾಗಿದೆ. ಮಲೆನಾಡಿನ ಮರಗಳೆಲ್ಲ ಪೇಟೆ, ಪಟ್ಟಣ, ನಗರ, ಮಹಾನಗರಗಳ ಐಷಾರಾಮಿ ಮನೆಗಳಲ್ಲಿ ಪೀಠೋಪಕರಣಗಳಾಗಿ ಬಳಕೆಯಾಗುತ್ತಿವೆ. ಪ್ರತಿಯೊಂದು ಊರಿನಲ್ಲೂ ಜನಸಂಖ್ಯೆ ಜಾಸ್ತಿಯಾದಂತೆ, ವಿಭಕ್ತ ಕುಟುಂಬಗಳು ಜಾಸ್ತಿಯಾಗುತ್ತಿವೆ. ಅವರು ತಾವು ಮನೆ ಕಟ್ಟಿಕೊಳ್ಳುವ ಜಾಗದ ಹತ್ತಿರದಲ್ಲಿ ದೊಡ್ಡ ದೊಡ್ಡ ಮರಗಳಿದ್ದರೆ ಅವುಗಳನ್ನು ಕಡಿಯುತ್ತಾರೆ. ನಮ್ಮ ಊರಿನ ನಮ್ಮ ಮನೆಯ ಸುತ್ತ ಇದ್ದ 17 ಮರಗಳನ್ನು ಈ ಸಲುವಾಗಿ ಕಡಿಯಲಾಗಿದೆ. ಒಂದು ಮನೆ ಕಟ್ಟಲು ಇಷ್ಟು ಪ್ರಮಾಣದ ಮರಗಳನ್ನು ಕಡಿದಿರಬಹುದೆ ಎಂದು ಯಾರಿಗಾದರೂ ಆಶ್ಚರ್ಯವಾಗಬಹುದು. ಆದರೂ ವಸ್ತುಸ್ಥಿತಿ ಇದನ್ನೇ ಒತ್ತಿ ಹೇಳುತ್ತಿದೆ. ಇದೇ ರೀತಿಯಲ್ಲಿ ಬೇರೆ ಬೇರೆ ಉಪಯೋಗಕ್ಕೆ ಕಟ್ಟಡ ಕಟ್ಟುವಾಗ, ರಸ್ತೆ ಮಾಡುವಾಗ, ಕಾಲುವೆ ತೊಡುವಾಗ ಅರಣ್ಯ ನಾಶ ಆಗುತ್ತಲೇ ಇದೆ. ಅಭಿವೃದ್ಧಿ ಹೆಸರಿನಲ್ಲಿ ಏನೆಲ್ಲ ನಡೆಯುತ್ತಿದೆಯೊ ಅದೆಲ್ಲವೂ ಕೂಡ ಅಂತಿಮವಾಗಿ ಕಾಡನ್ನು ನಾಶಮಾಡುತ್ತಲೇ ಸಾಗಿದೆ. ಅರಣ್ಯ ಇಲಾಖೆ ಎಂಬುದು ಕೇವಲ ಬೂಟಾಟಿಕೆಯ ಒಂದು ಇಲಾಖೆ ಅಷ್ಟೆ. ಅದು ಇರುವುದೇ ಬಡವರಿಗೆ ತೊಂದರೆ ಕೊಡಲು ಮತ್ತು ಶ್ರೀಮಂತರಿಗೆ ಅನುಕೂಲ ಮಾಡಲು ಅಷ್ಟೆ. ಕಾಡು ನಾಶವಾಗುತ್ತಾ ಸಾಗಿದಂತೆ ಮಲೆನಾಡಿನಲ್ಲಿ ಅದಕ್ಕೆ ಅನುಗುಣವಾಗಿ ಮಳೆಯ ಪ್ರಮಾಣ ಕೂಡ ಕಡಿಮೆಯಾಗುತ್ತಲೇ ಸಾಗಿದೆ. ಕಳೆದ 20–30 ವರುಷಗಳ ಹಿಂದೆ ಹುಯ್ಯುತ್ತಿದ್ದ ಆ ಮಳೆಯನ್ನು ಅನುಭವಿಸಿದವರು ಅದನ್ನು ಈಗ ಕೇವಲ ನೆನಪು ಮಾಡಿಕೊಳ್ಳಬೇಕು ಅಷ್ಟೆ. ಮಳೆಯ ಪ್ರಮಾಣ ಕಡಿಮೆಯಾಗುತ್ತಾ ಹೋದಂತೆ ಸಣ್ಣಪುಟ್ಟ ಹಳ್ಳಕೊಳ್ಳಗಳಲ್ಲಿ ಹರಿಯುವ ನೀರು ಕೂಡ ಕಡಿಮೆಯಾಗುತ್ತಲೇ ಸಾಗಿದೆ. ಅಷ್ಟಿಷ್ಟು ಪ್ರಮಾಣದಲ್ಲಿ

ತೋಟ ಸುತ್ತುವ ಪಿಕ್‌ಅಪ್ ಗಾಡಿಗಳು

ಕರೆಯಬಹುದು. ಉಳಿದವರು ಮಧ್ಯಮ ಹಿಡುವಳಿದಾರರು. ಮೇಲಿನ ಎರಡೂ ವರ್ಗದವರಿಗೆ ಉತ್ಪಾದನೆಯ ಪ್ರಮಾಣ ಮತ್ತು ಲಾಭದ ಪ್ರಮಾಣ ಎರಡೂ ಜಾಸ್ತಿ. ಕೊನೆಯ ವರ್ಗವಾದ ಸಣ್ಣ ಹಿಡುವಳಿದಾರರಿಗೆ ಕೆಲವು ಸಮಸ್ಯೆಗಳಿವೆ. ಆ ವರ್ಗದವರ ಉತ್ಪಾದನೆ ಮೇಲಿನ ಎರಡು ವರ್ಗದವರಿಗೆ ಹೋಲಿಸಿಕೊಂಡರೆ ಕಡಿಮೆ. ಲಾಭ ಸಾಮಾನ್ಯವಾಗಿರುತ್ತದೆ. ಅವರು ತಮ್ಮ ತೋಟಗಳಲ್ಲಿ ತಾವೇ ಕೆಲಸ ಮಾಡಿಕೊಳ್ಳುತ್ತಾರೆ. ಕೆಲವು ಸಲ ಹೊರಗಿನ ಕಾರ್ಮಿಕರನ್ನೂ ಅವಲಂಬಿಸಬೇಕಾಗುತ್ತದೆ. ಮಲೆನಾಡಿನಲ್ಲಿ ಈ ವರ್ಗದವರಿಗೆ ಕಾರ್ಮಿಕರ ಸಮಸ್ಯೆ ಇದೆ.

ಒಂದು ಕಡೆ ತೋಟದ ಕೆಲಸಕ್ಕೆ ಕಾರ್ಮಿಕರನ್ನು ಅವಲಂಬಿಸಲೇಬೇಕಾಗಿದೆ; ಮತ್ತೊಂದು ಕಡೆ ಕಾರ್ಮಿಕರು ಇವರಿಗೆ ಸಿಗುತ್ತಲೇ ಇಲ್ಲ. ತೋಟದ ಕೆಲಸಗಳಿಗೆ, ಮಕ್ಕಳ ಶಿಕ್ಷಣ, ಮದುವೆ, ಆರೋಗ್ಯ ಮುಂತಾದ ವಿಷಯಗಳಿಗೆ ಸಂಬಂಧಿಸಿಂತೆ ಈ ವರ್ಗದವರು ಸಾಲ ಮಾಡಿರುತ್ತಾರೆ. ಬಹುತೇಕ ಈ ವರ್ಗದವರು ಸಾಲದ ಸಮಸ್ಯೆಯಲ್ಲಿ ಇದ್ದಾರೆ. ಒಂದು ಕಡೆ ತಮಗಿಂತ ಕೆಳಗಿರುವ ಕಾರ್ಮಿಕರಿಗಿಂತ ತಾವು ಮೇಲು ಎಂದು ತೋರಿಸಿಕೊಳ್ಳುವ ಅನಿವಾರ್ಯತೆ; ಮತ್ತೊಂದು ಕಡೆ ತಮಗಿಂತ ಮೇಲಿರುವ ಭಾರೀ ಶ್ರೀಮಂತ ವರ್ಗದವರೊಂದಿಗೆ ಯಾವುದರಲ್ಲೂ ಹೋಲಿಕೆಯಾಗದ ಡೋಲಾಯಮಾನ ಸ್ಥಿತಿ ಈ ವರ್ಗದ್ದು. ಹಾಗಾಗಿ ಈ ವರ್ಗದವರಿಗೆ ವಿಶೇಷವಾಗಿ ಜಂಬ, ದರ್ಪ, ದಬ್ಬಾಳಿಕೆಯ ಮನೋಭಾವ ಜಾಸ್ತಿ. ಉಳಿದೆರಡು ವರ್ಗದವರಿಗೆ ಇದು ಇಲ್ಲ ಎಂದು ಹೇಳುವಂತಿಲ್ಲ.

ಹರಿಯುವ ನೀರನ್ನು ಕಾಫಿತೋಟಗಳ ಮಾಲಿಕರು ಪಂಪ್ ಮೂಲಕ ಎತ್ತಿಕೊಂಡು ತಮ್ಮ ಕಾಫಿತೋಟಗಳಿಗೆ ನೀರುಣಿಸಿಕೊಳ್ಳುತ್ತಾರೆ. ಒಂದು ಕಡ್ಡಿ ಸೌದೆ ತರಲು ಹೋದವರನ್ನು ಕಳ್ಳರೆಂದು ಪರಿಗಣಿಸುವ ಸರಕಾರಿ ಇಲಾಖೆಯವರು ಹರಿಯುವ ನೀರನ್ನು ಶ್ರೀಮಂತ ಕಾಫಿ ಬೆಳೆಗಾರರು ಅನಾಮತ್ತಾಗಿ ತಮ್ಮ ತೋಟಗಳಿಗೆ ಹರಿಸಿಕೊಳ್ಳುವುದರ ಬಗ್ಗೆ ಯಾವ ಮಾತನ್ನೂ ಆಡುವುದಿಲ್ಲ. ಇದೂ ಸೇರಿದಂತೆ ಒಂದುಕಾಲದಲ್ಲಿದ್ದ ಅಂತರ್ ಜಲದ ಪ್ರಮಾಣ ಈಗಂತೂ ತೀವ್ರವಾಗಿ ಕಡಿಮೆಯಾಗಿದೆ. ಒಂದುಕಾಲದಲ್ಲಿ ಬೇಸಿಗೆಯಲ್ಲೂ ಹರಿಯುತ್ತಿದ್ದ ಸಣ್ಣಪುಟ್ಟ ಹಳ್ಳಕೊಳ್ಳಗಳು ಇಂದು ಹರಿಯುತ್ತಿಲ್ಲ. ಕೆಲವಂತೂ ತಾವು ಹರಿಯುತ್ತಿದ್ದ ಕುರುಹನ್ನೂ ಉಳಿಸಿಲ್ಲ. ಮಲೆನಾಡಿನ ಬಹುತೇಕ ಹಳ್ಳಿಗಳಲ್ಲಿ ಬಳಸುವ ನೀರಿಗೆ ಮತ್ತು ಕುಡಿಯುವ ನೀರಿಗೆ ತೀವ್ರವಾದ ಸಮಸ್ಯೆ ಇದೆ. ಒಂದುಕಾಲದಲ್ಲಿ ನೀರು ಕೊಡುತ್ತಿದ್ದ ಕೊಳವೆ ಬಾವಿಗಳು ಇಂದು ಸಂಪೂರ್ಣ ಒಣಗಿಹೋಗಿವೆ. ತೋಡುವ ಬಾವಿಗಳಲ್ಲಿ ಮತ್ತು ಸೇದುವ ಬಾವಿಗಳಲ್ಲಿ ನೀರು ಒಣಗಿಹೋಗಿದೆ. ಈಗಂತೂ ಮಲೆನಾಡಿನ ಬಹುತೇಕ ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಸಾಮಾನ್ಯವಾಗಿದೆ. ಆದರೆ ಈ ಸಮಸ್ಯೆ ಮಲೆನಾಡಿನಲ್ಲಿರುವ ಶ್ರೀಮಂತ ವರ್ಗಕ್ಕೆ ಅನ್ವಯಿಸುವುದಿಲ್ಲ.

ಸೌದೆಗೆ ಬರ

ಮಲೆನಾಡಿನ ಬಹುತೇಕ ಕಾಡನ್ನು ಎಸ್ಟೇಟ್ ಮಾಲಿಕರು ಕಾಫಿತೋಟ ಮಾಡಿಕೊಂಡಿದ್ದಾರೆ. ಒಂದು ಕಾಲದಲ್ಲಿ ಇದ್ದ ಕಾಡೆಲ್ಲ ಇಂದು ಬರೀ ಕಾಫಿ ಎಸ್ಟೇಟ್

ಆಗಿ ಮಾರ್ಪಾಟಾಗಿದೆ. ಎಲ್ಲಿ ನೋಡಿದರೂ ಬರೀ ಕಾಫಿತೋಟಗಳೇ. ಹಾಗಾಗಿ ದೈನಂದಿನ ವಿವಿಧ ಕೆಲಸಗಳಿಗೆ ಸೌದೆ ಬಳಸುತ್ತಿದ್ದವರಿಗೆ ಇಂದು ಸೌದೆ ಸುಲಭವಾಗಿ ಸಿಗುತ್ತಿಲ್ಲ. ಅಳಿದುಳಿದ ಅಷ್ಟಿಷ್ಟು ಕಾಡಿನಲ್ಲಿ ಸೌದೆ ತರಲು ಹೋದರೆ ಫಾರೆಸ್ಟ್ ಇಲಾಖೆಯವರ ದಬ್ಬಾಳಿಕೆ. ಸೌದೆ ತರಲು ಹೋದವರಿಗೆ ಫಾರೆಸ್ಟ್ ಇಲಾಖೆಯವರು ಕೊಡಬಾರದ ಕಿರುಕೊಳ ಕೊಡುತ್ತಾರೆ. ಕಾಫಿತೋಟಗಳಲ್ಲಿ ಮರ ಕಸಿಮಾಡಿರುವ ಸೌದೆ ಸಿಗುತ್ತದೆ. ಆದರೆ ಮಾಲೀಕರು ಆ ಸೌದೆಯನ್ನು ಯಾವು ಯಾವುದೋ ನೆಪವೊಡ್ಡಿ ಕೊಡುವುದಿಲ್ಲ. ಹಾಗಾಗಿ ಸೌದೆಯನ್ನು ಅವಲಂಬಿಸಿರುವ ದುಡಿಯುವ ವರ್ಗದವರಿಗೆ ಸೌದೆಗೆ ದೊಡ್ಡ ಸಮಸ್ಯೆಯೇ ಎದುರಾಗಿದೆ.

ಏಡಿ, ಮೀನು, ಕಪ್ಪೆಗಳಿಗೂ ಬಂತು ಸಂಚಕಾರ

ಕಾಫಿ ತೋಟಗಳಿಗೆ ವಿವಿಧ ಕಾರಣಗಳಿಗೆ ತರಾವರಿ ಗೊಬ್ಬರ ಹಾಕುತ್ತಾರೆ. ವರ್ಷಕ್ಕೆ ಎರಡು ಸಲ ಸ್ಪಿಂಕ್ಲರ್ ಮಾಡುತ್ತಾರೆ. ಕಾಫಿಗಿಡಗಳಿಂದ ಬಿಡಿಸಿದ ಕಾಫಿಬೀಜಗಳನ್ನು ಬೇಳೆ ಮಾಡುವ ಸಲುವಾಗಿ ಪಲ್ಪರ್ ಮಾಡುತ್ತಾರೆ. ಪಲ್ಪರ್ ಮಾಡಲು ನೀರು ಬೇಕು. ಆ ಕೆಲಸಕ್ಕೆ ಹಳ್ಳಕೊಳ್ಳಗಳಿಂದ ನೀರನ್ನು ಎತ್ತಿಕೊಳ್ಳುತ್ತಾರೆ. ನಂತರ ಆ ನೀರನ್ನು ತಿರುಗಿ ಅದೇ ಹಳ್ಳಕೊಳ್ಳಗಳಿಗೆ ಬಿಡುತ್ತಾರೆ. ಆ ನೀರು ಮತ್ತು ಮಳೆಗಾಲದಲ್ಲಿ ಕಾಫಿತೋಟಗಳಿಂದ ಹರಿದುಬರುವ ನೀರು ಮತ್ತೆ ಹಳ್ಳಕೊಳ್ಳ ಸೇರುತ್ತದೆ. ಈ ನೀರಿನಲ್ಲಿ ಭಾರೀ ಪ್ರಮಾಣದ ಥರಾವರಿ ಕೆಮಿಕಲ್ ಸೇರಿರುತ್ತದೆ. ಇದರಿಂದ ಹಳ್ಳಕೊಳ್ಳಗಳಲ್ಲಿದ್ದ ವಿವಿಧ ಜಾತಿಯ ಏಡಿ ಮತ್ತು ವಿವಿಧ ಜಾತಿಯ ಮೀನುಗಳಿಗೆ ನಾನಾ ರೋಗಗಳು ಬಂದಿವೆ. ಹಲವಾರು ಪ್ರಬೇಧಗಳ ಏಡಿ ಮತ್ತು ಮೀನುಗಳು ಇಂದು ಕಾಣುತ್ತಿಲ್ಲ; ಅಥವಾ ಅವೆಲ್ಲ ನಾಶದ ಅಂಚಿಗೆ ಹೋಗಿವೆ. ಕೆರೆಯ ಮಣ್ಣಿನಲ್ಲಿ ಮುಂಗಾರು ಮಳೆಯಲ್ಲಿ ಹುಟ್ಟುತ್ತಿದ್ದ ಮುಂಡೇಡಿಗಳು, ಗದ್ದೆಗಳಲ್ಲಿ ಹುಟ್ಟುತ್ತಿದ್ದ ಹುಲ್ಲೇಡಿಗಳು, ಕಾಡಿನಲ್ಲಿ ಹರಿಯುವ ಕೊರಕಲುಗಳಲ್ಲಿರುತ್ತಿದ್ದ ಕೊರಕಲು ಏಡಿಗಳು ಮುಂತಾದ ಹಲವು ಪ್ರಬೇಧಗಳ ಏಡಿಗಳು; ಗೊಲಪಗಳು, ಕೊರೆಮೀನು, ಸೊಸಲು ಮೀನು, ಮಳಲೆ ಮೀನು ಮುಂತಾದ ಹಲವು ಪ್ರಭೇದಗಳ ಮೀನುಗಳು; ಹಲವು ಪ್ರಭೇದಗಳ ಕಪ್ಪೆಗಳು ಇಂದು ಕಾಣೆಯಾಗಿವೆ; ನಾಶದ ಅಂಚಿಗೆ ಹೋಗಿವೆ.

ಹೊರಗೆ ತಣ್ಣಗೆ, ನುಣ್ಣಗೆ ಕಾಣುವ ಮಲೆನಾಡು ಒಳಗೊಳಗೇ ಕೊತಕೊತ ಕುದಿಯುತ್ತಿದೆ. ಕೌಟುಂಬಿಕ ವಾತಾವರಣದಿಂದ ಮೊದಲುಗೊಂಡು, ಸಾಮಾಜಿಕ ಜೀವನದವರೆಗೆ ಇದರ ವ್ಯಾಪ್ತಿ ವಿಸ್ತರಿಸಿದೆ. ಭಾರೀ ಶ್ರೀಮಂತ ವರ್ಗ ಮತ್ತು ಮಧ್ಯಮ ವರ್ಗದ ಕಾಫಿ ಮಾಲೀಕರ ದರ್ಪ, ದಬ್ಬಾಳಿಕೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೆ ಸಾಗಿವೆ. ಗ್ರಾಮ ಪಂಚಾಯಿತಿ ಮೂಲಕ ಬರುವ ಸರಕಾರಿ ಯೋಜನೆಗಳು ಹಾಗೂ ಸೌಲಭ್ಯಗಳೆಲ್ಲ ಬೇರೆ ಬೇರೆ ಹೆಸರಿನಲ್ಲಿ ಸೀದಾ ದೊಡ್ಡಗೌಡರ ಬಾಗಿಲಿಗೇ ಹೋಗುತ್ತವೆ. ಅಧಿಕಾರಿಗಳು, ಸರಕಾರಿ ನೌಕರರೆಲ್ಲ ಅವರಿಗೇ ಮಾತ್ರ ಸೇವೆ ಮಾಡಲು ಹುಟ್ಟಿದಂತೆ ಅವರ ಕೆಲಸಗಳನ್ನು ಮಾಡಿಕೊಂಡಿದ್ದಾರೆ. ಈ ಎರಡೂ ಸೇರಿದಂತೆ ದುಡಿಯುವ ವರ್ಗದ ಆರ್ಥಿಕ, ಸಾಮಾಜಿಕ ಬದುಕು ಜಟಿಲವಾಗುತ್ತಲೇ ಸಾಗಿದೆ.

ಕ್ರಿಮಿನಾಶಕ ಬಳಕೆಯ ಪರಿಣಾಮಗಳು

ಕಾಫಿತೋಟಗಳಿಗೆ ವಿವಿಧ ಬಗೆಯ ಕ್ರಿಮಿನಾಶಕಗಳನ್ನು ಬಳಸುತ್ತಾರೆ. ಮಾಲಿಕರು ಅವನ್ನು ಕೊಂಡು ತರುತ್ತಾರೆ. ಕಾರ್ಮಿಕರು ಅವನ್ನು ಕೈಯಿಂದ ಬಳಸಿ ಗಿಡಗಳಿಗೆ ಹಾಕುತ್ತಾರೆ. ಕೆಲವು ಕ್ರಿಮಿನಾಶಕಗಳ ವಾಸನೆಯೇ ಅತ್ಯಂತ ಭಯಾನಕವಾಗಿರುತ್ತದೆ. ಅದರ ವಾಸನೆಗೆ ತಲೆನೋವು, ಹೊಟ್ಟೆ ತೊಳೆಸುವುದು ಮುಂತಾದುವೆಲ್ಲ ಎದುರಾಗುತ್ತವೆ. ಅದರ ವಾಸನೆಗೆ ಕೆಲವು ಸಲ ಊಟ ಕೂಡ ಸೇರುವುದಿಲ್ಲ. ಕೆಲವನ್ನು ಕೈಯಲ್ಲಿ ಮುಟ್ಟಿದರೆ ಕೈ ಚರ್ಮ ಸುಕ್ಕುಗಟ್ಟುತ್ತದೆ; ಇಲ್ಲವೆ ಸ್ವಲ್ಪ ಪ್ರಮಾಣದಲ್ಲಿ ಬೆಂದಂತಾಗುತ್ತದೆ. ಕೆಲವನ್ನು ಬಳಸಿದರೆ ಕಜ್ಜಿ ತುರಿ ಬರುತ್ತದೆ. ಇವೆಲ್ಲ ಮೂರ್ತರೂಪದ ದುಷ್ಪರಿಣಾಮಗಳಾದವು.

ಇದಲ್ಲದೆ ಇದರ ದುಷ್ಪರಿಣಾಮದ ಕ್ರೂರಮುಖಗಳು ಇನ್ನೂ ಇವೆ. ಕೆಲವರಿಗೆ ಉಸಿರಾಟದ ತೊಂದರೆಗಳು ಬಂದಿವೆ. ಮತ್ತೆ ಕೆಲವರಿಗೆ ಎದೆ ನೋವು ಕಾಣಿಸಿಕೊಳ್ಳುತ್ತಿದೆ. ಇವೆಲ್ಲ ಎಂತಹ ಕಾಯಿಲೆಗಳು, ಅವಕ್ಕೆ ಯಾವ ಔಷಧಿ ಎಂಬುದು ಅವನ್ನು ಎದುರಿಸುತ್ತಿರುವ ಜನರಿಗೂ ತಿಳಿದುಕೊಳ್ಳಲು ಆಗಿಲ್ಲ; ಅವರಿಗೆ ಔಷಧಿ ಕೊಡುತ್ತಿರುವ ವೈದ್ಯರಿಗೂ ಸರಿಯಾಗಿ ಗೊತ್ತಿಲ್ಲ. ಅಂತೂ ಬಡವರ ಬಂಡಿ ಹಾಗೆಯೇ ಸಾಗುತ್ತಿದೆ.

ಸೊಳ್ಳೆಗಳ ಕಾಟ

ಕ್ರಿಮಿನಾಶಕಗಳ ಬಳಕೆಯ ದುಷ್ಪರಿಣಾಮಗಳ ದೊಡ್ಡ ಪಟ್ಟಿಯನ್ನೆ ಕೊಡಬಹುದು. ಸೊಳ್ಳೆಗಳಿಗೆ ಸಂಬಂಧಿಸಿದಂತೆ ಒಂದು ಮುಖ್ಯ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಬೇಕು. ಸೊಳ್ಳೆಗಳಲ್ಲಿ ಬೇರೆ ಬೇರೆ ಪ್ರಭೇದಗಳಿವೆ. ಕಾಡಿನಲ್ಲಿರುವ ಸೊಳ್ಳೆಗಳನ್ನು ನೊರಜು ಎಂದು ಕರೆಯುತ್ತೇವೆ. ಅವು ಊರಿನ ಸೊಳ್ಳೆಗಳಿಗಿಂತ ಚಿಕ್ಕದಾಗಿರುತ್ತವೆ. ಅವುಗಳ ಮೈಮೇಲೆ ಕೆಲವು ಬಿಳಿಯ ಚುಕ್ಕೆಗಳಿದ್ದು ನೋಡಲು ಬಲು ಸುಂದರವಾಗಿರುತ್ತವೆ. ಅವು ಕಡಿದರೆ ಕಡಿದ ದೇಹದ ಭಾಗ ಕಡಿಯುತ್ತದೆ ಅಥವಾ ತುರಿಕೆ ಬರುತ್ತದೆ. ಇದೇ ನೊರಜು ದನಗಳಿಗೆ ಕಡಿದರೆ ಕಡಿದ ಭಾಗ ದೊಡ್ಡದಾಗಿ ಊದಿಕೊಳ್ಳುತ್ತದೆ. ಅವುಗಳಿಂದ ಕಚ್ಚಿಸಿಕೊಳ್ಳುವುದನ್ನು ತಪ್ಪಿಸಿಕೊಳ್ಳುವ ಸಲುವಾಗ ದನಗಳು ತಮ್ಮ ಬಾಲಗಳಿಂದ ಮೈಗೆ ಚೆನ್ನಾಗಿ ಬಾರಿಸಿಕೊಳ್ಳುತ್ತವೆ. ಇವು ಸಾಮಾನ್ಯವಾಗಿ ಕಾಡಿನಲ್ಲಿ ಇರುತ್ತವೆ. ಜೊತೆಗೆ ದನಗಳನ್ನು ಕಟ್ಟುವ ಹಟ್ಟಿ, ಕೊಟ್ಟಿಗೆಗಳಲ್ಲೂ ಇರುತ್ತವೆ.

ಕೆಲವು ವರುಷಗಳ ಹಿಂದೆ ಮಲೆನಾಡಿನ ಮನೆಗಳಲ್ಲಿ ಸೊಳ್ಳೆಗಳು ಇರಲಿಲ್ಲ. ಮೇಲೆ ಸೂಚಿಸಿದ ನೊರಜುಗಳು ಮಾತ್ರ ಕಾಡಿನಲ್ಲೊ, ದನದ ಕೊಟ್ಟಿಗೆಯಲ್ಲೊ ಇರುತ್ತಿದ್ದವು. ಮನೆಗಳಲ್ಲಿ ಸೌದೆಯ ಬೆಂಕಿ ಹಾಕುವುದರಿಂದ ಅದರ ಹೊಗೆ ಮನೆಯನ್ನೆಲ್ಲ ತುಂಬಿಕೊಳ್ಳುತ್ತದೆ. ಆ ಹೊಗೆಗೆ ಸೊಳ್ಳೆಗಳು ಇಲ್ಲವೆ ನೊರಜುಗಳು ಬರುವುದಿಲ್ಲ ಎಂದು ನಂಬಿದ್ದ ಒಂದು ಕಾಲವಿತ್ತು. ಆದರೆ ಈಗ ಕಾಲ ಬದಲಾಗಿದೆ. ಅದು ಎಷ್ಟರಮಟ್ಟಿಗೆ ಬದಲಾಗಿದೆ ಎಂದರೆ ರಾತ್ರಿಯಾಯಿತೆಂದರೆ ಸೌದೆ ಬೆಂಕಿಯ ಒಲೆಯ ಬದಿಯಲ್ಲೂ ಸೊಳ್ಳೆಗಳು ತಮ್ಮ ಶಕ್ತ್ಯಾನುಸಾರ ಸಂಚಾರ ಮಾಡುತ್ತವೆ. ರಾತ್ರಿ ಒಲೆಯ ಬಳಿ ಮಲಗುವವರು ಸೊಳ್ಳೆ ಬತ್ತಿ ಹಚ್ಚಿಕೊಂಡೋ, ಸೊಳ್ಳೆ ಪರದೆ ಕಟ್ಟಿಕೊಂಡೊ ಮಲಗಬೇಕಾದ ದುಃಸ್ಥಿತಿ ಎದುರಾಗಿದೆ. ಬೆಂಕಿಯ ಹೊಗೆಗೂ ಹೆದರದ ಸೊಳ್ಳೆಗಳು ಯಾವುವು? ಅವುಗಳ ಮರ್ಮವೇನು ಎಂಬುದನ್ನು ಸಂಬಂಧಪಟ್ಟವರು ಆಲೋಚಿಸಬೇಕು.

ಆದರೂ ಇದಕ್ಕೆ ಸಂಬಂಧಿಸಿದಂತೆ ಒಂದು ಅಂಶವನ್ನು ಇಲ್ಲಿ ಹೇಳಬೇಕು. ಕಾಫಿ ತೋಟಗಳಿಗೆ ಯಥೇಚ್ಚ ಪ್ರಮಾಣದಲ್ಲಿ ಕ್ರಿಮಿನಾಶಕಗಳನ್ನು ಹಾಕುತ್ತಾರೆ. ಅದರ ಪರಿಣಾಮದಿಂದ ಅಲ್ಲಿರುವ ಸೊಳ್ಳೆ ಇಲ್ಲವೆ ನೊರಜುಗಳಿಗೆ ಅಲ್ಲಿರಲು ಆಗುವುದಿಲ್ಲವೆಂದು ಕಾಣುತ್ತದೆ. ಆಗ ಅವು ಸಹಜವಾಗಿ ಕಾಡು ಬಿಟ್ಟು ಊರು, ಕೇರಿ, ಮನೆ, ಗುಡಿಸಲುಗಳನ್ನು ಸೇರುತ್ತವೆ. ಅವಕ್ಕೂ ಕೂಡ ಆಧುನಿಕತೆಯ ಸೋಂಕು ಬೇಕು ನೋಡಿ!

ಗರ್ಭಕೋಶದ ಕಾಯಿಲೆಗಳು

ಕಾಫಿಗೆ ಯಥೇಚ್ಚ ಪ್ರಮಾಣದಲ್ಲಿ ಕ್ರಿಮಿನಾಶಕಗಳನ್ನು ಬಳಸುವುದರಿಂದ ಆಗುತ್ತಿರುವ ದುಷ್ಪರಿಣಾಮಗಳು ಹಲವು. ಮಲೆನಾಡಿನಲ್ಲಿ ಇತ್ತೀಚಿನ ಕೆಲವು ವರುಷಗಳಲ್ಲಿ ಮಹಿಳೆಯರಿಗೆ ಗರ್ಭಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳು ಹೆಚ್ಚಾಗಿ ಕಂಡುಬರುತ್ತಿವೆ. ಅನೇಕರು ಅದರ ತೊಂದರೆಯಿಂದ ಬಳಲುತ್ತಿದ್ದಾರೆ. ಸರಿಯಾದ ಪರಿಹಾರ ಸಿಗದೆ ನರಳುತ್ತಿದ್ದಾರೆ. ಮದುವೆಯಾದ ನೂರಕ್ಕೆ ಇಬ್ಬರು ಮೂವರು ದಂಪತಿಗಳಿಗೆ ಮಕ್ಕಳಾಗುತ್ತಿಲ್ಲ. ಒಂದು ಕಡೆ ಪೌಷ್ಟಿಕ ಆಹಾರದ ಕೊರತೆ. ಮತ್ತೊಂದು ಕಡೆ ಅತಿಯಾದ ಕ್ರಿಮಿನಾಶಕಗಳ ಬಳಕೆ. ಇವೆರಡೂ ಮಲೆನಾಡಿನ ಅನೇಕರನ್ನು ನಿಧಾನಗತಿಯಲ್ಲಿ ಮೆತ್ತಗೆ ಮಾಡಿವೆ.

ಅತಂತ್ರ ಸ್ಥಿತಿಯಲ್ಲಿ ಯುವ ಕಾರ್ಮಿಕರು

ಮಲೆನಾಡಿನಲ್ಲಿ ಕಾರ್ಮಿಕರೆಂದರೆ ಅವರು ಬಹುತೇಕ ದಲಿತರೇ ಆಗಿದ್ದಾರೆ. ಈಗಿನದು ಬಹುತೇಕ ಒಂದು ಬಗೆಯಲ್ಲಿ ಹೊಸ ತಲೆಮಾರು. ಅದಕ್ಕೆ ಹಳೆಯ ತಲೆಮಾರಿನ ಯಾವ ಸ್ವಭಾವಗಳೂ, ಯಾವ ಅಭಿರುಚಿಗಳೂ ಹಿಡಿಸುವುದಿಲ್ಲ. ಆಸಕ್ತಿ ಮತ್ತು ಅಭಿರುಚಿಗಳು ಸಂಪೂರ್ಣ ಉತ್ತರ ದಕ್ಷಿಣ ಆಗಿರುವುದರಿಂದ ಕೌಟುಂಬಿಕ ಸಂಬಂಧಗಳಲ್ಲಿ ಯಾವುದಾದರೂ ಒಂದು ವಿಷಯದಲ್ಲಿ ಒಂದು ಕಾಮನ್ ತೀರ್ಮಾನಕ್ಕೆ ಬರಲು ಆಗುವುದಿಲ್ಲ. ಅಂತಹ ಸಂದರ್ಭದಲ್ಲಿ ಕೌಟುಂಬಿಕ ಭಿನ್ನಮತಗಳೂ, ಕೌಟುಂಬಿಕ ಕಲಹಗಳೂ ಉಂಟಾಗುತ್ತವೆ. ಹಳೆಯ ತಲೆಮಾರಿನವರು ಅನೇಕ ಬಗೆಯ ಜಮೀನ್ದಾರಿ ಶೋಷಣೆ ಮತ್ತು ಅಪಮಾನಗಳನ್ನು ಸಹಿಸಿಕೊಂಡು, ಅನುಭವಿಸಿಕೊಂಡು ಬದುಕಿದ್ದರು. ಆದರೆ ಈಗಿನ ತಲೆಮಾರು ಇದಕ್ಕೆ ರೆಡಿ ಇಲ್ಲ. ಈ ತಲೆಮಾರು 'ನೀನು ಎಂದರೆ; ನಿಮ್ಮಪ್ಪ' ಎನ್ನುವಂತಹದ್ದು. ಈ ಬಗೆಯ ಸಾಮಾಜಿಕವಾದ ತೀವ್ರ ಅಸಹನೆ ಮತ್ತು ಪ್ರತಿರೋಧದ ಗುಣ ಶೋಷಿತರಲ್ಲಿ ಇರಬೇಕು ನಿಜ. ಆದರೆ ಈ ಹೊಸ ತಲೆಮಾರಿನ ಬಹುದೊಡ್ಡ ಸಮಸ್ಯೆ ಎಂದರೆ ಇವರು ತಮ್ಮ ಕಾಲ ಮೇಲೆ ತಾವು ನಿಂತಿಲ್ಲ. ತಮ್ಮ ಸ್ವಂತ ಕಾಲ ಮೇಲೆ ತಾವು ನಿಲ್ಲಬೇಕೆಂಬ ಆಸೆಯನ್ನೊ, ಕನಸನ್ನೊ ಕಾಣುವಂತಹ ವಾತಾವರಣವೇ ಅವರಿಗೆ ಸಿಕ್ಕಿಲ್ಲವೇನೊ. ಅಥವಾ ಎಲ್ಲಾ ಬಗೆಯ ಅಸಮಾನತೆ, ಅನ್ಯಾಯ ಮತ್ತು ಶೋಷಣೆಗಳನ್ನು ಮೆಟ್ಟಿನಿಂತು ಇಲ್ಲವೆ ಅವನ್ನು ನಾಶಪಡಿಸಿ, ಹೊಸ ಬದುಕನ್ನು ಕಟ್ಟಿಕೊಳ್ಳಲು ವಾತಾವರಣವನ್ನು ಇನ್ನೂ ಪಕ್ವಗೊಳಿಸಬೇಕಾಗಿದೆ. ಈ ತಲೆಮಾರಿಗೆ ತೀವ್ರವಾದ ಸ್ವಾಭಿಮಾನ ಮತ್ತು ಆತ್ಮಾಭಿಮಾನಗಳಿವೆ. ಇದು ಸ್ವಾಗತಿಸಲೇಬೇಕಾದ ಸಂಗತಿ. ಆದರೆ ಮೂಲ ಸಮಸ್ಯೆ ಎಂದರೆ ಇವರು ಯಾರೂ ಕೂಡ ಸ್ವಾವಲಂಬನೆಯ ಬದುಕನ್ನು ಕಟ್ಟಿಕೊಂಡವರಲ್ಲ. ಅಥವಾ ಹಾಗೆ ಕಟ್ಟಿಕೊಳ್ಳಬೇಕೆಂದು ಭರವಸೆಯ ಕನಸನ್ನೂ ಕಂಡವರಲ್ಲ. ಇವರ ಕಣ್ಣೆದುರಿಗೇ ದಲಿತೇತರರು ಸ್ವತಂತ್ರವಾದ ಬದುಕನ್ನು ಕಟ್ಟಿಕೊಂಡಿರುವ ಸಾಮಾನ್ಯ ಚಿತ್ರಣ ಇವರಿಗೆ ಸಂಪೂರ್ಣ ಗೊತ್ತಿದೆ. ಆದರೆ ಇವರೊಳಗೆ ಯಾಕೆ ಆ ರೀತಿಯ ಒಂದು ಛಲ ಹುಟ್ಟಿಲ್ಲ; ಹುಟ್ಟುವುದಿಲ್ಲ ಎಂಬ ಗಂಭೀರ ಪ್ರಶ್ನೆ ಎದುರಾಗಿದೆ. ದೈನಂದಿನ ಸಾಮಾನ್ಯ ಘಟನೆಗಳಿಗೆ ಪ್ರತಿಕ್ರಿಯಿಸುವಾಗ, ಇವರಲ್ಲಿ ಅತಿಯಾದ ಸಿಟ್ಟು, ಆಕ್ರೋಶಗಳಿರುತ್ತವೆ. ಈ ಸಿಟ್ಟು ಮತ್ತು ಅವರೊಳಗಿನ ತೀವ್ರವಾದ ಆಕ್ರೋಶವೇ ಇವರ ಬಹಳ ದೊಡ್ಡ ಆಸ್ತಿ ಎಂಬಂತೆ ಕಾಣುತ್ತದೆ. ಇದರಾಚೆಗೆ ಅಪವಾದದ ಕೆಲವು ವ್ಯಕ್ತಿಗಳನ್ನು ತೋರಿಸಬಹುದು. ಆದರೆ ಪ್ರಶ್ನೆ ಇರುವುದು ಬಹುಸಂಖ್ಯಾತರ ಪರಿಸ್ಥಿತಿ ಏನಾಗಿದೆ ಎಂಬುದೇ ಆಗಿದೆ. ಸಾಂದರ್ಭಿಕವಾಗಿ ವ್ಯಕ್ತವಾಗುವ ಸಿಟ್ಟು ಮತ್ತು ಆಕ್ರೋಶಗಳಿಂದ ಇವರ ಇಡಿಯಾದ ಬದುಕು ಬದಲಾಗುವುದಿಲ್ಲ. ಬಹುತೇಕ ಕುಟುಂಬಗಳಲ್ಲಿ ಇವರ ಅತಂತ್ರ ಸ್ಥಿತಿಯನ್ನು ನೆನೆದು ತಂದೆತಾಯಿಗಳು ದಾರಿ ಕಾಣದೆ ಹತಾಶರಾಗಿದ್ದಾರೆ. ತಮ್ಮ ವೈಯಕ್ತಿಕ ವಿಷಯದಲ್ಲಿ ಮತ್ತು ಕುಟುಂಬದ ವಿಷಯದಲ್ಲಿ ಕನಿಷ್ಠ ಜವಾಬ್ದಾರಿಯನ್ನು ಸಹ ಇವರು ವಹಿಸುತ್ತಿಲ್ಲ.

ಮಲೆನಾಡಿನಲ್ಲಿ ಕಾರ್ಮಿಕರೆಂದರೆ ಅವರು ಬಹುತೇಕ ದಲಿತರೇ ಆಗಿದ್ದಾರೆ. ಈಗಿನದು ಬಹುತೇಕ ಒಂದು ಬಗೆಯಲ್ಲಿ ಹೊಸ ತಲೆಮಾರು ಈ ತಲೆಮಾರಿಗೆ ತೀವ್ರವಾದ ಸ್ವಾಭಿಮಾನ ಮತ್ತು ಆತ್ಮಾಭಿಮಾನಗಳಿವೆ. ಇದು ಸ್ವಾಗತಿಸಲೇಬೇಕಾದ ಸಂಗತಿ. ಆದರೆ ಮೂಲ ಸಮಸ್ಯೆ ಎಂದರೆ ಇವರು ಯಾರೂ ಕೂಡ ಸ್ವಾವಲಂಬನೆಯ ಬದುಕನ್ನು ಕಟ್ಟಿಕೊಂಡವರಲ್ಲ. ಅಥವಾ ಹಾಗೆ ಕಟ್ಟಿಕೊಳ್ಳಬೇಕೆಂದು ಭರವಸೆಯ ಕನಸನ್ನೂ ಕಂಡವರಲ್ಲ. ಇವರ ಕಣ್ಣೆದುರಿಗೇ ದಲಿತೇತರರು ಸ್ವತಂತ್ರವಾದ ಬದುಕನ್ನು ಕಟ್ಟಿಕೊಂಡಿರುವ ಸಾಮಾನ್ಯ ಚಿತ್ರಣ ಇವರಿಗೆ ಸಂಪೂರ್ಣ ಗೊತ್ತಿದೆ. ಆದರೆ ಇವರೊಳಗೆ ಯಾಕೆ ಆ ರೀತಿಯ ಒಂದು ಛಲ ಹುಟ್ಟಿಲ್ಲ; ಹುಟ್ಟುವುದಿಲ್ಲ ಎಂಬ ಗಂಭೀರ ಪ್ರಶ್ನೆ ಎದುರಾಗಿದೆ.



ಬಾಬಾಬುಡನ್‌ಗಿರಿ ಹೋರಾಟ

ಕಳೆದ 10 ವರುಷಗಳ ಅವಧಿಯಲ್ಲಿ ಬಾಬಾಬುಡನ್‌ಗಿರಿ ಮತ್ತು ದತ್ತಪೀಠ ಇವುಗಳ ನಡುವಿನ ಸಮರ ಕರ್ನಾಟಕದ ಗಮನವನ್ನು ಸೆಳೆದಿದೆ. ಒಂದು ಕಡೆ ಕೋಮುವಾದಿ ಶಕ್ತಿಗಳು ಮತ್ತೊಂದು ಕಡೆ ಪ್ರಗತಿಪರ ಶಕ್ತಿಗಳು ತಮ್ಮ ಶಕ್ತಿಯನ್ನು ಪಣಕ್ಕಿಟ್ಟು ಇದರಲ್ಲಿ ಭಾಗವಹಿಸಿದ್ದಾರೆ. ಒಂದು ಕಡೆ ದತ್ತಪೀಠವನ್ನು ರಾಮಜನ್ಮ ಭೂಮಿ ಮಾಡುವ ಹಠ. ಮತ್ತೊಂದು ಕಡೆ ಅದಕ್ಕೆ ಯಾವುದೇ ಅವಕಾಶ ಕೊಡುವುದಿಲ್ಲ ಎಂಬ ಹೋರಾಟ ಎರಡನ್ನೂ ಕರ್ನಾಟಕ ಕಂಡಿದೆ. ಆದರೆ ಒಂದಂತೂ ಖಚಿತ. ಬಾಬಾಬುಡನ್‌ಗಿರಿ ಮತ್ತು ದತ್ತಪೀಠದ ಸಮಸ್ಯೆ ಬಗೆ ಹರಿದರೆ ಕರ್ನಾಟಕದ ಸಮಸ್ಯೆ ಬಗೆಹರಿಯುವುದಿಲ್ಲ. ಜೊತೆಗೆ ಅಲ್ಲಿ ಕೋಮುವಾದಿಗಳ ಆಟ ಕಡಿಮೆ ಆಯಿತೆಂದರೆ ಅವರು ಶಕ್ತಿಗುಂದಿದರು ಎಂದೂ ಅಲ್ಲ. ಬಾಬಾಬುಡನ್‌ಗಿರಿ ವಿಷಯವನ್ನು ಪ್ರಗತಿಪರ ವಲಯದವರು ಕೇವಲ ಪಾರ್ಶ್ವಿಕವಾಗಿ ಮಾತ್ರವೇ ಪರಿಗಣಿಸಿದ್ದಾರೆ. ಅಲ್ಲಿನ ಪ್ಲಾಂಟೇಶನ್ ಎಕಾನಮಿ ಬೆಳವಣಿಗೆಯನ್ನು ಕೋಮುವಾದಿ ಶಕ್ತಿಗಳು ಯಶಸ್ವಿಯಾಗಿ ಮುಚ್ಚಿಟ್ಟವೆ. ಅದೇ ರೀತಿಯಲ್ಲಿ ಪ್ರಗತಿಪರ ಎಂದು ಕರೆಯಲಾಗುವ ಶಕ್ತಿಗಳೂ ಕೂಡ ಅದನ್ನು ಬದಿಗಿಟ್ಟವೆ. ಈ ವಿಷಯದಲ್ಲಿ ಈ ಎರಡೂ ಶಕ್ತಿಗಳಿಗೆ ಅಂತಹ ವ್ಯತ್ಯಾಸವೇನೂ ಇಲ್ಲ. ಯಾಕೆಂದರೆ ಬಾಬಾಬುಡನ್‌ಗಿರಿ ಹೋರಾಟ ನಡೆಯುತ್ತಿರುವಾಗಲೇ ಕಾಫಿತೋಟಗಳಲ್ಲಿ ಮಾಲಿಕರ ದಬ್ಬಾಳಿಕೆಯಿಂದ ಕೈ-ಕಾಲು ಕಳೆದುಕೊಂಡ ಕಾರ್ಮಿಕರೆಷ್ಟು? ಕಾರ್ಮಿಕರ ಮೇಲೆ ನಡೆದ ಹಲ್ಲೆಗಳೆಷ್ಟು? 90ರ ದಶಕದಲ್ಲಿ ಕಾಫಿಗೆ ಓಪನ್ ಮಾರ್ಕೆಟ್ ಮಾಡಿದರು. ಅದರ ಪರಿಣಾಮವಾಗಿ ಸಾಮಾನ್ಯ ಕಾಫಿಮಾಲೀಕರೆಲ್ಲ ರಾತ್ರೋರಾತ್ರಿ ಕನಸಲ್ಲೂ ಕಾಣದ ಹಣಕ್ಕೆ ಒಡೆಯರಾದರು. ಆಗ ಮಲೆನಾಡು ಭಾಗಕ್ಕೆ ಬಂದ ವಾಹನಗಳೆಷ್ಟು? ಆ ಸಮಯದಲ್ಲಿ ನಡೆದ ವಾಹನ ಅಪಘಾತಗಳೆಷ್ಟು? ದುಡಿಯುವ ವರ್ಗಕ್ಕೂ ಮತ್ತು ಮಾಲಿಕ ವರ್ಗಕ್ಕೂ ಏಕದಮ್ ಎಂಬಂತೆ ನಿರ್ಮಾಣವಾದ ಶತ್ರುತ್ವದ ಸಂಬಂಧ ಯಾವುದು? ಅದರಿಂದ ಘಟಿಸಿರುವ ಸಾಮಾಜಿಕ ತುಳಿತ, ಅಪಮಾನಗಳೆಷ್ಟು? ಈ ಯಾವುದನ್ನೂ ಬಾಬಾಬುಡನ್‌ಗಿರಿ ಹೋರಾಟದಲ್ಲಿ ಗಂಭೀರವಾಗಿ ಪರಿಗಣಿಸಲಿಲ್ಲ. ಅದನ್ನೊಂದು ಧಾರ್ಮಿಕ ಮತ್ತು ಮತೀಯ ಚೌಕಟ್ಟಿನಲ್ಲಿ ಮಾತ್ರವೇ; ಹೆಚ್ಚೆಂದರೆ ಅದೊಂದು ಕೋಮುವಾದಿ ಶಕ್ತಿಗಳ ಉಪಟಳ ಮಾತ್ರವೇ ಎಂದು ಸರಳೀಕರಿಸಲಾಯಿತು. ಆ ಹೋರಾಟವನ್ನು ನಿಜವಾಗಿಯೂ ಮಲೆನಾಡು ಭಾಗದಲ್ಲಿ ರಾಜಕೀಯ ಆರ್ಥಿಕ ಹೋರಾಟವನ್ನಾಗಿ ಮಾರ್ಪಡಿಸಬಹುದಾದ ಎಲ್ಲಾ ಅವಕಾಶಗಳೂ ಇದ್ದವು. ಅದನ್ನು ಲೀಡ್

ಮಾಡುತ್ತಿದ್ದವರಿಗೆ ಇದು ಗೊತ್ತಿರಲಿಲ್ಲವೆಂದು ಸರಳೀಕರಿಸಲು ಬರುವುದಿಲ್ಲ. ಆದರೆ ಪ್ರಗತಿಪರ ಎಂದು ಕರೆಯಲಾಗುವ ಶಕ್ತಿಗಳಿಗೆ ಆ ಹೋರಾಟದಿಂದ ಸಿಕ್ಕಿದ ಫಲಕ್ಕಿಂತ ಆದ ನಷ್ಟವೇ ಜಾಸ್ತಿ. ಆ ಹೋರಾಟ ಸ್ಥಳೀಯ ಸಮಸ್ಯೆಗಳನ್ನು ಸಂಪೂರ್ಣ ಬದಿಗಿಟ್ಟಿತು. ಮಾತ್ರವಲ್ಲ; ಸ್ಥಳೀಯರನ್ನೂ ಕೂಡ ಸಂಪೂರ್ಣ ಬದಿಗಿಟ್ಟಿತು. ಆ ಹೋರಾಟದಲ್ಲಿ ಸ್ಥಳೀಯರು ಹೆಚ್ಚು ಪ್ರಮಾಣದಲ್ಲಿ ಇರಲೇ ಇಲ್ಲ.

ದೇವರುಗಳಿಗೇ ಸಂಕಟ ಬಂದರೆ...

ಮಲೆನಾಡ ಭಾಗದಲ್ಲಿ ಇತ್ತೀಚೆಗೆ ಮನುಷ್ಯರಿಗಿಂತ ಹೆಚ್ಚಾಗಿ ದೇವರುಗಳಿಗೇ ಬರಲಾರದ ಮತ್ತು ಬರಬಾರದ ಸಮಸ್ಯೆಗಳು ಬಂದಿವೆಯಂತೆ. ಪ್ರತಿಯೊಂದು ಊರಿನಲ್ಲೂ ಒಂದಿಲ್ಲವೊಂದು ದೇವರು ಇರುತ್ತವೆ. ಚೌಡಿ, ಜಟಿಗ, ಭೂತ, ರಣ, ಮಾರಿ, ಕಾಳಿ ಹೀಗೆ ಏನೇನೊ ಹೆಸರಿನಲ್ಲಿ ಅವನ್ನು ಕರೆಯುತ್ತಾರೆ ಮತ್ತು ಪೂಜಿಸುತ್ತಾರೆ. ಜನರು ತಮಗೆ ಕಷ್ಟ ಸಂಕಟಗಳು ಬಂದಾಗ ತಮ್ಮ ವ್ಯಾಪ್ತಿಯ ದೇವರಲ್ಲಿ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾರೆ. ಅವು ಪರಿಹಾರ ಆದರೆ ಅವಕ್ಕೆ ಕೊಡಬೇಕಾದ ಹರಕೆಗಳನ್ನು ಕೊಟ್ಟು ತೀರಿಸುತ್ತಾರೆ. ಆದರೆ ಇತ್ತೀಚಿನ ಕೆಲವು ವರುಷಗಳಿಂದ ಜನರು ದೇವರಲ್ಲಿ ಹೇಳಿಕೊಂಡಿರುವ ಯಾವ ಸಮಸ್ಯೆಗಳೂ ಸರಿಯಾಗಿ ಬಗೆಹರಿದಿಲ್ಲ ಮತ್ತು ಪರಿಹಾರವಾಗಿಲ್ಲವಂತೆ. ಅದು ಆರೋಗ್ಯ ಸಂಬಂಧಿ ಸಮಸ್ಯೆ ಇರಬಹುದು, ಮಕ್ಕಳ ಮದುವೆಗೆ ಸಂಬಂಧಿಸಿದ ಸಮಸ್ಯೆ ಇರಬಹುದು, ಯುವ ಜನಾಂಗದ ಸ್ವತಂತ್ರ ಉದ್ಯೋಗದ ಸಮಸ್ಯೆ ಇರಬಹುದು, ಕೌಟುಂಬಿಕ ಕಲಹಗಳಿರಬಹುದು, ಆಸ್ತಿ, ಜಮೀನು ಮುಂತಾದುವುಗಳಿಗೆ ಸಂಬಂಧಿಸಿದ ವ್ಯಾಜ್ಯಗಳಿರಬಹುದು. ಇಂತಹದ್ದೇ ಸಮಸ್ಯೆಗಳು ಒಂದು ಕಾಲದಲ್ಲಿ ಬಹಳ ಸುಲಭವಾಗಿ ಮತ್ತು ಬಹಳ ಬೇಗ ಪರಿಹಾರ ಆಗುತ್ತಿದ್ದವಂತೆ. ಆದರೆ ಈಗ ಯಾಕೆ ಈ ಎಲ್ಲಾ ಸಮಸ್ಯೆಗಳನ್ನು ತಾವು ನಂಬಿದ ದೇವರಿಗೆ ಪರಿಹರಿಸಲು ಆಗುತ್ತಿಲ್ಲ ಎಂದು ಜನರು ತಿಣುಕಾಡುತ್ತಿದ್ದಾರೆ. ಇವರು ತಿಣುಕಾಡಿ ಸುಮ್ಮನೆ ಕುಳಿತಿಲ್ಲ. ಇದಕ್ಕೆ ಕಾರಣ ಏನಿರಬಹುದು ಎಂಬ ಶೋಧವನ್ನೂ ನಡೆಸಿದ್ದಾರೆ. ಆಗ ಅನೇಕರಿಗೆ ತಿಳಿದುಬಂದಿರುವ ಹೊಸ ಸಂಗತಿ ಏನೆಂದರೆ ತಮ್ಮನ್ನು ಕಾಯಬೇಕಾದ ದೇವರಿಗೇ ತಡೆಕಟ್ಟಿಸಿದ್ದಾರೆ ಎಂಬುದು. ದೇವರ ಶಕ್ತಿಯನ್ನು ಸಂಪೂರ್ಣ ಕುಂದಿಸಿದ್ದಾರೆ, ದುರ್ಬಲಗೊಳಿಸಿದ್ದಾರೆ ಎಂಬುದು. ಹಾಗಾಗಿ ತಮ್ಮನ್ನು ಕಷ್ಟ, ಸಂಕಟಗಳಲ್ಲಿ ಗ್ಯಾರಂಟಿ ಕಾಯುತ್ತಿದ್ದ ಮತ್ತು ಈಗಲೂ ಕಾಯಲೇಬೇಕಾಗಿದ್ದ ದೇವರಿಗೇ ಸಮಸ್ಯೆ ಎದುರಾಗಿರುವುದರಿಂದ ಈಗ ಜನರ ಮುಂದಿರುವ ತಕ್ಷಣದ ಸವಾಲೆಂದರೆ ತಮ್ಮ ವ್ಯಾಪ್ತಿಯ ದೇವರಿಗೆ ಬಂದಿರುವ/ ಎದುರಾಗಿರುವ ಸಂಕಟ, ಸಮಸ್ಯೆ ಮತ್ತು ವಿಘ್ನವನ್ನು ಮೊದಲು ಪರಿಹಾರ ಮಾಡಿಸುವುದು. ಕಳೆದುಹೋಗಿ ದುರ್ಬಲಗೊಂಡಿರುವ ಅದರ ಶಕ್ತಿಯನ್ನು ವೃದ್ಧಿಸುವಂತೆ ಮಾಡಿಸುವುದು. ಆ ನಂತರ ಅದೇ ದೇವರುಗಳಿಂದ ತಮ್ಮ ಸಂಕಟ, ಸಮಸ್ಯೆ ಮತ್ತು ವಿಘ್ನಗಳನ್ನು ಪರಿಹಾರ ಮಾಡಿಕೊಳ್ಳುವುದು. ಈ ದುಃಸ್ಥಿತಿಯ ಆಂತರಿಕ ಪರಿಸ್ಥಿತಿ ಮಲೆನಾಡಿನ ಯಾವುದೇ ಹಳ್ಳಿಗೆ ಹೋದರೂ ಕೂಡ ಕಾಣುತ್ತದೆ. ಆದರೆ ಅದನ್ನು ಕಾಣುವ ಕಣ್ಣಿರಬೇಕು ಅಷ್ಟೆ.

ಜಾಗತೀಕರಣದ ದುರ್ದಾಳಿ ಮತ್ತು ಏಕಸ್ವಾಮ್ಯ ಮಾರುಕಟ್ಟೆಯ ಹಣಕಾಸು ಬಂಡವಾಳ ಡೆಲ್ಲಿಯಿಂದ ಹಳ್ಳಿಯವರೆಗೆ ಎಂತಹ ಸಮಸ್ಯೆಗಳನ್ನು ನಿರ್ಮಾಣ ಮಾಡಿದೆ ಎಂದರೆ ಅದನ್ನು ಸಮಸ್ಯೆ ಎಂದು ಗುರುತಿಸಲೂ ಕೂಡ ಆಗುತ್ತಿಲ್ಲ. ಒಂದು ವೇಳೆ ಅದನ್ನು ಸಮಸ್ಯೆ ಎಂದು ಗುರುತಿಸಿದರೆ ಅದರ ಪರಿಹಾರ ಬಹಳ ಬೇಗ ಮತ್ತು ಸುಲಭವಾಗಿ ಆಗುತ್ತಿಲ್ಲ. ಆದರೆ ನಮ್ಮ ಮುಂದಿರುವ ಪರಿಸ್ಥಿತಿ ಮಾತ್ರ ಎಲ್ಲವೂ ಬಹಳ ಬೇಗ ಆಗಬೇಕು ಎಂಬಂತೆ ಒತ್ತಾಯಿಸುತ್ತಿದೆ. ಕೌಟುಂಬಿಕ ಜೀವನ, ಸಾಮಾಜಿಕ ಜೀವನದಲ್ಲಿ ಹಿಂದೆ ಕಾಣಲಾರದ ಅಸಾಮಾನ್ಯ ಅಲ್ಲೋಲ ಕಲ್ಲೋಲಗಳನ್ನು ಕಾಣುತ್ತಿದ್ದೇವೆ. ಅವಕ್ಕೆ ಪರಿಹಾರ ಮಾತ್ರ ಸಿಂಗಲ್ ಪಾಯಿಂಟ್‌ನಲ್ಲಿ ಇಲ್ಲ. ಸಮಸ್ಯೆಗಳ ಸ್ವರೂಪ ಸಂಕೀರ್ಣವಾಗಿದೆ. ಅದರ ಪರಿಹಾರವನ್ನು ಸರಳವಾಗಿ ಮತ್ತು ಶೀಘ್ರವಾಗಿ ಬಯಸಲಾಗುತ್ತಿದೆ. ಈ ವೈರುಧ್ಯವೂ ಜಾಗತೀಕರಣದ ಆರ್ಥಿಕ ಮತ್ತು ಸಾಂಸ್ಕೃತಿಕ ದಾಳಿಯಿಂದಲೇ ನಿರ್ಮಾಣವಾಗಿದೆ. ಇದರ ವ್ಯಾಪ್ತಿ ಕೋರ್ಟು, ಕಚೇರಿ, ಬ್ಯಾಂಕು, ಸಾರಿಗೆ, ಸಂಪರ್ಕ ಮುಂತಾದುವನ್ನೆಲ್ಲ ಒಂದೇ ಸಮನೆ ಆವರಿಸಿಕೊಂಡಿದೆ. ಸಮಸ್ಯೆಗಳ ಬೇರು ಮತ್ತು ಅದರ ಸಂಕೀರ್ಣ ಸ್ವರೂಪದ ಗೈರುಹಾಜರಿಯಲ್ಲಿ ತಮ್ಮ ಸಮಸ್ಯೆಗಳ ಪರಿಹಾರಕ್ಕೆ ದೇವರಿಗೆ ಮೊರೆಯಿಡಲಾಗುತ್ತಿದೆ. ಅವು ನಿರೀಕ್ಷಿತ ಪ್ರಮಾಣದಲ್ಲಿ ಮತ್ತು ನಿರೀಕ್ಷಿತ ಅವಧಿಯಲ್ಲಿ ಪರಿಹಾರ ಆಗದಿದ್ದಾಗ ತಮ್ಮ ವ್ಯಾಪ್ತಿಯ ದೇವರಿಗೇ ಸಮಸ್ಯೆ ಬಂದಿದೆ ಎಂದು ನಂಬುವುದರಲ್ಲಿ ತಪ್ಪೇನಿದೆ? ಒಂದಂತೂ ಖಚಿತ. ಜಾಗತೀಕರಣದ ದಾಳಿ ಅದೆಷ್ಟು ಸೂಕ್ಷ್ಮ ಮತ್ತು ಹರಿತ ಎಂದರೆ ಅದು ಮಾಡುತ್ತಿರುವ ದಾಳಿಯ ದುಷ್ಪರಿಣಾಮದ ಜವಾಬ್ದಾರಿಯನ್ನು ಪರೋಕ್ಷ ವಿಧಾನದಲ್ಲಿ ನಮ್ಮ ಜನಪದ ದೈವಗಳ ಮೇಲೆ ಹೊರಿಸಿಬಿಟ್ಟಿದೆ. ಇದಕ್ಕಾದರೂ ಜಾಗತೀಕರಣಕ್ಕೆ ಶಭಾಸ್‌ಗಿರಿ ಕೊಡಲೇಬೇಕು ತಾನೆ?

ಹೊರಗೆ ಶೃಂಗಾರ: ಒಳಗೆ ..?

ಹೊರಗೆ ತಣ್ಣಗೆ, ನುಣ್ಣಗೆ ಕಾಣುವ ಮಲೆನಾಡು ಒಳಗೊಳಗೇ ಕೊತಕೊತ ಕುದಿಯುತ್ತಿದೆ. ಕೌಟುಂಬಿಕ ವಾತಾವರಣದಿಂದ ಮೊದಲುಗೊಂಡು, ಸಾಮಾಜಿಕ ಜೀವನದವರೆಗೆ ಇದರ ವ್ಯಾಪ್ತಿ ವಿಸ್ತರಿಸಿದೆ. ಭಾರೀ ಶ್ರೀಮಂತ ವರ್ಗ ಮತ್ತು ಮಧ್ಯಮ ವರ್ಗದ ಕಾಫಿ ಮಾಲೀಕರ ದರ್ಪ, ದಬ್ಬಾಳಿಕೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೆ ಸಾಗಿವೆ. ಗ್ರಾಮ ಪಂಚಾಯಿತಿ ಮೂಲಕ ಬರುವ ಸರಕಾರಿ ಯೋಜನೆಗಳು ಹಾಗೂ ಸೌಲಭ್ಯಗಳೆಲ್ಲ ಬೇರೆ ಬೇರೆ ಹೆಸರಿನಲ್ಲಿ ಸೀದಾ ದೊಡ್ಡಗೌಡರ ಬಾಗಿಲಿಗೇ ಹೋಗುತ್ತವೆ. ಅಧಿಕಾರಿಗಳು, ಸರಕಾರಿ ನೌಕರರೆಲ್ಲ ಅವರಿಗೇ ಮಾತ್ರ ಸೇವೆ ಮಾಡಲು ಹುಟ್ಟಿದಂತೆ ಅವರ ಕೆಲಸಗಳನ್ನು ಮಾಡಿಕೊಂಡಿದ್ದಾರೆ. ಈ ಎರಡೂ ಸೇರಿದಂತೆ ದುಡಿಯುವ ವರ್ಗದ ಆರ್ಥಿಕ, ಸಾಮಾಜಿಕ ಬದುಕು ಜಟಿಲವಾಗುತ್ತಲೇ ಸಾಗಿದೆ. ದುಡಿಯುವ ವರ್ಗದವರಲ್ಲಿ ಜಮೀನ್ದಾರಿ ವಿರೋಧಿ ಸಾಮಾಜಿಕ ಮನೋಭಾವ ನಿರ್ಮಾಣವಾಗಿದೆ. ಅದರ ಸ್ವರೂಪ ಬಿಡಿಬಿಡಿಯಾಗಿದೆ. ಅದು ಕೌಟುಂಬಿಕ ವಾತಾವರಣದಲ್ಲಿ ಗಿರಕಿಹೊಡೆಯುತ್ತಿದೆ. ತೆಳುವಾದ ಸ್ವಾಭಿಮಾನ ಗಟ್ಟಿಯಾಗುತ್ತಿದೆ. ಇದು ಜಮೀನ್ದಾರಿ ವರ್ಗವನ್ನು ಕೆಣಕುವಂತಿದೆ. ಈ ವಸ್ತುಸ್ಥಿತಿಯನ್ನು ಎದುರಿಸಲು ಜಮೀನ್ದಾರಿ ವರ್ಗ ಥರಾವರಿ ಸಂಚುಗಳನ್ನು ರೂಪಿಸಿಕೊಳ್ಳುತ್ತಿದೆ. ದುಡಿಯುವ ವರ್ಗದ ಕೆಲವು ಯುವಕರನ್ನು ರಾಜಕೀಯ ಪುಡಾರಿಗಳು ಬಳಸಿಕೊಳ್ಳುತ್ತಿದ್ದಾರೆ. ಉಳಿದವರು ಅತಂತ್ರ ಸ್ಥಿತಿಯಲ್ಲಿದ್ದಾರೆ. ಯುವತಿಯರು ಭವಿಷ್ಯದ ಕನಸು ಕಾಣುವ ಸ್ಥಿತಿಯಲ್ಲಿಲ್ಲ. ದಲಿತ ಸಂಘಟನೆ ಬಗ್ಗೆ ಹೇಳುವುದೇನು ಉಳಿದಿಲ್ಲ. ಮಾವೋವಾದಿಗಳ ದಾರಿಯ ಬಗ್ಗೆ ಭಿನ್ನಮತವಿದೆ. ಯಾವ ಪಕ್ಷ ಅಧಿಕಾರಕ್ಕೆ ಬಂದರೂ ತಮ್ಮ ಬದುಕು ಬದಲಾಗುವುದಿಲ್ಲ ಎಂದು ದುಡಿಯುವ ವರ್ಗಕ್ಕೆ ಗೊತ್ತಾಗಿದೆ. ದುಡಿಯುವ ವರ್ಗದ ನೆಲೆಯಲ್ಲಿ ಪ್ರಜಾತಾಂತ್ರಿಕ ಸಂಘಟನೆಯನ್ನು ಕಟ್ಟಲು ಅವಕಾಶವಿದೆ. ದಾರಿಗಳನ್ನು ಕಂಡುಕೊಳ್ಳಬೇಕಾಗಿದೆ.

(ಮುಗಿಯಿತು)

ಭಾರತದ ನಾಗರಿಕತೆಗೆ ಸಾವಿರಾರು ವರ್ಷಗಳ ಇತಿಹಾಸವಿದ್ದರೂ ದಮನಿತರ, ಮಹಿಳೆಯರ ಧ್ವನಿಗೆ ಕೆಲವೇ ನೂರು ವರ್ಷಗಳ ಇತಿಹಾಸವಿದೆ. ಬರೆದಿಟ್ಟ ಪುರಾಣ, ಕಾವ್ಯ, ಇತಿಹಾಸ ಯಾವುದರಲ್ಲೂ ಮಹಿಳೆ ಮಾತೇ ಆಡಲಿಲ್ಲ. ಸೀತೆಯಾಗಲೀ, ಶೂರ್ಪನಖಿಯಾಗಲೀ; ಮಮ್ತಾಜ್ ಮಹಲಳಾಗಲೀ, ರಾಣಿ ಪದ್ಮಿನಿಯಾಗಲೀ ತಮ್ಮ ಅಳಲನ್ನು ನೇರವಾಗಿ ಮನಬಿಚ್ಚಿ ಹೇಳಿಕೊಳ್ಳಲು ಸಾಧ್ಯವಾಗಲಿಲ್ಲ. ಮಾತನಾಡಿದವರೂ ಸಂಚಿ ಹೊನ್ನಮ್ಮನಂತೆ ಹದಿಬದೆಯ ಧರ್ಮದ ಕುರಿತೇ ಮಾತನಾಡಿದರು. ಅಥವಾ ಆಧ್ಯಾತ್ಮ ನೆಚ್ಚಿ ಅಕ್ಕ, ಲಲ್ಲೇಶ್ವರಿ, ಮೀರಾಬಾಯಿಯರಂತೆ ಹಾಡಿದರು.

ತುದಿಬೆರಳ ಅರಿವು ಮಹಿಳಾ ಜಾಗೃತಿ ಮತ್ತು ರಾಜಕೀಯ ಪ್ರಜ್ಞೆ

ಬುರ್ಖಾ ಹಾಕಿಕೊಂಡ ಕಾಲೇಜು ಹುಡುಗಿಯನ್ನು ಆಕೆಯ ಗೆಳತಿ ಪ್ರಶ್ನಿಸುತ್ತಾಳೆ, 'ಇದೆಂಥ ಫೆಮಿನಿಸಂ ನಿಂದು? ಆ ಪರದೆ ತೆಗೆದುಬಿಡು, ಹೊರಜಗತ್ತು ನೋಡು.' ಆಕೆಯ ಉತ್ತರ: 'ಬುರ್ಖಾ ಹಾಕಿಕೊಂಡು ಹೊರಗಾದರೂ ಬರಬಹುದು, ಎರಡು ರಂಧ್ರಗಳ ಮೂಲಕ ಹೊರಜಗತ್ತನ್ನಾದರೂ ನೋಡಬಹುದು. ಅದೇ ಬುರ್ಖಾ ಕಿತ್ತೆಸೆದರೆ ನಾನು ನಾಲ್ಕು ಗೋಡೆಗಳ ನಡುವೆ ಬಂದಿಯಾಗಿ ಕೂರಬೇಕಾಗುತ್ತದೆ. ಬುರ್ಖಾ ಇದ್ದರೂ ಪರವಾಗಿಲ್ಲ, ಹೊರಬಂದು ಸ್ವಚ್ಛಗಾಳಿ ಉಸಿರಾಡಬಯಸುತ್ತೇನೆ.'

ಬೆಂಗಳೂರು ನಗರದಲ್ಲಿ ಗೆಳತಿ ಕಾರು ಡ್ರೈವ್ ಮಾಡುತ್ತಿದ್ದಳು. ಟ್ರಾಫಿಕ್ ಜ್ಯಾಮಿನಲ್ಲಿ ಸಿಕ್ಕಿಹಾಕಿಕೊಂಡೆವು. ವಾಹನಗಳ ನಡುವಿನ ಜಾಗದಲ್ಲಿ ಹೊಕ್ಕು ತೂರಿ ಹೊರಬರುವಾಗ ಪಕ್ಕದ ರಿಕ್ಷಾಗೆ ಕೊಂಚ ತಾಗಿತು. ಬೆಂಗಳೂರಿನಲ್ಲಿ ಇದೆಲ್ಲ ಕಾಮನ್ ಇರಬಹುದು. ಆದರೆ ರಿಕ್ಷಾವಾಲ ಗಟ್ಟಿದನಿಯಲ್ಲಿ, 'ಏಯ್ ಯಮ್ಮೋ, ಸುಮ್ನೆ ಅಡಿಗೆ ಮಾಡದ್ ಬಿಟ್ಟು? ಕಾರು ಬಿಟ್ಕಂಡು ಬಂದ್ಬಿಟ್ಟು. ಹೋಗ್ ಹೋಗು' ಎಂದು , ಹೀಯಾಳಿಸುತ್ತ ನುಸುಳಿ ಮುಂದೆ ಸಾಗಿದ. ಇಂಥವೆಲ್ಲ 'ಬೆಂಗಳೂರಲ್ಲಿ ಕಾಮನ್' ಎಂಬ ಮುಖಭಾವದಿಂದ ಅವಳು ಅವನ ಕಡೆ ಗಮನಕೊಡದೇ ಕಾರು ಚಲಾಯಿಸಿದಳು. ಬೆಂಗಳೂರಿಗಳಲ್ಲದ ನನ್ನ ಮಟ್ಟಿಗೆ ಆ ಹೇಳಿಕೆ ಮಹಿಳಾ ಪ್ರಜ್ಞೆಗೆ ಅವಮಾನ. ನಮ್ಮ ಹಳ್ಳಿಯಲ್ಲಾದರೋ ಮಹಿಳೆ ಸ್ವತಂತ್ರವಾಗಿ ಏನಾದರೂ ಮಾಡಹೊರಟರೆ ಹಿಂಬದಿಯ ಹೀಯಾಳಿಕೆ, ಬಜಾರಿತನದ ಬಿರುದು ಸರ್ವೇಸಾಮಾನ್ಯ. ಆದರೆ ಬೆಂಗಳೂರಿನಂತಹ ಕಾಸ್ಮೋಪಾಲಿಟನ್ ಊರಿನಲ್ಲಿ ಈ ಮಾತು ಕೇಳುವುದೇ?

ಇದು ವಾಸ್ತವ. ಆಧುನಿಕ ಜಗತ್ತಿನಲ್ಲಿ ಹೆಣ್ತನದ ವ್ಯಾಖ್ಯೆಯೂ, ಅವಳ ಕರ್ತವ್ಯ-ಹಕ್ಕುಗಳೂ ಮರುಪರಿಶೀಲನೆಗೆ ಒಳಗಾಗುತ್ತಿರುವ ಹೊತ್ತು ಇದು. ಎಲ್ಲ ಕ್ಷೇತ್ರಗಳಲ್ಲಿ ಮಹಿಳೆ ಕಂಡುಬರುತ್ತಾಳೆ. ಆದರೆ ಅವಳಿಗೆ ಸಿಕ್ಕಿರುವುದು ನಿಜವಾದ ಬಿಡುಗಡೆಯೇ ಎಂದು ಪರಿಶೀಲಿಸಬೇಕಿದೆ. ಎಲ್ಲರಿಗೂ ಸಮಾನ ಹಕ್ಕು, ಸಮಾನ ಅವಕಾಶ ಕಲ್ಪಿಸಿ ಸಮಾನತೆಯ ಮೇಲೆ ನಿಂತಿರುವ ಸಂವಿಧಾನದ ದೆಸೆಯಿಂದ ಮಹಿಳೆ ಪುರುಷನಿಗೆ ಸಮ ಎಂದು ವ್ಯಾಖ್ಯಾನಿಸಲ್ಪಟ್ಟಿದ್ದಾಳೆ. ಆದರೆ ಅವಳ ಪಾರಂಪರಿಕ, ಜೈವಿಕ ಜವಾಬ್ದಾರಿಗಳು ಕಡಿಮೆಯಾಗಿಲ್ಲ. ಕರ್ತವ್ಯಗಳಲ್ಲಿ ಸಡಿಲಿಕೆಯಿಲ್ಲ. ಕಪ್ಪು ಮಹಿಳಾ ಹೋರಾಟಗಾರ್ತಿ ಗ್ಲೋರಿ ಪಿಯಾಂಡೋ, 'ಹೆಣ್ಣುಮಗುವೊಂದು ಹುಟ್ಟಿದ ಕೂಡಲೇ ಮತ್ತೊಂದು ಹೆಣ್ಣನ್ನು ಹೆರುವ ಕಾರ್ಮಿಕಳಾಗಿ ಆಕೆ ಅರಳತೊಡಗುತ್ತಾಳೆ. ಆ ನಂತರ ಅವಳ ಎಲ್ಲ ಬೆಳವಣಿಗೆಯೂ, ನಿರ್ಬಂಧಗಳೂ ಈ ದಿಕ್ಕಿನಲ್ಲೇ ಮುಂದುವರೆಯುತ್ತವೆ' ಎಂದು ಹೇಳಿ ಹೆರುವುದನ್ನೇ ನಿರಾಕರಿಸಿದಳು. ಹೆರುವುದರ ನಿರಾಕರಣೆಯನ್ನು ಹಕ್ಕಾಗಿ ತೆಗೆದುಕೊಳ್ಳಬೇಕೋ ಬೇಡವೋ ಎಂಬ ಸೂಕ್ಷ್ಮದ ನಡುವೆಯೇ ಮಹಿಳೆಯ ಕರ್ತವ್ಯಗಳ ಮರುವ್ಯಾಖ್ಯಾನ ಇಂದು ಅಗತ್ಯವಾಗಿದೆ.

ಭಾರತದ ನಾಗರಿಕತೆಗೆ ಸಾವಿರಾರು ವರ್ಷಗಳ ಇತಿಹಾಸವಿದ್ದರೂ ದಮನಿತರ, ಮಹಿಳೆಯರ ಧ್ವನಿಗೆ ಕೆಲವೇ ನೂರು ವರ್ಷಗಳ ಇತಿಹಾಸವಿದೆ. ಬರೆದಿಟ್ಟ ಪುರಾಣ, ಕಾವ್ಯ, ಇತಿಹಾಸ ಯಾವುದರಲ್ಲೂ ಮಹಿಳೆ ಮಾತೇ ಆಡಲಿಲ್ಲ. ಸೀತೆಯಾಗಲೀ, ಶೂರ್ಪನಖಿಯಾಗಲೀ; ಮಮ್ತಾಜ್ ಮಹಲಳಾಗಲೀ, ರಾಣಿ ಪದ್ಮಿನಿಯಾಗಲೀ ತಮ್ಮ ಅಳಲನ್ನು ನೇರವಾಗಿ ಮನಬಿಚ್ಚಿ ಹೇಳಿಕೊಳ್ಳಲು ಸಾಧ್ಯವಾಗಲಿಲ್ಲ. ಮಾತನಾಡಿದವರೂ ಸಂಚಿ ಹೊನ್ನಮ್ಮನಂತೆ ಹದಿಬದೆಯ ಧರ್ಮದ ಕುರಿತೇ ಮಾತನಾಡಿದರು. ಅಥವಾ ಆಧ್ಯಾತ್ಮ ನೆಚ್ಚಿ ಅಕ್ಕ, ಲಲ್ಲೇಶ್ವರಿ, ಮೀರಾಬಾಯಿಯರಂತೆ ಹಾಡಿದರು.

ವೇದಕಾಲದಿಂದ ಮಹಿಳೆಗೆ ಓದುವ ಅಧಿಕಾರ ಇರಲಿಲ್ಲ. ಗಾರ್ಗಿ, ಮೈತ್ರೇಯಿ, ಉಭಯಭಾರತಿಯಂತಹ ಕೈಬೆರಳೆಣಿಕೆಯಷ್ಟು ಮಹಿಳೆಯರನ್ನು ಹೊರತುಪಡಿಸಿದರೆ ಜಾತಿವರ್ಗ ಭೇದವಿಲ್ಲದೆ ಕೋಟ್ಯಂತರ ಮಹಿಳೆಯರಿಂದ ಅಕ್ಷರಜ್ಞಾನ ದೂರವೇ ಉಳಿದಿತ್ತು. ಹಲವು ನೆಪಗಳನ್ನು ಮುಂದೆಮಾಡಿ ಜ್ಞಾನಾರ್ಜನೆಯ ಹಕ್ಕನ್ನು ಅವಳಿಗೆ ನಿರಾಕರಿಸಲಾಯಿತು. ಅವರ ಪಾರಂಪರಿಕ ಜ್ಞಾನವು ಜ್ಞಾನದ ವ್ಯಾಪ್ತಿಯೊಳಗೇ ಬರದಂತೆ ನೋಡಿಕೊಳ್ಳಲಾಯ್ತು. ಸರಸ್ವತಿಯನ್ನು ಜ್ಞಾನದ ಅಧಿದೇವತೆಯನ್ನಾಗಿಸಿದ ಆರ್ಯರು ಅವಳಿಗೆ ಅಕ್ಷರ ಕಲಿಸಿದ್ದರೇ ಎಂದು ಕಾಂಚಾ ಐಲಯ್ಯ ಪ್ರಶ್ನಿಸುತ್ತಾರೆ. ಸಾವಿರಾರು ವರ್ಷಗಳಿಂದ ಮಹಿಳೆಯರ ವಿವೇಕ-ಜ್ಞಾನಗಳು ನಾಲ್ಕು ಗೋಡೆಗಳ ನಡುವೆ ಕುಟುಂಬ ನಿಭಾಯಿಸಲು ಬಳಕೆಯಾಯಿತೇ ಹೊರತು ವಿಶಾಲ ನೆಲೆಗಟ್ಟಿನಲ್ಲಿ ಸಮಷ್ಟಿಗಾಗಿ ಅವಳು ಚಿಂತಿಸುವುದೇ ಅನವಶ್ಯವೆಂದು ಭಾವಿಸಲಾಯಿತು.

ಸಾವಿರಾರು ವರ್ಷಗಳಿಂದ ಸಾವಿರಾರು ರಾಜ-ಮಹಾರಾಜರು ಆಳಿದ ಈ ದೇಶದಲ್ಲಿ ಎಷ್ಟು ಜನ ರಾಣಿಯರು ಆಳಿದ್ದಾರೆ? ಆಳಿಸಿಕೊಂಡಿದ್ದೇ ಹೆಚ್ಚು. ಆಳಿದ್ದು ಹೃದಯಸಾಮ್ರಾಜ್ಯವನ್ನು ಮಾತ್ರ. 'ಇಚ್ಛೆಯನರಿತು ನಡೆವ ಸತಿ'ಯಾಗಿ, 'ಇಟ್ಹಾಂಗ ಇರಬೇಕೆ'ಂದುಕೊಂಡು ಕೆರೆಗೆ ಹಾರವಾಗಲಿಕ್ಕೂ ತಯಾರಾಗಬೇಕು. ನಗುನಗುತ್ತ ಗಂಡನ ಚಿತೆಗೂ ಹಾರಲು ಸಿದ್ಧವಾಗಿರಬೇಕು. ಅವಳು ಮನೆಯಿಂದ ಹೊರಹೋಗಬೇಕಿಲ್ಲ. ಅವಳ ದೇಹ, ಜೀನುಗಳು ಯಾವುವೂ ಇದಕ್ಕೆ ಪೂರಕವಾಗಿಲ್ಲ ಎಂದೆಲ್ಲ ನಂಬಿಸಲಾಯಿತು.

ಹೀಗಾಗಿ ಮಹಿಳೆಯ ರಾಜಕೀಯ ಚರಿತ್ರೆ ಎಂದರೆ ಮಹಿಳೆಯ ಅಧಿಕಾರ ದಮನಿಸುವ ಚರಿತ್ರೆ, ಆಳುವ ವರ್ಗವಾಗಿ, ನಿರ್ಧಾರ ತೆಗೆದುಕೊಳ್ಳುವ ಜವಾಬ್ದಾರಿಯುತ ಸ್ಥಾನದಲ್ಲಿ ಮಹಿಳೆ ಕಾಣಿಸಿಕೊಂಡಿದ್ದು ಬಹಳ ಅಪರೂಪ. ಸಮಾಜದ ಮುಖ್ಯ ಆದ್ಯತೆ ಮತ್ತು ಆತಂಕ ಅರ್ಧದಷ್ಟು ಸಂಖ್ಯೆಯಲ್ಲಿರುವ ಹೆಣ್ಣುಮಕ್ಕಳನ್ನು ಅಧೀನದಲ್ಲಿಟ್ಟುಕೊಳ್ಳುವುದು ಹೇಗೆ ಎನ್ನುವುದು. ದೇಶ ಕಾಲಗಳ ವ್ಯತ್ಯಾಸವಿಲ್ಲದೆ ಹೆಣ್ಣಿನ ಧಾರ್ಮಿಕ-ಸಾಂಸ್ಕೃತಿಕ-ರಾಜಕೀಯ ಅಧಿಕಾರ ಕಡಿತಗೊಳಿಸಲು ಸಮಾಜ ಸತತವಾಗಿ

ಪ್ರಯತ್ನಪಟ್ಟಿದೆ. ಲಿಂಗ ಅಸಮಾನತೆ ತಂತಾನೇ ರೂಪುಗೊಂಡ ವ್ಯವಸ್ಥೆಯಲ್ಲ, ವಿಕಾಸವಾದದ ಭಾಗವೂ ಅಲ್ಲ. ಅದು ಪುರುಷ ಪ್ರಧಾನ ಸಮಾಜ ಮತ್ತು ರಾಜ್ಯಾಧಿಕಾರ ಸೃಷ್ಟಿಸಿ, ಪೋಷಿಸಿಕೊಂಡು ಬಂದ ವ್ಯವಸ್ಥೆ. ಲಿಂಗಭಿನ್ನತೆಯ ಆಚರಣೆಗಳೂ ಸ್ವಯಂಪ್ರೇರಿತವಲ್ಲ. ರಾಜ್ಯವು ಅದನ್ನು ಬೆಂಬಲಿಸಿ, ಗಟ್ಟಿಗೊಳಿಸಿ ಜಾರಿಮಾಡಿತು.

ವಸಾಹತುಶಾಹಿಗಳ ಆಗಮನದ ನಂತರ ಶಿಕ್ಷಣಕ್ಕೆ ತೆರೆದುಕೊಂಡ ಮಹಿಳೆಯರು 19ನೇ ಶತಮಾನದಿಂದೀಚೆಗೆ ಬರೆಯತೊಡಗಿದರು. ಅದರಲ್ಲಿ ಬಿಚ್ಚು ಮನಸ್ಸಿನಿಂದ ಧೈರ್ಯವಾಗಿ 'ಸ್ತ್ರೀ ಪುರುಷ ತುಲನ' ಬರೆದ ತಾರಾಬಾಯಿ ಶಿಂಧೆಯಾಗಲೀ, 'ರಾಧಿಕಾ ಸಾಂತ್ವನ' ಬರೆದ ತೆಲುಗಿನ ಮುದ್ದುಪಳನಿಯಾಗಲಿ, 'ಅಮರ ಜೀವನ್' ಬರೆದ ವಿಧವೆ ರಾಸ್ಸುಂದರಿ ದೇವಿಯೇ ಆಗಲಿ – ಅಪವಾದವೆಂಬಂತೆ ಮನಬಿಚ್ಚಿ ಮಾತನಾಡಿದರೇ ಹೊರತು ಅದು ಅಂದಿನ ಆದರ್ಶ ಮಾದರಿಯಾಗಿರಲಿಲ್ಲ. ಮನಬಿಚ್ಚಿ ಮಾತನಾಡುವಿಕೆ ಇಂದಿಗೂ ಅಪವಾದವೇ ಹೊರತು ಆದರ್ಶ ಮಾದರಿಯಾಗಿ ಪರಿಗಣಿತವಾಗಿಲ್ಲ. ಮುಚ್ಚಿಟ್ಟುಕೊಳ್ಳಬೇಕಾದದ್ದೇ ಮಹಿಳೆಯ ನಿರೀಕ್ಷಿತ ನಡವಳಿಕೆ.

ಜಾಗತೀಕರಣ ಪ್ರವೇಶಿಸಿದ ಈ ಹೊತ್ತಿನಲ್ಲಿ ಭಾರತದ ಮಹಿಳೆಯರ ಸ್ಥಿತಿಗತಿಯಲ್ಲಿ ಇತ್ಯಾತ್ಮಕ ಬದಲಾವಣೆಗಳಾದವೇ? ಇದಕ್ಕೆ ಉತ್ತರ ಉತ್ಸಾಹದಾಯಕವಾಗಿಲ್ಲ. ಏಕೆಂದರೆ ಜಾಗತೀಕರಣ ಯಜಮಾನ ಸಂಸ್ಕೃತಿಯನ್ನು ಪೋಷಿಸುತ್ತಿದೆ. ಗಂಡಸಿಗೆ ಎಲ್ಲಾ ಬಾಗಿಲನ್ನೂ ಖುಲ್ಲಾ ಆಗಿಟ್ಟರೆ ಹೆಣ್ಣನ್ನು ಮತ್ತದೇ ಹಳೆಯ ಚೌಕಟ್ಟಿನೊಳಗೆ ಕೂರಿಸುವ ಪ್ರಯತ್ನಗಳು ನಡೆಯುತ್ತಿವೆ. ಒಂದು ಕಡೆ ಹೆಣ್ಣನ್ನು ಟಿವಿ ಸೀರಿಯಲ್ ಹಾಗೂ ದರ್ಶನ್ ಎಪಿಸೋಡುಗಳಲ್ಲಿ ಗಂಡನಿಗೆ ವಿಧೇಯಳಾಗಿ, ಅವನ ಉತ್ತಮಿಕೆಗೆ ತಕ್ಕಂತೆ ಬದುಕಬೇಕಾದವಳು ಎಂಬಂತೆ ಬಿಂಬಿಸಲು ನೋಡಿದರೆ; ಇನ್ನೊಂದೆಡೆ ಅವಳ ತುಟಿ, ಕಟಿ, ಕೂದಲು, ಕಣ್ಣು, ಎದೆ ಎಲ್ಲವನ್ನೂ ಬಳಸಿಕೊಂಡು ಸರಕುಗಳ ಮಾರಾಟಕ್ಕಿಳಿಯಲಾಗಿದೆ. ಹೆಣ್ಣು ಸರಕು ಸಂಸ್ಕೃತಿಯ ಏಜೆಂಟಳಂತೆ, ಪಾರಂಪರಿಕ ಮೌಲ್ಯಗಳ ರಕ್ಷಕಿಯಂತೆ ಬಿಂಬಿಸಲ್ಪಟ್ಟು ತನ್ನ ನಿಜ ಪಾತ್ರ ಯಾವುದು ಎಂದು ತಿಳಿಯದೇ ಗೊಂದಲಗೊಂಡಿದ್ದಾಳೆ. ಬರಬರುತ್ತ ಹೆಣ್ಣಿನ ಜಗತ್ತನ್ನು ಮೊದಲಿನಂತೇ ಸೀಮಿತಗೊಳಿಸಿ ಗಂಡನ ಆಸ್ತಿಯಾಗಿರುವುದೇ ಅವಳ ಕರ್ತವ್ಯವೆಂಬಂತೆ, ಅವನಿಗೆ ಮಕ್ಕಳನ್ನು ಹೆತ್ತು ರಸಾಸ್ವಾದನೆಯ ಸರಕಾಗುವುದೇ ಬದುಕಿನ ಉದ್ದೇಶ ಎಂಬಂತೆ ಚಿತ್ರಿಸಲಾಗುತ್ತಿದೆ. ದಿನನಿತ್ಯ ಪ್ರಸಾರವಾಗುವ ನೂರಾರು ಟಿವಿ ಸೀರಿಯಲ್ಲುಗಳಲ್ಲಿ ಹೆಣ್ಣಿನ ವಿವಿಧ ಪಾತ್ರಗಳನ್ನು ಗಮನಿಸಿದರೆ ಇದು ವೇದ್ಯವಾಗುತ್ತದೆ. ಉದಾತ್ತ ಧ್ಯೇಯಕ್ಕೆ ಎದೆಗೊಟ್ಟು ನಿಲ್ಲುವ ನಾಯಕಿ ನಮ್ಮ ಸೀರಿಯಲ್ಲುಗಳಲ್ಲಿ ಕಾಣುವುದಿಲ್ಲ.

ರಾಜಕೀಯ ಮತ್ತು ಮಹಿಳೆ:

ಸ್ವಾತಂತ್ರ್ಯ ಬಂದು 65 ವರ್ಷಗಳ ತರುವಾಯ ಮಹಿಳೆಯರಿಗೆ ಶಾಸನಸಭೆಗಳಲ್ಲಿ 33% ಮೀಸಲಾತಿ ಕೊಡುವುದರ ಸಾಧಕ-ಬಾಧಕಗಳ ವಿಷಯ ಬಿಸಿ ಚರ್ಚೆಗೆ ಗ್ರಾಸವಾಗಿದೆ. ಮಹಿಳಾ ಮೀಸಲಾತಿ ಬೇರೆಬೇರೆ ನೆಪಗಳ ಅಡೆತಡೆಗಳನ್ನೆದುರಿಸುತ್ತಿದೆ. ಇದೇನೂ ಹೊಸದಲ್ಲ. ಪಂಚಾಯತ್‌ರಾಜ್ ಮತ್ತಿತರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಪ್ರಾತಿನಿಧ್ಯದ ಅವಶ್ಯಕತೆ ಎತ್ತಿ ಹಿಡಿದು ಬಲವಂತರಾಯ್ ಮೆಹ್ತಾ ಸಮಿತಿ 1957ರಲ್ಲಿ ನೀಡಿದ ವರದಿಯಿಂದ ಹಿಡಿದು, 1992ರ ಸಂವಿಧಾನದ 73ನೇ ತಿದ್ದುಪಡಿಯ ಪಂಚಾಯತ್‌ರಾಜ್‌ನಲ್ಲಿ ಮಹಿಳೆಯರಿಗೆ 33% ಮೀಸಲಾತಿ ಕಲ್ಪಿಸಿಕೊಡುವವರೆಗೆ ಮಹಿಳಾ ಮೀಸಲಾತಿ ಹಲವು ಮಜಲುಗಳನ್ನು ದಾಟಿ ಬಂದಿದೆ. ಮಹಿಳೆಯ ಬದುಕನ್ನು ಸಹನೀಯಗೊಳಿಸುವ ಕ್ರಮಗಳು ಸಂಘರ್ಷವಿಲ್ಲದೆ ಸಮಾಜದ ಒಪ್ಪಿಗೆ ಪಡೆಯುತ್ತವೆ. ಎಲ್ಲಿ ಆಕೆಯನ್ನು ಬರೀ ಜೈವಿಕ ಮಹಿಳೆಯನ್ನಾಗಿ ನೋಡಲಾಗಿದೆಯೋ, ಎಲ್ಲಿ ಆಕೆ ಫಲಾನುಭವಿ ಮಾತ್ರವೋ ಅಂಥ ಕ್ರಮಗಳು ಸ್ವಾಗತಿಸಲ್ಪಡುತ್ತವೆ. ಆದರೆ ಅವಳನ್ನು ನಾಗರಿಕ ವ್ಯಕ್ತಿಯಾಗಿ ಪರಿಗಣಿಸಿ ಅಧಿಕಾರ ಮರುಹಂಚಿಕೆಯಾಗಬೇಕಾದಾಗ ವಿವಾದ ಶುರುವಾಗುತ್ತದೆ. ಮೊದಲು ಅಂಬೇಡ್ಕರ್ ಉದ್ದೇಶಿಸಿದ್ದ ಹಿಂದೂ ಕೋಡ್ ಬಿಲ್ ಆಸ್ತಿಹಕ್ಕು ಕೊಡುವಂತೆ ಹೇಳಿದಾಗ ಸಾಂಪ್ರದಾಯಿಕ ಹಿಂದೂ ಸಮಾಜದಲ್ಲಿ ವಿವಾದ ಭುಗಿಲೆದ್ದಿತ್ತು. ಈಗಲೂ ಅಧಿಕಾರ-ಆಸ್ತಿ ಹಂಚಿಕೆಯ ವಿಷಯ ಬಂದರೆ ಆ ಮಸೂದೆ ಸ್ಥಗಿತಗೊಳ್ಳುತ್ತದೆ. ಮಹಿಳಾ ಮೀಸಲಾತಿ ಮಸೂದೆಗೆ ಕಳೆದ 15 ವರ್ಷಗಳಿಂದ ಇದೇ ಆಗುತ್ತಿರುವುದು. ಜೊತೆಗೆ ಆಡಳಿತ ವ್ಯವಸ್ಥೆ ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗಲು ಬಯಸುತ್ತದೆಯೇ ಹೊರತು ಬದಲಾಯಿಸಲು ಅಲ್ಲ. ಸಂಘರ್ಷವಿಲ್ಲದೆ ಜನರನ್ನು ನಿಯಂತ್ರಿಸುವುದೇ ಅದರ ಮುಖ್ಯ ಗುರಿಯಾಗಿ ಎಂದಿಗೂ ಸುಧಾರಣಾ ನೆಲೆಯಲ್ಲಿಯೇ ಯೋಚಿಸುತ್ತದೆ. ಈಗ ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಹಿಳೆಯರ ಪ್ರಾತಿನಿಧ್ಯಕ್ಕೆ ಧಕ್ಕೆ ಬರುವುದೆಂದು ಮಹಿಳಾ ಮೀಸಲಾತಿ ಮಸೂದೆ ನೆನೆಗುದಿಗೆ ಬಿದ್ದಿರುವಾಗ ಈ ಒಳಸುಳಿಗಳನ್ನು ಅರ್ಥಮಾಡಿಕೊಳ್ಳಬೇಕಿದೆ.

ರಾಜಕೀಯದಲ್ಲಿ ಮಹಿಳೆ ಎಂದ ಕೂಡಲೇ ಎರಡು ತೆರನಾದ ಐಕನ್‌ಗಳು ಕಣ್ಣೆದುರು ಬರುತ್ತಾರೆ: ದಶಕಗಟ್ಟಲೆ ಯಾವ ಪುರುಷನಿಗೂ ಕಡಿಮೆಯಿಲ್ಲದೆ ದೇಶ ಆಳಿದ ಇಂದಿರಾ ಗಾಂಧಿ ಹಾಗೂ ಹೆಸರಿಗೆ ಮುಖ್ಯಮಂತ್ರಿಯಾಗಿದ್ದ ರಾಬ್ಡಿದೇವಿ. ಈ ಇಬ್ಬರನ್ನೂ ಮಹಿಳಾ ಸಬಲೀಕರಣದ ಲಾಂಛನಗಳೆಂದು ಪರಿಗಣಿಸುವುದರಲ್ಲಿಯೇ ಸಮಸ್ಯೆಯಿದೆ. ಇಬ್ಬರಿಗೂ ಅಧಿಕಾರ ಅನಾಯಾಸವಾಗಿ ದಕ್ಕಿತು. ಒಬ್ಬರು ವಂಶಪಾರಂಪರ್ಯ ರಾಜಕಾರಣದ ಫಲಾನುಭವಿಯಾಗಿ ಪ್ರಧಾನಿಪಟ್ಟ ಅಲಂಕರಿಸಿದರೆ, ಮತ್ತೊಬ್ಬರು ಗಂಡನ ಪ್ರತಿನಿಧಿಯಾಗಿ ಮುಖ್ಯಮಂತ್ರಿ ಗಾದಿ ಮೇಲೆ ಕುಳಿತವರು. ವೈಯಕ್ತಿಕ ಸಾಧನೆ ಅಥವಾ ವ್ಯಕ್ತಿತ್ವದಿಂದಲ್ಲದೆ ಕೇವಲ ಅಧಿಕಾರ ಉಳಿಸಿಕೊಳ್ಳುವ ಹುನ್ನಾರದ ಕೈಗೊಂಬೆಗಳಾಗಿ ರಾಜಕಾರಣಕ್ಕೆ ಬಂದವರು ರಾಬ್ಡಿದೇವಿಯಂತಿರುತ್ತಾರೆ. ಮಹಿಳಾ ಮೀಸಲಾತಿಗಾಗಿ ಸೃಷ್ಟಿಯಾದ ನಾಯಕಿಯರು, ಚುನಾವಣೆಗಳಲ್ಲಿ ಗೆಲ್ಲುವ ಕ್ರೈಟೀರಿಯಾ ಹೊಂದಿದ ನಾಯಕಿಯರಿಂದ ಮಹಿಳೆಗೆ ಸಾಂಕೇತಿಕ ಪಾತಿನಿಧ್ಯ ಸಿಕ್ಕಬಹುದು.



ಮಹಿಳೆಯ ಆದ್ಯತೆಗಳು ಗ್ರಾಮದ [illegible] ಅಭಿವೃದ್ಧಿಗೆ ಒತ್ತುನೀಡಿ ಅವು [illegible]

ಸಾಧ್ಯತೆ ಹೆಚ್ಚಿರುವುದನ್ನು ಅಂಕಿ-ಅಂಶಗಳ ಸಮೇತ ತೋರಿಸಿದರೂ ಪುರುಷ ಮೇಲುಗೈಯ ರಾಜಕೀಯ ವ್ಯವಸ್ಥೆ ಹೆಣ್ಣಿನ ಅಧಿಕಾರ ನಿಭಾಯಿಸುವ ಶಕ್ತಿಯನ್ನು ಅನುಮಾನಿಸುತ್ತಲೇ ಬಂದಿದೆ. ಸಣ್ಣಮಟ್ಟ ಪಂಚಾಯ್ತಿ ಮೆಂಬರುಗಳಿಂದ ಹಿಡಿದು ರಾಬ್ಡಿದೇವಿಯ ತನಕ ಹೆಣ್ಣು ಅಧಿಕಾರ ನಿಭಾಯಿಸಬಲ್ಲಳು ಎಂದು ಯಾರೂ ನಂಬುವುದಿಲ್ಲ. ಯಾವ ಹಿನ್ನೆಲೆಯೂ ಇಲ್ಲದ ನಿರಕ್ಷರಿ ಗಂಡು ಅಧಿಕಾರ ನಿಭಾಯಿಸಬಲ್ಲ ಎಂದು ನಂಬುವ ಸಮಾಜ, ಅಷ್ಟೇ ಅನನುಭವಿ ಮಹಿಳೆ ಅಧಿಕಾರ ನಿಭಾಯಿಸಬಲ್ಲಳು ಎಂದು ನಂಬುವುದಿಲ್ಲ. ಸ್ಥಾನದ ಜವಾಬ್ದಾರಿ ನಿಭಾಯಿಸಲೂ ಬಿಡುವುದಿಲ್ಲ. ಮಹಿಳೆಗೆ ಅಮುಖ್ಯವಾದ ಪೋರ್ಟ್‌ಫೋಲಿಯೋಗಳೇ ಸಿಗುತ್ತವೆ. ಅವಳ ಸಾಮರ್ಥ್ಯವನ್ನು, ನೈಪುಣ್ಯವನ್ನು ಸೂಕ್ತವಾಗಿ ಬಳಸಿಕೊಂಡಿಲ್ಲ. ಮೊದಲ ಬಾರಿ ಅಧಿಕಾರ ಸಿಕ್ಕಿದಾಗ ಅದನ್ನು ಬಳಸಿಕೊಳ್ಳುವಲ್ಲಿ ಗೊಂದಲಗೊಳ್ಳಬಹುದು. ಮೊದಲ ಅವಧಿಯಲ್ಲಿ ತನಗೆ ಅರಿವಾಗದ ವಿಷಯಗಳ ಬಗೆಗೆ ಪುರುಷ ಬಂಧುಗಳ ಸಹಾಯ ಪಡೆಯಬಹುದು. ಆದರೆ ನಿಶ್ಚಿತ ಅಧಿಕಾರ ಸಿಕ್ಕರೆ ಏನು ಮಾಡಬೇಕೆಂಬ ಬಗ್ಗೆ ನಿಧಾನವಾಗಿ ಸಿದ್ಧರಾಗಿಯೇ ಆಗುತ್ತಾರೆ. ಅನಕ್ಷರಸ್ಥೆಯಾದರೂ ಗ್ರಾಮಕ್ಕೆ ಬೇಕಾದ ಸೌಲಭ್ಯಗಳನ್ನು ಪಟ್ಟುಹಿಡಿದು ಕಲ್ಪಿಸಿಕೊಂಡವರಿದ್ದಾರೆ. ವಾದ ಮಾಡಿ ಹೊರನಡೆದವರಿದ್ದಾರೆ. ಕುರ್ಚಿ ಮೇಲೆ ಕುಳಿತು ಗೊತ್ತೇ ಇಲ್ಲದಿದ್ದರೂ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿ, ಗೆದ್ದು, ನಾಲ್ಕಾರು ಊರು ತಿರುಗಾಡಿ, ಪುಳಕಿತರಾದವರು; ರಾತ್ರಿಶಾಲೆಗೆ ಹೋಗಿ ಸಹಿಮಾಡಲು ಕಲಿತಿರುವವರು; ಅಡುಗೆ-ಮನೆಯ ಪರಿಧಿಯಾಚೆಯೂ ತನ್ನ ಪ್ರಾಮುಖ್ಯತೆಯಿದೆ ಎಂದು ಮೊದಲ ಬಾರಿ ಅನುಭವಕ್ಕೆ ಬಂದವರು; ಮುಟ್ಟಿಸಿಕೊಳ್ಳಲಾರದ ಅನರ್ಹತೆಯೇ ಈಗ ಅಧ್ಯಕ್ಷಗಿರಿಗೆ ಅರ್ಹತೆಯಾಗಿ ಒದಗಿಬಂದಿದ್ದಕ್ಕೆ ಅಚ್ಚರಿಪಟ್ಟವರು - ಇಂಥ ನೂರಾರು ವಿಭಿನ್ನ ವಿನೂತನ ಅನುಭವಗಳು ಮಹಿಳೆಯ ಪಾಲಿಗೆ ದೊರಕಿವೆ. ಸಬಲೀಕರಣದ ದಾರಿಯ ಮೊದಲ ಹೆಜ್ಜೆಯಲ್ಲಿ ಇವೆಲ್ಲ ಪ್ರಮುಖ ವಿಚಾರಗಳೇ. ಇಂಥ ಹೊಸ ಅನುಭವ ಕಥನಗಳು ಮಹಿಳಾ ಭಾವಕೋಶದಲ್ಲಿ ಸೇರಿಹೋಗುತ್ತಿರುವುದು ಖಂಡಿತವಾಗಿಯೂ ಹೊಸ ಬೆಳವಣಿಗೆಯೇ.

ಮಹಿಳೆಯರು ಉಳಿದ ಕ್ಷೇತ್ರಗಳಲ್ಲಿರುವಷ್ಟು ರಾಜಕೀಯ ಕ್ಷೇತ್ರದಲ್ಲಿ ಕಾಣಲಾರರು. ನಮ್ಮ ಮನೆಯಲ್ಲಿ ಹೆಣ್ಣುಹುಟ್ಟುವುದೇ ಬೇಡವಾದರೆ, ಹುಟ್ಟಿದರೂ ಆದಷ್ಟು ಬೇಗ ಒಳ್ಳೆಯ ಗಂಡು ನೋಡಿ ಮದುವೆ ಮಾಡಿ ಕಳಿಸಿಬಿಡುವುದೇ ಮುಖ್ಯವಾದರೆ, ತನ್ನ ಜೈವಿಕ ಪಾತ್ರ ನಿರ್ವಹಣೆಯೇ ಶ್ರೇಷ್ಠ ಎಂದು ಬೇಲಿಯೊಳಗೇ ಅವಳನ್ನು ಸುರಕ್ಷಿತವಾಗಿಡಲು ಬಯಸುವುದಾದರೆ ರಾಜಕೀಯದಲ್ಲಿ ಎಷ್ಟು ಜನ ಮಹಿಳೆಯರನ್ನು ನೋಡಬಹುದು? ಇಂದು ರಾಜಕೀಯವೆಂಬ ರಣರಂಗದಲ್ಲಿ ಹೆಣ್ಣಿಗೆ ಅಸ್ತಿತ್ವ ಕಾಯ್ದುಕೊಳ್ಳುವುದು ಸುಲಭವಲ್ಲ. ಸಾರ್ವಜನಿಕ ಜೀವನದಲ್ಲಿ ನಾಲ್ಕು ದಶಕ ಕಳೆದ ಮಹಿಳಾ ರಾಜಕಾರಣಿಯೊಬ್ಬರು ಮಹಿಳೆಯೊಬ್ಬಳನ್ನು ತಗ್ಗಿಸಲು ರಾಜಕೀಯದಲ್ಲೂ ಹೇಗೆ ಶೀಲ ಶಂಕಿಸಿ ಮಾತನಾಡುವುದನ್ನು ಕೊನೆಯ ಅಸ್ತ್ರವಾಗಿ ಬಳಸುತ್ತಾರೆ ಎಂದು ಹೇಳುತ್ತಿದ್ದರು. ಸ್ಥಳೀಯ ಮಹಿಳಾ ಪ್ರತಿನಿಧಿಯೊಬ್ಬರೂ ಕೂಡಾ ತಮ್ಮ ಕೌಟುಂಬಿಕ ವಿರಸಕ್ಕೆ ವಿರೋಧಿಗಳು ಹಬ್ಬಿಸಿದ ಸುಳ್ಳು ವದಂತಿಗಳೇ ಕಾರಣವಾಗಿ ವೈವಾಹಿಕ ಜೀವನ ಕೊನೆಗೊಂಡ ಬಗೆಗೆ ನೋವಿನಿಂದ ಹೇಳಿಕೊಳ್ಳುತ್ತಿದ್ದರು. ಇವೆಲ್ಲ ಅಪವಾದಗಳೇ ಇರಬಹುದು, ಆದರೂ ರಾಜಕೀಯವು ಮಹಿಳೆ ನಿರ್ಭಯವಾಗಿ ಸಂಚರಿಸಬಲ್ಲಂಥ ಸುರಕ್ಷಾ ಕ್ಷೇತ್ರವಲ್ಲ ಎನ್ನುವುದಂತೂ ನಿಜ.

ಮಹಿಳಾ ರಾಜಕೀಯ ಪ್ರಾತಿನಿಧ್ಯದ ಕುರಿತು ಮಾತನಾಡುವ ಮುನ್ನ ಕೆಲ ಅಂಕಿ-ಅಂಶಗಳತ್ತ ಗಮನಹರಿಸಬೇಕು. 33% ಪ್ರಾತಿನಿಧ್ಯ ಎಂದರೆ ಲೋಕಸಭೆಯ 544 ಸ್ಥಾನಗಳಲ್ಲಿ 181 ಮಹಿಳೆಯರಿರಬೇಕು, ಹಾಗೂ 28 ರಾಜ್ಯಗಳ 4109 ವಿಧಾನಸಭಾ ಪ್ರತಿನಿಧಿಗಳಲ್ಲಿ 1370 ಜನ ಮಹಿಳೆಯರಿರಬೇಕು. 2009ರ ಲೋಕಸಭಾ ಚುನಾವಣೆಯಲ್ಲಿ 544 ಸ್ಥಾನಕ್ಕೆ ಪಕ್ಷಗಳು ಮಹಿಳಾ ಸ್ಪರ್ಧಿಗಳನ್ನು ಕೆಳಕಂಡ ಸಂಖ್ಯೆಯಲ್ಲಿ ನಿಲ್ಲಿಸಿದ್ದವು:

ಕಾಂಗ್ರೆಸ್ - 43
ಬಿಜೆಪಿ - 44
ಬಿಎಸ್‌ಪಿ - 28
ಎಸ್‌ಪಿ - 15
ಜೆಡಿಯು ಮತ್ತು ಆರ್‌ಜೆಡಿ ತಲಾ 3 ಮತ್ತು 4.

ಈ ಅಂಕಿ-ಅಂಶ ತಿಳಿಸುವಂತೆ ಚುನಾವಣೆಯಲ್ಲಿ ಸ್ಪರ್ಧಿಸಿರುವವರೇ 10%ಗಿಂತ ಕಡಿಮೆ ಮಹಿಳಾ ಅಭ್ಯರ್ಥಿಗಳು. ಇನ್ನು 33% ಗೆದ್ದು ಬರುವ ಮಾತೆಲ್ಲಿಯದು? ಸ್ಪರ್ಧಿಸಿದವರಲ್ಲಿ ಗೆದ್ದವರು 59 ಜನ. ಅವರಲ್ಲಿ ಕಾಂಗ್ರೆಸ್‌ನಿಂದ 23, ಬಿಜೆಪಿಯಿಂದ 15, ಟಿಎಂಸಿ, ಎಸ್‌ಪಿ, ಬಿಎಸ್‌ಪಿಗಳಿಂದ ತಲಾ 4 ಮಹಿಳಾ ಪ್ರತಿನಿಧಿಗಳಿದ್ದರು. 59 ಕೋಟಿ ಮಹಿಳಾ ಸಮುದಾಯಕ್ಕೆ ಸಂಸತ್ತಿನಲ್ಲಿ 59 ಮಹಿಳಾ ಪ್ರತಿನಿಧಿಗಳು! ಕೋಟಿಗೊಬ್ಬ ಮಹಿಳೆ!! ರಾಷ್ಟ್ರೀಯ ಪಕ್ಷಗಳಲ್ಲೂ 33% ಸ್ಥಾನಗಳಿಗೆ ಸ್ಪರ್ಧಿಸುವಷ್ಟು ಅಭ್ಯರ್ಥಿಗಳೇ ಇಲ್ಲವೆಂದರೆ ಅದಕ್ಕೆ ಆ ಪಕ್ಷಗಳೇ ನೇರ ಹೊಣೆಯಾಗಿವೆ. ಪಕ್ಷದ ಆಂತರಿಕ ಸಂಘಟನೆಯಲ್ಲಿ ಮಹಿಳೆಗೆ ಸ್ಥಾನ ಕೊಡಲು ಯಾವ ಕಾನೂನು ಅಡ್ಡಬಂದಿದೆ? ಕೋಮುವಾದಿ ಪಕ್ಷವು ತೋರಿಕೆಗಾದರೂ ಹೆಚ್ಚೆಚ್ಚು ಮಹಿಳೆ, ಶೋಷಿತ, ಅಲ್ಪಸಂಖ್ಯಾತರಿಗೆ ಜಾಗ ಕೊಟ್ಟು ಬೀಗುತ್ತಿದ್ದರೆ; ಜಾತ್ಯತೀತ, ತಾರತಮ್ಯರಹಿತ ಸಮಾಜದ ಕುರಿತು ಸೈದ್ಧಾಂತಿಕ ಮಾತನಾಡುವ ಪಕ್ಷಗಳು ಈ ನಿಟ್ಟಿನಲ್ಲಿ ಹಿಂದೆಬಿದ್ದಿವೆ.

ಇವತ್ತಿನ ಎಂಪಿಗಳಲ್ಲಿ 68% ಮಹಿಳಾ ಎಂಪಿಗಳು ಹಾಗೂ 57% ಪುರುಷ ಎಂಪಿಗಳು ಕೋಟ್ಯಧಿಪತಿಗಳು. ಗೆದ್ದುಹೋದ ಈ ಮಿಲಿಯನೇರ್ ಮಹಿಳೆಯರು ದುಡ್ಡು, ಜಾತಿ, ಅಥವಾ ವಂಶಾವಳಿ - ಈ ಮೂರರಲ್ಲಿ ಒಂದನ್ನು ಹೊಂದಿದ್ದು ಅವರು ಸಾಮಾನ್ಯ ಮಹಿಳೆಯನ್ನು ಪ್ರತಿನಿಧಿಸುತ್ತಾರೆಂದು ಹೇಳಲಾಗದು. ಇವತ್ತು ಮೇಧಾ ಪಾಟ್ಕರ್ ಚುನಾವಣೆ ಗೆಲ್ಲುವುದು ಕಷ್ಟ. ಆದರೆ ಸುಪ್ರಿಯಾ ಸುಳೆ, ಅಗಾಥಾ ಸಂಗ್ಮಾ, ಜ್ಯೋತಿ ಮಿರ್ಧಾ, ಡಿ. ಪುರಂದರೇಶ್ವರಿ, ಕನ್ನಿಮೊಳಿ, ಮೀರಾ ಕುಮಾರ್ ಗೆದ್ದುಬರುವುದು ಸುಲಭ. ವಂಶಪಾರಂಪರ್ಯ ರಾಜಕಾರಣ ಪ್ರಜಾಪ್ರಭುತ್ವದ ಸೌಂದರ್ಯವನ್ನೇ ವಿರೂಪಗೊಳಿಸುತ್ತಿರುವಾಗ ಮಹಿಳಾ ಮೀಸಲಾತಿಯೂ ಅದೇ ಹಾದಿ ತುಳಿಯದಂತೆ ಎಚ್ಚರ ವಹಿಸಬೇಕಿದೆ.

ದೇವನೂರು ಮೀಸಲಾತಿಗಾಗಿ ಬಳಸಿದ ರೂಪಕ ಒಂದಿದೆ, 'ಕುರುಡನ ತಟ್ಟೆಯ ಕಾಸು' ಎಂದು. ಕಾಸು ಕೊಡಲೆಂದು ಬಂದವರೇ ಇದ್ದ ಕಾಸನ್ನೂ ಬಾಚಿ ಬಳಿದುಕೊಂಡು ಹೋಗುವ ದುರಂತವನ್ನು ಅದು ಚಿತ್ರಿಸುತ್ತದೆ. ಮಹಿಳಾ ಮೀಸಲಾತಿ ಅಕ್ಷರಶಃ ಕುರುಡನ ತಟ್ಟೆಯ ಕಾಸೇ ಆಗುವ ಸಾಧ್ಯತೆಯಿದೆ. ಈಗ ಪಂಚಾಯ್ತಿ ಮಟ್ಟದಲ್ಲೂ ಮಹಿಳಾ ರಾಜಕಾರಣಿಗಳು ಹುಟ್ಟಿಕೊಂಡಿದ್ದು ಅವರು ರಬ್ಬರ್‌ಸ್ಟಾಂಪ್‌ಗಳಾಗಿದ್ದಾರೆ ಎಂಬ ಆರೋಪವಿದೆ. ಅಧೀನಳಾಗಿದ್ದು ಹೇಳಿದಲ್ಲಿ ರುಜುಮಾಡುವ ತನಕ ಅವರು ಯಾವ ಅಡೆತಡೆಯಿಲ್ಲದೆ ಮುಂದುವರೆಯುತ್ತಾರೆ. ಸ್ವತಂತ್ರವಾಗಿ ಯೋಚಿಸತೊಡಗಿದರೆ ಹಲವು ನೆಪಗಳನ್ನೊಡ್ಡಿ ಅವಳ ಅಧಿಕಾರ-ಸ್ಥಾನಕ್ಕೆ ಸಂಚಕಾರ ಬರುತ್ತದೆ. ಗ್ರಾಮ ಪಂಚಾಯತ್ ಮಟ್ಟದಿಂದ ಮೊದಲುಗೊಂಡು ಬಹಳಷ್ಟು ಮಹಿಳಾ ಪ್ರತಿನಿಧಿಗಳ ಪರವಾಗಿ ಅವರ ಪುರುಷ ಸಂಬಂಧಿಗಳು ಡಿ ಫ್ಯಾಕ್ಟೋ ಅಧಿಕಾರ ನಡೆಸುತ್ತಾರೆನ್ನುವುದು ಗುಟ್ಟೇನಲ್ಲ. ಆಕೆಗೆ ಅಧಿಕಾರದ ಪಾಲು ದೊರೆತರೆ ಅದು ತನಗೆ ದೊರೆತಂತೆ ಎಂಬ ಧೋರಣೆಯಿಂದಲೇ ಚುನಾವಣೆ, ಪಕ್ಷದ ಪ್ರಚಾರ ಎಂದು ತಿರುಗಲು ಅನುವು ಮಾಡಿಕೊಡಲಾಗಿದೆ.

ಅಧಿಕಾರ ಎಂದಿಗೂ ಕೊರತೆಯ ಸಂಪನ್ಮೂಲ. ಅದನ್ನು ಪಡೆಯಲು ರಾಜಕೀಯ ಗುಂಪುಗಳು ಯಾವ ದಾರಿಯನ್ನಾದರೂ ಬಳಸಲು ಸಿದ್ಧವಿರುತ್ತವೆ. ಮಹಿಳೆಯರ ನೆಪದಲ್ಲಿ ಸಿಗುವ 33% ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳದಂತೆ ನೋಡಿಕೊಳ್ಳುವುದು ಮಹಿಳಾ ಮೀಸಲಾತಿಯ ಎದುರಿರುವ ಮೊದಲ ಸವಾಲು. ಅಷ್ಟೇ ಅಲ್ಲ, 33% ಮೀಸಲು ಸ್ಥಾನಗಳಿಗೆ ಸ್ಪರ್ಧಿಸಬಲ್ಲಂತಹ ಜವಾಬ್ದಾರಿಯಿರುವ ಮಹಿಳಾ ರಾಜಕಾರಣಿಗಳನ್ನು, ಮೀಸಲಾತಿಯನ್ನು ಸೂಕ್ತವಾಗಿ ಉಪಯೋಗಿಸಿಕೊಳ್ಳುವ ನಾಯಕಿಯರನ್ನು ಸೃಷ್ಟಿಸಬೇಕಾಗಿದೆ.

* * *

ಒಳಮೀಸಲಾತಿಯ ಕಾರಣದಿಂದ ಮಹಿಳಾ ಮೀಸಲಾತಿ ಮಸೂದೆ ತಡೆಹಿಡಿಯಲ್ಪಟ್ಟಿತು. ಒಳಮೀಸಲಾತಿ ಬೇಡಿಕೆಯನ್ನು ಹಾಗೇ ತಳ್ಳಿಹಾಕಲಾಗುವುದಿಲ್ಲ.

ಮಹಿಳೆ ಎಂಬ ಗುಂಪು–ಪ್ರಭೇದ ಒಂದೇ. ಅವರು ಅನುಭವಿಸುವ ಜೈವಿಕ, ದೈಹಿಕ ಅವಸ್ಥೆಗಳೂ ಒಂದೇ. ಆದರೆ ಈ ಸಾಮ್ಯತೆ ಇಲ್ಲಿಗೇ ನಿಲ್ಲುತ್ತದೆ. ಜಾತಿಯನ್ನು ಗಣನೆಗೆ ತೆಗೆದುಕೊಳ್ಳದೇ ಭಾರತದ ಯಾವ ಸಾಮಾಜಿಕ ಸಮಸ್ಯೆಯ ಬಗೆಗೂ ಮಾತನಾಡಲಾರೆವು. ಮಹಿಳಾ ಸಮಸ್ಯೆಯ ಬಗೆಗೂ. ಮೇಲ್ವರ್ಗದ ಮತ್ತು ಶ್ರಮಿಕ ಸಮುದಾಯದ ಹೆಣ್ಣುಮಕ್ಕಳು ಅನುಭವಿಸುವ ಕಷ್ಟಗಳೂ, ಬಿಡುಗಡೆಯ ದಾರಿಗಳೂ ಬೇರೆಬೇರೆಯಾಗಿವೆ. ವಿಮೋಚನೆ ಶ್ರಮಿಕ ಸಮುದಾಯದ ಹೆಣ್ಣಿಗೆ ಹಲವು ಆಯಾಮಗಳಲ್ಲಿ ದೊರಕಬೇಕಾಗಿದೆ.

ಮುಸ್ಲಿಂ ಹೆಣ್ಣುಮಕ್ಕಳು ಅನುಭವಿಸುವ ಪ್ರತ್ಯೇಕತೆಯ ಸಂಕಟಗಳು ಬೇರೆಯೇ ಆಗಿವೆ. ಬದಲಾದ ಸಾಮಾಜಿಕ ಪರಿಸ್ಥಿತಿಯಲ್ಲಿ ಮುಸ್ಲಿಂ ಮಹಿಳೆ ಹಿಂದೆಂದಿಗಿಂತ ಹೆಚ್ಚು ಪ್ರತ್ಯೇಕತೆಗೆ ಹಾಗೂ ನಿರ್ಬಂಧಗಳಿಗೆ ಒಳಗಾಗಿದ್ದಾಳೆ. ಕುರಾನ್ ಹಾಗೂ ಪ್ರವಾದಿಯವರ ನಿರ್ದೇಶನಗಳು ಇಸ್ಲಾಮಿನ ಮಹಿಳೆಯರಿಗೆ ಬೇರಾವ ಧರ್ಮದಲ್ಲೂ ಇಲ್ಲದಷ್ಟು ಸ್ವಾತಂತ್ರ್ಯ ಹಾಗೂ ಹಕ್ಕುಗಳನ್ನು ನೀಡಿದ್ದರೂ ಅವೆಲ್ಲ ಥಿಯರಿಯಾಗೇ ಉಳಿದು ನಿಜಜೀವನದಲ್ಲಿ ಆಕೆ ದನಿ ಕಳೆದುಕೊಂಡಿದ್ದಾಳೆ. ಮಹಿಳಾ ಸಮಸ್ಯೆಗಳ ಬಗ್ಗೆ ನಿರ್ಭಿಡೆಯಿಂದ ಸೃಜನಾತ್ಮಕವಾಗಿ ಅಭಿವ್ಯಕ್ತಿಸುತ್ತಿದ್ದ ಮುಸ್ಲಿಂ ಲೇಖಕಿಯರೂ ಬಾಬ್ರಿ ಮಸೀದಿ ಹಾಗೂ ಗೋಧ್ರಾ ಘಟನೆಗಳ ನಂತರ ಪ್ರತಿಕ್ರಿಯಿಸಲು ಹಿಂಜರಿಯತೊಡಗಿದ್ದಾರೆ. ತಮ್ಮ ಪ್ರತಿರೋಧ ಹಿಂದೂ ಬಲಪಂಥೀಯ ಕೋಮುವಾದಕ್ಕೆ ಆಹಾರವಾಗಬಹುದು ಎಂಬ ಹೆದರಿಕೆ ಕಡ್ಡಾಯ ಮೌನಕ್ಕೆ ದೂಡಿದೆ. ಹೀಗಿರುವಾಗ ರಾಜಕೀಯದಲ್ಲಿ ಮುಸ್ಲಿಂ ಮಹಿಳೆ ಭಾಗವಹಿಸುವುದನ್ನು ಎಷ್ಟರಮಟ್ಟಿಗೆ ನಿರೀಕ್ಷಿಸಬಹುದು? ಆದ್ದರಿಂದ ಮಹಿಳಾ ಮೀಸಲಾತಿ ಎಂದು ಒಟ್ಟಾರೆ 33% ಬಂದರೆ ಆಗಲಿಲ್ಲ, ಅಲ್ಲಿ ಭಿನ್ನ ಜಾತಿ–ಧರ್ಮ–ವರ್ಗಗಳಿಗೆ ಸೇರಿದ ಮಹಿಳೆಯರಿರಬೇಕು. ಸರ್ವೋದಯವಷ್ಟೇ ಅಲ್ಲ, ಅಂತ್ಯೋದಯ ಮೊದಲ ಗುರಿಯಾಗಬೇಕು.

ಮಹಿಳೆಗೆ ಸಂಘಟನೆಯ ಕೊರತೆ ಎಲ್ಲ ಕಾಲದಲ್ಲೂ ಕಾಡಿದೆ. ಮಹಿಳಾ ಮೀಸಲಾತಿ ಸಂಘಟನಾತ್ಮಕ ವೇಗೋತ್ಕರ್ಷಕ್ಕೆ ನೆರವಾದರೆ ರಾಜಕೀಯ ಪ್ರಜ್ಞೆ ಬೆಳೆಸಲು ಪರೋಕ್ಷವಾಗಿ ಕಾರಣವಾಗುತ್ತದೆ. ಮೀಸಲಾತಿ ಒಂದು ಉಪಕರಣ ಅಷ್ಟೇ. ಅದೊಂದರಿಂದಲೇ ಸಬಲೀಕರಣ ಸಾಧ್ಯವಿಲ್ಲ. ಸಾಮಾಜಿಕ ನ್ಯಾಯದ ಸಲುವಾಗಿ ಸೃಷ್ಟಿಯಾದ ಮೀಸಲಾತಿ ನೀತಿಯನ್ನೇ ಆಳುವ ವರ್ಗ ವಿರೂಪಗೊಳಿಸಿದೆ. ಶೋಷಿತರ ಕಣ್ಣೊರೆಸುವ ಒಂದು ತಂತ್ರವೆನ್ನುವಲ್ಲಿಗೆ ಮೀಸಲಾತಿ ಬಂದು ನಿಂತಿದೆ. ಪರಿಣಾಮಕಾರಿ ಮೀಸಲಾತಿ ನೀತಿ ಜಾರಿಯಾಗದೇ ಇರುವುದು ಇಂದಿನ ತಳ ಸಮುದಾಯಗಳ ಅರ್ಥಕ್ಕರ್ಥ ಸಮಸ್ಯೆಗಳಿಗೆ ಕಾರಣವಾಗಿದೆ. ಬದಲಾವಣೆ ಕಾನೂನು ರೀತ್ಯಾ ಆದ ಹಾಗೆಯೇ ಸಮಾಜದ ಅಂತಃಸತ್ವ ಕೂಡಾ ಬದಲಾಗಬೇಕು. ಇಲ್ಲದಿದ್ದಲ್ಲಿ ಗಂಡನ ಹಿಂದೆ ಅಡಗಿ ನಿಂತು, ಆತ ಹೇಳಿದ ಕಡೆಯಲ್ಲೆಲ್ಲ ಸುಮ್ಮನೇ ರುಜುಹಾಕುವ ಮಹಿಳೆಯರು ಕಾಣಸಿಗುತ್ತಾರೆ. ತನಗೆ ದಕ್ಕಿರುವ ಸ್ಥಾನದ ಘನತೆ ಮತ್ತು ಮಹತ್ವದ ಅರಿವು ಮಹಿಳೆಗೆ ಮೂಡಿ ಬೌದ್ಧಿಕ ದಾಸ್ಯದಿಂದ ಆಕೆ ಹೊರಬಂದು ನಿರ್ಣಾಯಕ ಘಳಿಗೆಗಳಲ್ಲಿ ಧ್ವನಿ ಕೇಳಿಸುವಂತಾಗಬೇಕು. ಆಗ ಮಹಿಳೆಯ ರಾಜಕೀಯ ಪ್ರಜ್ಞೆಗೆ ಘನತೆ ದೊರೆಯಬಹುದು.

ಕಾನೂನಿಗೆ ಏನೇ ತಿದ್ದುಪಡಿಯಾದರೂ, ಯಾವುದೇ ಕಾಯ್ದೆ ಬಂದರೂ ಅದನ್ನು ಜಾರಿಮಾಡಬೇಕಾದ ಮನಸ್ಸುಗಳೇ ಪೂರ್ವಗ್ರಹ ತುಂಬಿಕೊಂಡಿದ್ದರೆ ಯಾವುದೂ ಬದಲಾಗುವುದಿಲ್ಲ. ನಮ್ಮ ದೇಶದ ಬಹುಪಾಲು ಕಾನೂನುಗಳು ಶೋಷಿತರ, ಮಹಿಳೆಯರ ಪರವಾಗಿಯೇ ಇದ್ದರೂ ಅವು ಕಾಗದದ ಮೇಲಿನ ಹುಲಿಗಳಾಗಿಯೇ ಉಳಿದುಕೊಂಡಿವೆ. ಮಹಿಳಾ ಸಬಲೀಕರಣದ ಮಾತುಗಳೂ ಇದರಿಂದ ಹೊರತಲ್ಲ. ಸಂವಿಧಾನ ಬಂದು 62 ವರ್ಷಗಳ ನಂತರವೂ ಮಹಿಳೆಗೆ ಮೀಸಲಾತಿ ಅವಶ್ಯವಾಗಿದ್ದು ಅದನ್ನು ನೀಡಲು ವ್ಯವಸ್ಥೆ ಹಿಂದೆಮುಂದೆ ನೋಡುತ್ತಿದ್ದರೆ ಸಮಾನತೆ ಕಾಗದದ ಮೇಲಿನ ಭಾಷೆಯಾಗಿ ದೂರ ಕ್ಷಿತಿಜದಲ್ಲೆಲ್ಲೋ ಧ್ವನಿಸುತ್ತಿರುವಂತೆ ಭಾಸವಾಗುತ್ತಿದೆ. ಸಾಮಾನ್ಯ ಮಹಿಳೆಯರಲ್ಲಿ ನಾಗರಿಕ ಹಕ್ಕು ಮತ್ತು ರಾಜಕೀಯ ಪ್ರಜ್ಞೆಯನ್ನು ಹೇಗೆ ಬೆಳೆಸುವುದು? ಸಮರ್ಥ ಮಹಿಳಾ ನಾಯಕತ್ವ ದೊರಕಿಸಿಕೊಡಲು ಪಕ್ಷಗಳು ಎಂತಹ ಕಾರ್ಯ ಯೋಜನೆ ಹೊಂದಬೇಕು? ಆಯ್ಕೆಯಾಗಿರುವ ಮಹಿಳಾ ಪ್ರತಿನಿಧಿಗಳು ಮಹಿಳಾ ಸಮಸ್ಯೆಗಳತ್ತ ನಿರೀಕ್ಷಿಸಿದಷ್ಟು ಗಮನ ಹರಿಸಿರುವರೆ? ಎಂಬ ಪ್ರಶ್ನೆಗಳತ್ತ ಗಮನ ಹರಿಸುತ್ತಲೇ ಮಹಿಳಾ ಮೀಸಲಾತಿ ಶೀಘ್ರ ಜಾರಿಯಾಗಬೇಕಾಗಿದೆ. ಮೀಸಲಾತಿಯಿಲ್ಲದೆಯೂ ತನ್ನ ಧ್ವನಿ ಕೇಳುವಂತೆ ಆಕೆ ಬೆಳೆಯಬೇಕಿದೆ.

'ನಾನು ಮಹಿಳೆ, ಆದರೆ ಅದು ನನ್ನ ಮಿತಿಯಲ್ಲ' ಎಂಬ ಅರಿವು ಮಹಿಳಾ ಜಾಗೃತಿಗೆ ಅನಿವಾರ್ಯವಾದದ್ದು. ದಿನನಿತ್ಯದ ಕರ್ತವ್ಯ ಜವಾಬ್ದಾರಿಗಳೆಂಬ ಅನುದಿನದ ಅಂತರಗಂಗೆಯನ್ನು ದಾಟಿ ಸ್ವಪ್ರಜ್ಞೆ ಬೆಳೆಸಿಕೊಳ್ಳುವುದು ಅಷ್ಟೇನೂ ಸುಲಭವಲ್ಲ. ಅವಳ ಬಿಡುಗಡೆಯ ಮೊದಲ ಹೆಜ್ಜೆ ಸ್ವ–ಬಿಡುಗಡೆ. ಏಕೆಂದರೆ ಮಹಿಳೆ ತನ್ನ ಅಸ್ತಿತ್ವದ ಕುರಿತು ಯೋಚಿಸುವುದೇ ಪಾಪಕರ ಎನ್ನುವಂತಹ ವಾತಾವರಣ ನಿರ್ಮಿಸಲಾಗಿದೆ. ಅವಳೇನಿದ್ದರೂ ಕುಟುಂಬ, ಪತಿ, ಮಕ್ಕಳ ಏಳ್ಗೆ ಕುರಿತಾಗಿ ಯೋಚಿಸಬೇಕೇ ಹೊರತು ಸಮಾಜದ ಕುರಿತು ಯೋಚಿಸುವುದು ಅವಳ ಜವಾಬ್ದಾರಿಯಲ್ಲ ಎಂದು ಸಮಾಜವೂ ನಂಬಿ, ಅವಳನ್ನೂ ನಂಬಿಸಿಬಿಟ್ಟಿದೆ.

ಝಾನ್ಸಿ ರಾಣಿ ಹಾಗೂ ಕೆಲವು ಪ್ರಖ್ಯಾತ ರಾಣಿಯರ ಕುರಿತು 'ಬೆನ್ನಿಗೆ ಮಗುವನ್ನು ಕಟ್ಟಿಕೊಂಡು ಯುದ್ಧರಂಗಕ್ಕಿಳಿದಳು' ಎಂಬ ಮಾತು ಕೇಳಿಬರುತ್ತದೆ. ಸಾರ್ವಜನಿಕ ಜೀವನ ಪ್ರವೇಶಿಸುವ ಹೆಣ್ಣುಮಕ್ಕಳ ಕುರಿತ ಅತ್ಯುತ್ತಮ ರೂಪಕ ಇದು. ಯುದ್ಧರಂಗ ಹೆಣ್ಣಿಗೆ ಹೇಳಿ ಮಾಡಿಸಿದ್ದಲ್ಲ ಎಂಬ ಭಾವನೆಯಿದೆ. ಅಂಥದ್ದರಲ್ಲಿ ಅವಳು ಯುದ್ಧವಸ್ತ್ರ ತೊಟ್ಟಿದ್ದಾಳೆ. ಅಷ್ಟೇ ಅಲ್ಲ, ಬೆನ್ನಿಗೆ ಮಗುವನ್ನು ಕಟ್ಟಿಕೊಂಡಿದ್ದಾಳೆ. ಏಕಕಾಲಕ್ಕೆ ವ್ಯವಸ್ಥೆಯನ್ನು, ತನ್ನೊಳಗಿನ ಸಿದ್ಧ ಮಾದರಿಯ ಹೆಣ್ತನವನ್ನು ಮೀರಿ ಯುದ್ಧಕ್ಕಿಳಿದಿದ್ದಾಳೆ. ಸಾಮ್ರಾಜ್ಯವನ್ನು ಕಾಪಾಡಿಕೊಳ್ಳುತ್ತಲೇ ಬೆನ್ನಿಗಿರುವ ಕೂಸನ್ನೂ ರಕ್ಷಿಸಿಕೊಳ್ಳಬಯಸುತ್ತಾಳೆ. ಇದು ಝಾನ್ಸಿರಾಣಿಯ ಕಾಲದ ಕತೆಯಲ್ಲ. ಇವತ್ತಿಗೂ ಮಹಿಳೆ ತನ್ನ ಕನಸುಗಳನ್ನು ಬೆನ್ನಿಗೆ ಕಟ್ಟಿಕೊಂಡು ಅದನ್ನು ರಕ್ಷಿಸುತ್ತಲೇ ತನ್ನನ್ನೂ ರಕ್ಷಿಸಿಕೊಳ್ಳಬೇಕಾಗಿದೆ. ■

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ: ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ,
ಮಾಗಡಿ ಮುಖ್ಯ ರಸ್ತೆ, ವಿಶ್ವನೀಡಂ ಅಂಚೆ,
ಪಿ.ಬಿ. ನಂ.: ೯೧೪೩
ಬೆಂಗಳೂರು – ೫೬೦ ೦೯೧

ನಮಗೆ ತಿಳಿದಂತೆ ಗೂಂಡಾರಾಜ್ಯ ಎಂದರೆ ಕಾನೂನು ಮತ್ತು ಸುವ್ಯವಸ್ಥೆಯ ವಿಷಯವಲ್ಲ. ಮಾನಸಿಕವಾಗಿ ಆತಂಕಕ್ಕೊಳಗಾದ ಯಾದವ ನಾಯಕತ್ವದ ಇತರೆ ಹಿಂದುಳಿದ ಜಾತಿಗಳು ಸಾಮಾಜಿಕ ಒಪ್ಪಿಗೆಯನ್ನು ಕಿತ್ತುಕೊಳ್ಳುವ ಸಾಮಾಜಿಕ ವಿಷಯಕ್ಕೆ ಸಂಬಂಧಿಸಿದ್ದು ಅದು. ಹೀಗೆ ಗೂಂಡಾರಾಜ್ಯ ತನ್ನ ಐದು ವರ್ಷದ ಪೂರ್ಣಾವಧಿಯವರೆಗೆ ನಡೆಯಬಹುದು. ಉತ್ತರ ಪ್ರದೇಶದ ಸಾಮಾನ್ಯ ಜನ ನರಳಬೇಕಾಗಿರುವುದು ಅವರ ದುರಾದೃಷ್ಟ. ಗೂಂಡಾರಾಜ್ಯ ಹೀಗೆಯೆ ಮುಂದುವರೆದರೆ 2017ರಲ್ಲಿ ಅಖಿಲೇಶ್ ಸಿಂಗ್ ಯಾದವ್ ಎಲ್ಲಿರಬಹುದು?

ಗೂಂಡಾರಾಜ್ಯ ಎಂಬ ಹಣೆಪಟ್ಟಿ ಕಟ್ಟಿಸಿಕೊಂಡ ಕಿರಿಯ ಯಾದವನಿಗೆ ಮುಂದಿನದಾರಿ ಕಷ್ಟಕರವಾಗಬಹುದು. ಉತ್ತರ ಪ್ರದೇಶ ಸಹ ಆಧುನಿಕತೆಯನ್ನು ಕನಸಿನಂತೆ ಹಿಂಬಾಲಿಸುತ್ತಿದೆ. ಆದ್ದರಿಂದ ಗೂಂಡಾರಾಜ್ಯ ಹಿಂದೆಗಿಂತಲೂ ಇಂದು ಹೆಚ್ಚು ಒಪ್ಪಿಗೆಯಾಗಲಾರದು. "ಕಿರಿಯ ಯಾದವ ಎವರೆಸ್ಟನ್ನು ತನ್ನ ವೃತ್ತಿ ಜೀವನದಲ್ಲಿ ತುಂಬಾ ಮೊದಲೆ ಹತ್ತಿಬಿಟ್ಟನೆ?

ಕೆಲವು ವಿಚಾರಗಳಲ್ಲಿ ಆಶಾದಾಯಕವಾಗಿ ಕಂಡು ಬರುವ ತನ್ನ ಮಗನ ರಾಜಕೀಯ ಜೀವನವನ್ನು ಹೆಚ್ಚುಕಾಲ ಉಳಿಸಲು ಹಿರಿಯ ಯಾದವ ಮುಲಾಯಂ ಸಿಂಗ್ ಕ್ರಮಕೈಗೊಳ್ಳುವುದಕ್ಕೆ ಇದು ಸಕಾಲವಾಗಿದೆ. ಕಿರಿಯ ಯಾದವನ ವೃತ್ತಿ ಜೀವನ ಸ್ವಲ್ಪ ಕಾಲದಲ್ಲಿಯೆ ಕೊನೆಗಾಣಬಾರದು.

ಕಿರಿಯ ಯಾದವ ಗೂಂಡಾರಾಜ್ಯ ಹಣೆಪಟ್ಟಿಯಿಂದ ತಪ್ಪಿಸಿಕೊಳ್ಳುವಂತೆ ಮಾಡಲು ಹಿರಿಯ ಯಾದವ ತನ್ನ ಬೇರುಗಳತ್ತ ಹೋಗಿ ತನ್ನ ಸಮುದಾಯಕ್ಕೆ ಸುಧಾರಣೆ ಎಷ್ಟು ಅವಶ್ಯಕ ಎಂಬುದನ್ನು ಒತ್ತಿ ಹೇಳಬೇಕು. ದುರಾದೃಷ್ಟವಶಾತ್ ಹಿರಿಯ ಯಾದವನಿಗೆ ಈ ಕಳಪೆ ಪರಂಪರೆ ಬಳುವಳಿಯಾಗಿ ಬಂದಿದೆ. ನಾಲ್ಕು ದಶಕಗಳಿಗಿಂತಲೂ ಹೆಚ್ಚು ಕಾಲದ ತನ್ನ ರಾಜಕೀಯ ಜೀವನದಲ್ಲಿ ತಾನೇನನ್ನು ಕಲಿತನೊ ಅದೆಲ್ಲವನ್ನು ಹಿರಿಯ ಯಾದವ ತ್ಯಜಿಸಬೇಕು.

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ಇತರೆ ಹಿಂದುಳಿದ ಜಾತಿಗಳು ಸುಧಾರಣೆಗೆ ಒಳಪಡುವವೇ?

ಈಗ ನೋಡಿ, ಇತರೆ ಹಿಂದುಳಿದ ಜಾತಿಗಳು ಅದರಲ್ಲೂ ಯಾದವರು ಯಾವ ಹಂತದಲ್ಲಿದ್ದಾರೆ ಎಂಬುದನ್ನು.

ಯಾದವರು ಯಾವುದೇ ಒಬ್ಬ ಗಂಭೀರ ಚಿಂತಕನನ್ನು ನೀಡುವಲ್ಲಿ ಸೋತಿದ್ದಾರೆ. ಡಾ॥ ರಾಮ್ ಮನೋಹರ ಲೋಹಿಯಾ ಅವರಲ್ಲಿ ಒಬ್ಬ ಚಿಂತಕನನ್ನು ಅವರು ಕಂಡುಕೊಂಡರು. ಆದರೆ ನಿಜವಾದ ಅರ್ಥದಲ್ಲಿ ಲೋಹಿಯಾ ಇತರೆ ಹಿಂದುಳಿದ ಜಾತಿಗಳವರಲ್ಲ. ಅದಕ್ಕಿಂತಲೂ ಕೆಟ್ಟದೆನಿಸುವುದೇನೆಂದರೆ ಲೋಹಿಯ ಹಿಂದುಳಿದಿರುವಿಕೆಯನ್ನೇ ಒಂದು ಶ್ರೇಷ್ಠ ಗುಣವಾಗಿ ತಮ್ಮ ಇತರೆ ಹಿಂದುಳಿದ ಜಾತಿ ಹಿಂಬಾಲಕರಿಗೆ ಭೋದಿಸಿದರು.

ಕೆಲವು ಉದಾಹರಣೆಗಳೊಡನೆ ಇದನ್ನು ವಿಷದಪಡಿಸುತ್ತೇನೆ. ಇತರೆ ಹಿಂದುಳಿದ ವರ್ಗದ ನಾಯಕರು ಆಗಾಗ್ಗೆ ಲೋಹಿಯ ಅವರನ್ನು ಡಾ. ಬಿ.ಆರ್. ಅಂಬೇಡ್ಕರ್‌ರವರಿಗೆ ಹೋಲಿಸುತ್ತಾರೆ. ಈ ಇಬ್ಬರು ಧೀಮಂತ ನಾಯಕರೂ ತಮ್ಮ ದೃಷ್ಟಿಕೋನಗಳಲ್ಲಿ ಸಂಪೂರ್ಣವಾಗಿ ಭಿನ್ನವಾಗಿದ್ದು, ಹೋಲಿಕೆಗೆ ನಿಲುಕದವರಾಗಿದ್ದಾರೆ. ಅಂಬೇಡ್ಕರ್‌ರವರು ತನ್ನ ಜನರಿಗೆ ಆಧುನಿಕತೆಯನ್ನು ಅಪ್ಪಿಕೊಳ್ಳುವಂತೆ ಕರೆ ನೀಡಿದರು. ಇಂಗ್ಲಿಷ್ ಸಿಂಹದ ಹಾಲಿದ್ದಂತೆ, ಅದನ್ನು ಕುಡಿಯಿರಿ ಎಂದು ಅವರು ಹೇಳಿದರು. ಇಂಗ್ಲಿಷ್ ಒಂದು ಕೆಡಕು, ನಮ್ಮನ್ನಾಳಿದ ವಸಾಹತುಶಾಹಿಗಳ ಭಾಷೆ, ಅದನ್ನು ಒದ್ದೋಡಿಸಿ ಎಂದು ಲೋಹಿಯಾ ಕರೆ ನೀಡಿದರು. ಇಂಗ್ಲಿಷನ್ನು ತೆಗೆದುಹಾಕಲು ಅವರು ಬಹುದೊಡ್ಡ ಚಳವಳಿಯನ್ನೇ ನಡೆಸಿದರು. ಅಂಬೇಡ್ಕರರು ಸೂಟು ಭೂಟುಧಾರಿಗಳಾದರೆ, ಲೋಹಿಯಾ ಅವರು ತಮ್ಮ ಪೋಷಾಕಿನಲ್ಲಿ ದೇಸೀತನವನ್ನು ಅಳವಡಿಸಿಕೊಂಡರು.





ಇದರ ಪರಿಣಾಮಗಳನ್ನು ನೋಡಿ. ನಾವು ಯಾದವ ಸಂಸತ್ ಸದಸ್ಯರನ್ನು, ವಿಧಾನ ಸಭಾ ಸದಸ್ಯರನ್ನು ಎಲ್ಲೆಲ್ಲೂ ನೋಡುತ್ತೇವೆ. ಆದರೆ ಯಾದವ ವಿದ್ವಾಂಸರು ಮತ್ತು ಬುದ್ಧಿಜೀವಿಗಳೆಲ್ಲಿ? ಅವರ ಕ್ಷೇತ್ರದಲ್ಲಿ ಅತ್ಯುತ್ತಮ ಎನಿಸಿಕೊಳ್ಳುವ ಇಬ್ಬರು ಯಾದವ ಚಿಂತಕರನ್ನು ಇಡೀ ಉತ್ತರ ಭಾರತದಲ್ಲಿ ನಾವು ಕಾಣುತ್ತೇವೆ. ಆದರೆ ವೈರುಧ್ಯಗಳನ್ನು ನೋಡಿ. ಒಬ್ಬ ಯಾದವ ಬುದ್ಧಿಜೀವಿ ಪೈಪ್ ಸೇದುತ್ತಾ, ಮದ್ಯವನ್ನು ನೀರು ಅಥವಾ ಸೋಡಾ ಜೊತೆ ತೆಗೆದುಕೊಳ್ಳಬೇಕೆಂದು ಚೆನ್ನಾಗಿ ತಿಳಿದಿದ್ದಾನೆ. ಅವನಿಗೆ ಇಂಗ್ಲಿಷ್ ಬರುವುದಿಲ್ಲ. ಮತ್ತೊಬ್ಬ ಯಾದವ ಚಿಂತಕ ಇಂಗ್ಲಿಷ್ ಮೇಲೆ ಅದ್ಭುತ ಹಿಡಿತ ಹೊಂದಿರುವವನು. ಆದರೆ ಅವನು ಹಾಲು ಕುಡಿಯುತ್ತಾನೆ ಮತ್ತು ಖಾದಿ ಜುಬ್ಬ ಧರಿಸುತ್ತಾನೆ.

ರಾಮ್ ವಿಲಾಸ್ ಪಾಸ್ವಾನ್ ಏಕೆ ಧೋತಿ ಕುರ್ತಾ ತಿರಸ್ಕರಿಸಿದರು. ಮತ್ತು ಏಕೆ ಲಾಲೂ ಪ್ರಸಾದ್ ಯಾದವ್, ಮುಲಾಯಂ ಸಿಂಗ್ ಯಾದವ್ ಮತ್ತು ಶರದ್ ಯಾದವ್ ಧೋತಿ ಕುರ್ತಾಗಳನ್ನೇ ಅಪ್ಪಿಕೊಂಡರು ಎಂಬುದಕ್ಕೆ ಕಾರಣಗಳನ್ನು ನಾವು ತಿಳಿದುಕೊಳ್ಳಬೇಕಾಗಿದೆ.

ಏಕೆ ಡಾ.ಅಂಬೇಡ್ಕರ್ ಎರಡು ದಿಕ್ಕಿನಿಂದ ಹೋರಾಟ ಮಾಡಿದರು ಎಂಬುದನ್ನು ಯೋಚಿಸಿ. ಮೊದಲನೆಯದು ಜಾತಿ ವಿರುದ್ಧದ ಹೋರಾಟ. ಅಂದರೆ ಜಾತಿ ವಿನಾಶ. ಎರಡನೆಯದು ಸಮುದಾಯದ ಒಳಗಿನ ಸುಧಾರಣೆ. ಅಂಬೇಡ್ಕರ್‌ರವರು ಅನೇಕ ಸುಧಾರಣಾ ಚಳವಳಿಯನ್ನು ಸಮುದಾಯದ ಒಳಗೆ ನಡೆಸಿದರು. ಕೆಲವು ಪದ್ಧತಿಗಳನ್ನು ದಲಿತರು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದೂ, ಕೆಲವು ಪದ್ದತಿಗಳನ್ನು ಕೈಬಿಡಬೇಕೆಂದೂ ಕರೆ ನೀಡಿದರು. ಆದರೆ ಲೋಹಿಯ ಅವರ ವಾದವೇ ಬೇರೆಯಾಗಿತ್ತು. ಅವರು ಹೊರಗಿನ ಪ್ರಭಾವಗಳ ವಿರುದ್ಧ ಮಾತ್ರ ವಾದಿಸಿದರು.

ಆದರೆ ಇತರೆ ಹಿಂದುಳಿದ ಜಾತಿಗಳ ಹಿಂದುಳಿದಿರುವಿಕೆಗೆ ಮೇಲ್ಜಾತಿಗಳ ಪ್ರಾಬಲ್ಯವನ್ನೇ ಅವರು ಕಾರಣವಾಗಿ ನೀಡಿದರು. ಅವರ ಚಿಂತನೆ 'ಶುದ್ಧತೆಯ' ಬಗ್ಗೆ ಮಾತ್ರ ಇತ್ತು. ಇತರೆ ಹಿಂದುಳಿದ ಜಾತಿಗಳು ಸುಧಾರಣೆಗೊಳಪಡಬೇಕು ಎಂದು ಅವರಿಗೆ ಅನಿಸಲಿಲ್ಲ.

ಹೀಗೆ ಇತರೆ ಹಿಂದುಳಿದ ಜಾತಿಗಳು ಆಧುನಿಕತೆಯ ಬಸ್ಸನ್ನು ತಪ್ಪಿಸಿಕೊಂಡರು. ಇತರೆ ಹಿಂದುಳಿದ ಜಾತಿಗಳು ಅದರಲ್ಲೂ ಯಾದವರು ಆಧುನಿಕ ಶಿಕ್ಷಣದ ಹಾಗು ಅತಿ ಕಡಿಮೆ ಖರ್ಚು ಮಾಡುತ್ತಾರೆ. ಹೆಚ್ಚು ಜನ ಯಾದವ ನಾಯಕರು ತಮ್ಮ ಸರ್ಕಾರಿ ಬಂಗಲೆಗಳನ್ನೇ ದನದ ಕೊಟ್ಟಿಗೆಗಳಾಗಿ ಪರಿವರ್ತಿಸಿಕೊಳ್ಳುತ್ತಾರೆ. ಅವರಿಗೆ ದನಗಳಿಲ್ಲದ ಜೀವನ ದುಸ್ತರವೆನಿಸುತ್ತದೆ. ತನ್ನ ಆದಾಯದಲ್ಲಿ ಏನಾದರೂ ಉಳಿದರೆ ದಲಿತ ಯುವಕ ಕಂಪ್ಯೂಟರ್ ಕೊಳ್ಳುವ ಕಡೆ ಯೋಚಿಸುತ್ತಾನೆ. ಆದರೆ ತನ್ನ ಆದಾಯದಲ್ಲಿ ಉಳಿಕೆ ಉಂಟಾದಾಗ ಯಾದವ ಯುವಕ ಒಂದು ಕೋವಿಯನ್ನು ಕೊಳ್ಳಲು ಬಯಸುತ್ತಾನೆ.

ಒಳ್ಳೆಯ ತಂದೆಯಾಗಿ ಹಿರಿಯ ಯಾದವ ತನ್ನ ಮಗನಿಗೆ ಉತ್ತಮ ಭವಿಷ್ಯವನ್ನು ನೀಡುವ ಕಡೆ ಗಮನಹರಿಸಬೇಕು. ಆ ದೃಷ್ಟಿಯಿಂದ ಅವನು ಒಂದು ಉತ್ತಮವಾದ ಸಮಾಜ ಸುಧಾರಣಾ ಸೂಚಿಯೊಡನೆ ತನ್ನ ಜನರತ್ತ ಹೋಗಬೇಕು. ಆ ಸೂಚಿ ಈ ಕೆಳಗಿನಂತಿರಬೇಕು.

1) ಉತ್ತರ ಪ್ರದೇಶವು ತನ್ನ ಗತಕಾಲವನ್ನು ಬಿಟ್ಟು ದೂರ ಸರಿದಿರುವುದರಿಂದ ಯಾದವರು ರಜಪೂತರಂತೆ ಭೂಮಿ ಮತ್ತು ರಾಜಕೀಯದ ಮೇಲೆ ಪ್ರಭಾವ ಹೊಂದಿ ರಜಪೂತರಂತೆ ಸಾಮಾಜಿಕ ಒಪ್ಪಿಗೆ ಪಡೆಯುವುದು ಸಾಧ್ಯವಿಲ್ಲ ಎಂಬುದನ್ನು ಯಾದವರಿಗೆ ಹೇಳಬೇಕು.

2) ಆಳುವವರು ಯಾವುದೇ ವ್ಯಾಜ್ಯಗಳನ್ನು ತೀರ್ಮಾನಿಸುವಾಗ ಮೊದಲು ತಾವು ಕಾನೂನುಬದ್ಧವಾಗಿ ನಡೆಯಬೇಕು. ರಾಜ್ಯಶಕ್ತಿ ಎಂದರೆ ಆಡಳಿತ ನಡೆಸುವುದು, ಭೂಮಿಯನ್ನು ದೋಚಿಕೊಳ್ಳುವುದಲ್ಲ ಎಂಬುದನ್ನು ಯಾದವರಿಗೆ ಹೇಳಬೇಕು.

3) ಮಕ್ಕಳ ವಿದ್ಯಾಭ್ಯಾಸದ ಮೇಲೆ ಹಣ ತೊಡಗಿಸುವುದಕ್ಕಿಂತ ಉತ್ತಮವಾದ ಹಣ ಹೂಡುವಿಕೆ ಯಾವುದೂ ಇಲ್ಲ. ಇಂಗ್ಲಿಷ್ ಇಲ್ಲದ ಡಿಗ್ರಿ ಪುಟಗಳಿಲ್ಲದ ಪುಸ್ತಕದಂತೆ, ಇಂಕ್ ಇಲ್ಲದ ಪೆನ್ನಿನಂತೆ ಮತ್ತು ಮದ್ದಿಲ್ಲದ ಬಂದೂಕಿನಂತೆ ಎಂಬುದನ್ನು ಯಾದವರಿಗೆ ಹೇಳಬೇಕು.

4) ಓದು ಮತ್ತು ದನಸಾಕಣೆ ಎಂದೂ ಒಟ್ಟಿಗೆ ಇರಲು ಸಾಧ್ಯವಿಲ್ಲ. ಆದುದರಿಂದ ಎಮ್ಮೆ ಮತ್ತು ದನ ಸಾಕುವ ವಿರುದ್ಧ ಸಮುದಾಯದಲ್ಲಿ ಒಂದು ಸಾಮಾಜಿಕ ಚಳವಳಿ ನಡೆಯಬೇಕು ಎಂದು ಯಾದವರಿಗೆ ಹೇಳಬೇಕು.

5) ದೇಸೀ ಪೋಷಾಕನ್ನು ಬಿಸಾಡಿ, ಇಂಗ್ಲಿಷ್ ಪೋಷಾಕನ್ನು ಧರಿಸುವಂತೆ ಯಾದವರಿಗೆ ಹೇಳಬೇಕು.

ಹಿರಿಯ ಯಾದವ ರಾಜಕೀಯ ಅಧಿಕಾರವನ್ನು ಬಹಳ ಕಾಲ ಅನುಭವಿಸಿದ್ದಾನೆ. ಈಗ ಅವನ ಮಗ ಪ್ರತಿಭೆವುಳ್ಳವನ ಹಾಗೆ ಕಾಣುತ್ತಿದ್ದಾನೆ ಮತ್ತು ಅವನಿಗೆ ಭವಿಷ್ಯವಿದೆ. ವಯಸ್ಸು ಅವನ ಪರವಾಗಿದೆ. ಅವನು ರಾಜ್ಯದ ಮುಖ್ಯಮಂತ್ರಿಯಾಗಿರುವುದರಿಂದ ಅದೇ ಸಮಯದಲ್ಲಿ ಸಮಾಜ ಸುಧಾರಕನಾಗಿರಲು ಸಾಧ್ಯವಿಲ್ಲ. ಆದರೆ ಹಿರಿಯ ಯಾದವನಿಗೆ ತನ್ನ ಮಗನ ಮೇಲೆ ಕಾಳಜಿ ಇದೆಯೇ?

ಕಿರಿಯ ಯಾದವ ಗೂಂಡಾರಾಜ್ಯ ಹಣೆಪಟ್ಟಿಯಿಂದ ತಪ್ಪಿಸಿಕೊಳ್ಳುವಂತೆ ಮಾಡಲು ಹಿರಿಯ ಯಾದವ ತನ್ನ ಬೇರುಗಳತ್ತ ಹೋಗಿ ತನ್ನ ಸಮುದಾಯಕ್ಕೆ ಸುಧಾರಣೆ ಎಷ್ಟು ಅವಶ್ಯಕ ಎಂಬುದನ್ನು ಒತ್ತಿ ಹೇಳಬೇಕು. ದುರಾದೃಷ್ಟವಶಾತ್ ಹಿರಿಯ ಯಾದವನಿಗೆ ಈ ಕಳಪೆ ಪರಂಪರೆ ಬಳುವಳಿಯಾಗಿ ಬಂದಿದೆ. ನಾಲ್ಕು ದಶಕಗಳಿಗಿಂತಲೂ ಹೆಚ್ಚು ಕಾಲದ ತನ್ನ ರಾಜಕೀಯ ಜೀವನದಲ್ಲಿ ತಾನೇನನ್ನು ಕಲಿತನೊ ಅದೆಲ್ಲವನ್ನು ಹಿರಿಯ ಯಾದವ ತ್ಯಜಿಸಬೇಕು.

* * *

ನಂದಿಗ್ರಾಮವು ಪತ್ರಿಕೆಗಳಲ್ಲಿ ತಲೆ ಬರಹಗಳನ್ನು ಗಿಟ್ಟಿಸುತ್ತಿದ್ದಾಗ ದೆಹಲಿಯ ಇಂಗ್ಲಿಷ್ ಪತ್ರಿಕೆಯೊಂದು "1500 ಕಿ.ಮೀ.ಗಳ ದೂರದಲ್ಲಿ ನಂದಿಗ್ರಾಮ ಜೀವಪಡೆದಿದೆ." ಎಂಬ ತಲೆಬರಹದ ವರದಿಯೊಂದನ್ನು ಪ್ರಕಟಿಸಿತು. ಈ ವರದಿಯನ್ನು ನೀಡಿದ್ದವರು ಅವಿಜಿತ್ ಘೋಷ್.

ವರದಿ ದೆಹಲಿಯ ಹೊರವಲಯದಲ್ಲಿ ನೆಲಸಿದ್ದ 120 ಕುಟುಂಬಗಳ ಸುತ್ತ ಬರೆದುದಾಗಿತ್ತು. ಅವರಲ್ಲಿ ಶೇಕಡಾ ಎಂಬತ್ತರಷ್ಟು ಕುಟುಂಬಗಳು ನಂದಿಗ್ರಾಮ ಬ್ಲಾಕ್‌ನಿಂದ ಬಂದವರಾಗಿದ್ದು, ಅವರೆಲ್ಲರೂ ಚಿಂದಿ ಆಯುವವರಾಗಿದ್ದರು. ಯಂತ್ರಗಳನ್ನುಪಯೋಗಿಸಿ ಕೆಲಸ ಮಾಡಲು ಯಾವುದೇ ತರಬೇತಿಯಿಲ್ಲದ ಮತ್ತು ಸ್ಥಳೀಯ ಭಾಷೆ ಬಾರದ ಇವರು ನಗರೀಕೃತ ಭಾರತ ಕೀಳೆಂದು ಪರಿಗಣಿಸುವ ಈ ಕಸುಬನ್ನು ಆರಿಸಿಕೊಂಡಿದ್ದರು. ಬಹಳ ಕಷ್ಟದಲ್ಲಿದ್ದಿರಬಹುದಾದ ಅವರು ತಮ್ಮ ಜೀವನಕ್ಕಾಗಿ ಈ ಕಸುಬನ್ನು ಕೈಗೊಂಡಿದ್ದರು.

ಅವರ ಉತ್ಸಾಹ ಸೂಚಿಸುವಂತೆ, ಚಿಂದಿ ಆಯುವ ನಂದಿಗ್ರಾಮದ ಈ ದೇಶ ಪ್ರೇಮಿಗಳು ಸಾರ್ವಜನಿಕ ನೀತಿ ತಜ್ಞರಂತೆ ಸಂದರ್ಶನದಲ್ಲಿ ಮಾತನಾಡಿದ್ದರು. ರೈತರು ತಮ್ಮ ಜಮೀನುಗಳನ್ನು ಕೈಗಾರಿಕೋದ್ಯಮಿಗಳಿಗೆ ಎಂದೂ ಮಾರಬಾರದು ಎಂದಿದ್ದರು. ನಂದಿಗ್ರಾಮದ ಮಾದರಿಯನ್ನು ದೆಹಲಿಯೂ ಅನುಸರಿಸಿ ತನ್ನ ಸುತ್ತಮುತ್ತಲ ರೈತರ ಜಮೀನುಗಳನ್ನು ಮುಟ್ಟದಿದ್ದಲ್ಲಿ, ತಮಗೆ ಹೊಟ್ಟೆ ತುಂಬಾ ಉಣ್ಣುವುದಕ್ಕೂ ನೀಡದಿದ್ದ ತಮ್ಮ ಜಮೀನುಗಳ ಬಗ್ಗೆ ಇಷ್ಟು ಮೋಹದಿಂದ ಮಾತನಾಡುವ, ಚಿಂದಿ ಆಯುವ, ಸಾರ್ವಜನಿಕ ನೀತಿಯ ಮೇಲೆ ತಜ್ಞರಂತೆ ಮಾತನಾಡುವ ಈ ಮಾಜಿ ರೈತರು ಎಲ್ಲಿ ನೆಲೆಸುತ್ತಿದ್ದರು?

ದೀರ್ಘಕಾಲದ ಕಮ್ಯುನಿಸ್ಟ್ ಆಡಳಿತದಿಂದ ಪಡೆದ ಪಶ್ಚಿಮ ಬಂಗಾಳದ ರಾಜಕೀಯ ಪ್ರಜ್ಞೆಗೆ ಕೈಗಾರಿಕೋದ್ಯಮಿಗಳು ಜನರ ರಕ್ತ ಹೀರುವವರು ಮತ್ತು ಕೈಗಾರಿಕೆಗಳು ದೊಡ್ಡ ಬೇನೆ. ಈ ಪ್ರಜ್ಞೆಯ ಕಾರಣವಾಗಿ ಭಾರತದ ಇತರ ರಾಜ್ಯಗಳಿಗಿಂತ ಮೊದಲೆ ಕೈಗಾರಿಕೀಕರಣಗೊಂಡಿದ್ದ ಪಶ್ಚಿಮ ಬಂಗಾಳ ನಿದಾನವಾಗಿ ಕೈಗಾರಿಕೆಗಳನ್ನು ದೂರಮಾಡಿತು. ಗ್ರಾಮೀಣ ಭಾರತದ ಜನರಲ್ಲಿ ಹೆಚ್ಚುತ್ತಿರುವ ಆಕಾಂಕ್ಷೆಗಳನ್ನು ವ್ಯವಸಾಯ ಕ್ಷೇತ್ರ ಎಂದೂ ತುಂಬಲಾರದು. ಆದುದರಿಂದ ಅವರು ಕಂಡುಕೊಳ್ಳುವ ಅತಿ ಮುಖ್ಯ ದಾರಿ ಕೈಗಾರಿಕೀಕೃತ ಪಟ್ಟಣಗಳಿಗೆ ವಲಸೆ ಹೋಗುವುದು. ಪಶ್ಚಿಮ ಬಂಗಾಳದ ಕೆಳವರ್ಗಗಳು ಇಂದು ತಮ್ಮ ರಾಜ್ಯದಲ್ಲಿಯೆ ನಿರಾಶ್ರಿತರಾಗಿದ್ದಾರೆ. ಪಶ್ಚಿಮ ಬಂಗಾಳವು ಅವರಿಗೆ ಅನ್ನ ನೀಡಲು ಸೋತಿರುವುದರಿಂದ ಅವರು ದೇಶದುದ್ದಕ್ಕೂ ಹರಡಿಕೊಳ್ಳುತ್ತಿದ್ದಾರೆ.

ಹಿಂದುಳಿದಿರುವಿಕೆಗೆ ಮತ್ತೊಂದು ಹೆಸರು ಬಿಹಾರ. ಅದೂ ಸಹ ಪಶ್ಚಿಮ ಬಂಗಾಳದ ಹಾಗೆಯೇ ದುರಂತಯುಕ್ತ ಮಾದರಿಯನ್ನೆ ಅನುಸರಿಸಿತು. 1967ರಿಂದ ಹದಿನಾಲ್ಕು ಮುಖ್ಯಮಂತ್ರಿಗಳು ಅದನ್ನು ಆಳಿದ್ದಾರೆ. ಲಾಲು ಪ್ರಸಾದ್ ಯಾದವ್



ಅವರನ್ನೊಳಗೊಂಡು ಅವರೆಲ್ಲರೂ ಸಮಾಜವಾದಿಗಳು. ಬಿಹಾರದ ಸಮಾಜವಾದಿ ರಾಜಕಾರಣಿಗಳು ಸಮಾಜವಾದಿ ಮಾದರಿಯ ಸಮಾಜದ ಸೌಂದರ್ಯವನ್ನು ಬಣ್ಣಿಸುತ್ತಿದ್ದಂತೆಯೆ ಬಿಹಾರದ ಕೆಳವರ್ಗಗಳು ಬಿಹಾರದ ಹೊರಗಿನ ಕೈಗಾರಿಕಾ ಪಟ್ಟಣಗಳಲ್ಲಿ ಆಶ್ರಯ ಪಡೆಯುತ್ತಿದ್ದರು.

ವಲಸೆ ಹತಾಶೆಯಿಂದ ಉಂಟಾಗುತ್ತದೆಯೆ ವಿನಃ ಚೆಂದಕ್ಕಾಗಿ ಅಲ್ಲ. ತಮ್ಮ ಮಾತೃ ಪ್ರಾಂತ್ಯದ ಆರ್ಥಿಕತೆಗಳು ತಮಗೆ ಬದುಕುವಷ್ಟನ್ನೂ ನೀಡದಿದ್ದಲ್ಲಿ ಹೆಚ್ಚು ತೊಂದರೆಗೊಳಗಾಗುವವರು ಜಮೀನುದಾರರ ಹಿಡಿತದಿಂದ ತಪ್ಪಿಸಿಕೊಳ್ಳಲೆತ್ನಿಸುವ, ಆದರೆ ಕೈಗಾರಿಕೀಕರಣವಿಲ್ಲದೆ ಬೇರೆ ಅವಕಾಶಗಳಿಂದ ವಂಚಿತರಾಗಿ ಹಸಿವು ಮತ್ತು ಅವಮಾನಗಳನ್ನು ಎದುರಿಸಬೇಕಾದ ಕೆಳವರ್ಗಗಳು. ಹೆಚ್ಚು ಸಮಯ ಕೈಗಾರಿಕಾ ವಿರೋಧಿ, ಬಂಡವಾಳ ವಿರೋಧಿ ಚಿಂತಕರು ಮೇಲ್ವರ್ಗದಿಂದಲೆ ಬಂದವರಾಗಿರುತ್ತಾರೆ.

ಪಶ್ಚಿಮ ಬಂಗಾಳ ಮತ್ತು ಬಿಹಾರದ ಅನುಭವಗಳನ್ನು ಗಮನದಲ್ಲಿಟ್ಟುಕೊಂಡು, ಹೊಸ ಸಮಾಜವಾದಿ ಪಕ್ಷದ ಆಡಳಿತ ತನ್ನ ಐದು ವರ್ಷದ ಪೂರ್ಣ ಕಾಲವನ್ನು ಪೂರೈಸುತ್ತದೆ ಎಂದುಕೊಂಡರೆ, ಉತ್ತರ ಪ್ರದೇಶ ಎತ್ತಕಡೆ ಮುಖ ಮಾಡಿದೆ?

ಉತ್ತರ ಪ್ರದೇಶದ ಯುವ ಮತದಾರರ ಒಂದು ವರ್ಗದಂತೆ ರಾಜ್ಯದ ಯುವ ಮುಖ್ಯಮಂತ್ರಿ ಅಖಿಲೇಶ್ ಸಿಂಗ್ ಯಾದವ್ ಆಧುನೀಕರಣ ಬಯಸುವ ಒಬ್ಬ ನಾಯಕ. ನನ್ನದೂ ಅದೇ ಆಶೆ.

ಉತ್ತರ ಪ್ರದೇಶದ ಚಮ್ಮಾರರ ವೈಭವ

ಅಖಿಲೇಶ್ ಸಿಂಗ್ ಯಾದವ್ ಒಬ್ಬ ಆಧುನಿಕತಾವಾದಿ ಎಂಬ ಅನಿಸಿಕೆ, ಅವನು ಪಶ್ಚಿಮ ಉತ್ತರ ಪ್ರದೇಶದ ಒಬ್ಬ ಯಾದವ ಬಲಶಾಲಿಯನ್ನು (ಮಸಲ್ ಮ್ಯಾನ್) ಹತ್ತಿರ ಸೇರಿಸಿಕೊಳ್ಳಲಿಲ್ಲ; ವಿದ್ಯಾರ್ಥಿಗಳಿಗೆ ಲ್ಯಾಪ್‌ಟ್ಯಾಪ್ ನೀಡಲು ಮುಂದಾಗಿದ್ದಾನೆ; ಮತ್ತು ಅವನು ಇನ್ನೂ ಯುವಕ ಎಂಬ ಮೂರು ಕಾರಣಗಳಿಂದ ಉಂಟಾಗಿದೆ.

ಆದರೆ ಈ ಬಗ್ಗೆ ಅನುಮಾನ ಹೊಂದಿರುವ ನನ್ನಂತ ವಿಮರ್ಶಕರೂ ಇದ್ದಾರೆ. ನಮ್ಮ ಅನಿಸಿಕೆ ಸರಿ ಎನ್ನಿಸುವ ರೀತಿಯಲ್ಲಿ ಅಖಿಲೇಶ್ ಸಿಂಗ್ ಯಾದವ್ ಅಪಾಯಕಾರಿ ಅಪರಾಧಿ ಎಂದು ಸಾಬೀತಾಗಿರುವ ರಾಜಾ ಬಯ್ಯನನ್ನು ತನ್ನ ಸಚಿವ ಸಂಪುಟಕ್ಕೆ ಸೇರಿಸಿಕೊಂಡು ನಮ್ಮಂತವರ ಅನುಮಾನವನ್ನು ನಿಜ ಮಾಡಿದ್ದಾನೆ. ಉಚಿತ ಲ್ಯಾಪ್ ಟಾಪ್ ಕೊಡುವ ಭರವಸೆಗೆ ಬರುವುದಾದರೆ ಅದು ಆಧುನಿಕತೆಗಿಂತ ಸಮಾಜವಾದಕ್ಕೆ ಹೆಚ್ಚು ಸಂಬಂಧಿಸಿದುದಲ್ಲವೆ?

ಸಂಕ್ಷಿಪ್ತವಾಗಿ ಹೇಳುವುದಾದರೆ, ಆಧುನಿಕತೆ ಲ್ಯಾಪ್‌ಟ್ಯಾಪ್ ನಂತಹ ಉಪಕರಣಗಳನ್ನು ಪ್ರಜೆಗಳು ಪಡೆದುಕೊಳ್ಳುವ ಶಕ್ತಿ ನೀಡುವತ್ತ ಇರುತ್ತದೆ. ಅದೆಂದರೆ ಬಂಡವಾಳಶಾಹಿಯಾಗುವುದು. ಅದು ಪೋಷಣೆಯನ್ನು ಅಲ್ಲಗಳೆಯುತ್ತದೆ. ಸಮಾಜವಾದದಲ್ಲಿ ಪ್ರಜೆಗಳು ದೇಶಕ್ಕೆ ಕೆಲಸ ಮಾಡುತ್ತಾರೆ. ಪ್ರಜೆಗಳಿಗೆ ಅನ್ನ ನೀಡುವ ಹೊಣೆ ದೇಶದ ಮೇಲಿರುತ್ತದೆ.

ಅಖಿಲೇಶ್ ಸಿಂಗ್ ಯಾದವ್ ಪ್ರಜೆಗಳಿಗೆ ಕೆಲಸ ನೀಡಿ ಅವರ ಆರ್ಥಿಕ ಸಾಮರ್ಥ್ಯ ಹೆಚ್ಚುವಂತೆ ಮಾಡಿ ಅವರೇ ತಮಗೆ ಬೇಕಾದ ಲ್ಯಾಪ್‌ಟಾಪ್ ಕೊಳ್ಳುವಂತೆ ಏಕೆ ಮಾಡುತ್ತಿಲ್ಲ? ಹಾಗೆಯೇ ವಿದ್ಯಾವಂತ ನಿರುದ್ಯೋಗಿಗಳಿಗೆ ತಿಂಗಳಿಗೆ ಸಾವಿರ ರೂಪಾಯಿ ಮಾಸಿಕ ನಿರುದ್ಯೋಗಿ ಭತ್ಯೆ ನೀಡುವ ಭರವಸೆ ನೀಡುತ್ತಾನೆ. ಆದರೆ ಕೆಲಸವನ್ನೇಕೆ ಕೊಡುತ್ತಿಲ್ಲ?

ಉತ್ತರ ಪ್ರದೇಶದ ಯುವ ಮುಖ್ಯಮಂತ್ರಿ ಸಮಾಜವಾದವನ್ನು ಆಚರಣೆಗೆ ತರುವ ಸೂಚನೆ ನೀಡಿ ಸಮಾಜವಾದಿ ಸಾಂಪ್ರದಾಯಿತ್ವವನ್ನು ಗಟ್ಟಿಗೊಳಿಸುತ್ತಿದ್ದಾನೆಯೇ? ತನ್ನ ಸರ್ಕಾರ ವ್ಯವಸಾಯ ಕ್ಷೇತ್ರದ ಹೊರಗೆ ಹುದ್ದೆಗಳನ್ನು ಸೃಷ್ಟಿಸಲಾರದು ಎಂದು ಅಖಿಲೇಶ್ ಸಿಂಗ್ ಯಾದವ್‌ಗೆ ಖಾತರಿಯಾಗಿದೆಯೇ?

ಉತ್ತರ ಪ್ರದೇಶದ ಚುನಾವಣಾ ಪ್ರಚಾರ ಸಂದರ್ಭದಲ್ಲಿ ವಾಲ್‌ಮಾರ್ಟ್‌ನ ಮಳಿಗೆಗಳು ತಾನು ಈಗ ಆಳುತ್ತಿರುವ ರಾಜ್ಯದಲ್ಲೇನಾದರೂ ತೆರೆದರೆ ಅವುಗಳನ್ನು ಸುಡುವುದಾಗಿ ಅವನು ಬೆದರಿಕೆ ಹಾಕಿದ್ದ. ವ್ಯವಸಾಯ ಕ್ಷೇತ್ರದ ಹೊರಗೆ ಉದ್ಯೋಗ ಸೃಷ್ಟಿಯನ್ನು ಇಂತಹ ಬೆದರಿಕಾ ಸೂಚಕಗಳು ತಡೆಯುತ್ತವೆ. ಜತೆಗೆ ಅಖಿಲೇಶ್ ಸಿಂಗ್ ಯಾದವ್ ತನ್ನ ಮತದಾರರಿಗೆ ಇಂಗ್ಲಿಷ್ ಕಲಿಸುವ ಭರವಸೆ ನೀಡಲಿಲ್ಲ. ಇಂಗ್ಲಿಷ್ ಬಗ್ಗೆ ತನ್ನ ನಿಲುವನ್ನು ಘೋಷಿಸಲು ಪದೇ ಪದೇ ಪತ್ರಕರ್ತರು ಪೀಡಿಸಿದಾಗ ಅವನು ಹೇಳಿದ್ದೆಂದರೆ "ನಾನು ಇಂಗ್ಲಿಷ್ ವಿರೋಧಿಯಲ್ಲ. ಆದರೆ ಮಾತೃ ಭಾಷೆ ಹಿಂದಿಯನ್ನು ರಕ್ಷಿಸುವ ಅವಶ್ಯಕತೆ ಇದೆ". ಇದು ಅಖಿಲೇಶ್ ಸಿಂಗ್ ಯಾದವನ ಆಧುನಿಕತೆ!

ಪ್ರೇಮಿಗಳ ದಿನ ಉಪಯೋಗಿಸುವ ಗುಲಾಬಿಗಳು ತನ್ನ ಎಮ್ಮೆಗಳು ತಿನ್ನುವ ಮೇವಿಗೆ ಮಾರಕವಾಗಿವೆ ಎಂದು ನಂಬಿರುವ ತನ್ನ ತಂದೆಯ ನಂಬಿಕೆಗಳನ್ನು ಗಟ್ಟಿಗೊಳಿಸುತ್ತಿರುವ ಯುವ ಮುಖ್ಯಮಂತ್ರಿಯನ್ನು ಹೊಂದಿರುವ ಭಾರತದ ಅತಿ ಹೆಚ್ಚು ಜನಸಂಖ್ಯೆಯುಳ್ಳ ಉತ್ತರ ಪ್ರದೇಶ ರಾಜ್ಯ ಎತ್ತ ಕಡೆ ಮುಖಮಾಡಿದೆ?

ಜನಸಂಖ್ಯಾಧಾರದ ಮೇಲೆ ಉತ್ತರ ಪ್ರದೇಶ ಒಂದು ದೇಶವಾಗಿದ್ದರೆ, ಅದು ಪ್ರಪಂಚದ ಆರನೆ ದೊಡ್ಡ ರಾಷ್ಟ್ರವಾಗುತ್ತಿತ್ತು. ಪ್ರಪಂಚದ ಆರನೆ ದೊಡ್ಡ ರಾಷ್ಟ್ರ ಸಮಾಜವಾದಿ ಪಕ್ಷದ ಸಮಾಜವಾದವನ್ನನುಸರಿಸಿದರೆ ಪ್ರಪಂಚದ ಆರು ಜನರಲ್ಲಿ ಒಬ್ಬ ಚಿಂತಾಜನಕ ಪಶ್ಚಿಮ ಬಂಗಾಳದ ಪ್ರಜೆಯಾಗುತ್ತಾನೆ.



* * *

ತಾರತಮ್ಯಕ್ಕೊಳಗಾದ ಇತರೆ ಯಾವುದೆ ಜನರಿಗಿಂತ ಅಡೆತಡೆಗಳನ್ನು ಹೆದರಿಸಬೇಕಾಗಿದ್ದ ದಲಿತರಿಗೂ ಸಹ ತಮ್ಮದೇ ಆದ ಜಯದ ಗಾಥೆಗಳಿವೆ. ಯಾವ ವಿಧದ ತಾರತಮ್ಯದ ವ್ಯವಸ್ಥೆಯೂ ಅಸ್ಪೃಶ್ಯತೆಯಷ್ಟು ಕ್ರೂರವಿರಲಾರದು. ದಲಿತರು ಅನುಭವಿಸಿರುವ ಅವಮಾನ ಮತ್ತು ಅಮಾನವೀಯತೆಯ ಗಂಭೀರತೆಗೆ ಗುಲಾಮಗಿರಿ ಸಹ ನಿಲುಕಲಾರದು. ಕರಿಯ ಗುಲಾಮರು ಎಂದೂ ಅಸ್ಪೃಶ್ಯತೆಯಂತಹ ಕಳಂಕವನ್ನು ಎದುರಿಸಲಿಲ್ಲ. ಕರಿಯರು ತಮ್ಮ ಬಿಳಿಯ ಯಜಮಾನರಿಗೆ ಅಡುಗೆಯವರಾಗಿದ್ದರು. ಕರಿಯ ತಾಯಿಯರು ಬಿಳಿಯ ಅಸುಗೂಸುಗಳಿಗೆ ಅವಶ್ಯವಾದಾಗ ಹಾಲುಣಿಸುತ್ತಿದ್ದರು.

ದಲಿತರ ಜಯದ ಗಾಥೆಗಳು ಲೆಕ್ಕವಿಲ್ಲದಷ್ಟಿರಬಹುದಾದರೂ ಗುರು ರವಿದಾಸ್ ಮಹಾರಾಜರ ಯಶಸ್ಸು ಚರಿತ್ರೆಯಲ್ಲಿ ದಾಖಲಾಗಿರುವ ಒಂದು ಘಟನೆ. ಭಾರತದ ಐತಿಹಾಸಿಕ ದಾಖಲೆಯಂತೆ ಗುರು ರವಿದಾಸ್ ಮಹಾರಾಜರು ಕಾಶಿಯ ಪಂಡಿತರ ಮೇಲೆ ಜಯ ಸಾಧಿಸಿದರು. ತಮ್ಮನ್ನು ತಾವು ಗುರುತಿಸಿಕೊಂಡಂತೆ ಗುರು ರವಿದಾಸರು ಹುಟ್ಟಿನಿಂದ ಚಮ್ಮಾರರಾಗಿದ್ದರು.

ದಲಿತರ ರಾಜಕೀಯ ಏಳಿಗೆಗೆ ಸಂಬಂಧಿಸಿದಂತೆ ಭಾರತದ ರಿಪಬ್ಲಿಕನ್ ಪಾರ್ಟಿ (ಆರ್.ಪಿ.ಐ)ಯನ್ನು ವಿಶೇಷವಾಗಿ ಉದಹರಿಸಲಾಗುತ್ತದೆ. ಬಾಬಾ ಸಾಹೇಬರ ನಿಧನಾನಂತರ ಆರ್.ಪಿ.ಐ ಅವರ ಬಳುವಳಿಯನ್ನು ಹೊತ್ತು ಭಾರತದುದ್ದಕ್ಕೂ ತನ್ನ ಇರುವಿಕೆಯನ್ನು ತೋರಿಸಿಕೊಂಡಿತು. ಆರ್.ಪಿ.ಐನ ಅತ್ಯುತ್ತಮ ಪ್ರದರ್ಶನ 1967ರ ವಿಧಾನಸಭಾ ಚುನಾವಣೆಯಲ್ಲಿ ಆಯಿತು. ಆಗ ಆ ಪಕ್ಷ ಕಡಿಮೆ ಎಂದರೆ ಭಾರತದ ಹದಿಮೂರು ದೊಡ್ಡ ರಾಜ್ಯಗಳಲ್ಲಿ ಚುನಾವಣೆಗೆ ಸ್ಪರ್ಧಿಸಿತ್ತು.

1967ರ ವಿಧಾನಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರ 5, ಕರ್ನಾಟಕ 1, ಆಂಧ್ರ ಪ್ರದೇಶ 1, ಬಿಹಾರ 1, ಉತ್ತರ ಪ್ರದೇಶ 10, ಪಂಜಾಬ್ 3, ಹರಿಯಾಣ 2, ಹೀಗೆ ಒಟ್ಟು 23 ಸ್ಥಾನಗಳಲ್ಲಿ ಅದು ಜಯಗಳಿಸಿತು. ಇವುಗಳಲ್ಲಿ ಉತ್ತರ ಪ್ರದೇಶದಲ್ಲಿನ ಜಯ ಗಮನ ಸೆಳೆಯುವಂತಹುದು.

ನಮಗೆಲ್ಲರಿಗೂ ತಿಳಿದಿರುವಂತೆ 2007ರ ವಿಧಾನಸಭಾ ಚುನಾವಣೆಯಲ್ಲಿ ಪೂರ್ಣ ಬಹುಮತ ಪಡೆದ ಬಹುಜನ ಸಮಾಜ ಪಕ್ಷ ಚರಿತ್ರೆ ಸೃಷ್ಟಿಸಿ ತನ್ನ ಛಾಪು ಮೂಡಿಸಿತು. ಕಣ್ಣನ ಸೆಳೆಯುವ ಈ ಜಾದು ನಡೆದದ್ದು ಉತ್ತರ ಪ್ರದೇಶದಲ್ಲಿ ಮಾತ್ರ.

ಉತ್ತರ ಪ್ರದೇಶದ ದಲಿತರ ಈ ಆಕ್ರಮಣಕ್ಕೆ ಮುಂದಾಳತ್ವ ನೀಡಿದವರು ಚಮ್ಮಾರರು ಎಂಬುದು ಎಲ್ಲರಿಗೂ ತಿಳಿದಿರುವ ಸತ್ಯ. ದಲಿತ ಚಳವಳಿಗೆ ಸಂಬಂಧಿಸಿದಂತೆ ಇತರ ದಲಿತ ಒಳಪಂಗಡಗಳು ಅಥಿತಿ ಕಲಾವಿದರಿದ್ದಂತೆ. ಸೌಲಭ್ಯಗಳನ್ನು ಗಿಟ್ಟಿಸಿಕೊಳ್ಳುವುದಕ್ಕಾಗಿ ಮಾತ್ರ ಜಾತಿ ಪತ್ರದೊಡನೆ ಅವರು ಕಾಣಿಸಿಕೊಳ್ಳುತ್ತಾರೆ. ಆದರೆ ಎಲ್ಲ ತೂಕ ಕೊನೆಗೆ ಚಮ್ಮಾರರ ವಿಶಾಲ ಭುಜದ ಮೇಲೇ ಬೀಳುತ್ತದೆ.

ಗುರು ರವಿದಾಸ್ ಮಹಾರಾಜರ ನಂತರ ಚಮ್ಮಾರರು, ಅದರಲ್ಲೂ ಉತ್ತರ ಪ್ರದೇಶದ ಚಮ್ಮಾರರು ಉತ್ತಮ ನಾಯಕರನ್ನೂ, ಆಡಳಿತಗಾರರನ್ನೂ, ಕ್ರೀಡಾಪಟುಗಳನ್ನೂ ಮತ್ತು ಸುಧಾರಕರನ್ನೂ ನೀಡುತ್ತಾ ಬಂದಿದ್ದಾರೆ. ಆದರೆ ಉತ್ತರ ಪ್ರದೇಶದ ಅಂತಹ ಚಮ್ಮಾರ ಮಹಾ ನಾಯಕರ ಬಗ್ಗೆ ದಾಖಲೆಯಾಗಿರುವುದು ಬಹಳ ಕಡಿಮೆ.

ಉತ್ತರ ಪ್ರದೇಶ ಒಂದು ರೀತಿಯಲ್ಲಿ ವಿಶೇಷವಾಗಿದ್ದರೆ, ಉತ್ತರ ಪ್ರದೇಶದ ಚಮ್ಮಾರರೂ ವಿಶೇಷವೆ.

ಈಗ ತಾನೆ ಪ್ರಕಟಗೊಂಡಿರುವ ಒಂದು ಪುಸ್ತಕ ಉತ್ತರ ಪ್ರದೇಶದ ಚಮ್ಮಾರ ಮಹಾ ನಾಯಕರ ಇತಿಹಾಸವನ್ನು ಹೇಳುತ್ತದೆ. ಪುಸ್ತಕದ ಹೆಸರು

"ರಿಕನ್ಸಿಡರಿಂಗ್ ಅನ್‌ಟಚಬಲಿಟಿಚಮ್ಮಾರ್ಸ್ ಅಂಡ್ ದಲಿತ್ ಹಿಸ್ಟರಿ ಇನ್ ಇಂಡಿಯಾ" (ಅಸ್ಪೃಶ್ಯತೆಯ ಮರು ಚಿಂತನೆ–ಚಮ್ಮಾರರು ಮತ್ತು ಭಾರತದ ದಲಿತ ಚರಿತ್ರೆ). ಪುಸ್ತಕವನ್ನು ಅಮೆರಿಕದ ಡೆಲಾವೇರ್ ವಿಶ್ವವಿದ್ಯಾಲಯದಲ್ಲಿ ಚರಿತ್ರೆ ಬೋಧಿಸುತ್ತಿರುವ ಯುವ ಚರಿತ್ರಕಾರ ಡಾ॥ ರಾಮ್‌ನಾರಾಯಣ್ ಎಸ್. ರಾವತ್ ಬರೆದಿರುತ್ತಾರೆ. ಇದೇ ಏಪ್ರಿಲ್‌ನಲ್ಲಿ ದಕ್ಷಿಣ ಏಷಿಯಾ ಪ್ರಕಟಣೆಯಾಗಿ ಪರ್ಮನೆಂಟ್ ಬ್ಲ್ಯಾಕ್ ಕಂಪನಿಯು ಪುಸ್ತಕವನ್ನು ಹೊರತಂದಿದೆ. ಪುಸ್ತಕವನ್ನು ಈ ಮೊದಲು 2011ರಲ್ಲಿ ಅಮೆರಿಕಾದ ಇಂಡಿಯಾನ ವಿಶ್ವವಿದ್ಯಾಲಯದ ಪ್ರೆಸ್ ಹೊರತಂದಿರುತ್ತದೆ.

ಉತ್ತಮ ಸಂಶೋಧನೆಯ ನಂತರ ಹೊರಬಂದಿರುವ ತಮ್ಮ ಪುಸ್ತಕದಲ್ಲಿ ಡಾ॥ ರಾವತ್ ಉತ್ತರ ಭಾರತದ ದಲಿತ ಚಳವಳಿಗಳ ಬಗ್ಗೆ, ಅದರಲ್ಲೂ ಉತ್ತರ ಪ್ರದೇಶದ ಚಮ್ಮಾರರ ಬಗೆಗಿರುವ ಮೂರು ಕಲ್ಪನೆಗಳನ್ನು ನುಚ್ಚು ನೂರು ಮಾಡುತ್ತಾರೆ. ಚರ್ಮ ಕೈಗಾರಿಕೆ ಚಮ್ಮಾರರ ಜೊತೆ ತಪ್ಪಾಗಿ ಸೇರಿಕೊಂಡು ಚಮ್ಮಾರ್ ಎಂದರೆ ಚರ್ಮ ಕೆಲಸಗಾರನಲ್ಲದೆ ಮತ್ತೇನೂ ಅಲ್ಲ ಎಂಬ ತಪ್ಪು ಗ್ರಹಿಕೆಗೆ ಕಾರಣವಾಯಿತು ಎಂಬುದನ್ನು ಎತ್ತಿ ತೋರಿಸುತ್ತಾರೆ.

ಜನಗಣತಿಯನ್ನಾದರಿಸಿ ರಾವತ್ ಹೀಗೆ ಬರೆಯುತ್ತಾರೆ. "1909ರಲ್ಲಿ ಮೊರಾದಾಬಾದ್ ಜಿಲ್ಲೆಯ ಚಮ್ಮಾರ ರೈತರು ರೂ. 3,24,571 ಅನ್ನು ವಾರ್ಷಿಕ ಬಾಡಿಗೆ ಆಗಿ ನೀಡಿದ್ದರು. ಆ ಜಿಲ್ಲೆಯ ಒಟ್ಟು ಬಾಡಿಗೆ ರೂ. 3,021,394ರಲ್ಲಿ ಚಮ್ಮಾರರು ನೀಡಿದ ಬಾಡಿಗೆ ಇತರೆ ಯಾವುದೇ ಜಾತಿ ಕಟ್ಟಿದ ಬಾಡಿಗೆಗಿಂತ ಹೆಚ್ಚಾಗಿತ್ತು". 1911ರ ಜನಗಣತಿಯಂತೆ ಉತ್ತರ ಪ್ರದೇಶದ ಶೇಕಡ 80ರಷ್ಟು ಚಮ್ಮಾರರು ಸ್ವಾದೀನ ಹಿಡುವಳಿದಾರರಾಗಿದ್ದರು ಅಥವಾ ಸ್ವಾದೀನರಹಿತ ಹಿಡುವಳಿದಾರರಾಗಿದ್ದರು.

"ಇದು ಕೇವಲ ಮೊರದಾಬಾದಿಗೆ ಸೀಮಿತವಾಗಿರಲಿಲ್ಲ. ಆಗ್ರಾ, ಬುಲಂದ್‌ಶಹರ್, ಜ್ಹಾನ್ಸಿ, ಬರೇಲಿ, ಶಹರಣ್‌ಪುರ್ ಮುಂತಾದ ಪಶ್ಚಿಮ ಉತ್ತರ ಪ್ರದೇಶದ ಅನೇಕ ಜಿಲ್ಲೆಗಳ ಚಮ್ಮಾರರೂ ಸಹ ಅದೇ ಮಾದರಿಯ ಸ್ಥಾನಮಾನ ಹೊಂದಿದ್ದರು" ಎಂದು ಪುಸ್ತಕದಲ್ಲಿ ವಾದಿಸಲಾಗಿದೆ.

ಉತ್ತರ ಭಾರತದ ದಲಿತ ಚಳವಳಿ ಈಚೆಗೆ ಪ್ರಾರಂಭವಾಗಿರುವಂತಹುದು ಎಂಬ ಸುಳ್ಳು ನಂಬಿಕೆಯನ್ನು ಡಾ॥ ರಾವತ್ ಚೂರುಮಾಡುತ್ತಾರೆ. ಸ್ವಾಮಿ ಅಚ್ಯುತಾನಂದರ ಗಂಭೀರ ಹೋರಾಟಗಳ ಮೇಲೆ ಬೆಳಕು ಚೆಲ್ಲುತ್ತಾ ಉತ್ತರ ಪ್ರದೇಶದ ಮಧ್ಯಭಾಗದಲ್ಲಿ ದಲಿತ ಚಳವಳಿ ಎಷ್ಟು ಬಲವಾಗಿತ್ತು ಎಂಬುದನ್ನು ಡಾ॥ ರಾವತ್ ತೋರಿಸುತ್ತಾರೆ.

"1927 ಡಿಸೆಂಬರ್‌ನಲ್ಲಿ ಸ್ವಾಮಿ ಅಚ್ಯುತಾನಂದ್ ಅವರು ಅಲಹಾಬಾದ್‌ನಲ್ಲಿ ಬೃಹತ್ ಸಭೆಯೊಂದನ್ನು ಸೇರಿಸಿದ್ದು ಅದರಲ್ಲಿ ಭಾರತದ ಎಲ್ಲಾ ಭಾಗಗಳ ದಲಿತ ನಾಯಕರುಗಳೂ ಭಾಗವಹಿಸಿದ್ದರು. 25000 ದಲಿತ ಚಳವಳಿಗಾರರು ಅಲಹಾಬಾದಿನ ಬೀದಿಗಳಲ್ಲಿ ಮೆರವಣಿಗೆ ತೆಗೆದನಂತರ ಸಮಾರಂಭ ಪ್ರಾರಂಭವಾಯಿತು. ಮೆರವಣಿಗೆ ಮುಂದೆ ಅಚ್ಯುತಾನಂದ, ಜಿ.ಎ.ಗವಾಯ್ ಮುಂತಾದ ಎಲ್ಲ ನಾಯಕರೂ ಮೋಟಾರ್ ಕಾರುಗಳು, ಫೀಟಾನ್‌ಗಳು, ಬಗ್ಗಿಗಳು ಮತ್ತು ಟಾಂಗಗಳಲ್ಲಿ ಸಾಗಿದರು" ಎನ್ನುತ್ತದೆ ಪುಸ್ತಕ.

ಅಚ್ಯುತಾನಂದರು ಪ್ರತಿವರ್ಷ ಉತ್ತರ ಪ್ರದೇಶದಲ್ಲಿ ಆದಿ–ಹಿಂದು ಸಭೆಗಳನ್ನು ನಡೆಸಿದರು. 1928ರಲ್ಲಿ ಕಾನ್ಪುರದಲ್ಲಿ ನಡೆದ ಒಂದು ಸಭೆಯಲ್ಲಿ ಡಾ॥ ಅಂಬೇಡ್ಕರ್‌ರೂ ಭಾಗವಹಿಸಿದ್ದರು.

ಉತ್ತರ ಪ್ರದೇಶದ ಚಮ್ಮಾರರ ಕೆಲ ಚಿತ್ರಗಳು:

1927ರಲ್ಲಿ ಸ್ವಾಮಿ ಅಚ್ಯುತಾನಂದರು ಸೇರಿಸಿದ್ದ ಮೆರವಣಿಗೆಯಲ್ಲಿ, ಮೆರವಣಿಗೆಕಾರರು "ಇಂಗ್ಲೀಷರ ಸರ್ಕಾರಕ್ಕೆ ಜಯವಾಗಲಿ" ಎಂದು ಮುಂತಾದ ಘೋಷಣೆ ಕೂಗಿದರು.

ಸ್ವಾಮಿ ಅಚ್ಯುತಾನಂದರು ಅಸ್ಪೃಶ್ಯರನ್ನು ಮುಟ್ಟಲ್ಪಡದವರೆಂದೂ ಅಥವಾ ಪರಿಶುದ್ಧರೆಂದೂ ವರ್ಣಿಸಿದರು.

1923ರಲ್ಲಿ ಎಟ್ಟಾದಲ್ಲಿ ನಡೆದ ಆದಿ–ಹಿಂದು ಚಳವಳಿಯ ಪ್ರಪ್ರಥಮ ಸಭೆಯಲ್ಲಿ ಇಪ್ಪತ್ತು ಸಾವಿರ ಚಮ್ಮಾರರು ಭಾಗವಹಿಸಿದ್ದರು. ರಾಮ್ ದಯಾಳ್ ಜಾಠವ್ ಎಂಬ ಕಂಟ್ರಾಕ್ಟರ್ ಅದರ ಖರ್ಚುವೆಚ್ಚವೆಲ್ಲವನ್ನೂ ನೋಡಿಕೊಂಡರು.

1917ರಲ್ಲಿ ಸ್ಥಾಪನೆಯಾದ ಜಾಠವ್ ಮಹಾಸಭಾದ ಸ್ಥಾಪಕ ಸುಂದರ್‌ಲಾಲ್ ಸಾಗರ್ ಅವರು ಒಂದು ಬಟ್ಟೆ ಮಿಲ್ಲಿನ ಮಾಲಿಕರಾಗಿದ್ದರು.

ದೆಹಲಿಯನ್ನು ಕಟ್ಟಲು ಉಪಯೋಗಿಸಿರುವ ಕೆಂಪುಕಲ್ಲಿನ ಹೆಚ್ಚು ಭಾಗವನ್ನು ಚಮ್ಮಾರ್ ಗುತ್ತಿಗೆದಾರರು ಒದಗಿಸಿರುತ್ತಾರೆ.

ಡಾ॥ ರಾವತ್ ಅವರು ಕ್ಲಿಷ್ಟ ಸಂಶೋಧನೆಯ ಮೂಲಕ ತಮ್ಮ ಪುಸ್ತಕದಲ್ಲಿ ನೀಡಿರುವ ಅತ್ಯುತ್ತಮ ಕೊಡುಗೆ ಎಂದರೆ ಚಮ್ಮಾರರು ಉತ್ತರ ಪ್ರದೇಶದ ಅನೇಕ ಭಾಗಗಳಲ್ಲಿ ಇತರ ಯಾವುದೇ ಜಾತಿಯಷ್ಟೆ ಬಲಿಷ್ಠರಾಗಿದ್ದರು. ಉತ್ತರ ಪ್ರದೇಶದ ಚಮ್ಮಾರರು ಮುಖ್ಯವಾಗಿ ವ್ಯವಸಾಯವನ್ನವಂಬಿಸಿದ ಸಮುದಾಯವಾಗಿದ್ದರು. ಉತ್ತರ ಪ್ರದೇಶದ ಚಮ್ಮಾರರಲ್ಲಿ ಐಶ್ವರ್ಯವಂತ ವಾಣಿಜ್ಯೋದ್ಯಮಿಗಳೂ ಇದ್ದರು ಮತ್ತು ಉತ್ತರ ಪ್ರದೇಶದ ಚಮ್ಮಾರರು ಬಾಬಾ ಸಾಹೇಬ್ ಅಂಬೇಡ್ಕರ್ ಅವರೂ ಗುರುತಿಸಿದಂತ ಬಲಶಾಲಿ ದಲಿತ ಚಳವಳಿಗೆ ನಾಂದಿಯಾಡಿದ್ದರು.

ಡಾ॥ ರಾಮ್‌ನಾರಾಯಣ್ ಎಸ್. ರಾವತ್‌ರ ಪುಸ್ತಕವನ್ನು ಯಾರು ಓದಿಲ್ಲವೊ ಅವರು ಉತ್ತರ ಪ್ರದೇಶದ ಚಮ್ಮಾರರ ವೈಭವಯುಕ್ತ ಇತಿಹಾಸವನ್ನು ಅರ್ಥಮಾಡಿಕೊಂಡಿರಲಾರರು.

* * *

ದಲಿತರ ಮ್ಯಾರಾಥಾನ್

ಇದೇ ಏಪ್ರಿಲ್ 14ರಂದು ಹೈದರಾಬಾದಿನ ದಲಿತರು ಬಾಬಾ ಸಾಹೇಬ್ ಡಾ॥ ಅಂಬೇಡ್ಕರರ 121ನೇ ಜಯಂತಿಯ ಆಚರಣೆಯ ಅಂಗವಾಗಿ ಒಂದು ಪುಟ್ಟ ಮ್ಯಾರಥಾನ್ ವ್ಯವಸ್ಥೆ ಮಾಡಿದ್ದರು. 'ಜಾತಿರಹಿತ ಭಾರತಕ್ಕಾಗಿ ಓಟ' ಎಂದು ಕರೆಯಲಾಗಿದ್ದ ಈ ಪುಟ್ಟ ಮ್ಯಾರಾಥಾನನ್ನು ಡಿ.ಐ.ಸಿ.ಸಿ.ಐ ಮತ್ತು ಶಾಂತಿಚಕ್ರ ಇಂಟರ್‌ನ್ಯಾಷನಲ್‌ಗಳು ಒಟ್ಟಾಗಿ ವ್ಯವಸ್ಥೆ ಮಾಡಿದ್ದವು. 'ಜಾತಿರಹಿತ ಸಮಾಜದ ಕನಸು ಕಾಣುತ್ತಿದ್ದೇವೆ' ಎಂಬ ಮುಖ್ಯ ಘೋಷಣೆ ಹೊಂದಿದ್ದ ಈ ಓಟದ ವ್ಯವಸ್ಥೆಯ ನಾಯಕತ್ವವನ್ನು ಡಿ.ಐ.ಸಿ.ಸಿ.ಐ ಆಂಧ್ರ ಪ್ರದೇಶ ಶಾಖೆಯ ಅಧ್ಯಕ್ಷ ರವಿ ನರ್ರ ವಹಿಸಿದ್ದರು. ಬಹಳ ಯಶಸ್ಸು ಪಡೆದ ಈ ಓಟದಲ್ಲಿ ಹೈದರಾಬಾದಿನ ಅನೇಕ ಪ್ರಮುಖ ವ್ಯಕ್ತಿಗಳನ್ನೊಳಗೊಂಡಂತೆ ಐದು ಸಾವಿರಕ್ಕಿಂತ ಹೆಚ್ಚು ಜನರು ಭಾಗವಹಿಸಿದ್ದರು. ಆಂಧ್ರ ಪ್ರದೇಶದ ಡಿ.ಐ.ಸಿ.ಸಿ.ಐನ ಮಾರ್ಗದರ್ಶಿಯಾದ ಡಾ॥ ವಿವೇಕಾನಂದ್ ಮಾರಾಥಾನ್‌ನಲ್ಲಿ ಭಾಗವಹಿಸುವವರಿಗಾಗಿ ಸಾವಿರ ಟಿ–ಷರ್ಟ್‌ಗಳನ್ನು ನೀಡಿದ್ದರು.

ಸಬಲರಾದ ದಲಿತರು ಕೆಳವರ್ಗದ ತಮ್ಮ ಸಹೋದರರನ್ನು ಕೈಬಿಡುತ್ತಾರೆ ಎಂಬಂತ ಅನುಮಾನಗಳನ್ನು ನಿಶ್ಚಯವಾಗಿ ಹೈದರಾಬಾದ್ ಓಡಿಸುತ್ತದೆ. ದಲಿತ ಕೈಗಾರಿಕೋದ್ಯಮಿಗಳು ದಲಿತ ಕೆಳವರ್ಗದ ಬಗ್ಗೆ ಕಾಳಜಿ ವಹಿಸುತ್ತಾರೆಯೆ? ಎಂಬ ಪ್ರಶ್ನೆಯನ್ನು ನಾನು ಆಗಾಗ್ಗೆ ಎದುರಿಸುತ್ತಿರುತ್ತೇನೆ. ಡಿ.ಐ.ಸಿ.ಸಿ.ಐ ಮತ್ತು ಶಾಂತಿಚಕ್ರ ಇಂಟರ್‌ನ್ಯಾಷನಲ್ ಇವೆರಡೂ ಜಾತಿ ಪದ್ಧತಿಯನ್ನು ಗಟ್ಟಿಯಾಗಿ ಪ್ರಶ್ನಿಸುವ ಮಧ್ಯಮ ವರ್ಗದಿಂದ ಸ್ಥಾಪನೆಯಾಗಿವೆ ಎಂಬುದಂತೂ ನಿಜ.

ದೆಹಲಿಯಲ್ಲಿ ಡಿ.ಐ.ಸಿ.ಸಿ.ಐ ಪಾರ್ಲಿಮೆಂಟ್ ರಸ್ತೆಯಲ್ಲಿ ಒಂದು ದೊಡ್ಡ ಮಳಿಗೆ ಹಾಕಿತ್ತು. ಅಲ್ಲಿ ಬಾಬಾ ಸಾಹೇಬ್ ಅಂಬೇಡ್ಕರರ 121ನೇ ಜನ್ಮ ದಿನಾಚರಣೆಯ ಅಂಗವಾಗಿ 121 ಕೆ.ಜಿ ತೂಕದ ಕೇಕನ್ನು ಕತ್ತರಿಸಿ ಹಂಚಿತು. ದೆಹಲಿಯ ಅಂಬೇಡ್ಕರರ ಜನ್ಮದಿನಾಚರಣೆಯದೇ ಬೇರೆಯ ಸೊಗಡು. ರಾಷ್ಟ್ರಾಧ್ಯಕ್ಷರು, ಪ್ರಧಾನ ಮಂತ್ರಿಗಳು, ವಿರೋಧ ಪಕ್ಷದ ನಾಯಕರನ್ನೊಳಗೊಂಡಂತೆ ಗಣ್ಯರು ಪಾರ್ಲಿಮೆಂಟಿನ ವಿಶಾಲ ಮೈದಾನಕ್ಕೆ ಒಂದು ಬಾಬಾ ಸಾಹೇಬರ ಪ್ರತಿಮೆಯ ಕಾಲಬುಡದಲ್ಲಿ ಪುಷ್ಪಗುಚ್ಛಗಳನ್ನಿಟ್ಟು ತಮ್ಮ ನಮನ ಸಲ್ಲಿಸುತ್ತಾರೆ. ಬೆಳಗ್ಗೆ 7:30ರಿಂದ 8:30ರವರೆಗೆ ಗಣ್ಯರು ಬರುತ್ತಾರೆ. 8:30ರಿಂದ ಸಾಮಾನ್ಯರಿಗೆ ಅವಕಾಶ ನೀಡುತ್ತಾರೆ.

ದೆಹಲಿಯ ಡಿ.ಐ.ಸಿ.ಸಿ.ಐ ತನ್ನ ಸದಸ್ಯರಿಗಾಗಿ 121 ವಿ.ಐ.ಪಿ ಪಾಸುಗಳನ್ನು ಪಡೆದುಕೊಂಡಿತ್ತು. ಅವರೆಲ್ಲರೂ ಪಾರ್ಲಿಮೆಂಟ್ ಮೈದಾನಕ್ಕೆ ಸೂಟು ಧರಿಸಿ ಬಂದರು. ಅವರ ಶಿಸ್ತಿನ ನಡಿಗೆಯ ನಾಯಕತ್ವವನ್ನು ದೆಹಲಿ ಡಿ.ಐ.ಸಿ.ಸಿ.ಐ ಅಧ್ಯಕ್ಷರಾದ ಎನ್.ಕೆ. ಚಂದನ್ ವಹಿಸಿದ್ದರು. ಈ ನಡಿಗೆಯ ನಾಯಕತ್ವವನ್ನು ಮಿಲಿಂದ್ ಕಾಂಬ್ಳೆಯವರು ವಹಿಸಬೇಕಿತ್ತು. ಆದರೆ ಅವರು ಬರಬೇಕಿದ್ದ ವಿಮಾನ ಬರಲಿಲ್ಲವಾದ್ದರಿಂದ ಅವರು ಈ ಸಮಾರಂಭದಲ್ಲಿ ಭಾಗವಹಿಸಲಾಗಲಿಲ್ಲ. ಪಾರ್ಲಿಮೆಂಟ್ ರಸ್ತೆಯಲ್ಲಿ ಹತ್ತಾರು ದಲಿತ ಸಂಘಗಳು ಮಳಿಗೆಗಳನ್ನು ಹಾಕಿದ್ದುವು. ಅವುಗಳಲ್ಲಿ ಕೆಲವು ಸಾಹಿತ್ಯವನ್ನು ಹಂಚಿದರೆ ಮತ್ತೆ ಕೆಲವು ಉಚಿತ ಆಹಾರದ ಪೊಟ್ಟಣಗಳನ್ನು ಮತ್ತು ನೀರನ್ನು ಹಂಚಿದುವು.

ಅನೇಕ ಪ್ರಕಟಣೆಗಳು ಜಾತಿ ವಿರೋಧಿ ಸಾಹಿತ್ಯವನ್ನು ಮಾರಾಟಮಾಡುವ ಅಂಗಡಿಗಳನ್ನು ಹಾಕಿದ್ದುವು.

ಡಿ.ಐ.ಸಿ.ಸಿ.ಐನ ಮಳಿಗೆ ಸಂಪೂರ್ಣವಾಗಿ ದಲಿತ ಪ್ರಜ್ಞೆಯ ಬಗ್ಗೆಯಾಗಿತ್ತು. 121

(50ನೇ ಪುಟಕ್ಕೆ)

ಶವಪೆಟ್ಟಿಗೆ

ಮುಲ್ಲಾ ನಸ್ರುದ್ದೀನ್ ತನ್ನ ಊರಿನಲ್ಲಿ ಸಂಬಂಧಿಕರ ಶವಸಂಸ್ಕಾರದಲ್ಲಿ ಪಾಲ್ಗೊಂಡಿದ್ದ. ಶವಪೆಟ್ಟಿಗೆಯನ್ನು ಸ್ಮಶಾನಕ್ಕೆ ಕೊಂಡೊಯ್ಯುವಾಗ ಒಬ್ಬ ವ್ಯಕ್ತಿ ಸರ್ವಜ್ಞಾನಿ ಮುಲ್ಲಾನ ಬಳಿ ತನ್ನ ಒಂದು ಸಂಶಯವನ್ನು ಪರಿಹರಿಸಿಕೊಳ್ಳಲು ಬಂದು,

'ಮುಲ್ಲಾ, ಶವದ ಪೆಟ್ಟಿಗೆಯನ್ನು ಹೊರುವವರು ಮುಂದೆ ಹೊತ್ತರೆ ಒಳ್ಳೆಯದೇ ಅಥವಾ ಹಿಂದೆ ಹೊತ್ತರೆ ಒಳ್ಳೆಯದೆ?' ಎಂದು ಕೇಳಿದ.

'ಶವದ ಪೆಟ್ಟಿಗೆಯನ್ನು ಮುಂದೆಯಾದರೂ ಹೊರು, ಹಿಂದೆಯಾದರೂ ಹೊರು. ಆದರೆ ಅದರೊಳಗೆ ನೀನಿಲ್ಲದಂತೆ ಜಾಗ್ರತೆ ವಹಿಸು' ಎಂದ ಮುಲ್ಲಾ.



ಡಾ. ಜೆ. ಬಾಲಕೃಷ್ಣ

ಸೈಫು ಯಾರು?

ಒಬ್ಬ ವ್ಯಕ್ತಿ ಅತ್ಯಂತ ಸಿಟ್ಟಿನಿಂದ ದುರುಗುಟ್ಟುತ್ತಾ ಒಂದು ಉಪಾಹಾರ ಗೃಹಕ್ಕೆ ನುಗ್ಗಿದ. ನುಗ್ಗಿದವನೇ ಅಲ್ಲಿದ್ದ ಜನರ ಕಡೆ ತಿರುಗಿ 'ಇಲ್ಲಿ ಸೈಫು ಹೆಸರಿನವರು ಯಾರು?' ಎಂದು ಅರಚಿದ. ಅವನ ರೌದ್ರಾವತಾರ ಕಂಡು ಅಲ್ಲಿದ್ದ ಜನರೆಲ್ಲಾ ಬೆಚ್ಚಿಬಿದ್ದರು. ಆ ವ್ಯಕ್ತಿ ಸಿಟ್ಟಿನಿಂದ ಅರಸುತ್ತಿರುವ ಸೈಫು ಯಾರೆಂದು ಪರಸ್ಪರ ಮುಖ ನೋಡಿಕೊಳ್ಳುತ್ತಿದ್ದರು.

'ಯಾರಿಲ್ಲಿ ಸೈಫು? ಸೈಫು ಇಲ್ಲಿಲ್ಲವೇ?!' ಮತ್ತೆ ಅರಚಿದ ಆತ. ಆ ಜನರ ನಡುವೆಯಿಂದ ಒಬ್ಬ ವ್ಯಕ್ತಿ ಎದ್ದು ನಿಂತು, 'ನಾನೇ ಸೈಫು' ಎಂದ. ಸಿಟ್ಟಿನಿಂದ ಕುದಿಯುತ್ತಿದ್ದ ಆ ಮನುಷ್ಯ ಆ ವ್ಯಕ್ತಿಯ ಬಳಿ ಬಂದು ಅವನ ಕಪಾಳಕ್ಕೆ ಬಾರಿಸಿ, ಒದ್ದು ನೆಲಕ್ಕೆ ಕೆಡವಿ ಬಂದ ಹಾಗೆಯೇ ಸರಸರ ಹೊರಕ್ಕೆ ಹೊರಟು ಹೋದ. ಏಟು ತಿಂದ ವ್ಯಕ್ತಿ ನಿಧಾನವಾಗಿ ಮೇಲಕ್ಕೆದ್ದು, ಮೂಗಿನಿಂದ ಸುರಿಯುತ್ತಿದ್ದ ರಕ್ತ ಒರೆಸಿಕೊಂಡ. ಜನರೆಲ್ಲಾ ಆತನ ಪ್ರತಿಕ್ರಿಯೆಯನ್ನೇ ಎದುರು ನೋಡುತ್ತಿದ್ದರು. ಆತ ಏನೂ ಮಾಡದೆ, ಪುನಃ ತನ್ನ ಮೇಜಿಗೆ ಹೋಗಿ ತಾನು ತಿನ್ನುತ್ತಿದ್ದ ಆಹಾರ ತಿನ್ನುವುದನ್ನು ಮುಂದುವರೆಸಿದ. ಅಲ್ಲಿದ್ದ ಜನರಲ್ಲಿ ಒಬ್ಬಾತ ಎದ್ದುಬಂದು ಏಟು ತಿಂದ ಆ ವ್ಯಕ್ತಿಯ ಬಳಿ ಹೋಗಿ, 'ಅದ್ಹೇಗೆ ನೀನು ಸುಮ್ಮನೇ ಕೂತಿದ್ದೀಯ? ಆ ವ್ಯಕ್ತಿ ಏಟು ಕೊಟ್ಟರೂ ನೀನು ತಿರುಗೇಟು ಕೊಡಲಿಲ್ಲ? ಕನಿಷ್ಠ ಅವನನ್ನು ಬಯ್ಯಲೂ ಇಲ್ಲ?' ಎಂದ.

ಆ ವ್ಯಕ್ತಿ ನಿಧಾನವಾಗಿ ತಲೆ ಎತ್ತಿ, 'ನಾನು ಆ ವ್ಯಕ್ತಿಗೆ ಮಾಡಿದ ಮೋಸ ನಿನಗೆ ತಿಳಿದಿದ್ದರೆ ನೀನು ಈ ರೀತಿ ಕೇಳುತ್ತಿರಲಿಲ್ಲ' ಎಂದ ತಮಾಷೆಯ ನಗು ನಗುತ್ತಾ.

'ಹೌದೆ? ನೀನು ಅದೇನು ಮೋಸ ಮಾಡಿದೆ ಆತನಿಗೆ' ಕೇಳಿದ ಆ ವ್ಯಕ್ತಿ ಕುತೂಹಲದಿಂದ.

ಏಟು ತಿಂದ ವ್ಯಕ್ತಿ 'ನಿನಗೆ ಗೊತ್ತೇನು, ನನ್ನ ಹೆಸರು ಸೈಫು ಅಲ್ಲ. ನಾನು ನಸ್ರುದ್ದೀನ್' ಎಂದ ಹೆಮ್ಮೆಯಿಂದ.

ಉಪದೇಶ

ಒಂದು ದಿನ ಮುಲ್ಲಾ ನಸ್ರುದ್ದೀನ್ ರಸ್ತೆಯಲ್ಲಿ ಹೋಗುತ್ತಿದ್ದಾಗ ಅವನ ಊರಿನ ಕೆಲವರು ಆತನ ಬಳಿ ಬಂದು, 'ಮುಲ್ಲಾ ನೀನು ನಮ್ಮೂರಿನಲ್ಲಿ ಅತ್ಯಂತ ಮೇಧಾವಿ ಮತ್ತು ವಿದ್ವಾಂಸ. ದಯವಿಟ್ಟು ನಮ್ಮನ್ನು ನಿನ್ನ ಶಿಷ್ಯರನ್ನಾಗಿ ಸ್ವೀಕರಿಸಿ ನಾವು ಹೇಗೆ ಬದುಕಬೇಕೆಂದು ತೋರಿಸಿ ಉಪದೇಶ ಮಾಡು' ಎಂದು ಕೇಳಿಕೊಂಡರು. ನಸ್ರುದ್ದೀನ್ ಕೊಂಚ ಆಲೋಚಿಸಿ, 'ಆಯಿತು. ಬದುಕುವ ದಾರಿ ತೋರಿಸಿಕೊಡುತ್ತೇನೆ. ಎಲ್ಲದಕ್ಕೂ ಮೊದಲು ನೀವು ಬಹಳ ಮುಖ್ಯವಾದ ಆಚರಣೆಯೊಂದನ್ನು ಅನುಸರಿಸಬೇಕು' ಎಂದ. ಎಲ್ಲರೂ ಭಕ್ತಿ, ವಿನಯದಿಂದ ಆಯಿತೆಂದು ತಲೆದೂಗಿದರು. 'ಮೊದಲಿಗೆ ನೀವು ನಿಮ್ಮ ಕಾಲುಗಳ ಮತ್ತು ಚಪ್ಪಲಿಗಳ ಬಗ್ಗೆ ಹೆಚ್ಚು ಆಸ್ಥೆ ವಹಿಸಬೇಕು. ಕಾಲುಗಳನ್ನು ಮತ್ತು ಚಪ್ಪಲಿಗಳನ್ನು ಸದಾ ಶುದ್ಧವಾಗಿಟ್ಟುಕೊಂಡಿರಬೇಕು' ಎಂದ. ಆ ಜನ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಮುಲ್ಲಾನ ಪಾದಗಳೆಡೆಗೆ ನೋಡಿದರು. ಆತನ ಪಾದಗಳು ಗಲೀಜಾಗಿದ್ದವು ಮತ್ತು ಚಪ್ಪಲಿಗಳು ಕಿತ್ತು ಹರಿದುಹೋಗಿದ್ದವು. ಆ

ಒಂದು ದಿನ ಮುಲ್ಲಾ ನಸ್ರುದ್ದೀನ್ ಊರಿನ ಮಧ್ಯದ ಚೌಕದಲ್ಲಿ ಫಲಕವೊಂದನ್ನು ತೂಗು ಹಾಕಿದ. ಅದರಲ್ಲಿ ಈ ರೀತಿ ಬರೆದಿತ್ತು: 'ನನ್ನ ಕತ್ತೆಯನ್ನು ಕದ್ದಿರುವವರು ದಯವಿಟ್ಟು ನನಗೆ ಹಿಂದಿರುಗಿಸಿ. ನಾನು ಅದನ್ನೇ ನಿಮಗೆ ಉಡುಗೊರೆಯಾಗಿ ಕೊಡುತ್ತೇನೆ'. ಅದನ್ನು ಓದಿದ ಊರಿನ ಜನರೆಲ್ಲಾ, 'ಇದೇನು ನಸ್ರುದ್ದೀನ್! ಇದೆಂತಹ ಹುಚ್ಚು ಹೇಳಿಕೆಯ ಫಲಕ! ಕದ್ದದ್ದನ್ನು ವಾಪಸ್ಸು ಅವರಿಗೇ ಕೊಡುವುದಾದರೆ ಈ ಫಲಕ ಏಕೆ ಬೇಕು?' ಎಂದು ಆಶ್ಚರ್ಯದಿಂದ ಕೇಳಿದರು.

ನಸ್ರುದ್ದೀನ್ ಕೊಂಚ ಆಲೋಚಿಸಿ, 'ಆಯಿತು. ಬದುಕುವ ದಾರಿ ತೋರಿಸಿಕೊಡುತ್ತೇನೆ. ಎಲ್ಲದಕ್ಕೂ ಮೊದಲು ನೀವು ಬಹಳ ಮುಖ್ಯವಾದ ಆಚರಣೆಯೊಂದನ್ನು ಅನುಸರಿಸಬೇಕು' ಎಂದ. ಎಲ್ಲರೂ ಭಕ್ತಿ, ವಿನಯದಿಂದ ಆಯಿತೆಂದು ತಲೆದೂಗಿದರು. 'ಮೊದಲಿಗೆ ನೀವು ನಿಮ್ಮ ಕಾಲುಗಳ ಮತ್ತು ಚಪ್ಪಲಿಗಳ ಬಗ್ಗೆ ಹೆಚ್ಚು ಆಸ್ಥೆ ವಹಿಸಬೇಕು. ಕಾಲುಗಳನ್ನು ಮತ್ತು ಚಪ್ಪಲಿಗಳನ್ನು ಸದಾ ಶುದ್ಧವಾಗಿಟ್ಟುಕೊಂಡಿರಬೇಕು' ಎಂದ. ಆ ಜನ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಮುಲ್ಲಾನ ಪಾದಗಳೆಡೆಗೆ ನೋಡಿದರು. ಆತನ ಪಾದಗಳು ಗಲೀಜಾಗಿದ್ದವು ಮತ್ತು ಚಪ್ಪಲಿಗಳು ಕಿತ್ತು ಹರಿದುಹೋಗಿದ್ದವು.

ಜನರಲ್ಲೊಬ್ಬ, 'ಅದು ಸರಿ ಮುಲ್ಲಾ, ನೀನು ನಮಗೆ ಉಪದೇಶ ಮಾಡುತ್ತಿದ್ದೀಯ. ಆದರೆ ನಿನ್ನ ಪಾದಗಳೇ ಗಲೀಜಾಗಿವೆ, ನಿನ್ನ ಚಪ್ಪಲಿಗಳು ಚಿಂದಿಯಾಗಿವೆ! ಹಾಗಿರುವಾಗ ನಾವು ನಿನ್ನ ಮಾತುಗಳನ್ನು ಅನುಸರಿಸಬೇಕೆಂದು ಹೇಗೆ ನಿರೀಕ್ಷಿಸುತ್ತೀಯಾ?' ಎಂದು ಕೇಳಿದ.

'ನಿನ್ನ ಮಾತು ನಿಜ. ಆದರೆ ನಾನು ದಾರಿಯಲ್ಲಿ ಹೋಗುವವರನ್ನೆಲ್ಲಾ, ನನಗೆ ಬದುಕುವ ದಾರಿ ತೋರಿಸಿ, ಉಪದೇಶ ಮಾಡಿ ಎಂದು ಕೇಳುವುದಿಲ್ಲವಲ್ಲಾ!' ಎಂದ ಮುಲ್ಲಾ ನಸ್ರುದ್ದೀನ್.

ಹುಟ್ಟು ಮತ್ತು ಸಾವು

ಮುಲ್ಲಾ ನಸ್ರುದ್ದೀನ್ ಆ ಊರಿಗೆ ಹೊಸದಾಗಿ ಬಂದು ನೆಲೆಸಿದ್ದ. ಆತ ಅಡುಗೆ ಮಾಡುವಾಗ ಆತನಿಗೆ ಮತ್ತೊಂದು ಪಾತ್ರೆಯ ಅವಶ್ಯಕತೆ ಬಿತ್ತು. ಪಕ್ಕದ ಮನೆಯವರಲ್ಲಿಗೆ ಹೋಗಿ ಒಂದು ಪಾತ್ರೆಯನ್ನು ಎರವಲು ಕೊಡುವಂತೆಯೂ, ಅದನ್ನು ತಾನು ಮರುದಿನ ಹಿಂದಿರುಗಿಸುತ್ತೇನೆಂದು ಕೇಳಿದ. ಪಕ್ಕದ ಮನೆಯವರು ತಮ್ಮಲ್ಲಿದ್ದ ಒಂದು ಪಾತ್ರೆಯನ್ನು ಕೊಟ್ಟರು. ಅದನ್ನು ಬಳಸಿಕೊಂಡ ನಸ್ರುದ್ದೀನ್ ಮರುದಿನ ಪಾತ್ರೆ ಅವರಿಗೆ ಹಿಂದಿರುಗಿಸಿದ. ಪಾತ್ರೆ ವಾಪಸ್ಸು ಪಡೆದ ನೆರೆಮನೆಯವರು ಆ ಪಾತ್ರೆಯೊಳಗೆ ಮತ್ತೊಂದು ಚಿಕ್ಕ ಪಾತ್ರೆ ಇರುವುದನ್ನು ಕಂಡು ಅದೇನೆಂದು ನಸ್ರುದ್ದೀನ್‌ನನ್ನು ಕೇಳಿದರು. 'ಹೋ ಅದೇ? ನಿಮ್ಮ ಪಾತ್ರೆ ಮರಿ ಹಾಕಿದೆ. ಅದು ನಿಮ್ಮ ಪಾತ್ರೆಯ ಮರಿಯಲ್ಲವೇ? ಅದಕ್ಕೇ ಅದನ್ನು ನಿಮಗೇ ಕೊಡುತ್ತಿದ್ದೇನೆ' ಎಂದ ನಸ್ರುದ್ದೀನ್.

ನೆರೆಮನೆಯವರಿಗೆ ವಿಚಿತ್ರವೆನ್ನಿಸಿದರೂ ಒಂದು ಪಾತ್ರೆ ಹೆಚ್ಚಿಗೆ ಸಿಕ್ಕಿದ್ದರಿಂದ ಸಂತೋಷವಾಗಿಯೇ ತೆಗೆದುಕೊಂಡರು.

ಮರುದಿನ ನಸ್ರುದ್ದೀನ್ ಪುನಃ ಅವರ ಮನೆಗೆ ಹೋಗಿ ಮೊದಲು ಪಡೆದುದ್ದಕ್ಕಿಂತ ದೊಡ್ಡ ಪಾತ್ರೆ ಇದ್ದರೆ ಬೇಕೆಂದು ಕೇಳಿದ. ಅದನ್ನು ಮರುದಿನವೇ ಹಿಂದಿರುಗಿಸುವುದಾಗಿ ತಿಳಿಸಿದ. ನೆರೆಮನೆಯವರು ಸಂತೋಷದಿಂದಲೇ ದೊಡ್ಡ ಪಾತ್ರೆ ಕೊಟ್ಟರು. ಆದರೆ ನಸ್ರುದ್ದೀನ್ ಪಾತ್ರೆ ಹಿಂದಿರುಗಿಸಲು ಬರಲೇ ಇಲ್ಲ. ದಿನಗಳು ಕಳೆದು ವಾರವಾಯಿತು. ನೆರೆಮನೆಯವರು ಒಂದು ದಿನ ನಸ್ರುದ್ದೀನ್‌ನ ಮನೆಗೆ ಹೋಗಿ ತಮ್ಮ ಪಾತ್ರೆ ವಾಪಸ್ಸು ಕೊಡುವಂತೆ ಕೇಳಿದರು.

'ಹೋ, ಆ ಪಾತ್ರೆಯೇ? ಅದು ನಾನು ತಂದ ದಿನವೇ ಸತ್ತುಹೋಯಿತು' ಎಂದ.

ನೆರೆಮನೆಯವರಿಗೆ ಅದನ್ನು ನಂಬಲಾಗಲಿಲ್ಲ. 'ಇದೆಂತಹ ತಮಾಷೆ! ಪಾತ್ರೆ ಸತ್ತುಹೋಗುವುದೆಂದರೇನು?' ಎಂದರು ಸಿಡುಕುತ್ತಲೇ.

'ಏಕೆ ಸಾಯಬಾರದು? ಪಾತ್ರೆ ಮರಿ ಹಾಕಬಹುದಾದರೆ ಸಾಯಲೂ ಬಹುದಲ್ಲವೇ?' ಕೇಳಿದ ನಸ್ರುದ್ದೀನ್.



ಸರಿಯಾದ ಜೋಡಿ

ಒಂದು ದಿನ ಮುಲ್ಲಾ ನಸ್ರುದ್ದೀನ್ ಮತ್ತು ಆತನ ಗೆಳೆಯ ಚಹಾ ಸೇವಿಸುತ್ತಾ ಆರಾಮವಾಗಿ ಮಾತನಾಡುತ್ತಿದ್ದರು. ವಿಷಯ ಪ್ರೀತಿ ಪ್ರೇಮದ ಕಡೆಗೆ ತಿರುಗಿತು. ಆತನ ಗೆಳೆಯ, 'ಎಲ್ಲಾ ಸರಿ ನಸ್ರುದ್ದೀನ್. ನೀನ್ಯಾಕೆ ಇಷ್ಟು ವರ್ಷವಾದರೂ ಮದುವೆಯಾಗಲಿಲ್ಲ?' ಎಂದು ಕೇಳಿದ.

'ಮದುವೆಯಾಗಬೇಕೆಂದೇ ಇದ್ದೆ' ಹೇಳಿದ ನಸ್ರುದ್ದೀನ್, 'ನಾನು ಯುವಕನಾಗಿದ್ದಾಗ ಎಲ್ಲರೀತಿಯಿಂದಲೂ ಸರಿಯಾದ ಹುಡುಗಿಗಾಗಿ ಅರಸುತ್ತಿದ್ದೆ. ಕೈರೋದಲ್ಲಿ ಒಂದು ಸುಂದರ ಹುಡುಗಿ ಪರಿಚಯವಾದಳು. ಆಕೆ ಸುಂದರಿ, ಬುದ್ಧಿವಂತೆ.... ಆದರೆ ಆಕೆ ಕ್ರೂರಿಯಾಗಿದ್ದಳು. ಆನಂತರ ಬಾಗ್ದಾದ್‌ನಲ್ಲಿ ಮತ್ತೊಬ್ಬ ಹುಡುಗಿ ಪರಿಚಯವಾದಳು. ಆಕೆಯೂ ಸುಂದರವಾಗಿದ್ದಳು. ಆದರೆ ನಮ್ಮಿಬ್ಬರ ನಡುವೆ ಸಮಾನ ಅಂಶಗಳೇ ಇರಲಿಲ್ಲ.... ಇದೇ ರೀತಿ ಹಲವಾರು ಹುಡುಗಿಯರನ್ನು ನೋಡಿದೆ. ಎಲ್ಲರಲ್ಲೂ ಏನೋ ಒಂದು ಐಬಿರುತ್ತಿತ್ತು. ಆದರೂ ಕೊನೆಗೆ ಒಬ್ಬಳು ಎಲ್ಲರೀತಿಯಿಂದಲೂ ನನಗೆ ಸರಿಹೊಂದುವ ಹುಡುಗಿ ಸಿಕ್ಕಳು.......' ಎನ್ನುತ್ತಾ ಮಾತು ನಿಲ್ಲಿಸಿದ ನಸ್ರುದ್ದೀನ್.

'ಮುಂದೇನಾಯಿತು? ನೀನು ಆಕೆಯನ್ನೇಕೆ ಮದುವೆಯಾಗಲಿಲ್ಲ?' ಕೇಳಿದ ಆತನ ಗೆಳೆಯ.

'ಏಕೆಂದರೆ.... ಆಕೆ ಎಲ್ಲ ರೀತಿಯಿಂದಲೂ ಸರಿಯಾಗಿರುವ ಗಂಡನ್ನು ಅರಸುತ್ತಿದ್ದಳು' ಎಂದ ನಸ್ರುದ್ದೀನ್ ಚಹಾದ ಲೋಟವನ್ನು ತುಟಿಗಿರಿಸುತ್ತ.

ಎರಡು ಮಹಾನ್ ಕೊಡುಗೆಗಳು

ಒಂದು ದಿನ ಮುಲ್ಲಾ ನಸ್ರುದ್ದೀನ್ ಊರಿನ ಮಧ್ಯದ ಚೌಕದಲ್ಲಿ ಫಲಕವೊಂದನ್ನು ತೂಗು ಹಾಕಿದ. ಅದರಲ್ಲಿ ಈ ರೀತಿ ಬರೆದಿತ್ತು: 'ನನ್ನ ಕತ್ತೆಯನ್ನು ಕದ್ದಿರುವವರು ದಯವಿಟ್ಟು ನನಗೆ ಹಿಂದಿರುಗಿಸಿ. ನಾನು ಅದನ್ನೇ ನಿಮಗೆ ಉಡುಗೊರೆಯಾಗಿ ಕೊಡುತ್ತೇನೆ'.

ಅದನ್ನು ಓದಿದ ಊರಿನ ಜನರೆಲ್ಲಾ, 'ಇದೇನು ನಸ್ರುದ್ದೀನ್! ಇದೆಂತಹ ಹುಚ್ಚು ಹೇಳಿಕೆಯ ಫಲಕ! ಕದ್ದದ್ದನ್ನು ವಾಪಸ್ಸು ಅವರಿಗೇ ಕೊಡುವುದಾದರೆ ಈ ಫಲಕ ಏಕೆ ಬೇಕು?' ಎಂದು ಆಶ್ಚರ್ಯದಿಂದ ಕೇಳಿದರು.

ಆ ರೀತಿ ಕೇಳಿದ ಜನರಿಗೆ ಮುಲ್ಲಾ, 'ಬದುಕಿನಲ್ಲಿ ಎರಡು ಮಹಾನ್ ಕೊಡುಗೆಗಳಿವೆ. ಮೊದಲನೆಯದು, ನೀವು ಅತ್ಯಂತ ಪ್ರೀತಿಸುವ ವಸ್ತು ಕಳೆದುಹೋಗಿದ್ದು, ಅದು ಪುನಃ ನಿಮಗೆ ದೊರಕಿದಾಗ ಸಿಗುವ ಸಂತೋಷ. ಎರಡನೆಯದು, ನೀವು ಅತ್ಯಂತ ಪ್ರೀತಿಸುವ ವಸ್ತುವನ್ನು ಇತರರಿಗೆ ಕೊಡುಗೆಯಾಗಿ ನೀಡುವಾಗ ಸಿಗುವ ಸಂತೋಷ' ಎಂದ. ■

ದಲಿತರ ಮ್ಯಾರಾಥಾನ್

(47ನೇ ಪುಟದಿಂದ)

ಕೆ.ಜಿಯ ಕೇಕಿನ ಜೊತೆಗೆ ಎನ್.ಕೆ. ಚಂದನ್ ಅವರು ಸಾವಿರ ಬಾಟಲಿ ನೀರು, ಸಾವಿರ ಫ್ರೂಟಿ ಪ್ಯಾಕೆಟ್‌ಗಳು ಮತ್ತು ಮಕ್ಕಳಿಗೆ ಸಾವಿರ ಟೆಡ್ಡಿಬೇರ್‌ಗಳನ್ನು ತರಿಸಿದ್ದರು. ಡಿ.ಐ.ಸಿ.ಸಿ.ಐ ಮಳಿಗೆಯ ಒಳಗೆ ಅತಿಥಿಗಳಿಗಾಗಿ 20 ಸೋಫಾಗಳನ್ನು ಇರಿಸಿದ್ದರು ಮತ್ತು 2 ದೊಡ್ಡ ಕೂಲರ್‌ಗಳು ತಾಪವನ್ನು ನಿಯಂತ್ರಿಸುತ್ತಿದ್ದವು. ಡಿ.ಐ.ಸಿ.ಸಿ.ಐ ತನ್ನ ಮುಂದಿನ ಚಟುಚಟಿಕೆಗಳ ಮತ್ತು ಯೋಜನೆಗಳ ಬಗ್ಗೆ ಸಾಹಿತ್ಯವನ್ನು ಹಂಚಿತು. ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಅಧಿಕಾರ ಮಂತ್ರಾಲಯದ ಸಚಿವ ಮುಖಿಲ್ ವಾಸ್ನಿಕ್ ಮತ್ತು ಸಂಸತ್ ಸದಸ್ಯರಾದ ಡಿ.ರಾಜ ಇವರು ಮಳಿಗೆಗೆ ಬೇಟಿ ನೀಡಿ ಡಿ.ಐ.ಸಿ.ಸಿ.ಐ ಸದಸ್ಯರೊಡನೆ ಮಾತುಕತೆ ನಡೆಸಿದರು.

ಡಿ.ಐ.ಸಿ.ಸಿ.ಐ ಮಳಿಗೆ ಹೆಚ್ಚಾಗಿ ಯುವಕರಿಂದಲೇ ತುಂಬಿತ್ತು. 'ಉದ್ಯೋಗ ನೀಡುವವರಾಗಿ, ಉದ್ಯೋಗ ಕೇಳುವವರಾಗಬೇಡಿ' ಎಂಬ ಡಿ.ಐ.ಸಿ.ಸಿ.ಐನ ಘೋಷಣೆಯನ್ನು ಎಲ್ಲರೂ ಮೆಚ್ಚಿದರು. ದಲಿತ ಯುವಕರು ದಲಿತ ಉದ್ಯಮಿಗಳಿಂದ ವಾಣಿಜ್ಯೋದ್ಯಮದ ಬಗ್ಗೆ ತಿಳಿದುಕೊಳ್ಳಲು ಆಶಿಸಿದರು. ಯಾವುದು ಅಸಾಧ್ಯವೆಂದು ಕಾಣುತ್ತಿತ್ತೊ ಅದನ್ನು ಹೇಗೆ ಸಾಧ್ಯಮಾಡಿದರು ಎಂಬ ಬಗ್ಗೆ ದಲಿತ ಉದ್ಯಮಿಗಳು ತಮ್ಮ ಜೀವನ ಕಥನದ ಮೂಲಕವೆ ದಲಿತ ಯುವಕರಿಗೆ ತಿಳಿಸಿಕೊಟ್ಟರು. ಉದ್ಯಮ ಕೈಗೊಳ್ಳಲು ಅವರಿಗೆ ಯಾವ ಮೂಲದಿಂದ ಬಂಡವಾಳ ದೊರೆಯಿತು ಎಂಬ ಬಗ್ಗೆಯೂ ಪ್ರಶ್ನೆಗಳು ಬಂದುವು.

ಏಪ್ರಿಲ್ 14ರ ದೆಹಲಿಯ ಡಿ.ಐ.ಸಿ.ಸಿ.ಐ ಸಮಾರಂಭ ಮತ್ತು ಡಿ.ಐ.ಸಿ.ಸಿ.ಐನ ಆಂಧ್ರ ಪ್ರದೇಶದ ಶಾಖೆಯ ಅಧ್ಯಕ್ಷ ರವಿನರ್ರ ಹೈದರಾಬಾದ್‌ನಲ್ಲಿ ವ್ಯವಸ್ಥೆಮಾಡಿದ್ದ ಮ್ಯಾರಥಾನ್ ಓಟ ನಮಗೆ ಇತ್ತೀಚಿನ ದಶಕಗಳಲ್ಲಿ ದಲಿತರಲ್ಲಿಯೂ ಸಹ ವರ್ಗ ನಿರ್ಮಾಣ ತ್ವರಿತವಾಗಿ ನಡೆಯುತ್ತಿದೆ ಎಂಬುದನ್ನು ತಿಳಿಸಿಕೊಡುತ್ತದೆ. ಈ ಬೆಳವಣಿಗೆಯನ್ನು ಸರ್ಕಾರವಾಗಲಿ, ದಲಿತ ಚಿಂತಕರಾಗಲಿ ಗಮನಿಸಿಲ್ಲ. ಹೆಚ್ಚು ಜನ ದಲಿತ ಅಭಿವೃದ್ಧಿಯ ಬಗ್ಗೆ ನೀತಿ ನಿರೂಪಿಸುವ ತಜ್ಞರು ದಲಿತರು ಬಿ.ಪಿಎಲ್ ಕಾರ್ಡುಗಳನ್ನು ಮತ್ತು ಉದ್ಯಮ ಸ್ಥಾಪಿಸಲು ಸಣ್ಣ ಸಣ್ಣ ಸಾಲಗಳನ್ನೂ ಬಯಸುತ್ತಾರೆ ಎಂದು ಯೋಚಿಸುತ್ತಾರೆ. ಕೇಂದ್ರದಿಂದ ಹಣ ಪಡೆಯುವ ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ದಲಿತ ಉದ್ಯಮಿ ಪಡೆಯಬಹುದಾದ ಅತಿ

ದೇಶದಲ್ಲಿ ಒಂದು ದಲಿತ ಮಧ್ಯಮ ವರ್ಗ ಉದಯವಾಗುತ್ತಿದೆ, ಅದು ವಾಣಿಜ್ಯೋದ್ಯಮದಲ್ಲಿ ತೊಡಗಿಸಿಕೊಳ್ಳಲು ಇಚ್ಛಿಸುತ್ತದೆ, ಮತ್ತು ದಲಿತ ಉದ್ಯಮಿಗಳೂ ಇದ್ದಾರೆ, ಅವರಿಗೆ ತಮ್ಮ ಉದ್ಯಮವನ್ನು ಬೆಳೆಸಲು ಕೋಟಿಗಟ್ಟಲೆ ಹಣ ಬೇಕಾಗುತ್ತದೆ ಎಂಬುದನ್ನು ಅರಿತ ಡಿ.ಐ.ಸಿ.ಸಿ.ಐ 500 ಕೋಟಿ ರೂಪಾಯಿ ಮೊತ್ತದ ಒಂದು ವೆಂಚರ್ ಫಂಡನ್ನು ಸ್ಥಾಪಿಸುತ್ತಿದೆ.

ಹೆಚ್ಚು ಸಾಲ 30 ಲಕ್ಷ ರೂಪಾಯಿಗಳು. ಆ ಸಾಲ ಪಡೆಯಬೇಕಾದರೆ ಆತನ ಗರಿಷ್ಠ ಆದಾಯ ವರ್ಷಕ್ಕೆ 50 ಸಾವಿರ ರೂಪಾಯಿಗಳಿಗಿಂತ ಹೆಚ್ಚು ಇರಬಾರದು.

ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸರ್ಕಾರದ ದೃಷ್ಟಿಯಲ್ಲಿ ತಿಂಗಳಿಗೆ ನಾಲ್ಕು ಸಾವಿರ ಆದಾಯ ಬರುವ ದಲಿತ ಮಾತ್ರ ಸಾಲ ಪಡೆಯಲು ಅರ್ಹ. ದೆಹಲಿಯಲ್ಲಿ ಟ್ಯಾಕ್ಸಿ ಚಾಲಕರು, ಅಷ್ಟೇ ಏಕೆ ಮನೆಗೆಲಸ ಮಾಡುವ ಮಹಿಳೆಯರು ತಿಂಗಳಿಗೆ ನಾಲ್ಕು ಸಾವಿರ ರೂಪಾಯಿ ಸಂಪಾದಿಸುತ್ತಾರೆ. ಆದರೆ ಸರ್ಕಾರದ ಕಣ್ಣಿನಲ್ಲಿ ದಲಿತರ ಬೆಲೆ ಅಷ್ಟೆ. ಆದುದರಿಂದಲೇ ದಲಿತರಿಗಾಗಿ ಇರುವ ಹೆಚ್ಚು ಸರ್ಕಾರಿ ಯೋಜನೆಗಳು ಬುಟ್ಟಿ ಎಣೆಯುವುದು, ಹಪ್ಪಳ ಮಾಡುವುದು, ಹಂದಿ ಸಾಕುವುದು ಮತ್ತು ಆಡು ಸಾಕುವುದು ಮುಂತಾದವುಗಳಿಗೆ ಸೀಮಿತವಾಗಿದೆ.

ದೇಶದಲ್ಲಿ ಒಂದು ದಲಿತ ಮಧ್ಯಮ ವರ್ಗ ಉದಯವಾಗುತ್ತಿದೆ, ಅದು ವಾಣಿಜ್ಯೋದ್ಯಮದಲ್ಲಿ ತೊಡಗಿಸಿಕೊಳ್ಳಲು ಇಚ್ಛಿಸುತ್ತದೆ, ಮತ್ತು ದಲಿತ ಉದ್ಯಮಿಗಳೂ ಇದ್ದಾರೆ, ಅವರಿಗೆ ತಮ್ಮ ಉದ್ಯಮವನ್ನು ಬೆಳೆಸಲು ಕೋಟಿಗಟ್ಟಲೆ ಹಣ ಬೇಕಾಗುತ್ತದೆ ಎಂಬುದನ್ನು ಅರಿತ ಡಿ.ಐ.ಸಿ.ಸಿ.ಐ 500 ಕೋಟಿ ರೂಪಾಯಿ ಮೊತ್ತದ ಒಂದು ವೆಂಚರ್ ಫಂಡನ್ನು ಸ್ಥಾಪಿಸುತ್ತಿದೆ.

ಇತಿಹಾಸದ ಈ ಘಟ್ಟದಲ್ಲಿ ಭಾರತದ ದಲಿತರು ಹೊಸ ಓಟಕ್ಕಾಗಿ ಇಂದು ತಮ್ಮನ್ನು ಗಟ್ಟಿಮಾಡಿಕೊಳ್ಳುತ್ತಿದ್ದಾರೆ. ಅದು 100 ಮೀ. ಓಟದ ಸ್ಪರ್ಧೆಯಲ್ಲ. ಶತಮಾನಗಳ ಕಾಲ ಈ ಸಮುದಾಯದ ಬೆಳವಣಿಗೆಯ ಎದುರು ಅಡೆತಡೆಗಳನ್ನು ಒಡ್ಡುತ್ತಿದ್ದ ಭಾರತದ ಜಾತಿ ಪದ್ಧತಿಯ ಗಡಿಯನ್ನು ಹೊಡೆದು ಓಡುವ ಮ್ಯಾರಥಾನ್ ಓಟ. ■

MUSEUM INN

WITH BEST COMPLIMENTS

1, Museum Road, Off M.G. Road, Bangalore-560001. INDIA.
Tel: +91-080-41113333, Fax: +91-080-41113300
Visit us at: www.bjngroup.in E-mail us at: gm@bjngroup.in

With best Compliments from

Prestige®

India's largest kitchen appliances brand

Pressure Cookers

Non-stick Cookware

Mixer Grinders



L.P. Gas Stoves

Induction Cook-tops

TTK Prestige Limited.,

11th Floor, Brigade Towers, 135, Brigade Road, Bangalore - 560 025. India. Ph: 080-22217438 / 22217439, Fax: 090-22277446.

Visit us at: www.prestigesmartkitchen.com

Are you ready for a smarter kitchen?

'SAMVADA' Kannada Monthly, July 2012 KA/BGW-706/2012-2014 RNI No. KARKAN/ 2002/ 9246
Posted at Bengaluru G.P.O on 1st & 7th of Every Month. (No of pages- 52)